KSSIDC
Karnataka State Small Industries Development Corporation Ltd.
(A Government of Karnataka Undertaking)
Regd. Office : A.O. Building, Industrial Estate, Rajajinagar, Bangalore - 560 010
Telephone : 080 - 2340 7011 to 25, Fax : 91-080-2314 3566 / 2338 9070 Grams : MYSMALCORP
E-mail : kssidcho@vsnl.com Website : www.kssidc.kar.nic.in

No:ADM/PER/OO/ LAND-A&M/2012 / 25 M 11-10-2012

OFFICE ORDER 000546

Sub: Submission of proposals for sanction of marginal land – reg.

It has come to the notice of the undersigned that in various allotment files pertaining to Industrial Estate section, the proposals for allotment of marginal/additional land are being received from the allotment section with the report of the local Engineers of the Industrial Estate and that these proposals are not routed through the head of the engineering section ie., Chief Engineer.

It is hereby ordered that all proposals for allotment of additional/marginal land as the case may be shall be submitted by the allotment section only with the recommendation and proper scrutiny by the Chief Engineer of the Corporation. Any proposals received directly from the allotment section without the report of the Chief Engineer will be viewed seriously and action will be initiated against the officers/officials concerned.

(K. VISWANATHA REDDY)
MANAGING DIRECTOR

1443
25/10/12

Copy to:

1) General Manager(A&L) / (IEs&F), KSSIDC Ltd., I.E. Rajajinagar, Bangalore – 560010.
2) Chief Engineer / S.E. KSSIDC Ltd., I.E. Rajajinagar, Bangalore – 560010.
3) Dy. Genl. Manager (Per) /(Co-Ordn.) / (Fin) / (Comml. & MAS) / (IA) / Company Secretary/Zone - 1, B'lore / Zone-2, / Zone -3, KSSIDC Ltd., I.E. Rajajinagar, Bangalore / Hubli / Mysore – 560010.
4) All Asst. General Managers of Industrial Estates, KSSIDC Ltd.
5) Office file.

30/10/12

3095
30/10/12

O/C

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಕ್ರಯಪತ್ರ:ಅವಧಿ:2024 ದಿನಾಂಕ 23-09-2024

000545

ಕಛೇರಿ ಆದೇಶ

ವಿಷಯ: 2020-25ನೇ ಸಾಲಿನ ಕೈಗಾರಿಕಾ ನೀತಿ ಅನ್ವಯ ಹಂಚಿಕೆ ಪಡೆದಿರುವ KSSIDC ನಿವೇಶನ/ಮಳಿಗೆಗಳಿಗೆ ಯೋಜನೆ ಅನುಷ್ಠಾನಗೊಳಿಸಿರುವ ಹಂಚಿಕೆದಾರರುಗಳಿಗೆ 10 ವರ್ಷಗಳ ಅವಧಿ ಬದಲಿಗೆ 2 ವರ್ಷಗಳಿಗೆ ಕ್ರಯಪತ್ರ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಸಿಐ 222 ಸಿಎಸ್‌ಸಿ 2023 ದಿನಾಂಕ 31.08.2024.

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ(ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ 10 ವರ್ಷಗಳ ಅವಧಿಗೆ ಲೀಸ್-ಕಮ್-ಸೇಲ್ ಡೀಡ್ ಆಧಾರದ ಮೇಲೆ ನಿವೇಶನ/ಮಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಕರಾರು ಪತ್ರದಲ್ಲಿ ಸೂಕ್ತ Abridgement Clause ನ್ನು ಅಳವಡಿಸಿ, ಕೈಗಾರಿಕಾ ಕಟ್ಟಡ ನಿರ್ಮಾಣ ಮಾಡಿ, ವಾಣಿಜ್ಯ ಉತ್ಪಾದನೆ ಪ್ರಾರಂಭಗೊಳಿಸಿದ ದಿನಾಂಕದಿಂದ ಎರಡು ವರ್ಷಗಳ ನಿರಂತರ ಉತ್ಪಾದನೆಯ ನಂತರ, ಹಂಚಿಕೆದಾರರು ಲೀಸ್-ಕಮ್-ಸೇಲ್ ಡೀಡ್‌ನ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ಗುತ್ತಿಗೆಯ ಅವಧಿಯು ಚಲಾವಣೆಯಲ್ಲಿರುವಾಗ ಕ್ರಯಪತ್ರ ನೆರವೇರಿಸಲು ಅನುಮೋದನೆ ನೀಡಿ ಆದೇಶಿಸಿರುತ್ತದೆ.

DGM (IA) No. 281 Dt. 26/9/24

ಮುಂದುವರೆದು, ಈ ಹಂಚಿಕೆ ನೀತಿ ಪರಿಷ್ಕರಣೆಯ ಅನುಸಾರ ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಲೀಸ್-ಕಮ್-ಸೇಲ್ ಡೀಡ್ ಕರಾರು ಪತ್ರಕ್ಕೆ ಸೂಕ್ತ ಮಾರ್ಪಾಟು ಮಾಡುವುದೆಂದು ಹಾಗೂ ಈ ನೀತಿಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅಸ್ತಿತ್ವದಲ್ಲಿರುವ ಗುತ್ತಿಗೆ ಅವಧಿಯಲ್ಲಿರುವ ಹಂಚಿಕೆದಾರರಿಗೂ ಅನ್ವಯವಾಗುವುದೆಂದು ತಿಳಿಸಲಾಗಿರುತ್ತದೆ **(ಪ್ರತಿ ಲಗತ್ತಿಸಿದೆ).**

ಈಗಾಗಲೇ 10 ವರ್ಷಗಳ ಲೀಸ್ ಅವಧಿಗೆ ಹಂಚಿಕೆ ಮಾಡಿರುವ ಮಳಿಗೆ/ನಿವೇಶನಗಳ ಹಂಚಿಕೆದಾರರಿಗೆ ಹಾಗೂ ನಿವೇಶನ ಹೊಸದಾಗಿ ಹಂಚಿಕೆ ಮಾಡುವ ಹಂಚಿಕೆದಾರರಿಗೆ ಅವರು ನಿರ್ವಹಿಸಿರುವ / ನಿರ್ವಹಿಸುವ ಲೀಸ್ ಕಂ ಸೇಲ್ ಕರಾರು ಪತ್ರದಲ್ಲಿ ಈ ಕೆಳಗಿನಂತೆ Abridgement Clause ಅಳವಡಿಸಿ, ಸೂಕ್ತ ಮಾರ್ಪಾಡು ಮಾಡಿ ನಿರ್ವಹಿಸುವುದು.

The lessor shall sell the Scheduled Property to the Lessee during the currency of the lease period or the extended period, if any, if the Lessee has performed all the conditions herein contained and committed no breach thereof with continuous production for Two Years from the date of commercial production. All attendant expenses in connection with the sale, such as stamp duty, registration charges etc., shall be borne by the Lessee.

ಕರಾಸಕೈಅನಿನಿ

ಅಂತೆಯೇ, ಈ ಮೇಲಿನ ಸರ್ಕಾರಿ ಆದೇಶವನ್ನು ನಿಗಮದಲ್ಲಿ ಯಥಾವತ್ತಾಗಿ ಅಳವಡಿಸಿ ಆದೇಶ ಹೊರಡಿಸಿದೆ ಹಾಗೂ ಈ ಆದೇಶವನ್ನು ಸಂಬಂಧಪಟ್ಟ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಹಾಗೂ ಶಾಖಾ ಮುಖ್ಯಸ್ಥರು ಕಟ್ಟುನಿಟ್ಟಾಗಿ ಪಾಲಿಸಲು ಸಹ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಮೈಸೂರು/ಶಿವಮೊಗ್ಗ
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ / ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ತಿದ್ದುಪಡಿ ಕಛೇರಿ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

000543

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ವತಿಯಿಂದ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆಯಾದ ಮಳಿಗೆ ಮತ್ತು ನಿವೇಶನಗಳ ಕ್ರಯಪತ್ರ ನೆರವೇರಿಸುವ ಕಾಲಾವಧಿಗೆ ತಿದ್ದುಪಡಿ ಮಾಡಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ಸಮನ್ವಯ:ಮಳಿಗೆ/ನಿವೇಶನ:ಕ್ರಯಪತ್ರ:ಅವಧಿ:2024, ದಿನಾಂಕ: 22.01.2024.

2) ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ-441/2024, ದಿನಾಂಕ: 21.08.2024ರ ನಿರ್ಣಯ.

* * * * *

ಮೇಲೆ ಓದಲಾದ ಕ್ರಮಾಂಕ (1) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಹಂಚಿಕೆ ಪಡೆದಿರುವ ಕೈಗಾರಿಕೋದ್ಯಮಿಗಳು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆಯಲು ಹಾಗೂ ನಿವೇಶನಗಳನ್ನು ಅಡಮಾನ ಮಾಡಲು ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿದ್ದ ಕಾರಣದಿಂದ ರಾಜ್ಯದ ಬಂಡವಾಳ ಹೂಡಿಕೆ ಕುಂಠಿತವಾಗುತ್ತಿರುವುದನ್ನು ಪರಿಗಣಿಸಿ ಮತ್ತು ರಾಜ್ಯಕ್ಕೆ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ದೃಷ್ಟಿಯಿಂದ ಹಂಚಿಕೆ ಪಡೆದ ಘಟಕವು ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸುವಂತೆ ಕಾಸಿಯಾ (Karnataka Small Scale Industries Association - KASSIA) ಸಂಸ್ಥೆ, ಸ್ಥಳೀಯ ಕೈಗಾರಿಕಾ ಸಂಘಗಳು ಕೋರಿದ್ದರ ಹಿನ್ನೆಲೆಯಲ್ಲಿ, ದಿನಾಂಕ: 07.09.2023 ರಂದು ಜರುಗಿದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ 370ನೇ ಆಡಳಿತ ಮಂಡಳಿಯ ಸಭೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ KIADB ಸಂಸ್ಥೆಗೆ ಸರ್ಕಾರವು ಅವಧಿ ಪೂರ್ವ ಕ್ರಯಪತ್ರ ನೀಡಲು ಅನುಮೋದಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಐ 132 ಎಸ್ ಪಿಕ್ಯೂ (ಇ) 2021, ದಿ: 01.01.2022ರ ಆದೇಶವನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೂ ಸಹ ಅನ್ವಯಿಸಿ ಆದೇಶ ನೀಡುವ ಕುರಿತು ಸರ್ಕಾರದ ಅನುಮೋದನೆ ಕೋರಲು ನಿರ್ಣಯಿಸಿರುವ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ, ಶುದ್ಧ ಕ್ರಯ ಪತ್ರವನ್ನು ನೆರವೇರಿಸಿದಲ್ಲಿ, ಕೈಗಾರಿಕೋದ್ಯಮಿಗಳು ಹಣಕಾಸು ಸಂಸ್ಥೆಗಳಿಂದ ತಮ್ಮ ಕೈಗಾರಿಕೆಗಳ ವಿಸ್ತರಣೆಗಾಗಿ ಅಗತ್ಯವಿರುವ ಬಂಡವಾಳ/ದುಡಿಮೆ ಬಂಡವಾಳ ಸಾಲ ಪಡೆಯಲು ಅನುಕೂಲವಾಗುವುದು ಹಾಗೂ ನಿಗಮವು ಕೈಗಾರಿಕೋದ್ಯಮಿಗಳಿಗೆ ಕ್ರಯಪತ್ರ ನಿರ್ವಹಿಸಿದ ನಂತರವೇ ನಿಗಮವು ಲಾಭಾಂಶ ತೋರಿಸಲು ಸಾಧ್ಯವಾಗುತ್ತದೆ. ಅದರಂತೆ, ಸರ್ಕಾರಕ್ಕೆ ಲಾಭಾಂಶದ ಪಾಲು (Dividend)ನ್ನು ಸಲ್ಲಿಸಲು ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ, KSSIDC ನಿಗಮದಿಂದ ಹಂಚಿಕೆ ಪಡೆದಿರುವ ಹಂಚಿಕೆದಾರರುಗಳು ಹಾಲಿ ಇರುವ ಗುತ್ತಿಗೆ ಕರಾರು ಪತ್ರದಲ್ಲಿ Abridgement Clause ನ್ನು ಅಳವಡಿಸಿ, ಹಂಚಿಕೆ ಪಡೆದ ನಿವೇಶನ/ಮಳಿಗೆಯಲ್ಲಿ ಉತ್ಪಾದನೆ ಪ್ರಾರಂಭ ಮಾಡಿ ಎರಡು ವರ್ಷಗಳನ್ನು ಪೂರೈಸಿದ ಹಂಚಿಕೆದಾರರುಗಳಿಗೆ ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಸಂದರ್ಭದಲ್ಲಿ, ಕ್ರಯಪತ್ರ ನೀಡುವ ಬಗ್ಗೆ ಸರ್ಕಾರದ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ರವರು ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ವತಿಯಿಂದ ಹಂಚಿಕೆ ಪಡೆದಿರುವ ಮಳಿಗೆ / ನಿವೇಶನಗಳ ಹಂಚಿಕೆದಾರರುಗಳಿಗೆ ಕ್ರಯಪತ್ರ ನೆರವೇರಿಸುವ ಕಾಲಾವಧಿಯನ್ನು 10 ವರ್ಷಗಳ ಅವಧಿ ಬದಲಿಗೆ ನಿವೇಶನ / ಮಳಿಗೆಯಲ್ಲಿ ವಾಣಿಜ್ಯ ಉತ್ಪಾದನೆ ಪ್ರಾರಂಭ ಮಾಡಿ ಎರಡು ವರ್ಷಗಳನ್ನು ಪೂರೈಸಿದ ಹಂಚಿಕೆದಾರರುಗಳಿಗೆ ಕ್ರಯಪತ್ರ ನೀಡುವ ಕುರಿತು ಸಚಿವ ಸಂಪುಟದ ಸಭೆ ಸಂಖ್ಯೆ: 17ರ ಕಾರ್ಯಸೂಚಿ ಕ್ರಮಸಂಖ್ಯೆ: 5ರ ಪ್ರಕರಣ ಸಂಖ್ಯೆ: ಸಿ-441/2024 ರಲ್ಲಿ ಅನುಮೋದಿಸಿರುವಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 222 ಸಿಎಸ್ ಸಿ 2023,

ಬೆಂಗಳೂರು, ದಿನಾಂಕ: 31.08.2024

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ 10 ವರ್ಷಗಳ ಅವಧಿಗೆ ಲೀಸ್-ಕಮ್-ಸೇಲ್ ಡೀಡ್ ಆಧಾರದ ಮೇಲೆ ನಿವೇಶನ / ಮಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಕರಾರು ಪತ್ರದಲ್ಲಿ ಸೂಕ್ತ Abridgement Clause ನ್ನು ಅಳವಡಿಸಿ, ಕೈಗಾರಿಕಾ ಕಟ್ಟಡ ನಿರ್ಮಾಣ ಮಾಡಿ, ವಾಣಿಜ್ಯ ಉತ್ಪಾದನೆ ಪ್ರಾರಂಭಗೊಳಿಸಿದ ದಿನಾಂಕದಿಂದ ಎರಡು ವರ್ಷಗಳ ನಿರಂತರ ಉತ್ಪಾದನೆಯ ನಂತರ, ಹಂಚಿಕೆದಾರರು ಲೀಸ್-ಕಮ್-ಸೇಲ್ ಡೀಡ್‌ನ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ, ಗುತ್ತಿಗೆಯ ಅವಧಿಯು ಚಲಾವಣೆಯಲ್ಲಿರುವಾಗ ಕ್ರಯಪತ್ರ ನೆರವೇರಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಈ ಹಂಚಿಕೆ ನೀತಿ ಪರಿಷ್ಕರಣೆಯ ಅನುಸಾರ ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಲೀಸ್-ಕಮ್-ಸೇಲ್ ಡೀಡ್ ಕರಾರು ಪತ್ರಕ್ಕೆ ಸೂಕ್ತ ಮಾರ್ಪಾಟು ಮಾಡುವುದು.

ಮೇಲ್ಕಂಡ ನೀತಿಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅಸ್ತಿತ್ವದಲ್ಲಿರುವ ಗುತ್ತಿಗೆ ಅವಧಿಯಲ್ಲಿರುವ ಹಂಚಿಕೆದಾರರಿಗೂ ಅನ್ವಯವಾಗುವುದು.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ-441/2024, ದಿನಾಂಕ: 21.08.2024ರ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31/8/24

(ಶರಣಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸ.ಪ್ರ.ಕೈ.)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
3) ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

000541

4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (B & R), ವಿಧಾನ ಸೌಧ, ಬೆಂಗಳೂರು.
9) ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
10) ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್, ಕೋರ್ಸ್ ರಸ್ತೆ, ಬೆಂಗಳೂರು - 01.
11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010.
12) ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸು ಇಲಾಖೆ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
13) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
14) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1 & ಬಂ.ಹೂ), ವಿಧಾನಸೌಧ, ಬೆಂಗಳೂರು.
15) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
16) ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು & ಸಮನ್ವಯ), ವಿಕಾಸ ಸೌಧ, ಬೆಂಗಳೂರು-01.
17) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

000540

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, 4 ಮತ್ತು 5ನೇ ಮಹಡಿ, 'ಈಸ್ಟ್ ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 001.

ದೂರವಾಣಿ : 080–2226 5383 ಫ್ಯಾಕ್ಸ್ : 080–2226 7901

ವೆಬ್‌ಸೈಟ್ : www.kiadb.in ಇ–ಮೇಲ್ : ceoemkiadb@gmail.com

ಸಂ.ಕ.ಕೈ.ಪ್ರ.ಅ.ಮಂ/ಕೇ.ಕ/ 14589–III/ 10546 /2022–23 ದಿನಾಂಕ: 08–09–2022

::ಸುತ್ತೋಲೆ::

ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮಂಡಳಿಯು ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಸದರಿ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ನಿವೇಶನಗಳ ಮೀಸಲಾತಿಯನ್ನು ಶೇ.22.65 ರಿಂದ 24.10 ಕ್ಕೆ ಹೆಚ್ಚಿಸುವ ಬಗ್ಗೆ.

ಉಲ್ಲೇಖ : 1. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪತ್ರ ಸಂಖ್ಯೆ:ಸಿಐ 341 ಎಸ್‌ಪಿಐ 2021 ದಿನಾಂಕ:16–05–2022.

2. ದಿನಾಂಕ:09–06–2022 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯ ನಡವಳಿ.

****

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪತ್ರ ಸಂಖ್ಯೆ:ಸಿಐ 341 ಎಸ್‌ಪಿಐ 2021 ದಿನಾಂಕ: 16–05–2022 ರಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:30–09–2021 ರಂದು ನಡೆದ ಸಭೆಯ ನಡವಳಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಲ್ಲಿನ ಶೇಕಡವಾರು ಪ್ರಮಾಣ ಶೇ.22.65 ರಿಂದ ಶೇ.24.10ಕ್ಕೆ ಹೆಚ್ಚಿಸುವ ಬಗ್ಗೆ ಎಸ್.ಸಿ/ಎಸ್.ಟಿ ಶಾಸಕಾಂಗ ಸಮಿತಿಯು ಶಿಫಾರಸ್ಸು ಮಾಡಿದ್ದು ಹಾಗೂ ದಿನಾಂಕ:11–05–2022 ರಂದು ನಡೆದ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ/ಪಂಗಡಗಳ ಕಲ್ಯಾಣ ಸಮಿತಿಯು ಅನುಸೂಚಿತ ಜಾತಿ/ಪಂಗಡದ ಉದ್ಯಮಶೀಲರ ಮೀಸಲಾತಿ ಪ್ರಮಾಣವನ್ನು ಪರಿಷ್ಕರಿಸಿ ಶೇ.22.65 ರಿಂದ ಶೇ.24.10ಕ್ಕೆ ನಿಗದಿಪಡಿಸಲು ನಿರ್ದೇಶಿಸಲಾಗಿರುತ್ತದೆ.

ಈ ಸಂಬಂಧ, ದಿನಾಂಕ:09–06–2022 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯಲ್ಲಿ, ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮೀಸಲಾತಿ ಪ್ರಮಾಣವನ್ನು ಪರಿಷ್ಕರಿಸಿ ಶೇ.22.65 ರಿಂದ ಶೇ.24.10 ಕ್ಕೆ ನಿಗದಿಪಡಿಸಲು ನಿರ್ಣಯಿಸಲಾಗಿರುತ್ತದೆ.

13/9/22

--2

000539

ಈ ಹಿನ್ನಲೆಯಲ್ಲಿ, ದಿನಾಂಕ:09-06-2022 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯ ನಿರ್ಣಯದನ್ವಯ, ದಿನಾಂಕ:09-06-2022ರ ನಂತರ ಮಂಡಳಿಯು ಅಭಿವೃದ್ಧಿಪಡಿಸುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗೆ ಲಭ್ಯವಾಗುವ ಒಟ್ಟಾರೆ ವಿಸ್ತೀರ್ಣದ ಪೈಕಿ, ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.24.10 ರಷ್ಟು ಜಮೀನನ್ನು/ಕೈಗಾರಿಕಾ ನಿವೇಶನಗಳನ್ನು ಮೀಸಲಿಟ್ಟು ಹಂಚಿಕೆ ಮಾಡಲು ಸೂಚಿಸಿದೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಈವರೆಗೆ ಮೀಸಲಿಟ್ಟು ಹಂಚಿಕೆಗೆ ಬಾಕಿ ಇರುವ ವಿವರಗಳನ್ನು ಹಾಗೂ ಮೀಸಲಿಡಬೇಕಾದ ಜಮೀನಿನ ವಿವರಗಳನ್ನು ಕೂಡಲೇ ಆಯಾ ವಲಯದ ಕಾರ್ಯಪಾಲಕ ಅಭಿಯಂತರರು ತಮ್ಮ ವ್ಯಾಪ್ತಿಗೆ ಬರುವ ಹಂಚಿಕೆ ಶಾಖೆಯ ವಿಭಾಗದ ಮುಖ್ಯಸ್ಥರಿಗೆ ವಿವರಗಳನ್ನು ಒದಗಿಸಲು ಸೂಚಿಸಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ,

1. ಮುಖ್ಯ ಅಭಿಯಂತರರು-1 ಮತ್ತು ಮುಖ್ಯ ಅಭಿಯಂತರರು-2, ಕೆಐಎಡಿಬಿ ಕೇಂದ್ರ ಕಛೇರಿ:: ರವರ ಮಾಹಿತಿಗಾಗಿ ಹಾಗೂ ಈ ಬಗ್ಗೆ ಎಲ್ಲಾ ವಲಯ ಕಛೇರಿಗಳ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚನೆ ನೀಡಲು ತಿಳಿಸಿದೆ.
2. ಜಂಟಿ ನಿರ್ದೇಶಕರು, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ, ಬೆಂಗಳೂರು.
3. ಕಾರ್ಯದರ್ಶಿ-1 ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು.
4. ಕಾರ್ಯದರ್ಶಿ-2, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು
5. ಹಣಕಾಸು ನಿಯಂತ್ರಣಾಧಿಕಾರಿ, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು
6. ಆರ್ಥಿಕ ಸಲಹೆಗಾರರು, ಕ.ಕೈ.ಪ್ರ.ಅ.ಮಂ, ಕೇಂದ್ರ ಕಛೇರಿ ಬೆಂಗಳೂರು.
7. ಎಲ್ಲಾ ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿಗಳು.
8. ಎಲ್ಲಾ ಸಹಾಯಕ ಕಾರ್ಯದರ್ಶಿಗಳು, ಕ.ಕೈ.ಪ್ರ.ಅ.ಮಂಡಳಿ ಕೇಂದ್ರ ಕಛೇರಿ ಹಾಗೂ ವಲಯ ಕಛೇರಿಗಳು.
9. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರು, ಕ.ಕೈ.ಪ್ರ.ಅ.ಮಂಡಳಿ, ವಲಯ ಕಛೇರಿಗಳು.
10. ಕಛೇರಿ ಪ್ರತಿ.

000538

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023.
2. ಸಿಇಓ ಮತ್ತು ಇಎಂ, ಕೆಐಎಡಿಬಿ, ರವರ ಪತ್ರ ಸಂಖ್ಯೆ:KIADB/SCP-TSP/17972/2023-24, ದಿನಾಂಕ:16.01.2024.

*****

ಪ್ರಸ್ತಾವನೆ:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ನಿಗಧಿಪಡಿಸಿ ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಹೊರಡಿಸಲಾಗಿರುತ್ತದೆ.

ಸಿಇಓ & ಇಎಂ, ಕೆಐಎಡಿಬಿ ರವರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಸಂಬಂಧ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆ) ನಿಯಮಗಳು, 1989 ರಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆಯಲ್ಲಿ ಮೀಸಲಾತಿಯನ್ನು ಒದಗಿಸಿರುತ್ತದೆ.
- ಪ್ರಸ್ತುತ, ಮಂಡಳಿಯು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಉದ್ಯಮಿಗಳಿಗೆ ಕೈಗಾರಿಕಾ ನಿವೇಶನಗಳ ಒಟ್ಟು ಹಂಚಿಕೆ ಪ್ರದೇಶದ ಶೇ. 24.10 ಅನ್ನು ಕಾಯ್ದಿರಿಸಲಾಗುತ್ತಿದೆ.
- ದಿನಾಂಕ: 26.12.2023 ರಂದು ನಡೆದ ಮಂಡಳಿ ಸಭೆಯಲ್ಲಿ ಕೆಐಎಡಿಬಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ಅನ್ನು ಮೀಸಲಾತಿಯನ್ನು ಒದಗಿಸಲು ಪರಿಗಣಿಸಿ, ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಸ್‌ಪಿಕ್ಯೂ 2021, ಬೆಂಗಳೂರು, ದಿನಾಂಕ:05.02.2024

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ರಷ್ಟು ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023ರ ಆದೇಶದಲ್ಲಿನ ವಿಧಿ-ವಿಧಾನಗಳನ್ವಯ ಹಂಚಿಕೆ ಮಾಡಲು ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

15/02/2024

(ಭೀಮಪ್ಪ ಪ. ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಕೈ.ಅ.).

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಕೈ.ಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

ಇವರಿಗೆ:

1. ಪ್ರಧಾನ ಮಹಾಲೆಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೆಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
4. ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ., ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು,
7. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

(E-1317784)

000536

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 18 ಎಂಡಬ್ಲ್ಯೂ ಪಿ 2024 (ಇ) ದಿನಾಂಕ: 29.07.2024

:ಸುತ್ತೋಲೆ:

ವಿಷಯ : ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (KIADB) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು (KSSIDC) ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳು / ಎಸ್ಟೇಟ್‌ಗಳು ಮತ್ತು ಏಕ ಘಟಕ ಸಂಕೀರ್ಣಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ / ಪರವಾನಗಿ ನೀಡುವ ಬಗ್ಗೆ.

ಕರ್ನಾಟಕ ನಗರಾಭಿವೃದ್ಧಿ ಕೋಶ ಸ್ವೀಕೃತಿ ಸಂಖ್ಯೆ: 8889700 ದಿನಾಂಕ 3/8/24 ಬೆಂಗಳೂರು

ಉಲ್ಲೇಖ :

1. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8685/2015 ಸಂಬಂಧಿಸಿದಂತೆ ದಿನಾಂಕ: 22-03-2024 ರಂದು ನೀಡಿರುವ ಆದೇಶ.
2. ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8685/2015 ಸಂಬಂಧಿಸಿದಂತೆ ದಿನಾಂಕ: 03-06-2024 ರಂದು ನೀಡಿರುವ ಆದೇಶ.
3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 17 ರನ್ವಯ ಸ್ಥಳೀಯ ಯೋಜನಾ ಪ್ರದೇಶದಾ ವ್ಯಾಪ್ತಿಗೆ ಒಳಪಡುವ KIADB ಯಿಂದ ಅಭಿವೃದ್ಧಿ ಹೊಂದಿದ ಜಮೀನುಗಳಿಗೆ ಕೈಗಾರಿಕಾ ಪ್ರದೇಶಗಳು / ಎಸ್ಟೇಟ್‌ಗಳಲ್ಲಿ ಮತ್ತು ಏಕ ಸಂಕೀರ್ಣ ಘಟಕ ಸಂಬಂಧಿತ ಕಟ್ಟಡದ ನಕ್ಷೆ ವಿನ್ಯಾಸ ಅನುಮೋದನೆಗೆ ಸಂಬಂಧಿತ ಸಭೆಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 06.05.2024 ರಂದು ನಡೆದ ಸಭೆಯ ನಡವಳಿಗಳು.
4. ಸರ್ಕಾರದ ಆದೇಶ ಸಂಖ್ಯೆ: CI 652 SPA 2023, ದಿನಾಂಕ: 01.06.2024.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: CI 652 SPA 2023, ದಿನಾಂಕ: 11-06-2024.
6. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 18 ಎಂಡಬ್ಲ್ಯೂಪಿ 2023, ದಿನಾಂಕ: 26.07.2024.

1/8/2024

2/8

03/08

* * * * *

ಉಲ್ಲೇಖ (1) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (KIADB) ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳು / ಎಸ್ಟೇಟ್‌ಗಳು ಮತ್ತು ಏಕ ಘಟಕ

ಸಂಕೀರ್ಣಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ / ಪರವಾನಗಿ ನೀಡುವ ಪ್ರಾಧಿಕಾರದ ಬಗ್ಗೆ, ದಿನಾಂಕ: 06-05-2024 ರಂದು ಸಭೆ ನಡೆಸಿ, ತೀರ್ಮಾನಿಸಿದ್ದು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಸರ್ಕಾರದ ಆದೇಶ ಸಂಖ್ಯೆ: ದಿನಾಂಕ: Cl/652/SPA/2023, ದಿನಾಂಕ: 01-06-2024 ರಂದು ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಉಲ್ಲೇಖ (2) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶ ಈ ಕೆಳಕಂಡಂತಿದೆ.

On 03-06-2024, the Advocate General presented these details to the Hon'ble High Cout, which acknowledged the submissions and supporting records. The Hon'ble High Court upheld that:

"The KIADB is the competent authority to issue building plan/permissions to individual units within industrial areas/estates and SUC's under its delegated powers." Further" insofar as any industrial area or industrial estate or a single unit complex approved by the KIADB, it is the KIADB who will be the sanctioning authority in respect of development plan, layout plan, building plan,

Commencement certificate, occupancy certificate, etc. relating to that particular building or buildings. It would also be for the KIADB to take action against any violation of the concerned building bylaws and/or permissions issued by KIADB in respect of such building or buildings."

Furthermore, the Court directed the State to inform all Panchayats, Municipal Authorities, Municipalities, Municipal Corporations, and other local bodies that they do not have the power to sanction development plans, layout plans, building plans, commencement certificates, occupancy certificates, etc., in areas designated as industrial areas, estates, of SUCs approved by the KIADB. Additionally, KSSIDC shall be the building plan approval authority for the industrial estates developed by KSSIDC.

1. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8685/2015 ಕ್ಕೆ ಸಂಬಂಧಿಸಿದಂತೆ ದಿನಾಂಕ: 03.06.2024 ರಂದು ನೀಡಿರುವ ಸೂಚನೆಯನ್ವಯ ಉಲ್ಲೇಖಿತ (3) ರಂತೆ ಸಂಬಂಧಿತ ಸಭೆಯನ್ನು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 06.05.2024 ರಂದು ಸದರಿ ಸಭೆಯ ನಡವಳಿಗಳಲ್ಲಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

"The KIADB is the authority to issue building plan/permissions to individual units within industrial areas / estates and SUC's (Single Unit Complexes) under its delegated powers to KIADB, subject to strict adherence to town planning Building regulation and Bye – laws. In this regard, RDPR and UDD to issue the enabling Government order / Circular and KIADB to take approval"

ಮೇಲಿನ ಸಭೆಯ ಅಂಶಗಳಲ್ಲಿನ ವಿಷಯವನ್ನು ಸಂಬಂಧಪಟ್ಟ ಅಧೀನ ಅಧಿಕಾರಿಗಳಿಗೆ ತಿಳಿಸಬೇಕೆಂದು ಉಲ್ಲೇಖ (5)ರ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಲಾಗಿದೆ.

ಆದರಂತೆ, ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (KIADB) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು (KSSIDC) ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶ / ವಸಾಹತುಗಳಿಗೆ ಸಂಬಂಧಿಸಿದಂತೆ, ಅಭಿವೃದ್ಧಿ ಯೋಜನೆ, ಲೇಔಟ್ ಯೋಜನೆ, ಏಕಘಟಕ ಸಂಕೀರ್ಣಗಳ ಅನುಮತಿ, ಕಟ್ಟಡ ನಿರ್ಮಾಣ ಅನುಮತಿ / ಪರವಾನಗಿ, ಪ್ರಾರಂಭ ಪ್ರಮಾಣ ಪತ್ರ, ಸ್ವಾಧೀನ ಪ್ರಮಾಣ ಪತ್ರ ಅನುಮೋದನೆ ಇತ್ಯಾದಿಗಳನ್ನು ನೀಡುವ ಪ್ರಾಧಿಕಾರಗಳು ಕ್ರಮವಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (KSSIDC) ಆಗಿರುತ್ತವೆ. ಸದರಿ ಅಧಿಕಾರವು ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಲ್ಲಿನ ನಿಯಮ / ವಿನಿಯಮಗಳನ್ನು (Regulations) ಕಟ್ಟುನಿಟ್ಟಾಗಿ ಪರಿಪಾಲಿಸುವ ಷರತ್ತಿಗೊಳಪಟ್ಟಿರುತ್ತದೆ.

ಮುಂದುವರೆದು, ಸರ್ಕಾರವು ಈ ಹಿಂದೆ ದಿನಾಂಕ: 26.07.2024 ರಂದು ಹೊರಡಿಸಲಾದ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 18 ಎಂಡಬ್ಲ್ಯೂಪಿ 2023 ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

(ಸತೀಶ್ ಕಬಾಡಿ) 29.07.2024
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಪೌರಾಡಳಿತ-2 & ಮಂಡಳಿ)
29/07

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
4. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬಹು ಮಹಡಿಗಳ ಕಟ್ಟಡ ಬೆಂಗಳೂರು.

5. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹು ಮಹಡಿಗಳ ಕಟ್ಟಡ ಬೆಂಗಳೂರು. (ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರು / ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳಿಗೆ ಸುತ್ತೋಲೆ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.)
6. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಮುಖಾಂತರ).
7. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು. (ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಮುಖಾಂತರ).
8. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು / ಮುಖ್ಯಾಧಿಕಾರಿಗಳು (ಗ್ರೇಡ್-1, 2)- -(ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಮುಖಾಂತರ).
9. ಶಾಖಾ ರಕ್ಷಕ ಕಡತ / ಹೆಚ್ಚುವರಿ ಕಡತಗಳು

ಸಂಖ್ಯೆ: ನಗ್ರಾಯೋ:ಜಂನಿ:117:CIRC:2024-25
ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್ಇ 18 ಎಂಡಬ್ಲ್ಯೂಪಿ 2024(ಇ)
ದಿನಾಂಕ: 29-07-2024.

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು.
ದಿನಾಂಕ: 21 AUG 2024

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ನಗರ ಮತ್ತು ಗ್ರಾಮಾಂತರ ಯೋಜನಾ ಅಪರ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2. ನಗರ ಮತ್ತು ಗ್ರಾಮಾಂತರ ಯೋಜನಾ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ ಕಲಬುರಗಿ.
4. ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
5. ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
6. ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
7. ಮುಖ್ಯಾಧಿಕಾರಿಗಳು/ಪೌರಾಯುಕ್ತರು, ಪುರಸಭೆ/ನಗರಸಭೆ/ಪಟ್ಟಣ ಪಂಚಾಯತಿ ಯೋಜನಾ ಪ್ರಾಧಿಕಾರಗಳು.
8. ಕೇಂದ್ರ ಕಛೇರಿಯ ಎಲ್ಲಾ ತಾಂತ್ರಿಕ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ.
9. ಸದರಿ ಸುತ್ತೋಲೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ.
10. ಹೆಚ್ಚುವರಿ ಪ್ರತಿಗಳು.

19/08/2024

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ

36 NK(Madhuri)Circ

ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ:ಫ್ಲ್ಯಾಟ್:2024 ದಿನಾಂಕ: 13-09-2024

000532

ಕಛೇರಿ-ಆದೇಶ

ವಿಷಯ: ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರವನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ: ಫ್ಲ್ಯಾಟ್:2022 ದಿನಾಂಕ 26-09-2023
2) ದಿನಾಂಕ 25.07.2024 ರಂದು ಜರುಗಿದ 373 ಮಂಡಳಿ ಸಭೆ ನಡವಳಿ.

M.Z-1 No. 607 Dt. 20/9/24

****

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಕಛೇರಿ ಆದೇಶದಲ್ಲಿ ನಿಗಮದ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳಿಗೆ ನಿಗದಿಪಡಿಸಿದ ಬಾಡಿಗೆ ದರಗಳು ದಿನಾಂಕ 31.07.2024ರಂದು ಮುಕ್ತಾಯವಾಗಿದ್ದು, ದಿನಾಂಕ 01.08.2024 ರಿಂದ ಬಾಡಿಗೆ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ.

ಅಂತೆಯೇ, ದಿನಾಂಕ 29.01.2013 ರಂದು ಜರುಗಿದ ನಿಗಮದ 325ನೇ ಆಡಳಿತ ಮಂಡಳಿ ಸಭೆಯಲ್ಲಿ ಬಾಡಿಗೆ ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಅಧಿಕಾರ ನೀಡಿರುವ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ (2)ರ ಮಂಡಳಿ ಸಭೆಯ ತೀರ್ಮಾನದಂತೆ, ಈಗ ಚಾಲ್ತಿಯಲ್ಲಿರುವ ಬಾಡಿಗೆ ದರಗಳ ಮೇಲೆ ಶೇಕಡ 05 ರಷ್ಟು ಹೆಚ್ಚಳ ಮಾಡಿ **ದಿನಾಂಕ 01.08.2024 ರಿಂದ 30.06.2025ರವರೆಗೆ** (11 ತಿಂಗಳ ಅವಧಿಗೆ) **'ಬಾಡಿಗೆ ದರ'**ಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಲಾಗಿದೆ.

ಕ್ರ ಸಂ.	ಸ್ಥಳ	ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರ ಪ್ರತಿ ತಿಂಗಳು, ಪ್ರತಿ ಚ.ಮೀ.ಗಳಿಗೆ (ರೂ.ಗಳಲ್ಲಿ)	
		01.09.2023ರಿಂದ 31.07.2024ರವರೆಗೆ (ಚಾಲ್ತಿಯಲ್ಲಿದ್ದಂತೆ)	01.08.2024ರಿಂದ 30.06.2025ರವರೆಗೆ (ಪರಿಷ್ಕೃತ ದರ)
1.	**ಬೆಂಗಳೂರು ನಗರ** ರಾಜಾಜಿನಗರ, ದ್ಯಾವಸಂದ್ರ, ಹೆಚ್.ಎ.ಎಲ್, ವಿದ್ಯುನ್ಮಾನನಗರ, ಎನ್.ಜಿ.ಇ.ಎಫ್, ಬೊಮ್ಮಸಂದ್ರ-1,2,3. ಕುಂಬಳಗೂಡು, ಯಲಹಂಕ.	172	181
2.	**ಬೆಂಗಳೂರು ಗ್ರಾಮಾಂತರ** ದೊಡ್ಡಬಳ್ಳಾಪುರ, ರಾಮನಗರ, ಹೊಸಕೋಟೆ, ಜಿಗಣಿ-1,2	46	48
3.	ಪೀಣ್ಯಾ/ವಿದ್ಯುನ್ಮಾನ ನಗರ/ರಾಜಾಜಿನಗರ/ ಕೈವ.ಗಳಲ್ಲಿನ ಬಹುಮಹಡಿ ಮಳಿಗೆಗಳಿಗೆ	383	402
4.	ಹುಬ್ಬಳ್ಳಿ/ಮೈಸೂರು/ಮಂಗಳೂರು/ಬೆಳಗಾವಿ	108	113
5.	ಇತರೆ ಜಿಲ್ಲಾ ಕೇಂದ್ರಗಳು	85	89
6.	ಇತರೆ ಸ್ಥಳಗಳು	46	48

.2.

000531

ಕರಾಸಕ್ಕೈಅನಿನಿ

ನಿಗಮದ ವತಿಯಿಂದ ಇತರೆ ಸ್ಥಳಗಳಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಮಳಿಗೆ/ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಬಾಡಿಗೆ ದರವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುವುದು.

ನಿಗಮದಿಂದ ಬಾಡಿಗೆ ಆಧಾರದ ಮೇಲೆ ಹಂಚಿಕೆಯಾದ ಮಳಿಗೆಗಳ ಹಂಚಿಕೆದಾರರಿಗೆ ಅವರಿಗೆ ಹಂಚಿಕೆಯಾದ ಆಯಾ ಮಳಿಗೆಯ **'ಒಳ-ಆವರಣದ' (Carpet Area)** ವಿಸ್ತೀರ್ಣಕ್ಕೆ ಮಾತ್ರ ಬಾಡಿಗೆ ದರವನ್ನು ವಿಧಿಸತಕ್ಕದ್ದು ಹಾಗೂ ಕೈಗಾರಿಕೇತರ ಚಟುವಟಿಕೆಗಾಗಿ ಬಾಡಿಗೆ ಯೋಜನೆ ಅಡಿಯಲ್ಲಿ ಹಂಚಿಕೆ ಮಾಡಲಾಗುವ ಮಳಿಗೆಗಳು/ಬಹುಮಹಡಿ ಮಳಿಗೆಗಳಿಗೆ ಪ್ರಚಲಿತ ದರ + ಶೇ.20 ರಷ್ಟು ಬಾಡಿಗೆ ವಿಧಿಸತಕ್ಕದ್ದು ಮತ್ತು ಗೋದಾಮನ್ನು ಉಗ್ರಾಣವನ್ನಾಗಿ ಉಪಯೋಗಿಸದೇ, ಉಗ್ರಾಣೇತ್ತರ ಚಟುವಟಿಕೆಗೆ ಉಪಯೋಗಿಸಿದ್ದಲ್ಲಿ, ಪರಿಷ್ಕೃತ ಬಾಡಿಗೆ ದರದ **ಒಂದೂವರೆ ಪಟ್ಟು** ಬಾಡಿಗೆ ವಸೂಲಿ ಮಾಡತಕ್ಕದ್ದು. ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿದ್ದಲ್ಲಿ **ದುಪ್ಪಟ್ಟು (Double)** ಬಾಡಿಗೆ ವಿಧಿಸಿ ವಸೂಲಿ ಮಾಡತಕ್ಕದ್ದು.

ಮುಂದುವರೆದು, ಈ ಮೇಲಿನ ನಿಗಧಿತ ಅವಧಿಯು ಪೂರ್ಣಗೊಂಡ ನಂತರ, ನಿಗಮದಿಂದ ಪರಿಷ್ಕೃತ ಆದೇಶ ಹೊರಡಿಸುವವರೆಗೆ ಚಾಲ್ತಿ ಬಾಡಿಗೆ ದರದ ಶೇ. 05 ರಷ್ಟು ಹೆಚ್ಚಳಗೊಳಿಸತಕ್ಕದ್ದು.

ಬಾಡಿಗೆ ಲೆಕ್ಕ ಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

ಮೇಲೆ ಸೂಚಿಸಲಾಗಿರುವ ಆದೇಶಗಳನ್ನು ತಪ್ಪದೇ **ಕಡ್ಡಾಯವಾಗಿ** ಹಾಗೂ **ಕಟ್ಟುನಿಟ್ಟಾಗಿ** ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕ್ಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕ್ಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಆಡಳಿತ&ಭೂಸ್ವಾಧೀನ)/(ಕೈವ)/(ಹಣಕಾಸು), ಕರಾಸಕ್ಕೈಅನಿನಿ, ಬೆಂಗಳೂರು
2. ಮುಖ್ಯ ಅಭಿಯಂತರರು-ಪ್ರ ಕರಾಸಕ್ಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ), ಕರಾಸಕ್ಕೈಅನಿನಿ, ಬೆಂಗಳೂರು
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆಡಳಿತ), ಕರಾಸಕ್ಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕ್ಕೈಅನಿನಿ, ಬೆಂಗಳೂರು
6. ಕಾನೂನು ಸಲಹೆಗಾರರು, ಕರಾಸಕ್ಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು(ಇಡಿಪಿ), ಕರಾಸಕ್ಕೈಅನಿನಿ, ಬೆಂಗಳೂರು, ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕ್ಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ::ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2023-24 ದಿನಾಂಕ: 27-10-2023

ಕಛೇರಿ ಆದೇಶ

000530

ವಿಷಯ : **ಕೈಗಾರಿಕಾ ನಿರ್ವಹಣಾ ನೀತಿ ಮಾರ್ಗಸೂಚಿ ಪರಿಷ್ಕರಣೆ ಕುರಿತು ಹಂಚಿಕೆದಾರರಿಗೆ ದಂಡ ವಿಧಿಸುವ ಅಥವಾ ಮನ್ನಾ ಮಾಡುವ ಬಗ್ಗೆ**

ಉಲ್ಲೇಖ:
1. ದಿನಾಂಕ 02.11.2021 ರಂದು ಜರುಗಿದ ನಿಗಮದ 25ನೇ ಆಡಿಟ್ ಉಪ ಸಮಿತಿಯ ನಡವಳಿಗಳು.
2. ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳ ಸಭೆ ನಿರ್ಣಯ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 07.09.2023ರಂದು ಜರುಗಿದ 370ನೇ ಮಂಡಳ ಸಭೆಯಲ್ಲಿ ಕೈಗಾರಿಕಾ ನಿರ್ವಹಣಾ ನೀತಿ ಮಾರ್ಗಸೂಚಿ ಪರಿಷ್ಕರಣೆ ಕುರಿತು ಹಂಚಿಕೆದಾರರಿಗೆ ದಂಡ ವಿಧಿಸುವ ಅಥವಾ ಮನ್ನಾ ಮಾಡುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರವರಿಗೆ ಅಧಿಕಾರ ನೀಡುವ ಕುರಿತು ಪ್ರಸ್ತಾವನೆಗೆ ಈ ಕೆಳಗಿನಂತೆ ತೀರ್ಮಾನವಾಗಿರುತ್ತದೆ.

> "ನಿಗಮವು ಸ್ಥಾಪಿಸಿರುವ ಕೆಲವೊಂದು ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕಾ ವಸಾಹತುಗಳ ಗಡಿ ಭಾಗಗಳಲ್ಲಿ ಜಮೀನುಗಳ ಸಮಸ್ಯೆಗಳಿದ್ದು ಮತ್ತು ಕೆಲವು ಸ್ಥಳಗಳಲ್ಲಿ ನಿವೇಶನಗಳ ಮಾಲೀಕತ್ವದ ಬಗ್ಗೆ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ ಮತ್ತು ಕೆಲವು ಕೈಗಾರಿಕಾ ವಸಾಹತುಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಮತ್ತು ನಿಗದಿತ ಅವಧಿಯಲ್ಲಿ ನಿವೇಶನಗಳ ಸ್ವಾಧೀನವನ್ನು ಹಂಚಿಕೆದಾರರುಗಳಿಗೆ ನೀಡುವಲ್ಲಿ ವಿಳಂಭ ಉಂಟಾಗಿರುವುದನ್ನು ಮಂಡಳಿಯು ಗಮನಿಸಿತು. ಮಂಡಳಿಯು ಸುದೀರ್ಘವಾಗಿ ಚರ್ಚಿಸಿ, ಕೈಗಾರಿಕಾ ನಿರ್ವಹಣಾ ನೀತಿ ಮಾರ್ಗಸೂಚಿ ಪರಿಷ್ಕರಣೆ ಕುರಿತು ದಂಡ ವಿಧಿಸುವ ಅಥವಾ ಮನ್ನಾ ಮಾಡುವಂತಹ ಪ್ರಕರಣಗಳನ್ನು ಸಮಗ್ರವಾಗಿ ಪರಿಶೀಲಿಸಿ, ಮಾನ್ಯ ಅಧ್ಯಕ್ಷರೊಂದಿಗೆ ಸಮಲೋಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ನಿಗಮದ ವ್ಯವಸ್ಥಾಪಕ ನಿರ್ದೇಶಕರವರಿಗೆ ಸೂಚಿಸಲಾಯಿತು."

ಮಂಡಳಿಯ ನಿರ್ಣಯದ ಅನುಸಾರ ಮಾನ್ಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಅನುವಾಗುವಂತೆ ಇಂತಹ ಪ್ರಕರಣಗಳನ್ನು ಪಟ್ಟಿ ಮಾಡಿಕೊಂಡು ಪರಿಶೀಲಿಸಿ, ಕಡತದಲ್ಲಿ ವಿವರವಾಗಿ ದಿನಾಂಕವಾರು ವರದಿ ತಯಾರಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟ ಕಡತಗಳನ್ನು ಈ ಕೆಳ ಸಹಿದಾರರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

DGM, Z-1 No. 660 31/10/23

ಇವರಿಗೆ,
1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2 ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಸಾಮಾನ್ಯ:ನಿವೇಶನ:ನೀಲಿನಕ್ಷೆ:ಅನುಮೋದನೆ:2024 000529 ದಿನಾಂಕ 15-05-2024

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತುಗಳಲ್ಲಿ ನಿವೇಶನಗಳನ್ನು ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ ಉದ್ದಿಮೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ನೀಡುವ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ ಕೈವ:ಸಾಮಾನ್ಯ:ನೀಲಿನಕ್ಷೆ:ಅನುಮೋದನೆ:2021/56 ದಿನಾಂಕ 06.05.2022.

ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನಗಳನ್ನು ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ ಉದ್ದಿಮೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ನೀಡುವ ಕುರಿತು ಮಂಡಳಿ ಸಭೆಯ ತೀರ್ಮಾನದಂತೆ ಉಲ್ಲೇಖಿತ ಕಛೇರಿ ಆದೇಶ ಹೊರಡಿಸಿ ದಿನಾಂಕ 31.03.2024ರ ವರೆಗೆ ಕಾಲಾವಕಾಶ ನೀಡಲಾಗಿರುತ್ತದೆ.

ಸದರಿ ಕಾಲಾವಕಾಶವು ಮುಕ್ತಾಯವಾಗಿರುವುದರಿಂದ, ದಿನಾಂಕ 01.04.2014ರ ನಂತರ ಹಂಚಿಕೆ ಪಡೆದಿರುವ ಉದ್ದಿಮೆದಾರರಿಗೆ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಉಲ್ಲೇಖಿತ ಕಛೇರಿ ಆದೇಶದಂತೆ ದಂಡ ವಿಧಿಸಿ ದಿನಾಂಕ 30.09.2024ರವರೆಗೆ ಕಾಲಾವಕಾಶ ನೀಡಲಾಗಿದೆ ಹಾಗೂ ಉಳಿದಂತೆ ಉಲ್ಲೇಖಿತ ಕಛೇರಿ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ. ಈ ಬಗ್ಗೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ ಬೆಳಗಾವಿ/ಕಲಬುರಗಿ/ಮೈಸೂರು/ಶಿವಮೊಗ್ಗ
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ / ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
2. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

GM(ES) No. 36 Date 22/5/24

DGM, Z-1 NO. 131 Dt. 22/5/24

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಜಮೀನು:ನಿವೇಶನ:ಭೂದರ ಪರಿಷ್ಕರಣೆ:2024 ದಿನಾಂಕ 25-04-2024

ಕಛೇರಿ ಆದೇಶ

000528

ವಿಷಯ: 2024-26ನೇ ಸಾಲಿಗೆ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ / ಜಮೀನಿನ ಭೂದರ ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಜಮೀನು:ನಿವೇಶನ:ಭೂದರ: ಪರಿಷ್ಕರಣೆ:2023 ದಿನಾಂಕ 17.05.2023
2) ದಿನಾಂಕ 29.02.2024ರಂದು ಜರುಗಿದ ನಿಗಮದ 372ನೇ ಮಂಡಳಿ ಸಭೆಯ ನಡವಳಿ.

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಕಛೇರಿ ಆದೇಶದಲ್ಲಿ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನುಗಳಿಗೆ ದಿನಾಂಕ 01.04.2023 ರಿಂದ 31.03.2024ರ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿತ್ತು. ಚಾಲ್ತಿ ಭೂದರಗಳು ದಿ.31.03.2024 ರಂದು ಮುಕ್ತಾಯವಾಗುತ್ತಿರುವುದರಿಂದ, ಭೂದರಗಳನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ದಿ.29.02.2024ರಂದು ಜರುಗಿದ ನಿಗಮದ 372ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> "ಮಂಡಳಿ ಸಭೆಯು ಸುದೀರ್ಘವಾಗಿ ಚರ್ಚಿಸಿ, ನಿಗಮವು ದಿನಾಂಕ 02.03.2023, 06.03.2023, 17.02.2023 ರಂದು ಹಾಗೂ ದಿನಾಂಕ 02.03.2024 ರಂದು ಹೊರಡಿಸುವ ಹಂಚಿಕೆಯ ಪತ್ರಿಕಾ ಪ್ರಕಟಣೆಯನ್ನು ಹೊರತುಪಡಿಸಿ ದಿನಾಂಕ 01.04.2024 ರಿಂದ ಜಾರಿಗೆ ಬರುವಂತೆ ಇತ್ತೀಚಿನ ಸರ್ಕಾರದ ಭೂದರ ಮಾರ್ಗಸೂಚಿಗಳನ್ನು ಕ್ರೋಢಿಕರಿಸಿ ಹೊಸದಾಗಿ ಭೂದರ ನಿಗದಿಪಡಿಸಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಅಧಿಕಾರ ನೀಡಲಾಯಿತು."

ಮಂಡಳಿ ಸಭೆಯ ತೀರ್ಮಾನದಂತೆ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳ ಸರ್ಕಾರದ ಮಾರ್ಗಸೂಚಿಗಳನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ರವರಿಂದ ಸ್ವೀಕರಿಸಲಾಗಿದ್ದು, ಅವುಗಳನ್ನು ಸರ್ಕಾರದ ಮಾರ್ಗಸೂಚಿ ಮತ್ತು ಮಂಡಳಿಯ ನಿರ್ಣಯಗಳಂತೆ ಪರಿಶೀಲಿಸಿ, 2024-26ನೇ ಸಾಲಿಗೆ ಅಂದರೆ ದಿನಾಂಕ 01.04.2024 ರಿಂದ ದಿನಾಂಕ 31.03.2026 ರವರೆಗೆ ಜಮೀನಿನ/ನಿವೇಶನಗಳ ಭೂದರಗಳನ್ನು ಪರಿಷ್ಕರಿಸಿ ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
	BENGALURU DIVISION					
1	Jigani I Stage	Bengaluru Urban	Zone-3	A	19800	**30360**
2	Jigani II Stage	Bengaluru Urban	Zone-3	A	19800	**30360**
3	Dyavasandra	Bengaluru Urban	Zone-3	A	52800	**64800**
4	NGEF	Bengaluru Urban	Zone-3	A	67200	**84000**
5	Rajajinagar	Bengaluru Urban	Zone-3	A	92400	**97200**
6	Electronic City	Bengaluru Urban	Zone-3	A	49665	**61800**
7	Veerasandra I Stage	Bengaluru Urban	Zone-3	A	34650	**34650**
8	Veerasandra II Stage	Bengaluru Urban	Zone-3	A	34650	**34650**
9	Bommasandra-I Stg	Bengaluru Urban	Zone-3	A	23100	**36000**
10	Bommasandra-II Stg	Bengaluru Urban	Zone-3	A	23100	**36000**

..2..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
11	H.A.L	Bengaluru Urban	Zone-3	A	0	-
12	Peenya I Stage	Bengaluru Urban	Zone-3	A	51975	72000
13	Peenya II Stage	Bengaluru Urban	Zone-3	A	51975	72000
14	Peenya III Stage	Bengaluru Urban	Zone-3	A	51975	72000
15	Yelahanka	Bengaluru Urban	Zone-3	A	43200	60000
16	Kumbalagodu	Bengaluru Urban	Zone-3	A	34650	34650
17	Hosakote	Bengaluru Rural	Zone-3	A	13340	21600
18	Doddaballapur	Bengaluru Rural	Zone-3	A	11550	14400
19	Muttukadahalli	Bengaluru Rural	Zone-3	A	11040	15600
20	Nelamangala	Bengaluru Rural	Zone-3	A	9360	13200
21	Ramanagar	Ramanagara	Zone-2	B	37800	43000
22	Kanakapura I Stage	Ramanagara	Zone-2	B	10973	14500
23	Kanakapura II Stage	Ramanagara	Zone-2	B	10973	14500
24	Thagachagere-Channapatna	Ramanagara	Zone-2	B	7875	9000
25	Magadi	Ramanagara	Zone-2	B	5775	7500
	TUMAKURU DIVISION					
26	Muddenahalli	Chikballapur	Zone-1	C	5100	**6800**
27	Chintamani	Chikballapur	Zone-2	B	2184	**6000**
28	Gowribidanur	Chikballapur	Zone-2	B	4000	**6000**
29	Kudumalakunte-Gowribidanur	Chikballapur	Zone-2	B	4000	**4500**
30	Sidlagatta	Chikballapur	Zone-2	B	2580	**4000**
31	Kyalanoor	Kolar	Zone-2	B	5500	**6000**
32	KGF	Kolar	Zone-2	B	15000	**16000**
33	Tamaka-Kolar	Kolar	Zone-2	B	20000	**25000**
34	Mysore Lamps	Kolar	Zone-2	B	20000	**25000**
35	Malur	Kolar	Zone-2	B	5000	**5000**
36	Mulabagal	Kolar	Zone-2	B	34560	**34560**
37	Kunigal	Tumkur	Zone-2	B	28370	**28500**
38	Madhugiri	Tumkur	Zone-1	C	5040	**18500**
39	Pavagada-kadamalakunte	Tumkur	Zone-1	C	1100	**1700**
40	Sira	Tumkur	Zone-2	B	11880	**20300**
41	Yeliyur	Tumkur	Zone-2	B	10000	**10000**
42	Tiptur	Tumkur	Zone-2	B	8470	**9900**
43	Anthrasanahalli-I	Tumkur	Zone-2	B	11000	**15000**
44	Anthrasanahalli-II	Tumkur	Zone-2	B	11000	**15000**
45	Hirehalli	Tumkur	Zone-2	B	4500	**6000**

..3..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
46	Tumkur	Tumkur	Zone-2	B	50000	**60000**
47	Chitradurga	Chitradurga	Zone-2	B	9000	**9000**
48	Matadakurubarahatti	Chitradurga	Zone-2	B	6500	**7500**
49	Hiriyur	Chitradurga	Zone-2	B	12210	**12300**
50	Hosadurga	Chitradurga	Zone-2	B	6000	**8000**
51	Challakere	Chitradurga	Zone-2	B	5445	**7500**
52	Ullarthikaval	Chitradurga	Zone-2	B	1800	**2000**
53	Khudhapura	Chitradurga	Zone-2	B	2330	**2400**
54	Davangere	Davangere	Zone-2	B	7260	**8000**
55	Harihar 1Stg.	Davangere	Zone-2	B	5000	**5500**
55	Harihar 2 Stg.	Davangere	Zone-2	B	5000	**5500**
56	Sarathi	Davangere	Zone-2	B	5015	**5100**
	MYSURU DIVISION					
57	Gundlupet-Veeranapura	Chamarajanagar	Zone-1	C	2000	**6600**
58	Chamarajanagar	Chamarajanagar	Zone-1	C	2000	**3200**
59	Kollegala	Chamarajanagar	Zone-1	C	5000	**6800**
60	Madikeri	Kodagu	Zone-1	C	14200	**14200**
61	Kushalanagar- Kudlur	Kodagu	Zone-1	C	3200	**5100**
62	Kushalnagar - 2nd Stg. Sundaranagar	Kodagu	Zone-1	C	3200	**5100**
63	Somanahalli	Mandya	Zone-2	B	5000	**9000**
64	Mandya 1st Stage	Mandya	Zone-2	B	27000	**27000**
65	Mandya 2nd Stage	Mandya	Zone-2	B	27000	**27000**
66	Nagamangala	Mandya	Zone-2	B	3000	**9000**
67	Pandavapura	Mandya	Zone-2	B	3700	**6000**
68	Srirangapatna	Mandya	Zone-2	B	5000	**7000**
69	Tubinakere	Mandya	Zone-2	B	9200	**9200**
70	Hunsur	Mysore	Zone-2	B	8700	**12000**
71	Hebbal	Mysore	Zone-2	B	11000	**12500**
72	Metagalli	Mysore	Zone-2	B	10500	**11500**
73	Yadavagiri-Mysore	Mysore	Zone-2	B	19800	**26000**
74	Nanjangud	Mysore	Zone-2	B	4000	**5000**
75	Hinakal	Mysore	Zone-2	B	To be developed	
76	Seegur	Mysore	Zone-2	B	Single Unit	

..4..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
	SHIVAMOGGA DIVISION					
77	Chikkamagalur	Chikkamagalur	Zone-2	B	19800	**40000**
78	Narasimrajapur	Chikkamagalur	Zone-2	B	900	**Land Dispute with Forest Dept**
79	Kadur-Birur	Chikkamagalur	Zone-2	B	9900	**20000**
80	Arasikere	Hassan	Zone-1	C	4600	**6800**
81	Gandasi	Hassan	Zone-1	C	3000	**3000**
82	Channarayapatna	Hassan	Zone-2	B	4000	**12700**
83	Hassan	Hassan	Zone-2	B	12000	**15000**
84	Holenarasipura	Hassan	Zone-2	B	3000	**3500**
85	Sakaleshapura	Hassan	Zone-2	B	5500	**6500**
86	Belur	Hassan	Zone-1	C	2000	**2200**
87	Bhadravathi	Shivamogga	Zone-2	B	12000	**15000**
88	Hosanagar	Shivamogga	Zone-1	C	4000	**4500**
89	Kerehalli	Shivamogga	Zone-1	C	3450	**3700**
90	Sagar	Shivamogga	Zone-2	B	10200	**13000**
91	Yelagadale	Shivamogga	Zone-2	B	3500	**6000**
92	Mandli-Shimoga	Shivamogga	Zone-2	B	9000	**9000**
93	Shimoga	Shivamogga	Zone-2	B	14200	**27800**
94	Sidlipura	Shivamogga	Zone-2	B	4100	**4100**
95	Shiralakoppa	Shivamogga	Zone-1	C	2000	**4200**
96	Hireshekuna	Shivamogga	Zone-1	C	2400	**3200**
97	Moodabidri	Dakishna Kannada	Zone-2	B	4500	**5500**
98	Belthangadi	Dakshina Kannada	Zone-2	B	5000	**5000**
99	Baikampady	Dakshina Kannada	Zone-2	B	12000	**12000**
100	Mulki	Dakshina Kannada	Zone-2	B	5500	**5500**
101	Yeyyadi	Dakshina Kannada	Zone-2	B	22800	**27800**
102	Karkala	Udupi	Zone-2	B	3500	**4300**
103	Koteshwara	Udupi	Zone-2	B	3000	**3000**
104	Manipal	Udupi	Zone-2	B	6500	**7500**

..5..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
	HUBBALLI DIVISION					
105	Lakkamanahalli	Dharwad	Zone-1	C	16170	**16170**
106	Hubli-I Stage -Gokul	Dharwad	Zone-1	C	20500	**21900**
	Hubli-II Stage	Dharwad	Zone-1	C	20500	**21900**
107	Dharwar-Belur	Dharwad	Zone-1	C	6468	**6500**
108	M T Sagar-I	Dharwad	Zone-1	C	20500	**21900**
	M T Sagar-II	Dharwad	Zone-1	C	20500	**21900**
109	Gamanagatti	Dharwad	Zone-1	C	8525	**8525**
110	Ramanakoppa	Dharwad	Zone-1	C	5198	**5198**
111	Betageri	Gadag	Zone-1	C	3465	**3465**
112	Gadag	Gadag	Zone-1	C	5775	**5775**
113	Mundargi	Gadag	Zone-1	C	3465	**4200**
114	Gajendragada	Gadag	Zone-1	C	2888	**2888**
115	Rona	Gadag	Zone-1	C	2888	**3550**
116	Lakshmeshwar	Gadag	Zone-1	C	2888	**2888**
117	Haveri	Haveri	Zone-1	C	4043	**4043**
118	Hirekerur	Haveri	Zone-1	C	1733	**1733**
119	Ranebennur-1 Stage	Haveri	Zone-1	C	3850	**3850**
120	Ranebennur-2 Stage	Haveri	Zone-1	C	3850	**3850**
121	Savanur	Haveri	Zone-1	C	3780	**4200**
122	Shiggoan	Haveri	Zone-1	C	2888	**2888**
123	Byadagi	Haveri	Zone-1	C	To be Developed	
124	Bhatkal	Uttar Kannada	Zone-1	C	1733	**1733**
125	Dandeli	Uttar Kannada	Zone-1	C	3465	**3465**
126	Haliyal	Uttar Kannada	Zone-1	C	1733	**1733**
127	Karwar	Uttar Kannada	Zone-1	C	2888	**2888**
128	Kumta	Uttar Kannada	Zone-1	C	4620	**5300**
129	Sirsi	Uttar Kannada	Zone-1	C	6600	**6600**
130	Ramanagar-Soopa	Uttar Kannada	Zone-1	C	1733	**1733**
131	Yellapur	Uttar Kannada	Zone-1	C	2310	**2310**

..6..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
	BELAGAVI DIVISION					
132	Bagalkote	Bagalkote	Zone-1	C	7750	**7750**
133	Bagalkote-Navanagar	Bagalkote	Zone-1	C	7500	**7500**
134	Jamakhandi	Bagalkote	Zone-1	C	4500	**6000**
135	Hungunda	Bagalkote	Zone-1	C	2760	**2760**
136	Mudhol	Bagalkote	Zone-1	C	3200	**3200**
137	Aasangi (Banahatti)	Bagalkote	Zone-1	C	1660	**1660**
138	Khagavada	Bagalkote	Zone-1	C	Single Unit	
139	Bailahongala	Belgaum	Zone-1	C	6560	**6560**
140	Kanaburgi	Belgaum	Zone-1	C	14400	**14400**
141	Anagol-1	Belgaum	Zone-1	C	17430	**18500**
142	Anagol-2	Belgaum	Zone-1	C	17430	**18500**
143	Udyambagh	Belgaum	Zone-1	C	16170	**16170**
144	Chikkodi	Belgaum	Zone-1	C	3500	**3500**
145	Manguru	Belgaum	Zone-1	C	2600	**2600**
146	Gokak	Belgaum	Zone-1	C	9765	**18900**
147	Desur	Belgaum	Zone-1	C	2200	**2200**
					3355	**3355**
148	Khanapura	Belgaum	Zone-1	C	3000	**4200**
149	Ramadurga	Belgaum	Zone-1	C	1660	**1660**
150	Nippani	Belgaum	Zone-1	C	2500	**2600**
151	Athani	Belgaum	Zone-1	C	2000	**3800**
152	Borgaon	Belgaum	Zone-1	C	2530	**2530**
153	Kangrali	Belgaum	Zone-1	C	Single Unit	**9300**
154	Vijayapur	Vijayapura	Zone-1	C	5630	**9950**
155	Mahalbagayat	Vijayapura	Zone-1	C	5460	**5460**
156	Muddebihal	Vijayapura	Zone-1	C	1800	**1800**
157	Sindagi	Vijayapura	Zone-1	C	2420	**3100**

..7..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
	KALBURGI DIVISION					
158	Bhalki-Bidar	Bidar	Zone-1	C	5000	**5000**
159	Gandhigunj-Bidar	Bidar	Zone-1	C	16000	**16000**
160	Kolhar-Bidar	Bidar	Zone-1	C	2500	**3000**
161	Navabad-Bidar	Bidar	Zone-1	C	3500	**8400**
162	Chittaguppa	Bidar	Zone-1	C	To be Developed	
163	Humnabad-1 Stage	Bidar	Zone-1	C	5350	**6500**
164	Humnabad-2 Stage	Bidar	Zone-1	C	1680	**1900**
165	Tanakushanoor	Bidar	Zone-1	C	1500	**1900**
166	Basavakalyan	Bidar	Zone-1	C	650	**1100**
167	Aland	Gulbarga	Zone-1	C	3300	**4000**
168	Chincholi	Gulbarga	Zone-1	C	1700	**2000**
169	Chittapura	Gulbarga	Zone-1	C	2160	**3400**
170	Shahabad -1	Gulbarga	Zone-1	C	1700	**2100**
171	Shahabad -2	Gulbarga	Zone-1	C	1500	**2100**
172	Kalburgi	Gulbarga	Zone-1	C	15600	**17300**
173	Kapanoor I	Gulbarga	Zone-1	C	12960	**13000**
174	Kapanoor II	Gulbarga	Zone-1	C	7150	**7200**
175	Jeevargi	Gulbarga	Zone-1	C	6900	**7000**
176	Sedam	Gulbarga	Zone-1	C	7000	**9700**
177	Shahapur	Yadgir	Zone-1	C	3000	**3000**
178	Shorapur	Yadgir	Zone-1	C	4800	**6300**
179	Bellary	Bellary	Zone-1	C	6600	**6800**
180	Hoovinahadagali	Bellary	Zone-1	C	7650	**8400**
181	Hospet	Bellary	Zone-1	C	7500	**10500**
182	Mundargi - Bellary	Bellary	Zone-1	C	4800	**4800**
183	Haraginadoni	Bellary	Zone-1	C	3700	**3700**
184	Sandoor	Bellary	Zone-1	C	1600	**2100**
185	Siraguppa	Bellary	Zone-1	C	4200	**7600**

...8..

Sl. No	Industrial Estate	District	Category as per Govt. Indl. Policy 2021-25	Category as per KSSIDC O.O. Dtd. 15.02.16	Prevailing Land Rate per Sq.Mtr. Arrived as per prevailing G.V. Of 2018-19 w.e.f. 01-01-2021 to 31-03-2023 extended upto 31.03.2024	LAND RATES per Smtr. W.e.f. from 01.04.2024 to 31.03.2026
1	2	3	4	5	6	7
186	Lingasugur	Raichur	Zone-1	C	3900	**3900**
187	Raichur	Raichur	Zone-1	C	7350	**7400**
188	Yarmaras	Raichur	Zone-1	C	2800	**3000**
189	Sindhanur	Raichur	Zone-1	C	2000	**2000**
190	Gangavathi	Koppal	Zone-1	C	3200	**3200**
191	Basapura	Koppal	Zone-1	C	2500	**2500**

NOTE:
1. Industrial Estates of the Corporation are categorized as per New Industrial Policy 2020-25 of Government of Karnataka.
2. Land Rates are worked out as per prevailing Government Guidance Value and asper the formula fixed by the Board and as per the Government directions and also as recommended by the concerned Assistant General Managers and Managers of the Corporation.
3. If the Guidance Value is enhanced, the Assistant General Mnagers should immediately inform the Head Office for increasing the land rates. This should be monitored by the Assistant General Managers continuously and constantly.

ಈ ಆದೇಶವನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಟಿ.ಹೆಚ್.ಎಂ.ಕುಮಾರ್., ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು/ಶಿವಮೊಗ್ಗ
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ / ಬಳ್ಳಾರಿ.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಗಳು(ಎಂ.ಎಸ್.ಎಂ.ಇ&ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
3. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
4. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ಅಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
9. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

000520

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಪರಿಷ್ಕರಣೆ:ನೀರಿನ ದರ:2024 ದಿನಾಂಕ: 01-04-2024

ಕಛೇರಿ-ಆದೇಶ

ವಿಷಯ: ನೀರಿನ ದರ ಪರಿಷ್ಕರಣೆ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಮನ್ವಯ:ಪರಿಷ್ಕರಣೆ:ನೀರಿನ ದರ:2022 ದಿನಾಂಕ 29.03.2022

****

ವಿಷಯಕ್ಕೆ ಸಂಬಂಧಪಟ್ಟಂತೆ, 2024-25ನೇ ಸಾಲಿಗೆ ನೀರಿನ ಶುಲ್ಕದ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ. ಕಾರಣ, ನಿಗಮದ ವತಿಯಿಂದ ನೀರು ಸರಬರಾಜಿನ ವ್ಯವಸ್ಥೆ ಕಲ್ಪಿಸಲಾಗಿರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪ್ರಸಕ್ತ ಸಾಲಿನ ನೀರಿನ ಶುಲ್ಕದ ಹಾಲಿ ಚಾಲ್ತಿಯಲ್ಲಿರುವ ದರವನ್ನು **ಶೇಕಡ 10ರಷ್ಟು ಹೆಚ್ಚಳ ಮಾಡಿ** ದಿನಾಂಕ **01.04.2024** ರಿಂದ **31.03.2025**ರವರೆಗೆ ಅನ್ವಯವಾಗುವಂತೆ 'ನೀರಿನ ಶುಲ್ಕ ದರ'ವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

I. ನೀರಿನ ಮಾಪಕ (**Water Meter**) ಇಲ್ಲದಿರುವ ಮಳಿಗೆಗಳಿಗೆ (ರೂ.ಗಳಲ್ಲಿ)/ಪ್ರತಿ ತಿಂಗಳಿಗೆ)

ಕ್ರಮ. ಸಂಖ್ಯೆ	ಮಳಿಗೆ ಮಾದರಿ	ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು		ಜಿಲ್ಲಾ ಕೇಂದ್ರ ಸ್ಥಳಗಳು		ಇನ್ನಿತರ ಸ್ಥಳಗಳು	
		ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ **31.03.2025** ರವರೆಗೆ ಪರಿಷ್ಕೃತ ನೀರಿನ ದರ	ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ	ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ 31.03.2025 ರವರೆಗೆ ಪರಿಷ್ಕೃತ ನೀರಿನ ದರ
1.	ಎ	1101.00	**1211.00**	787.00	**866.00**	471.00	**518.00**
2.	ಬಿ	787.00	**866.00**	471.00	**518.00**	317.00	**349.00**
3.	ಸಿ	629.00	**692.00**	317.00	**349.00**	237.00	**261.00**
4.	ಡಿ	376.00	**414.00**	237.00	**261.00**	160.00	**176.00**
5.	ಮಿನಿ/ ಸೂ.ಮಿನಿ	160.00	**176.00**	160.00	**176.00**	129.00	**142.00**

...2

GM(IEs)
No 9
Date 8/4/24

15/4

DGM, Z-I
No. 35
Dt. 15/4/24

16/4

II. ನೀರಿನ ಮಾಪಕ (**Water Meter**) ಇಲ್ಲದಿರುವ ನಿವೇಶನಗಳಿಗೆ: (ರೂಗಳಲ್ಲಿ)/ಪ್ರತಿ ತಿಂಗಳಿಗೆ) :

ಕ್ರ ಸಂ.	ವಿಸ್ತೀರ್ಣತೆ	ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು		ಜಿಲ್ಲಾ ಕೇಂದ್ರ ಸ್ಥಳಗಳು		ಇನ್ನಿತರ ಸ್ಥಳಗಳು	
		ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ **31.03.2025** ರವರೆಗೆ ಪರಿಷ್ಕೃತ ನೀರಿನ ದರ	ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ **31.03.2025** ರವರೆಗೆ ಪರಿಷ್ಕೃತ ನೀರಿನ ದರ	ಚಾಲ್ತಿ ನೀರಿನ ಶುಲ್ಕ ದರ	**01.04.2024** ರಿಂದ **31.03.2025** ರವರೆಗೆ ಪರಿಷ್ಕೃತ ನೀರಿನ ದರ
1.	100ಚ.ಮೀ. ವರೆಗೆ	317.00	**349.00**	237.00	**261.00**	160.00	**176.00**
2.	101 ಚ.ಮೀ. ನಿಂದ 300 ಚ.ಮೀ. ವರೆಗೆ	471.00	**518.00**	317.00	**349.00**	237.00	**261.00**
3.	301 ಚ.ಮೀ. ನಿಂದ 500 ಚ.ಮೀ. ವರೆಗೆ	629.00	**692.00**	471.00	**518.00**	317.00	**349.00**
4.	501 ಚ.ಮೀ. ನಿಂದ 700 ಚ.ಮೀ ವರೆಗೆ	787.00	**866.00**	629.00	**692.00**	471.00	**518.00**
5.	701 ಚ.ಮೀ. ನಿಂದ 1000 ಚ.ಮೀ. ವರೆಗೆ	941.00	**1035.00**	787.00	**866.00**	629.00	**692.00**
6.	1001 ಚ.ಮೀ. ಮೇಲೆ	1258.00	**1384.00**	866.00	**953.00**	706.00	**777.00**

III. ನೀರಿನ ಮಾಪಕ (Water Meter) ಇರುವ ಮಳಿಗೆ/ನಿವೇಶನಗಳಿಗೆ ರೂ.55.00 ಪ್ರತಿ 1000 ಲೀಟರ್‌ಗೆ ಇದ್ದು, ಕನಿಷ್ಠ ರೂ. 518.00 ಪ್ರತಿ ತಿಂಗಳಿಗೆ ನಿಗಧಿಪಡಿಸಿರುವುದು ಹಾಗೂ ಬಹು ಮಹಡಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಒಂದು ವೇಳೆ ಮೇಲಿನಂತೆ ನೀರಿನ ವಸೂಲಾತಿ ವೆಚ್ಚದ ಮೊತ್ತವು ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ತಗಲುವ ನೈಜ ವೆಚ್ಚಕ್ಕಿಂತ ಕಡಿಮೆಯಾದಲ್ಲಿ ನೈಜ ವೆಚ್ಚಕ್ಕೆ ಹೊಂದಾಣಿಕೆಯಾಗುವಂತೆ ಅವಶ್ಯ ಕ್ರಮ ಕೈಗೊಳ್ಳತಕ್ಕದ್ದು.

IV. ನೀರು ಆಧಾರಿತ ಕೈಗಾರಿಕಾ ಘಟಕಗಳು ಹಾಗೂ ನಿರ್ಮಾಣದ ಉದ್ದೇಶಕ್ಕಾಗಿ ನೀರಿನ ಬಳಕೆಗೆ, ಮೇಲಿನ ಪರಿಷ್ಕೃತ ದರದ **ಇಮ್ಮಡಿ (ದುಪ್ಪಟ್ಟು)** ದರವನ್ನು ನೀರಿನ ಶುಲ್ಕವಾಗಿ ವಸೂಲು ಮಾಡತಕ್ಕದ್ದು.

V. ನೀರಿನ ಮಾಪಕ ಅಳವಡಿಸಿದ್ದು ಅದು ಕಾರ್ಯನಿರ್ವಹಿಸದೇ ಇರುವಂತಹ ಪ್ರಕರಣಗಳಲ್ಲಿ ಹಿಂದಿನ 6 ತಿಂಗಳ ಸರಾಸರಿ ಅಥವಾ ನೀರಿನ ಮಾಪಕ ಇಲ್ಲದ ಪ್ರಕರಣಗಳಲ್ಲಿ ವಿಧಿಸುವ ದರ ಇವುಗಳಲ್ಲಿ **ಯಾವುದು ಜಾಸ್ತಿ** ಇರುವುದೋ ಆ ದರದಲ್ಲಿ ನೀರಿನ ಶುಲ್ಕವನ್ನು ವಸೂಲು ಮಾಡತಕ್ಕದ್ದು. ಹಾಗೆಯೇ ಅಂತಹ ನೀರಿನ ಮಾಪಕಗಳನ್ನು ಜರೂರಾಗಿ ಹಂಚಿಕೆದಾರರಿಂದಲೇ **ದುರಸ್ತಿ** ಮಾಡಿಸತಕ್ಕದ್ದು.

VI. ಹಂಚಿಕೆದಾರರುಗಳು ಮೂರು ತಿಂಗಳುಗಳ ನೀರಿನ ಶುಲ್ಕದ ಬಾಕಿಯನ್ನು ಪಾವತಿ ಮಾಡುವಲ್ಲಿ ವಿಫಲರಾದಲ್ಲಿ, ನೀರಿನ ಸಂಪರ್ಕವನ್ನು ಕಡಿತಗೊಳಿಸುವುದು. ತದನಂತರದಲ್ಲಿ ನೀರಿನ ಸಂಪೂರ್ಣ ಬಾಕಿಯನ್ನು ಶೇ. 18 ರಷ್ಟು ಬಡ್ಡಿಯನ್ನು ಪಡೆಯುವುದರೊಂದಿಗೆ ರೂ. 2830/-ಗಳ ಮರು-ಸಂಪರ್ಕ ಶುಲ್ಕವನ್ನು ವಸೂಲು ಮಾಡಿದ ನಂತರದಲ್ಲಿ ಮಾತ್ರ ನೀರಿನ ಸಂಪರ್ಕವನ್ನು **ಮರು-ನೀಡತಕ್ಕದ್ದು.**

VII. ನೀರಿನ ಹೊಸ ಸಂಪರ್ಕ ನೀಡುವ ಸಂದರ್ಭದಲ್ಲಿ ರೂ. 2830/- ಗಳನ್ನು **ಸಂಪರ್ಕ ದರವಾಗಿ** ಪಡೆಯತಕ್ಕದ್ದು.

...3

VIII. ನಿಗಮದ ಯಾವುದೇ ಕೈಗಾರಿಕಾ ವಸಾಹತುವಿನಲ್ಲಿ ಮೇಲೆ ತಿಳಿಸಿರುವ ದರದಂತೆ ನೀರಿನ ದರವನ್ನು ವಸೂಲು ಮಾಡಿದಾಗ್ಯೂ ಸಹ ಖರ್ಚು ಹೆಚ್ಚಾದಲ್ಲಿ ಅದನ್ನು ಸರಿಹೊಂದಿಸಿಕೊಳ್ಳುವ ರೀತಿಯಲ್ಲಿ ನೀರಿನ ದರವನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು ಪರಿಷ್ಕರಿಸಿ, ಅದರಂತೆ ವಸೂಲು ಮಾಡತಕ್ಕದ್ದು ಮತ್ತು ತತ್ಸಂಬಂಧದ ವಿಷಯದ ಬಗ್ಗೆ ಕೇಂದ್ರ ಕಛೇರಿಗೆ ಅಗತ್ಯ ಮಾಹಿತಿ ಒದಗಿಸತಕ್ಕದ್ದು. ಸದರಿ ವಿಷಯದ ಬಗ್ಗೆ ಕಾಲಕಾಲಕ್ಕೆ ಸಂಬಂಧಪಟ್ಟ ಉಪ ಪ್ರಧಾನ ವ್ಯವಸ್ಥಾಪಕರವರೂ ಸಹ ಕೂಲಂಕಷವಾಗಿ ಪರಿಶೀಲಿಸಿ ಅವಶ್ಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದವರು ಲೆಕ್ಕ ಪರಿಶೋಧನೆಗಾಗಿ ವಿಭಾಗೀಯ / ಶಾಖಾ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ವಿವರಗಳನ್ನೂ ಸಹ **ತಪ್ಪದೇ ಕಡ್ಡಾಯವಾಗಿ** ಪರಿಶೀಲಿಸತಕ್ಕದ್ದು.

IX. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಗೆ ಬರುವ ಎಲ್ಲಾ ಬಳಕೆದಾರರಿಗೆ **ಪರಿಷ್ಕೃತ ದರವು ಕಡ್ಡಾಯವಾಗಿ ದಿನಾಂಕ: 01.04.2024ರಿಂದ ಜಾರಿಗೆ ಬರುವುದೆಂದು** ಮತ್ತು ವಿಳಂಬಿತ ಪಾವತಿಯ ಮೇಲೆ ಶೇ. 18 ರಷ್ಟು ಬಡ್ಡಿ ವಿಧಿಸಲಾಗುವುದೆಂಬ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ತಿಳಿಸಿ, ಅದರಂತೆ ನೀರಿನ ದರವನ್ನು ವಸೂಲಿ ಮಾಡತಕ್ಕದ್ದು.

X. ಈ ಹಿಂದಿನ ವರ್ಷಗಳಲ್ಲಿ C.I.D. ಯೋಜನೆ ಅಥವಾ ನಿಗಮದಿಂದ ಬಂಡವಾಳ ತೊಡಗಿಸಿ, ನೀರಿನ ಸರಬರಾಜು ವ್ಯವಸ್ಥೆಗಳನ್ನು ಮಾಡಿದ ಪ್ರಕರಣಗಳನ್ನು ತಕ್ಷಣ ಕೈಗಾರಿಕಾ ವಿಭಾಗಕ್ಕೆ ಮಾಹಿತಿ ನೀಡಲು ನಿಗಮದ ವಿದ್ಯುತ್ ವಿಭಾಗಕ್ಕೆ ಸೂಚಿಸಲಾಗಿದೆ. ಮುಂದುವರೆದು, ಕೈಗಾರಿಕಾ ವಸಾಹತು ವಿಭಾಗದ ಮೇಲಾಧಿಕಾರಿಗಳು ತಕ್ಷಣ ಇದನ್ನು ಅನುಷ್ಠಾನಗೊಳಿಸಿ ನೀರಿನ ಬಿಲ್ಲಿನ ಮೊತ್ತ ವಸೂಲಿ ಮಾಡುವುದು.

XI. ಮೇಲೆ ಸೂಚಿಸಿರುವ ಮಾರ್ಗಸೂಚಿಗಳನ್ನು ನಿಗಮದ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು **ಕಡ್ಡಾಯವಾಗಿ** ಹಾಗೂ **ಕಟ್ಟುನಿಟ್ಟಾಗಿ** ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ & ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ) / (ವಾಣಿಜ್ಯ) / (ಸಮನ್ವಯ) ಕರಾಸಕೈಅನಿನಿ, ಬೆಂಗಳೂರು
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಸೇವಾ ಶುಲ್ಕ:ಪರಿಷ್ಕರಣೆ:2024

ದಿನಾಂಕ 01-04-2024

ಕಛೇರಿ ಆದೇಶ

000517

ವಿಷಯ: ನಿಗಮದಿಂದ ಹಂಚಿಕೆ ಮಾಡಲ್ಪಟ್ಟಿರುವ ಮಳಿಗೆ/ಗೋದಾಮು/ಫ್ಲ್ಯಾಟ್ಸ್ ಹಾಗೂ ನಿವೇಶನಗಳಿಗೆ ವಿಧಿಸಲಾಗಿರುವ ಸೇವಾ ಶುಲ್ಕ ದರವನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ ಸಮನ್ವಯ:ಸೇವಾ ಶುಲ್ಕ:ಪರಿಷ್ಕರಣೆ:2022 ದಿನಾಂಕ 29.03.2022

ವಿಷಯಕ್ಕೆ ಸಂಬಂಧಪಟ್ಟಂತೆ, 2024-25ನೇ ಸಾಲಿಗೆ ಸೇವಾ ಶುಲ್ಕದ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ. ಕಾರಣ ಈಗ ಚಾಲ್ತಿಯಲ್ಲಿರುವ ಸೇವಾ ಶುಲ್ಕಕ್ಕೆ ಶೇ.10ರಷ್ಟು ಹೆಚ್ಚಳ ಮಾಡಿ ಪರಿಷ್ಕರಿಸಿ ದಿನಾಂಕ 01.04.2024 ರಿಂದ 31.03.2025ರವರೆಗೆ ಅನ್ವಯವಾಗುವಂತೆ 'ಸೇವಾ ಶುಲ್ಕ' ದರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

I. ಮಳಿಗೆಗಳಿಗೆ :

(ಪ್ರತಿ ವರ್ಷಕ್ಕೆ. ರೂ.ಗಳಲ್ಲಿ)

ಕ್ರಮ. ಸಂಖ್ಯೆ	ಮಳಿಗೆ ಮಾದರಿ	ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ.	01.04.2024ರಿಂದ 31.03.2025ರವರೆಗಿನ ಸೇವಾ ಶುಲ್ಕದ ಪರಿಷ್ಕೃತ ದರ
1.	ಎ	14597.00	**16057.00**
2.	ಬಿ	10523.00	**11575.00**
3.	ಸಿ	7018.00	**7720.00**
4.	ಡಿ	4678.00	**5146.00**
5.	ಮಿನಿ/ ಸೂ.ಮಿನಿ	2340.00	**2574.00**

II. ನಿವೇಶನಗಳಿಗೆ :

(ಪ್ರತಿ ವರ್ಷಕ್ಕೆ. ರೂ.ಗಳಲ್ಲಿ)

ಕ್ರಮ ಸಂಖ್ಯೆ	ಸ್ಥಳ	ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ.	01.04.2024ರಿಂದ 31.03.2025ರವರೆಗಿನ ಸೇವಾ ಶುಲ್ಕದ ಪರಿಷ್ಕೃತ ದರ
1.	100 ಚ.ಮೀ. ವರೆಗೆ	2926.00	**3219.00**
2.	101 ಚ.ಮೀ. ನಿಂದ 300 ಚ.ಮೀ. ವರೆಗೆ	5849.00	**6434.00**
3.	301 ಚ.ಮೀ. ನಿಂದ 500 ಚ.ಮೀ. ವರೆಗೆ	8773.00	**9650.00**
4.	501 ಚ.ಮೀ. ನಿಂದ 700 ಚ.ಮೀ. ವರೆಗೆ	11691.00	**12860.00**
5.	701 ಚ.ಮೀ. ನಿಂದ 1000 ಚ.ಮೀ. ವರೆಗೆ	14597.00	**16057.00**
6.	1001 ಚ.ಮೀ. ನಿಂದ 2000 ಚ.ಮೀ.ವರೆಗೆ	17541.00	**19295.00**
7.	2001 ಚ.ಮೀ.ಮೇಲ್ಪಟ್ಟು	20427.00	**22470.00**

..2..

GM(IEs) No. 8. Date 8/4/24

DGM, Z-1 No. 36 Dt. 15/4/24

000516

III. ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಪ್ರತಿ ವರ್ಷಕ್ಕೆ ಸೇವಾ ಶುಲ್ಕವನ್ನು ಪ್ರತಿ ಚ.ಮೀ.ಗೆ **ರೂ.91.00ರಂತೆ** ನಿಗದಿಪಡಿಸಲಾಗಿದೆ.

IV. ಮೇಲಿನ ಸೇವಾ ಶುಲ್ಕ ದರಗಳು ದಿನಾಂಕ **01.04.2024** ರಿಂದ ಜಾರಿಗೆ ಬರುತ್ತವೆ ಹಾಗೂ ದಿನಾಂಕ **31.03.20235**ರವರೆಗೆ ಅಥವಾ ಪರಿಷ್ಕರಣೆ ಆಗುವವರೆಗೆ ಚಾಲ್ತಿಯಲ್ಲಿರುತ್ತವೆ.

V. ಮಳಿಗೆ ಅಥವಾ ನಿವೇಶನ ಹಂಚಿಕೆಯು ವರ್ಷದ ಮಧ್ಯ ಭಾಗದಲ್ಲಿ ಆಗಿದ್ದಲ್ಲಿ, ಅಲ್ಲಿಂದ ಸದರಿ ಸಾಲಿನ ಅಂತ್ಯದವರೆವಿಗೂ ಅಂದರೆ ಮಾರ್ಚ್ 31ರ ವರೆಗೆ ಪ್ರೋರೇಟ (Prorata) ಆಧಾರದ ಮೇಲೆ ಲೆಕ್ಕಾಚಾರ ಮಾಡಿ, ಅದರಂತೆ ವಸೂಲಿ ಮಾಡಿ ನಂತರ ಮುಂದಿನ ವರ್ಷಗಳಲ್ಲಿ ಪೂರ್ತಿ ಹಣ ವಸೂಲು ಮಾಡತಕ್ಕದ್ದು.

VI. ಎಲ್ಲಾ ಕೈಗಾರಿಕಾ ಘಟಕಗಳಿಗೆ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಪೂರ್ತಿ ವರ್ಷಕ್ಕೆ ಸೇವಾ ಶುಲ್ಕ ಬೇಡಿಕೆ ಬಿಲ್ಲನ್ನು ಸಿದ್ದಪಡಿಸಿ ಅದೇ ತಿಂಗಳಿನಲ್ಲಿ ತಪ್ಪದೇ ವಸೂಲಿ ಮಾಡತಕ್ಕದ್ದು. ಇದರಿಂದ ಆ ವರ್ಷದಲ್ಲಿ ಕೈಗೊಳ್ಳುವ ದುರಸ್ತಿ ಇನ್ನಿತರೆ ಕೆಲಸಗಳನ್ನು ಯೋಜನೆಯಂತೆ ಪೂರೈಸಲು ಸಾಧ್ಯವಾಗುವುದು.

VII. ನಿಗಮದ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಳಿಗೆ/ನಿವೇಶನಗಳ ಹಂಚಿಕೆದಾರರುಗಳಿಗೆ ಡಿಮ್ಯಾಂಡ್ ಬಿಲ್ಲಿನೊಂದಿಗೆ ಸೇವಾ ಶುಲ್ಕ ಪರಿಷ್ಕೃತ ದರವು ದಿನಾಂಕ 01.04.2024 ರಿಂದ ಕಡ್ಡಾಯವಾಗಿ ಜಾರಿಗೆ ಬರುವ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ಜರೂರಾಗಿ ತಿಳಿಸಿ, ಅದರಂತೆ ಪರಿಷ್ಕೃತ ಸೇವಾ ಶುಲ್ಕವನ್ನು ವಸೂಲಿ ಮಾಡತಕ್ಕದ್ದು.

ನಿಗಮದ ಎಲ್ಲಾ ಇಲಾಖಾ / ವಿಭಾಗ / ಶಾಖಾ ವ್ಯವಸ್ಥಾಪಕರುಗಳು ಸದರಿ ಆದೇಶಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕ್ಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕ್ಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ & ಭೂಸ್ವಾಧೀನ),/(ಹಣಕಾಸು), ಕರಾಸಕ್ಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು, ಕರಾಸಕ್ಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ) / (ವಾಣಿಜ್ಯ) /(ಸಮನ್ವಯ), ಕರಾಸಕ್ಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕ್ಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕ್ಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕ್ಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ಕಛೇರಿ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ::ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2023-24 ದಿನಾಂಕ: 01-04-2024

ಕಛೇರಿ ಆದೇಶ 000515

ವಿಷಯ: **ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು - ಹಂಚಿಕೆ ಪುನರ್ ಸ್ಥಾಪನೆ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.**

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ ಕೈವ:ನಿರ್ವಹಣಾನೀತಿ:ಮಾರ್ಗಸೂಚಿ : 2023-24 ದಿನಾಂಕ 27.10.2023.
2. ದಿನಾಂಕ 29.02.2024ರಂದು ಜರುಗಿದ ನಿಗಮದ 372ನೇ ಮಂಡಳಿ ಸಭೆಯ ನಡವಳಿ (ವಿಷಯ ಸೂಚಿ ಸಂಖ್ಯೆ 372/02)

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 07.09.2023 ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯಲ್ಲಿ ತೀರ್ಮಾನದಂತೆ ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರವರೆಗೆ ವಿಸ್ತರಿಸಲಾಗಿತ್ತು.

ನಿಗಮದ 370ನೇ ಮಂಡಳಿ ಸಭೆಯ ನಡವಳಿಯಲ್ಲಿನ ವಿಷಯಗಳಿಗೆ ಸಲ್ಲಿಸಲಾಗಿದ್ದ ಅನುಸರಣಾ ವರದಿಯನ್ನು ಗಮನಿಸಿದ ನಿಗಮದ 372ನೇ ಮಂಡಳಿ ಸಭೆಯು ಈ ಮುಂದಿನಂತೆ ನಿರ್ಣಯ ಕೈಗೊಂಡಿರುತ್ತದೆ. ಈ ಹಿಂದಿನ ಮಂಡಳಿ ಸಭೆಯ "ವಿಷಯ ಸಂಖ್ಯೆ-370/10ಕ್ಕೆ ಸಂಬಂಧಿಸಿದಂತೆ ನಿಗಮವು ದಿನಾಂಕ 27.10.2023 ರಂದು ಹೊರಡಿಸಿದ್ದ ಆದೇಶವನ್ನು ದಿನಾಂಕ 30.09.2024 ರವರೆಗೆ ವಿಸ್ತರಿಸಲು ತೀರ್ಮಾನಿಸಲಾಯಿತು".

ನಿಗಮದ 372ನೇ ಮಂಡಳಿ ಸಭೆಯ ವಿಷಯ ಸಂಖ್ಯೆ 372/02ರಲ್ಲಿನ ನಿರ್ಣಯದಂತೆ, ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ, ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 30.09.2024 ರವರೆಗೆ ವಿಸ್ತರಿಸಲಾಗಿದೆ ಹಾಗೂ ಉಳಿದಂತೆ ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ನೀಡಲಾಗಿದ್ದ ಸೂಚನೆಗಳು ಮುಂದುವರೆಯುತ್ತವೆ. ಅದರಂತೆ ಸೂಕ್ತ ಕ್ರಮವಹಿಸಲು ಸಂಬಂಧಪಟ್ಟವರೆಗೆ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,
1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

DGM(IEs) No. 7 Date 8/4/24

DGM, Z-1 No. 34 Dt. 12/4/24

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ/ಬೆಂ.ವಿ/ನೆಲ/ನೀಲಿನಕ್ಷೆಅನುಮೋದನೆ/2023 ದಿನಾಂಕ: 01-04-2024

ಕಛೇರಿ ಆದೇಶ 000514

ವಿಷಯ: **ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆ ಮಾಡಿರುವ ನಿವೇಶಗಳಲ್ಲಿ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆಗೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ನೀಡಿರುವ ಕಾಲಾವಕಾಶ ವಿಸ್ತರಿಸುವ ಬಗ್ಗೆ.**

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ:ಕೈವ/ಬೆಂ.ವಿ:ನೆಲ:ನೀಲಿ ನಕ್ಷೆ:ಅನುಮೋದನೆ:2023 ದಿನಾಂಕ 27-10-2023.
2. ದಿನಾಂಕ 29.02.2024 ರಂದು ಜರುಗಿದ ನಿಗಮದ 372ನೇ ಮಂಡಳಿ ಸಭೆ ನಡವಳಿ (ವಿಷಯ ಸೂಚಿ ಸಂಖ್ಯೆ 372/02)

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯ ತೀರ್ಮಾನದಂತೆ, ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡ ಕಟ್ಟಲು ನೀಲಿ ನಕ್ಷೆ ಅನುಮೋದನೆ ಪಡೆದು ಕೈಗಾರಿಕಾ ಚಟುವಟಿಕೆ ಪ್ರಾರಂಭಿಸುವ ಕುರಿತು ದಿನಾಂಕ 31.03.2024ರವರೆಗೆ ದಂಡವಿಲ್ಲದೇ ಅನುಮತಿ ನೀಡಲಾಗಿತ್ತು.

ನಿಗಮದ 370ನೇ ಮಂಡಳಿ ಸಭೆಯ ನಡವಳಿಯಲ್ಲಿನ ವಿಷಯಗಳಿಗೆ ಸಲ್ಲಿಸಲಾಗಿದ್ದ ಅನುಸರಣಾ ವರದಿಯನ್ನು ಗಮನಿಸಿದ ನಿಗಮದ 372ನೇ ಮಂಡಳಿ ಸಭೆಯು ಈ ಮುಂದಿನಂತೆ ನಿರ್ಣಯ ಕೈಗೊಂಡಿರುತ್ತದೆ. ಈ ಹಿಂದಿನ ಮಂಡಳಿ ಸಭೆಯ "ವಿಷಯ ಸಂಖ್ಯೆ – 370/5ಕ್ಕೆ ಸಂಬಂಧಿಸಿದಂತೆ ನಿಗಮವು ದಿನಾಂಕ 27.10.2023 ರಂದು ಹೊರಡಿಸಿದ್ದ ಆದೇಶವನ್ನು ದಿನಾಂಕ 30.09.2024 ರವರೆಗೆ ವಿಸ್ತರಿಸಲು ತೀರ್ಮಾನಿಸಲಾಯಿತು".

ನಿಗಮದ 372ನೇ ಮಂಡಳಿ ಸಭೆಯ (ವಿಷಯ ಸಂಖ್ಯೆ 372/02ರಲ್ಲಿನ) ತೀರ್ಮಾನದಂತೆ, ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡ ಕಟ್ಟಲು ನೀಲಿ ನಕ್ಷೆ ಅನುಮೋದನೆಯನ್ನು ದಿನಾಂಕ: 30.09.2024 ರವರೆಗೆ ದಂಡವಿಲ್ಲದೇ ಅನುಮತಿ ನೀಡಲು ಆದೇಶಿಸಿದೆ ಹಾಗೂ ಸಂಬಂಧಿಸಿದ ಹಂಚಿಕೆದಾರರಿಗೆ ಈ ವಿಷಯ ತಿಳಿಸಲು ಆದೇಶಿಸಿದೆ.

GM(IEs) No. 6 Date 8/4/24

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,
ಸಹಾಯಕ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು ಅವರ ಅವಶ್ಯ ಕ್ರಮಗಳಿಗಾಗಿ.

15/4

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

DGM, Z-1 No. 37 Dt. 15/4/24

16/4

- 67 -

000513

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಘಟ್ ಖರಾಬು-'ಎ' ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಪರಿವರ್ತಿಸುವುದಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ಅವುಗಳು ಸರ್ಕಾರಕ್ಕೆ ಸೇರಿದವುಗಳೇ ಅಥವಾ ಹಿಡುವಳಿದಾರರಿಗೆ ಸೇರಿದವುಗಳೇ ಎಂಬುದರ ಬಗ್ಗೆ ರುಜುವಾತುಪಡಿಸುವ ದಾಖಲೆಗಳನ್ನು ನಿರ್ಧರಿಸಿ ಅಭಿಪ್ರಾಯ ನೀಡಲು ಸಮಿತಿ ರಚಿಸುವ ಬಗ್ಗೆ ಹಾಗೂ ಕಂದಾಯ ದಾಖಲೆಗಳಲ್ಲಿ ಈ ಬಗ್ಗೆ ಸೂಕ್ತ ನಮೂದು ಮಾಡುವುದು ಸೇರಿದಂತೆ ಮತ್ತಿತರ ಕ್ರಮಗಳನ್ನು ವಹಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 21 ಎಲ್‌ಜಿಪಿ 1993 ದಿನಾಂಕ: 16-09-1994.

(2) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 08 ಎಲ್‌ಜಿಪಿ 2015 ದಿನಾಂಕ: 20-07-2017.

(3) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 08 ಎಲ್‌ಜಿಪಿ 2015 ದಿನಾಂಕ: 20-07-2017.

* * *

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಸುತ್ತೋಲೆ ದಿನಾಂಕ: 16-09-1994 ರಲ್ಲಿ ಭೂ ಪರಿವರ್ತನೆ ನೀಡುವ ಸಮಯದಲ್ಲಿ ಕೆಲವು ಹಿಡುವಳಿ ಜಮೀನಿನಲ್ಲಿ ಅಥವಾ ಅದರ ಮಧ್ಯ ಭಾಗದಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು, ಬಂಡೆ, ಹಳ್ಳ, ತಗ್ಗಿನ ಪ್ರದೇಶ ಮರಡಿ ಇತ್ಯಾದಿ ಖರಾಬು ಎಂದು ಏಂಗಡಿಸಿರುವ ಜಮೀನುಗಳಿಗೂ ಭೂ ಮೌಲ್ಯ ಮತ್ತು ಭೂ ಪರಿವರ್ತನೆ ಶುಲ್ಕ ವಿಧಿಸಿ ಭೂ ಪರಿವರ್ತನೆ ಆದೇಶ ನೀಡಬೇಕೆಂದು ಮೇಲೆ ಉಲ್ಲೇಖಿಸಿದ ಸರ್ಕಾರದ ಸುತ್ತೋಲೆ ದಿನಾಂಕ: 16-09-1994 ರಲ್ಲಿ ಸೂಚನೆಗಳನ್ನು ನೀಡಲಾಗಿತ್ತು.

ಹಿಡುವಳಿದಾರರ ಮಾಲೀಕತ್ವದಲ್ಲಿರುವ ಘಟ್ ಖರಾಬು 'ಎ' ಜಮೀನಿಗೆ ಸಂಬಂಧಿಸಿದಂತೆ ಮೇಲೆ ಉಲ್ಲೇಖಿಸಿರುವ ಸರ್ಕಾರದ ದಿನಾಂಕ: 16-09-1994ರ ಸುತ್ತೋಲೆಯನ್ವಯ ಭೂ ಮೌಲ್ಯ ವಿಧಿಸುತ್ತಿರುವುದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಲವರು ಪ್ರಶ್ನಿಸಿದ್ದರಿಂದ ಹಾಗೂ ಈ ಸಂಬಂಧ ದಾಖಲಿಸಲಾಗಿದ್ದ ಮೇಲ್ಮನವಿಯು ವಜಾಗೊಂಡಿದ್ದರಿಂದ ಸರ್ಕಾರವು ಈ ಪ್ರಕರಣವನ್ನು ಪರಿಶೀಲಿಸಿ ಘಟ್ ಖರಾಬು 'ಎ' ಜಮೀನು ಭೂ ಮಾಲೀಕರಿಗೆ ಸೇರಿರುವ ಕಾರಣ ಅದರ ಪರಿವರ್ತನೆಗೆ ಭೂ ಮೌಲ್ಯವನ್ನು ವಿಧಿಸಲು ಸರ್ಕಾರಕ್ಕೆ ಅಧಿಕಾರವಿಲ್ಲವಾದ್ದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 21 ಎಲ್‌ಜಿಪಿ 1993 ದಿನಾಂಕ 16-09-1994 ಅನ್ನು ಮೇಲೆ ಓದಲಾದ ಕ್ರಮಾಂಕ (2)ರ ಸುತ್ತೋಲೆ ದಿನಾಂಕ: 20-07-2017 ರಲ್ಲಿ ಹಿಂಪಡೆಯಲಾಗಿದೆ.

ನಂತರ, ಹಿಡುವಳಿದಾರರಿಗೆ ಸೇರಿದ ಘಟ್ ಖರಾಬು 'ಎ' ಜಮೀನುಗಳಿಗೆ ಸಂಬಂಧಿಸಿದಂತೆ ಭೂ ಪರಿವರ್ತನೆ ಮಾಡುವ ಸಂದರ್ಭದಲ್ಲಿ ಭೂ ಮೌಲ್ಯ ವಸೂಲು ಮಾಡದೆ ಕರ್ನಾಟಕ ಭೂಕಂದಾಯ ನಿಯಮಗಳಡಿ ಕಲ್ಪಿಸಿರುವ ಅವಕಾಶದಂತೆ ಭೂ ಪರಿವರ್ತನೆ ಶುಲ್ಕ ಪಾವತಿಕೊಳ್ಳಬೇಕೆಂದು ಹಾಗೂ ಸದರಿ ಘಟ್ ಖರಾಬು-'ಎ' ಜಮೀನು ಸರ್ಕಾರಕ್ಕೆ ಸೇರಿದೆ ಎಂಬ ಬಗ್ಗೆ ರುಜುವಾತುಪಡಿಸುವ ದಾಖಲೆಗಳು ಇದ್ದಲ್ಲಿ ಮಾತ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಭೂ ಪರಿವರ್ತನೆ ಶುಲ್ಕದ ಜೊತೆಗೆ ಪ್ರಚಲಿತ ಮಾರುಕಟ್ಟೆ ದರದಲ್ಲಿ ಭೂ ಮೌಲ್ಯವನ್ನು ಅಂತಹ ಜಮೀನಿಗೆ ವಿಧಿಸಬಹುದೆಂದು ದಿನಾಂಕ:20-07-2017ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

000512

ಮೇಲೆ ಓದಲಾದ ಕ್ರಮಾಂಕ (3)ರ ಸರ್ಕಾರದ ಅಧಿಸೂಚನೆ ದಿನಾಂಕ: 20-07-2017 ರಲ್ಲಿ ಘಟ್ ಖರಾಬ್ 'ಎ' ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಪರಿವರ್ತಿಸುವ ಸಂದರ್ಭದಲ್ಲಿ ಸಂದರ್ಭಾನುಸಾರ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 107 ಮತ್ತು ನಿಯಮ 107-ಎ ರಡಿಯಲ್ಲಿ ಅನ್ವಯಿಸುವ ದರಗಳ ದುಪ್ಪಟ್ಟು ಬಾಲ್ಕಾನೆ ಮತ್ತು ಸಂಯೋಜಿತ ಮೊತ್ತಗಳನ್ನು ವಿಧಿಸಲು ಸರ್ಕಾರವು ಕರ್ನಾಟಕ ಭೂ ಕಂದಾಯ ನಿಯಮಗಳು, 1966ಕ್ಕೆ ನಿಯಮ 107ಎಎ ಎಂದು ತಿದ್ದುಪಡಿ ತರಲಾಗಿದೆ.

ಮೇಲೆ ಓದಲಾದ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಅನುಸರಿಸಬೇಕೆಂದು ತಿಳಿಸಲಾಗಿದ್ದು, ಈ ಬಗ್ಗೆ ರುಜುವಾತುಪಡಿಸುವ ದಾಖಲೆಗಳನ್ನು ಪರಿಶೀಲಿಸಿ ಕ್ರಮವಹಿಸಲು ಜಿಲ್ಲಾಮಟ್ಟದಲ್ಲಿ ಒಂದು ಸಮಿತಿ ಇರುವುದು ಸೂಕ್ತವೆಂದು ನಿರ್ಧರಿಸಲಾಗಿದೆ. ಮುಂದುವರೆದು, ಸದರಿ ಸಮಿತಿಯು ನೀಡುವ ಅಭಿಪ್ರಾಯ ಆಧರಿಸಿ, ಕಂದಾಯ ದಾಖಲೆಗಳಲ್ಲಿ ಸೂಕ್ತ ನಮೂದು ಮಾಡುವುದೂ ಸೇರಿದಂತೆ ಘಟ್ ಖರಾಬು 'ಎ' ಜಮೀನುಗಳ ಭೂ ಪರಿವರ್ತನೆ ಕುರಿತಂತೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸೂಚನೆಗಳನ್ನು ನೀಡುವ ಅವಶ್ಯಕತೆ ಇದೆ.

ಆದುದರಿಂದ, ಕೆಳಗಿನಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 05 ಎಲ್‌ಜಿಪಿ 2018,
ಬೆಂಗಳೂರು, ದಿನಾಂಕ:16.05.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಘಟ್ ಖರಾಬು 'ಎ' ಜಮೀನುಗಳು ಸರ್ಕಾರಕ್ಕೆ ಸೇರಿದವುಗಳೇ ಅಥವಾ ಹಿಡುವಳಿದಾರರಿಗೆ ಸೇರಿದವುಗಳೇ ಎಂಬುದರ ಬಗ್ಗೆ ರುಜುವಾತುಪಡಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಲು ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಘಟ್ ಖರಾಬು-ಎ ಜಮೀನುಗಳ 'ನಿರ್ಧರಣಾ ಸಮಿತಿ' ಯನ್ನು ಸರ್ಕಾರವು ರಚಿಸಿ ಆದೇಶಿಸಿದೆ.

ಕ್ರ ಸಂ	ಅಧಿಕಾರಿ ಮತ್ತು ಪ್ರಸ್ತುತ ಹುದ್ದೆ	ಪದನಾಮ
1.	ಜಿಲ್ಲಾಧಿಕಾರಿ (ಸಂಬಂಧಪಟ್ಟ ಜಿಲ್ಲೆ)	ಅಧ್ಯಕ್ಷರು
2.	ಉಪ ನಿರ್ದೇಶಕರು ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ (ಸಂಬಂಧಪಟ್ಟ ಜಿಲ್ಲೆ)	ಸದಸ್ಯ ಕಾರ್ಯದರ್ಶಿ
3.	ಉಪ ವಿಭಾಗಾಧಿಕಾರಿ (ಸಂಬಂಧಪಟ್ಟ ಉಪವಿಭಾಗ)	ಸದಸ್ಯರು
4.	ತಹಶೀಲ್ದಾರ್ (ಸಂಬಂಧಪಟ್ಟ ತಾಲ್ಲೂಕು)	ಸದಸ್ಯರು
5.	ಸಹಾಯಕ ನಿರ್ದೇಶಕರು ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ (ಸಂಬಂಧಪಟ್ಟ ತಾಲ್ಲೂಕು)	ಸದಸ್ಯರು

ಮೇಲ್ಕಂಡ ಸಮಿತಿಯ ಪರಿಶೀಲನಾಂಶಗಳು : 000511

1. ಭೂ ಪರಿವರ್ತನೆಗೆ ಒಳಪಡುವ ಜಮೀನಿನಲ್ಲಿನ 'ಎ' ಖರಾಬು ವಿಸ್ತೀರ್ಣವು ಸರ್ಕಾರಿ ಜಮೀನಾಗಿರುತ್ತದೆಯೇ ಅಥವಾ ಹಿಡುವಳಿದಾರರ ಜಮೀನಾಗಿರುತ್ತದೆಯೇ ಎಂಬುದನ್ನು ಕಡತದ ಪರಿಚಾಲನೆ (File Circulation) ಮೂಲಕವೇ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದು.

2. ಹಿಡುವಳಿದಾರನ/ಖಾಸಗಿ ಜಮೀನಿನಲ್ಲಿರುವ 'ಎ' ಖರಾಬು ಜಮೀನನ್ನು ಸರ್ವೆ ದಾಖಲೆಗಳಂತೆ ಹಾಗೂ ಪ್ರಸ್ತುತ ಬಳಕೆಯನ್ನು ಪರಿಶೀಲಿಸಿ ನಿರ್ಧರಿಸುವುದು.

3. ಕಂದಾಯ ದಾಖಲೆಗಳಲ್ಲಿ ಬರುವ ಕೆಲವೊಂದು ಖರಾಬು ಜಮೀನುಗಳನ್ನು ಅನುಬಂಧದಲ್ಲಿನ ಪಟ್ಟಿ-1 ಮತ್ತು ಪಟ್ಟಿ-2 ರಲ್ಲಿ ನಮೂದಿಸಲಾಗಿದೆ. ಪಟ್ಟಿ-1 ರ ಪ್ರಕಾರ ಬಳಕೆಯಲ್ಲಿರುವ ಖರಾಬುಗಳನ್ನು 'ಎ' ಖರಾಬು ಹಾಗೂ ಖಾಸಗಿ ಎಂದು ಪರಿಗಣಿಸುವುದು. ಪಟ್ಟಿ-2ರ ಪ್ರಕಾರ ಬಳಕೆಯಲ್ಲಿರುವ ಖರಾಬುಗಳನ್ನು ಸಾರ್ವಜನಿಕ ಬಳಕೆಯಲ್ಲಿರುವ ಬಿ-ಖರಾಬು ಎಂದು ಹಾಗೂ ಸರ್ಕಾರಿ ಜಮೀನುಗಳೆಂದು ಪರಿಗಣಿಸುವುದು.

4. ಪಟ್ಟಿ-1 ಮತ್ತು ಪಟ್ಟಿ-2 ರಲ್ಲಿನ ಖರಾಬುಗಳು ಸರ್ವೆ ಕಾರ್ಯ ಕೈಗೊಂಡ ಸಮಯದಲ್ಲಿ ದಾಖಲು ಮಾಡಲಾಗಿದ್ದು ಅಥವಾ ಹಾಲಿ ಜಮೀನು ಸ್ಥಿತಿಯಂತೆ ಬಳಕೆಯ ಆಧಾರದ ಮೇಲೆ ತಯಾರಿಸಿದ ಪಟ್ಟಿಯಾಗಿರುತ್ತವೆ ಮತ್ತು ಸೂಚಕ ಪಟ್ಟಿ (Indicative list) ಆಗಿರುತ್ತದೆ.

5. ಪಟ್ಟಿ-1 ರಲ್ಲಿ ಇರುವ ಖರಾಬು ಜಮೀನು ಹಾಲಿ ಜಮೀನಿನ ಸ್ಥಿತಿಯಂತೆ ಹಾಗೂ ಸರ್ವೆ ದಾಖಲೆಯಂತೆ ಇರುವ ಖರಾಬು ಜಮೀನುಗಳಾಗಿದ್ದು, ಅವುಗಳು ಸಾರ್ವಜನಿಕ ಬಳಕೆಯಲ್ಲಿ ಇರದಿದ್ದರೆ, ಸದರಿ ಖರಾಬು ಖಾಸಗಿಯಾಗಿರುತ್ತದೆ. ಆದಾಗ್ಯೂ ಸದರಿ ಜಮೀನುಗಳು ಸರ್ಕಾರಕ್ಕೆ ಸೇರಿದವುಗಳೇ ಎಂಬುದರ ಬಗ್ಗೆ ರುಜುವಾತುಪಡಿಸುವ ದಾಖಲೆಗಳು ಇವೆಯೇ ಎಂಬ ಬಗ್ಗೆ ಪರಿಶೀಲಿಸಿ ದಾಖಲಿಸುವುದು.

6. ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ, ಪಟ್ಟಿ-1 ರಲ್ಲಿರುವ ಖರಾಬು ಜಮೀನುಗಳು ಸಹ ಪ್ರಸ್ತುತ ಸಾರ್ವಜನಿಕ ಬಳಕೆಗೆ ಉಪಯೋಗವಾಗುತ್ತಿದ್ದಲ್ಲಿ ಅದನ್ನು ಸಾರ್ವಜನಿಕ ಆಸ್ತಿಯೆಂದೇ ಪರಿಗಣಿಸುವುದು. ಅಂದರೆ ವ್ಯಾಖ್ಯಾನದ ಮೂಲಕವೇ ಅಥವಾ ಬಳಕೆ ಮೂಲಕವಾಗಲೀ ಯಾವುದೇ ಖರಾಬು ಸಾರ್ವಜನಿಕ ಬಳಕೆಯಲ್ಲಿರುವುದನ್ನು ಪರಿಗಣಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು.

7. ಸಮಿತಿಯು ಪಟ್ಟಿ-1 ಮತ್ತು ಪಟ್ಟಿ-2 ರಲ್ಲಿ ಅಲ್ಲದೆ, ಪ್ರದೇಶವಾರು ಬಳಕೆಯಲ್ಲಿರುವ ರೂಢಿಗತವಾದ ಖಾಯಂ ಜಮೀನುಗಳ ಲಕ್ಷಣಗಳನ್ನು ವಿವೇಚನೆಯುಕ್ತವಾಗಿ ಪರಿಶೀಲಿಸಿ ನಿರ್ಧರಿಸುವುದು.

ಮೇಲ್ಕಂಡ ಸಮಿತಿಯು ನೀಡುವ ತನ್ನ ವರದಿಯಲ್ಲಿ ಪ್ರಸ್ತಾವಿತ 'ಎ' ಖರಾಬು ಜಮೀನು ಸರ್ಕಾರಕ್ಕೆ ರಿದ ಜಮೀನೇ ಅಥವಾ ಹಿಡುವಳಿದಾರನಿಗೆ ಸೇರಿದ ಜಮೀನೇ ಎಂಬುದಕ್ಕೆ ದಾಖಲೆಗಳ ಸಹಿತ ಣಗಳನ್ನು ವಿವರಿಸಿ ಸ್ಪಷ್ಟ ಅಭಿಪ್ರಾಯವನ್ನು ದಾಖಲಿಸುವುದು.

000510

72

ನಂತರ, ಮೇಲ್ಕಂಡ ಸಮಿತಿಯು ನೀಡುವ ವರದಿಯಲ್ಲಿ ಪ್ರಸ್ತಾವಿತ 'ಎ' ಖರಾಬು ಜಮೀನು ಸರ್ಕಾರಕ್ಕೆ ಸೇರಿದ ಜಮೀನೇ ಅಥವಾ ಹಿಡುವಳಿದಾರನಿಗೆ ಸೇರಿದ ಜಮೀನೇ ಎಂಬ ಅಭಿಪ್ರಾಯವನ್ನು ಆಧರಿಸಿ, ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಆದೇಶವನ್ನು ಹೊರಡಿಸತಕ್ಕದ್ದು. ಮುಂದುವರೆದು ಸಂಬಂಧಪಟ್ಟ ಪ್ರಾಧಿಕಾರಗಳು ಜಿಲ್ಲಾಧಿಕಾರಿ ರವರ ಸದರಿ ಆದೇಶವನ್ನು ಉಲ್ಲೇಖಿಸಿ, ಸಂಬಂಧಪಟ್ಟ ಜಮೀನಿನ ಆರ್.ಟಿ.ಸಿ., ಮ್ಯುಟೇಷನ್, ಇನ್ನಿತರೆ ದಾಖಲೆಗಳಲ್ಲಿ ಆ ಕುರಿತು ಅವಶ್ಯಕ ನಮೂದುಗಳನ್ನು ಮಾಡತಕ್ಕದ್ದು.

ಅಲ್ಲದೆ, ಇನ್ನು ಮುಂದೆ 'ಎ' ಖರಾಬು ಜಮೀನುಗಳಿಗೆ ಸಂಬಂಧಿಸಿದಂತೆ ಭೂ ಪರಿವರ್ತನೆ ಕೋರಿ ಸ್ವೀಕರಿಸುವಂತಹ ಎಲ್ಲಾ ಕೋರಿಕೆಗಳನ್ನು ಮೇಲ್ಕಂಡ ಸಮಿತಿಯ ಪರಿಶೀಲನೆಗೆ ಒಳಪಡಿಸತಕ್ಕದ್ದು ಹಾಗೂ ಸದರಿ ಸಮಿತಿಯ ವರದಿ ಆಧರಿಸಿ ಜಿಲ್ಲಾಧಿಕಾರಿರವರು ಆದೇಶ ಹೊರಡಿಸಿದ ನಂತರವೇ ಅಂತಹ ಭೂ ಪರಿವರ್ತನೆ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 03 ಎಲ್‌ಜಿಪಿ 2015, ದಿನಾಂಕ:20.07.2017 ರಲ್ಲಿ ಸೂಚಿಸಿರುವಂತೆ ಸರ್ಕಾರದ ಪೂರ್ವಾನುಮೋದನೆ ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಈ ಮೂಲಕ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

16.5.18
(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂಮಂಜೂರಾತಿ-1).

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರನ್ನು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಕಂದಾಯ ಇಲಾಖೆಗೆ ಕಳುಹಿಸುವಂತೆ ಕೋರಿದೆ.

ಇವರಿಗೆ:

1. ಮಹಾಲೇಖಪಾಲರು (ಎ & ಇ ಲೆಕ್ಕಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ.
3. ಆಯುಕ್ತರು, ಭೂದಾಖಲೆಗಳು ಮತ್ತು ಭೂ ಮಾಪನ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ. } ಜಿಲ್ಲಾಧಿಕಾರಿಗಳ ಮುಖಾಂತರ.
6. ಎಲ್ಲಾ ತಹಶೀಲ್ದಾರ್‌ಗಳಿಗೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿಯನ್ನು:

1. ಸನ್ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ವಿಪತ್ತು ನಿರ್ವಹಣೆ) ಇವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಎಲ್ಲಾ ಸರ್ಕಾರದ ಸಹ/ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

71

000509

ಅನುಬಂಧ

(ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 05 ಎಲ್‌ಜಿಸಿ 2018 ದಿನಾಂಕ:16.05.2018)

ಪಟ್ಟಿ – 1

1) ಜಾಗೋಜಾಗೋಕಲ್ಲುಮರಟಿ 2) ಕಡಕಳಿ 3) ಬಾವಿ 4) ಮನೆ 5) ಕಣ 6) ಕಣಮನೆ 7) ಗುಂಡಿ 8) ಕಟ್ಟಡ 9) ಬಂಗಲೆ 10) ಕಣ್ಣಿಗೆ ಕಾಣದ ಖರಾಬು 11) ಅಳತೆಗೆ ಸಿಕ್ಕದ ಖರಾಬು 12) ಹಿತ್ತಲು 13) ಕಡಂಗ 14) ಖಡತಳ ಜಮೀನು 15) ತಿಪ್ಪೆಗುಂಡಿ 16) ನಾಕಿರ್ದಸಾರಡಗಢಾಳಿ 17) ಕೊರಕಲು (ಒಂದೇ ಸರ್ವೆ ನಂಬರಗೆ ಸೀಮಿತವಾಗಿದ್ದಲ್ಲಿ) 18) ಮೊರಜುಕಲ್ಲು 19) ತಗ್ಗು 20) ದಿಬ್ಬ 21) ಮನೆದಳ 22) ಡೊಗರು 23) ಸಾಗುನಾಲಾಯಕ್ 24) ಕಲ್ಲುಗುಡ್ಡೆ 25) ಅನ್ಯಕ್ರಾಂತಕ್ಕೆ ಒಳಪಟ್ಟ ವಿಸ್ತೀರ್ಣ.

ಪಟ್ಟಿ – 2

I. ಸರ್ವೆ ನಂಬರ್ ಒಳಗೆ ಬರುವ ಖರಾಬು ಜಮೀನುಗಳು :-

1) ರಸ್ತೆ 2) ಮಾರ್ಗ 3) ಬೀದಿ 4) ಓಣಿ 5) ಹಾದಿ 6) ಸೇತುವೆ 7) ನೀರು ಹರಿಯುವ ಹಳ್ಳ 8) ಸರ್ಕಾರಿ ಬಂಗಲೆ 9) ಕೋಟೆ 10) ನದಿಹಾಳು 11) ಸರೋವರ 12) ನಾಲ 13) ಕಾಲುವೆ 14) ಪಿಳ್ಳಗಾಲುವೆ 15) ಕಾಲುದಾರಿ 16) ಬಂಡಿದಾರಿ 17) ಚಕ್ಕಡಿದಾರಿ 18) ಸರ್ಕಾರಿ ಬಾವಿ 19) ಕಲ್ಯಾಣಿ 20) ಸಾರ್ವಜನಿಕ ಕಣ 21) ಸರವು 22) ಗೋಕಟ್ಟೆ 23) ಕಟ್ಟೆ 24) ಕುಂಟೆ 25) ಕೊರಕಲು (ಒಂದಕ್ಕಿಂತ ಹೆಚ್ಚು ಸರ್ವೆ ನಂಬರುಗಳಲ್ಲಿ ಹಾದು ಹೋಗುವ ಸಂದರ್ಭದಲ್ಲಿ) 26) ಕಲ್ಲುಬಂಡೆ 27) ಮಂಟಪ 28) ಕಲ್ಯಾಣಿ 29) ತೋಡು 30) ಸಾರ್ವಜನಿಕ ಕಟ್ಟಡಗಳು 31) ಕೊಳ 32) ತೋಡು (ರಾಜಕಾಲುವೆ) 33) ಅರಮನೆ ಕಡಂಗ

II. ಪ್ರತ್ಯೇಕ ಸರ್ವೆ ನಂಬರ್ ನೀಡಿರುವ ಖರಾಬ್ / ಸರ್ವೆ ನಂಬರ್ ಇಲ್ಲದ ಖರಾಬು :-

1) ಕೆರೆ 2) ಕಟ್ಟೆ 3) ರೈಲ್ವೆ ಲೈನ್ 4) ಸ್ಮಶಾನ 5) ರುದ್ರಭೂಮಿ 6) ಸಮುದ್ರತಡಿ 7) ಗೋಮಾಳ (ಪೈಸಾರಿ) 8) ಗುಂಡುತೋಪು 9) ಹದ್ದಿಗಿಡಿದ ರಸ್ತೆ 10) ಹದ್ದಿಗಿಡಿದ ಹಳ್ಳ 11) ಸೀಮೆಗಿಡಿದಹಳ್ಳ 12) ಸೀಮಗೆ ಹಿಡಿದ ರಸ್ತೆ, 13) ದೇವರ ಕಾಡು 14) ಕೆರೆಯ ತಳಭಾಗ 15) ಅರಣ್ಯ 16) ಸರ್ಕಾರಿ ಬೆಟ್ಟ 17) ಸರ್ಕಾರಿ ಗುಡ್ಡ 18) ಹಲ್ಲುಬನ್ನಿ 19) ಆಕಾರಕಂಡ ಬೀಳು 20) ಗ್ರಾಮಠಾಣ 21) ಸೊಪ್ಪಿನಬೆಟ್ಟ 22) ಪೈಸಾರಿ 23) ಕಡಂಗ 24) ರಾಜಕಡಂಗ 25) ನದಿ ದಡ

ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂಮಂಜೂರಾತಿ-1).

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ :ಸಮನ್ವಯ :ಮಳಿಗೆ :ನಿವೇಶನ :ಕ್ರಯಪತ್ರ :ಚೆಕ್‌ಲಿಸ್ಟ್ :ಮಾಹಿತಿ :2024 ದಿನಾಂಕ 04-01-2024

000508

ಸು ತ್ತೋ ಲೆ

ವಿಷಯ : ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿರುವ ಮಳಿಗೆ/ ನಿವೇಶನಗಳ ಕ್ರಯಪತ್ರ ನೀಡುವ ಸಂಬಂಧ ಚೆಕ್‌ಲಿಸ್ಟ್ ಸಲ್ಲಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿರುವ ಮಳಿಗೆ/ನಿವೇಶನಗಳ ಕ್ರಯಪತ್ರ ನೀಡುವ ಸಂಬಂಧ ಅವಶ್ಯವಿರುವ ಹಂಚಿಕೆ ದಿನಾಂಕ, ಕರಾರುಪತ್ರ ನಿರ್ವಹಿಸಿದ ದಿನಾಂಕ, ಸ್ವಾಧೀನ ದಿನಾಂಕ, ನೀಲಿ ನಕ್ಷೆ ಅನುಮೋದನೆ ದಿನಾಂಕ, ಸಂವಿಧಾನ/ನಾಮಾಂಕಿತ ಬದಲಾವಣೆ, ಮಳಿಗೆ/ನಿವೇಶನಕ್ಕೆ ಸಂಬಂಧಪಟ್ಟಂತೆ ಬಾಕಿ ಮೊಬಲಗು, ನೀರಿನ ಶುಲ್ಕ, ಸೇವಾಶುಲ್ಕ ಪಾವತಿ ವಿವರ, ವಿದ್ಯುತ್ ಪಡೆದ ದಿನಾಂಕ, ಘಟಕದಲ್ಲಿ ಉತ್ಪಾದನೆ ಆರಂಭಿಸಿದ ದಿನಾಂಕ ಇತ್ಯಾದಿ ವಿವರಗಳನ್ನು ಇತ್ಯಾದಿಗಳನ್ನು ಸ್ಪಷ್ಟವಾಗಿ ಕಡತದಲ್ಲಿ ನಮೂದಿಸಿ, ಕಡತವನ್ನು ಸಲ್ಲಿಸಲು ತಿಳಿಸಲಾಗಿದ್ದರೂ ಸಹ, ವಿಭಾಗೀಯ ಕಛೇರಿಗಳಿಂದ ಕ್ರಯಪತ್ರ ನೀಡುವ ಸಂಬಂಧ ಸರಿಯಾಗಿ ಪರಿಶೀಲಿಸದೇ ಅಪೂರ್ಣ ಮಾಹಿತಿಯೊಂದಿಗೆ ಕಡತಗಳನ್ನು ಕೇಂದ್ರ ಕಛೇರಿಗೆ ಕಳುಹಿಸುತ್ತಿರುವುದು ಕಂಡು ಬಂದಿರುತ್ತದೆ.

ಆದ್ದರಿಂದ, ಇನ್ನು ಮುಂದೆ ಕ್ರಯಪತ್ರ ನಿರ್ವಹಿಸಲು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವಾಗ ಈ ಪತ್ರಕ್ಕೆ ಲಗತ್ತಿಸಿರುವ ಚೆಕ್‌ಲಿಸ್ಟ್‌ರಂತೆ ಪ್ರತಿಯೊಂದು ಅಂಶವನ್ನು ಪರಿಶೀಲಿಸಿ, ಕಡತದಲ್ಲಿಯೇ ನಮೂದಿಸಿ, ಕಡತಗಳನ್ನು ಸೂಕ್ತ ಶಿಫಾರಸ್ಸದೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ. ಕಡತಗಳನ್ನು ಸರಿಯಾಗಿ ಪರಿಶೀಲಿಸದೇ, ಅಪೂರ್ಣ ಮಾಹಿತಿಯೊಂದಿಗೆ ಕಡತಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸಿದ್ದಲ್ಲಿ ಸಂಬಂಧಪಟ್ಟ ವಿಷಯ ನಿರ್ವಾಹಕರು/ಸಹಾಯಕ ವ್ಯವಸ್ಥಾಪಕರು/ ವ್ಯವಸ್ಥಾಪಕರು/ ಸ.ಪ್ರ.ವ್ಯ(ಕೈವ) ರವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ತಿಳಿಯಿರಿ.

ಅಡಕ : ಮೇಲಿನಂತೆ

ಪ್ರಧಾನ-ವ್ಯವಸ್ಥಾಪಕರು(ಕೈವ)

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು/ಶಿವಮೊಗ್ಗ/ಮೈಸೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
2) ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು,

ವ್ಯ.ನಿ. ರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಅವಗಾಹನೆಗೆ ತರಲು ವಿನಂತಿಸಿದೆ.

ಕರಾಸಕ್ಕೆಅನಿನಿ

000507

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈವ., ರಾಜಾಜಿನಗರ, ಬೆಂಗಳೂರು-560 010

ಫೋನ್: 23407011-24 ಇ-ಮೈಲ್ kssidcho@karnataka.gov.in, ವೆಬ್ ಸೈಟ್ www.kssidc.co.in

ಕ್ರಯಪತ್ರ ಸಿದ್ದಪಡಿಸಲು ಅಗತ್ಯವಿರುವ ಹೆಚ್ಚುವರಿ ಚೆಕ್‌ಲಿಸ್ಟ್ ವಿವರಗಳು

1	ಕೈಗಾರಿಕಾ ವಸಾಹತುವಿನ ಹೆಸರು		ಪುಟ ಸಂಖ್ಯೆ
2	ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ ಸಂಖ್ಯೆ		
3	ಘಟಕದ ಹೆಸರು		
4	ಹಂಚಿಕೆಯಾದ ದಿನಾಂಕ		
5	ಸ್ವಾಧೀನ ಪಡೆದ ದಿನಾಂಕ		
6	ಸಂವಿಧಾನ:ಮಾಲೀಕತ್ವ:ಪಾಲುದಾರಿಕೆ:ಪ್ರೈವೇಟ್ ಕಂಪನಿ:ಸೊಸೈಟಿ:ಲಿಮಿಟೆಡ್ ಕಂಪನಿ (ಹಂಚಿಕೆ ಸಮಯಕ್ಕೆ ಸಂಬಂಧಿಸಿದ್ದು)		
7	ವಸ್ತುವಿನ ಉತ್ಪಾದನೆ		
8	ಘಟಕದ ನೋಂದಣಿ ಸಂಬಂಧ Udyam Aadhar ಸಂಖ್ಯೆ ಮತ್ತು ದಿನಾಂಕದ ವಿವರ ನೀಡುವುದು.		
9	ಜಿ.ಎಸ್.ಟಿ. ನೋಂದಣಿ ಪತ್ರದ ಪ್ರತಿ ಹಾಗೂ ತೀರುವಳಿಗಳ ಪ್ರತಿ		
10	ಒಂದು ವೇಳೆ GST ನೋಂದಣಿ ಮಾಡಿಸದೇ ಇದ್ದಲ್ಲಿ ಚಾಟರ್ಡ್ ಅಕೌಂಟೆಂಟ್ ಅವರಿಂದ ಪ್ರಮಾಣ ಪತ್ರ ಮತ್ತು ಹಂಚಿಕೆದಾರರಿಂದ ಅದಕ್ಕೆ ಮುಚ್ಚಳಿಕೆ ಪತ್ರ ನೋಟರಿಯವರಿಂದ ಪಡೆದು ಒದಗಿಸುವುದು.		
11	ಗುತ್ತಿಗೆ ಕರಾರು ನಿರ್ವಹಿಸಿದ ದಿನಾಂಕ		
12	ಎಷ್ಟು ಹೆಚ್.ಪಿ. ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಹಾಗೂ ವಿದ್ಯುತ್ ಮಾರ್ಗ ಶುಲ್ಕ ವಿದ್ಯುತ್ ವಿಭಾಗದವರು ನಿಗಧಿಪಡಿಸಿದ ದರದಂತೆ ಪಾವತಿ ಮಾಡಿರುವ ಬಗ್ಗೆ ವಿವರಗಳನ್ನು ನೀಡುವುದು.		
13	ವಿದ್ಯುತ್ ಸಂಪರ್ಕ ನೀಡಿದ ದಿನಾಂಕವಿರುವ ಪತ್ರ ಹಾಗೂ ಒಂದು ವರ್ಷದ ವಿದ್ಯುತ್ ಬಳಕೆಯ ಬಿಲ್‌ಗಳ ಯಾದಿ, (BESCOM ನಿಂದ Power Service ಆದ ಪತ್ರ ಮತ್ತು Consumer History)		
14	ಕ್ರಯದ ಅವಧಿ ಮುಗಿದ ದಿನಾಂಕ		
15	ಮಳಿಗೆ/ನಿವೇಶನದ ಅಂತಿಮ ಮೌಲ್ಯ ಪಾವತಿ ವಿವರಗಳು		

16	ಮಳಿಗೆ ಕ್ರಯದ ಅವಧಿಯಲ್ಲಿ ನಂತರ: ಯಾವುದಾದರೂ		
17	ಅ) ವಸ್ತುವಿನ ಉತ್ಪಾದನೆ ಬದಲಾವಣೆ ಆ)ಅನುಮೋದನೆ ಆದೇಶ ಸಂಖ್ಯೆ ದಿನಾಂಕ		
18	ಅ)ಸಂವಿಧಾನದ ಬದಲಾವಣೆ:ವರ್ಗಾವಣೆ ಆ) ಅನುಮೋದನೆ ಸಂಖ್ಯೆ:ದಿನಾಂಕ ಇ) ದಂಡ:ಪರಿಶೀಲನಾ ಶುಲ್ಕ ಪಡೆದ ವಿವರಗಳು		
19	ಘಟಕವು ಪಾಲುದಾರಿಕೆಯಲ್ಲಿದ್ದರೆ ಇತ್ತೀಚಿನ ನಮೂನೆ ಎ ಮತ್ತು ಸಿ ಸಲ್ಲಿಸುವುದು.		
20	ಸದರಿ ಘಟಕವು ಪ್ರೈವೇಟ್ ಲಿಮಿಟೆಡ್ ಮೇಲೆ ಹಂಚಿಕೆಯಾಗಿದ್ದರೆ ಇತ್ತೀಚಿನ ಫಾರ್ಮ 32 ಪಡೆದು ಸಲ್ಲಿಸುವುದು.		
21	ಅ) ನಾಮಾಂಕಿತ ಬದಲಾವಣೆ ಆ) ಅನುಮೋದನೆ ಆದೇಶ ಸಂಖ್ಯೆ ಇ) ದಂಡ:ಶುಲ್ಕ ವಿವರಗಳು		
22	ಅ) ಅನಧೀಕೃತ ನಿರ್ಮಾಣ : ಕೊಳವೆ ಭಾವಿ ಆ) ವಿಸ್ತೀರ್ಣ ಇ) ತಾಂತ್ರಿಕ ವಿಭಾಗದವರು ನಮೂದಿಸಿದ: ಆಧಾರದ ಮೇಲೆ ದಂಡ ವಿಧಿಸಿ ಸ್ವೀಕೃತಿಯಾಗಿದೆಯೇ? ಈ) ದಂಡ:ಶುಲ್ಕ ವಿವರಗಳು		
23	ನಿವೇಶನವಾಗಿದ್ದಲ್ಲಿ ನಿಗದಿತ ಅವಧಿ 2 / 5 ವರ್ಷಗಳ ಒಳಗೆ ನೀಲಿ ನಕ್ಷೆ ಅನುಮೋದನೆ ಪಡೆದು ಕೈಗಾರಿಕೆ ಕಟ್ಟಡ ಕಟ್ಟಿ ವಿದ್ಯುತ್ ಸಂಪರ್ಕ ಪಡೆದು ಕೈಗಾರಿಕೆ ಪ್ರಾರಂಭಿಸಿರುವ ಬಗ್ಗೆ ವಿವರ ನೀಡುವುದು.		
24	ನಿಗದಿತ ಅವಧಿಯಲ್ಲಿ ಯೋಜನೆ ಅನುಷ್ಠಾನಗೊಳಿಸಲು ಹಂಚಿಕೆದಾರರು ವಿಫಲರಾದ್ದಲ್ಲಿ ಹಂಚಿಕೆ ಪುನರ್ ಸ್ಥಾಪನೆ ಅನ್ವಯ ಕಾಲಕಾಲಕ್ಕೆ ಹೊರಡಿಸಿದ ಕಛೇರಿ ಆದೇಶಗಳಂತೆ ದಂಡ ವಸೂಲಿ ಮಾಡಿದ ವಿವರಗಳನ್ನು ನೀಡುವುದು.		
25	ಕ್ರಯಪತ್ರ ಕೊಡುವ ಬಗ್ಗೆ ವ್ಯವಸ್ಥಾಪಕರು (ಕೈವ)/ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ) ಇವರ ಶಿಫಾರಸ್ಸು		
26	ಕ್ರಯಪತ್ರ ಕೊಡುವ ಬಗ್ಗೆ ಹೆಚ್ಚಿನ ಮಾಹಿತಿ ಟಿಪ್ಪಣಿ ಏನಾದರೂ ಇದ್ದರೆ ನಮೂದಿಸಿ		

ವಿಷಯ ನಿರ್ವಾಹಕರು ಸ.ವ್ಯ/ವ್ಯವಸ್ಥಾಪಕರು ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)

ಕರಾಸಕೈಅನಿನಿ

000505

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸೂಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾ:ನೀತಿ:ಮಾರ್ಗಸೂಚಿ:2020/23/1355 ದಿನಾಂಕ: 01-10-2020

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ
1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ: ಸಮನ್ವಯ: ಕೈವ: ನಿರ್ವಹಣಾ: ನೀತಿ: ಮಾ. ಸೂ: 2015:972 ದಿನಾಂಕ: 22-06-2015.
4. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 12-02-2020.
5. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 08-05-2020.
6. ದಿನಾಂಕ 15-09-2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

****

ನಮ್ಮ ರಾಜ್ಯ/ದೇಶ ಮತ್ತು ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿಯು ಹರಡುತ್ತಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕ್ರಮಗಳನ್ನು/ನಿಯಮಗಳನ್ನು ದೇಶದಾದ್ಯಂತ ಅನ್ವಯಿಸುವಂತೆ ಜಾರಿಗೆ ತಂದಿರುತ್ತದೆ. ಅದರಲ್ಲಿ ದಿನಾಂಕ: 23.03.2020 ರಿಂದ ಜಾರಿಗೆ ಬರುವಂತೆ ದಿನಾಂಕ: 17.05.2020 ರವರೆಗೆ ದೇಶಾದಾದ್ಯಂತ ಲಾಕ್‌ಡೌನ್ ಘೋಷಿಸಿರುತ್ತದೆ. ಇದರಿಂದ ಆರ್ಥಿಕ ಹಿಂಜರಿತ ಉಂಟಾದುದರಿಂದ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಕೈಗಾರಿಕಾ ಚಟುವಟಿಕೆಗಳನ್ನು ನಡೆಸಲು ಕಷ್ಟ ಸಾಧ್ಯವಾಗಿದ್ದು ಹಾಗೂ ಕೈಗಾರಿಕೋದ್ಯಮಿಗಳು ಹೊಸ ಕೈಗಾರಿಕೆಗಳ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಈಡಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಹಿಂದೆ ಹೊರಡಿಸಲಾಗಿದ್ದ ದಿನಾಂಕ 08-05-2020ರ ಪರಿಷ್ಕರಣೆ ಆದೇಶದಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ನಿಗಮದ 360ನೇ ಆಡಳಿತ ಮಂಡಳಿಯು ಮಾರ್ಪಾಡುಗೊಳಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಹಂಚಿಕೆದಾರರು ತಮಗೆ ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಸಮಯದಲ್ಲಿ ಕೈಗಾರಿಕಾ ಕಟ್ಟಡಗಳನ್ನು ನಿರ್ಮಿಸದೇ ಇರುವಂತಹ ಹಂಚಿಕೆದಾರರುಗಳಿಗೆ ಕೆಳಕಂಡ ತಖ್ತೆ:ಯಲ್ಲಿ ಸೂಚಿಸಿರುವ ದಂಡದ ಮೊತ್ತವನ್ನು ಪಾವತಿಸಿಕೊಂಡು ಮರು ಸ್ವಾಧೀನ ನೀಡುವುದು.

ಕ್ರ.ಸಂ	ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ)	ಮನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ನಿವೇಶನ / ಮಳಿಗೆಯ ಬಾಲ್ತಿ ದರದ ದಂಡದ ಪ್ರಮಾಣ
1	"ಎ"	ಶೇ.15 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 10 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 8 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
4	"ಡಿ"	ಶೇ. 5 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ ಎಸ್.ಟಿ

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ, ಕರಾರು ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಹಾಗೂ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ: 08.05.2020ರ ಕಛೇರಿ ಆದೇಶಕ್ಕೆ ಮುನ್ನ ಇರುವಂತಹ ಘಟಕಗಳಿಗೆ ಈ ಕೆಳಕಂಡ ತಖ್ತೆ:ಯಲ್ಲಿ ಸೂಚಿಸಿರುವಂತೆ ದಂಡವನ್ನು ಪಾವತಿಸಿಕೊಂಡು ಮರುಸ್ವಾಧೀನ ನೀಡಲು ಸೂಚಿಸಲಾಗಿದೆ.

ಕ್ರ.ಸಂ	ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ)	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ನಿವೇಶನ / ಮಳಿಗೆಯ ಚಾಲ್ತಿ ದರದ ದಂಡದ ಪ್ರಮಾಣ
1	"ಎ"	ಶೇ.10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
4	"ಡಿ"	ಶೇ. 3 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಮುಂದುವರೆದಂತೆ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಲು ಸೂಚಿಸಿದೆ.

1. <u>ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ ಘಟಕಗಳಿಗೆ ರದ್ದತಿ ಆದೇಶ ನಿರಸನಗೊಳಿಸುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ್ದಲ್ಲಿ, ರದ್ದತಿ ಆದೇಶವನ್ನು ನಿರಸನಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ ಇತರೆ) ಪಾವತಿಸಿಕೊಂಡು ಹಂಚಿಕೆ ಪುನರ್ ಸ್ಥಾಪನೆಗೊಳಿಸಲು (Restoration of allotment) ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆಯತಕ್ಕದ್ದು.

2. <u>ಹಂಚಿಕೆ ರದ್ದತಿ ಆದೇಶ ನಿರಸನಗೊಳಿಸದೆ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶ ಹೊರಡಿಸಿದ ನಂತರ ರದ್ದತಿ ಆದೇಶವನ್ನು ನಿರಸನಗೊಳಿಸದೆ ಕಟ್ಟಡ ಕಟ್ಟಲು/ವಿದ್ಯುತ್ ಸಂಪರ್ಕ ಪಡೆಯಲು/ಸಂವಿಧಾನ ಬದಲಾವಣೆ/ ಉತ್ಪಾದನಾ ಬದಲಾವಣೆ ಇನ್ನಿತರೆ ಉದ್ದೇಶಗಳಿಗೆ ಅನುಮತಿ ನೀಡಿದ್ದರೂ ಸಹ ಗುತ್ತಿಗೆ ಕರಾರು ಅವಧಿ ಪೂರ್ಣಗೊಂಡಿರುವ ಘಟಕಗಳಲ್ಲಿ ಕೈಗಾರಿಕೆ ಕಾರ್ಯಾಚರಣೆ ನಡೆಯುತ್ತಿದ್ದಲ್ಲಿ, ಅಂತಹ ಹಂಚಿಕೆದಾರರಿಂದ ಒಂದೆ ಬಾರಿಗೆ ಕೋಷ್ಟಕದಲ್ಲಿ ತಿಳಿಸಿರುವ ದಂಡದ ಜೊತೆ ಸೇವಾ ಶುಲ್ಕ ಮತ್ತು ಇತರೆ ಶಾಸನ ಬದ್ಧ ಶುಲ್ಕಗಳನ್ನು ಪ್ರಚಲಿತ

ಅನ್ವಯವಾಗುವ ತೆರಿಗೆಗಳೊಂದಿಗೆ ಒಟ್ಟಾರೆಯಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ ಹಂಚಿಕೆ ಪುನರ್ ಸ್ಥಾಪನೆ (Restoration of allotment) ಆದೇಶ ಹೊರಡಿಸಿ ಕರಾರು ಅವಧಿ ಪೂರೈಸಿದ ನಂತರ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿ ಕೊಡುವುದು.

3. <u>ನಿಗಮದ ಸ್ವಾಧೀನದಲ್ಲಿರುವ ನಿವೇಶನ/ಮಳಿಗೆಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಕೈಗೊಂಡು ನಿಯಮಾನುಸಾರ ಮಹಜರ್ ಮಾಡಿ ಬೀಗಮುದ್ರೆಗೊಳಿಸಿ (Seizure) ನಿಗಮದ ವಶಕ್ಕೆ (custody) ಪಡೆದಿದ್ದಲ್ಲಿ, ಮಾಜೀ ಹಂಚಿಕೆದರರು ಹಂಚಿಕೆ ಪುನರ್ ಸ್ಥಾಪನೆಗೆ ಮನವಿ ಸಲ್ಲಿಸಿದಲ್ಲಿ ಅಂತಹ ನಿವೇಶನ/ಮಳಿಗೆಗಳು ನಿಗಮದ ಸ್ವಾಧೀನದಲ್ಲಿದ್ದಲ್ಲಿ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ) ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆದು ಮಳಿಗೆ/ನಿವೇಶನಗಳ ಮರು ಸ್ವಾಧೀನವನ್ನು ನೀಡತಕ್ಕದ್ದು.

4. <u>ನ್ಯಾಯಾಲಯದಲ್ಲಿರುವ ಪ್ರಕರಣಗಳ ಪಟಕಗಳು :-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಹಂಚಿಕೆದಾರರು ನಿಗಮದ ಕ್ರಮವನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿದಲ್ಲಿ, ಘನ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ, ಹಂಚಿಕೆದಾರರ ಮನವಿಯನ್ನು ಪರಿಗಣಿಸದೆ, ನಿಯಮಾನುಸಾರ ಮರು ಹಂಚಿಕೆಗೆ ಪ್ರಕಟಣೆ ನೀಡಿ ಕ್ರಮಕೈಗೊಳ್ಳುವುದು.

5. <u>ಹಂಚಿಕೆದಾರರ ಸ್ವಾಧೀನದಲ್ಲಿರುವ ಮಳಿಗೆ / ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u>

ಈ ಮೇಲೆ ಕೋಷ್ಟಕದಲ್ಲಿ ತಿಳಿಸಿದಂತೆ, ನಿಗಮವು ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ / ಹೊರಡಿಸುವ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸುವುದು (Restoration of allotment). ಪುನರ್ ಸ್ಥಾಪನೆ ಆದೇಶ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷದ ಕಾಲಾವಕಾಶದಲ್ಲಿ ನಿವೇಶನದಲ್ಲಿ ಕಡ್ಡಾಯವಾಗಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

6. <u>ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:</u>

ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸಿ (Restoration of allotment), ಮಳಿಗೆ/ನಿವೇಶನದ ಮರು-ಸ್ವಾಧೀನ ನೀಡುವುದು. ಮಳಿಗೆ/ನಿವೇಶನದ ಮರು-ಸ್ವಾಧೀನ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷ ಕಾಲಾವಕಾಶದಲ್ಲಿ ಕಡ್ಡಾಯವಾಗಿ ಮಳಿಗೆಯಲ್ಲಿ ಕಾರ್ಯಾಚರಣೆ ಪ್ರಾರಂಭಿಸುವುದು ಮತ್ತು ನಿವೇಶನದ ಹಂಚಿಕೆದಾರರು ಕಟ್ಟಡ ನಿರ್ಮಿಸಿ/ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು

ಹಾಕಿಕೊಂಡು, ಮಳಗೆ /ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

7. <u>ಪುನರ್ ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-</u>

ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಪುನರ್ ಸ್ಥಾಪನೆಗೊಂಡ ಮಳಗೆಯಲ್ಲಿ ಕಾರ್ಯಾಚರಣೆ/ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಅಂತಹ ಹಂಚಿಕೆದಾರರ ನಿವೇಶನ/ಮಳಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಸದರಿ ಹಂಚಿಕೆದಾರರು ಪಾವತಿಸಿರುವ ಎಲ್ಲಾ ಪಾವತಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿ ಮಾಹಿತಿಯನ್ನು ಕಡ್ಡಾಯವಾಗಿ ನಿಗಮದ ಹಣಕಾಸು ವಿಭಾಗಕ್ಕೆ ಮಾಹಿತಿ ನೀಡುವುದು. ಹಾಗೂ ಸದರಿ ಮಳಗೆ/ನಿವೇಶನಗಳ ಹಂಚಿಕೆಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

8. <u>ಪುನರ್‌ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸಿ / ಕೈಗಾರಿಕಾ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-</u>

ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಈ ಮೇಲೆ ತಿಳಿಸಿರುವ ಕೋಷ್ಟಕದಂತೆ ದಂಡವನ್ನು ಪಾವತಿಸಿ ಪುನರ್ ಸ್ಥಾಪನೆ ಆದೇಶ/ಮರುಸ್ವಾಧೀನ ಪಡೆದು ಮಳಗೆ/ ನಿವೇಶನದಲ್ಲಿ ನಿಗಧಿತ ಅವಧಿಯಲ್ಲಿ ಕೈಗಾರಿಕಾ ಕಾರ್ಯಾಚರಣೆ ನಡೆಸಿ ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಘಟಕಗಳಿಗೆ ನಿಗಮದ ನಿಯಮಗಳನ್ವಯ ಕ್ರಮವನ್ನು ಜರುಗಿಸಿ ಕ್ರಯಪತ್ರವನ್ನು ವಿತರಿಸುವುದು.

9. ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳು :-

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಅಂದರೆ ಹಂಚಿಕೆಯಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಎಲ್ಲಾ ಹಂಚಿಕೆಗಳನ್ನು ಕೆ.ಪಿ.ಪಿ. ಕಾಯ್ದೆಯನ್ವಯ ಕ್ರಮ ತೆಗೆದುಕೊಂಡು ಕೂಡಲೇ ರದ್ದುಗೊಳಿಸಿ, ಮಳಗೆ /ನಿವೇಶನಗಳನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು ನಿಗಮದ ನಿಯಮವಾಗಿದ್ದು, ಈ ನಿಯಮವನ್ನು ವಿಭಾಗೀಯ ಕಛೇರಿಗಳು ಕಟ್ಟುನಿಟ್ಟಾಗಿ ನಿರ್ವಹಿಸಲು ಸೂಚಿಸಿದೆ.

ಮುಂದುವರೆದಂತೆ, ಈ ಆದೇಶ ತಲುಪಿದ 30 ದಿನಗಳೊಳಗಾಗಿ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಕಡ್ಡಾಯವಾಗಿ ಹಂಚಿಕೆಯಾಗಿ ಕಟ್ಟಡ ನಿರ್ಮಿಸದೇ ಇರುವ, ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೇ ಇರುವ, ಕಾರ್ಯಾಚರಣೆ ನಡೆಸದೇ ಇರುವ, ನಿಗಧಿತ ಕರಾರು ಅವಧಿಯ ನಂತರ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆದು ಕಾರ್ಯಾಚರಣೆ ನಡೆಸುತ್ತಿರುವ ಹಾಗೂ ನಕ್ಷೆ ಅನುಮೋದನೆ ಪಡೆಯದೇ ಕಟ್ಟಡ ನಿರ್ಮಿಸಿ ಉದ್ಯಮ ನಡೆಸುತ್ತಿರುವ ಹಂಚಿಕೆದಾರರುಗಳಿಗೆ ನೋಟೀಸ್ ನೀಡಿ ನೋಟೀಸ್ ತಲುಪಿದ 15 ದಿನಗಳೊಳಗೆ ಒಪ್ಪಿಗೆ ಪತ್ರವನ್ನು ಪಡೆದು ದಂಡ ಮತ್ತು ಶಾಸನಬದ್ಧ ತೆರಿಗೆ ಮತ್ತು ಇನ್ನಿತರೆ ಪಾವತಿಗಳನ್ನು ಪೂರ್ಣವಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ (Restoration of allotment) ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಮುಂದುವರೆದಂತೆ, ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದಲ್ಲಿರುವ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಇರುವ ಘಟಕಗಳಿಗೆ ಇಂದಿನಿಂದ ಅಂದರೆ ದಿನಾಂಕ 01.10.2020 ರಿಂದ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಮೇಲ್ಕಂಡ ತಬ್ತೆ:ಯಲ್ಲಿ ಸೂಚಿಸಿರುವಂತೆ ದಂಡವನ್ನು ಪಾವತಿಸಿಕೊಂಡು ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಸೂಚಿಸಲಾಗಿದೆ.

ಕಛೇರಿ ಆದೇಶದ ಪ್ರಕಾರ ಹಂಚಿಕೆ ಪುನರ್ ಸ್ಥಾಪನೆಗೊಂಡ ನಂತರ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಕ್ರಯಪತ್ರ ನೀಡುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಬಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ದಿನಾಂಕ: 30.09.2021 ರವರೆಗೆ ರಿಯಾಯಿತಿ ನೀಡಿದೆ. ತದನಂತರ ಕ್ರಯಪತ್ರ ನಿರ್ವಹಿಸಿಕೊಳ್ಳುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020ರ ಕೋಷ್ಟಕದಲ್ಲಿ ತಿಳಿಸಿದ ಕ್ರಯಪತ್ರ ನಿರ್ವಹಿಸಿಕೊಳ್ಳುವ ಸಂದರ್ಭದಲ್ಲಿ ವಿಧಿಸುವ ಶೇ.10 ರಷ್ಟು ಬಾಲ್ತಿ ಧರದ ದಂಡ ಮತ್ತು ತೆರಿಗೆಯನ್ನು ವಿಧಿಸಿ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳುವುದು.

ಈ ಆದೇಶ ವಿಶ್ವ ಮಳಗೆಯ ಹಂಚಿಕೆಗೆ ಅನ್ವಯಿಸುವುದಿಲ್ಲ. ಈ ಸೌಲಭ್ಯವನ್ನು ಒಮ್ಮೆ ಮಾತ್ರ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶವಿರುವುದಿಲ್ಲ.

ಈ ಆದೇಶವು ದಿನಾಂಕ 01.10.2020 ರಿಂದ ಅನ್ವಯವಾಗುವಂತೆ ದಿನಾಂಕ: 30-09-2021 ರವರೆವಿಗೆ ಬಾಲ್ತಿಯಲ್ಲಿರುತ್ತದೆ. ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಪ್ರಕರಣಗಳಿಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ರಿಯಾಯಿತಿಯನ್ನು ವಿಸ್ತರಿಸಲು ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ವ-1 (ಹಣಕಾಸು)/(ಆ.ಲೆ.ವ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ಪಾ.ಲೆ) ಕರಾಸಕೈಅನಿನಿ, ಬೆಂಗಳೂರು
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
7. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
9. ಜಿಲ್ಲಾ ಕೈಗಾರಿಕಾ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು.

ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ:ಫ್ಲ್ಯಾಟ್:2023 ದಿನಾಂಕ: 26-09-2023

ಕಛೇರಿ-ಆದೇಶ

000500

ವಿಷಯ: ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರವನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಬಾಡಿಗೆ ಪರಿಷ್ಕರಣೆ:ಮ:ಗೋ: ಫ್ಲ್ಯಾಟ್:2022 ದಿನಾಂಕ 16-09-2022

****

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಕಛೇರಿ ಆದೇಶದಲ್ಲಿ ನಿಗಮದ ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳಿಗೆ ನಿಗದಿಪಡಿಸಿದ ಬಾಡಿಗೆ ದರಗಳು ದಿನಾಂಕ 31.08.2023ರಂದು ಮುಕ್ತಾಯವಾಗಿದ್ದು, ದಿನಾಂಕ 01.09.2023 ರಿಂದ ಬಾಡಿಗೆ ದರಗಳನ್ನು ಪರಿಷ್ಕರಿಸಬೇಕಾಗಿರುತ್ತದೆ.

ಅಂತೆಯೇ, ದಿನಾಂಕ 29.01.2013 ರಂದು ಜರುಗಿದ ನಿಗಮದ 325ನೇ ಆಡಳಿತ ಮಂಡಳಿ ಸಭೆಯಲ್ಲಿ ಬಾಡಿಗೆ ದರಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಅಧಿಕಾರ ನೀಡಿರುವ ಹಿನ್ನೆಲೆಯಲ್ಲಿ ಈಗ ಚಾಲ್ತಿಯಲ್ಲಿರುವ ಬಾಡಿಗೆ ದರಗಳ ಮೇಲೆ ಶೇಕಡ 10ರಷ್ಟು ಹೆಚ್ಚಳ ಮಾಡಿ **ದಿನಾಂಕ 01.09.2023 ರಿಂದ 31.07.2024ರವರೆಗೆ** (11 ತಿಂಗಳ ಅವಧಿಗೆ) **'ಬಾಡಿಗೆ ದರ'**ಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗಧಿಪಡಿಸಲಾಗಿದೆ.

DGM, Z-1 No. 610 Dt. 12/10/23

ಕ್ರ ಸಂ.	ಸ್ಥಳ	ಮಳಿಗೆ/ಗೋದಾಮು/ಬಹುಮಹಡಿ ಕಟ್ಟಡಗಳ ಬಾಡಿಗೆ ದರ ಪ್ರತಿ ತಿಂಗಳು, ಪ್ರತಿ ಚ.ಮೀ.ಗಳಿಗೆ (ರೂ.ಗಳಲ್ಲಿ)	
		01.10.2022ರಿಂದ 31.08.2023ರವರೆಗೆ (ಚಾಲ್ತಿಯಲ್ಲಿದ್ದಂತೆ)	01.09.2023ರಿಂದ 31.07.2024ರವರೆಗೆ (ಪರಿಷ್ಕೃತ ದರ)
1.	**ಬೆಂಗಳೂರು ನಗರ** ರಾಜಾಜಿನಗರ, ದ್ಯಾವಸಂದ್ರ, ಹೆಚ್.ಎ.ಎಲ್, ವಿದ್ಯುನ್ಮಾನನಗರ, ಎನ್.ಜಿ.ಇ.ಎಫ್, ಬೊಮ್ಮಸಂದ್ರ-1,2,3. ಕುಂಬಳಗೂಡು, ಯಲಹಂಕ.	**156**	**172**
2.	**ಬೆಂಗಳೂರು ಗ್ರಾಮಾಂತರ** ದೊಡ್ಡಬಳ್ಳಾಪುರ, ರಾಮನಗರ, ಹೊಸಕೋಟೆ, ಜಿಗಣಿ-1,2	**41**	**46**
3.	ಪೀಣ್ಯಾ/ವಿದ್ಯುನ್ಮಾನ ನಗರ/ರಾಜಾಜಿನಗರ/ ಕೈವ.ಗಳಲ್ಲಿನ ಬಹುಮಹಡಿ ಮಳಿಗೆಗಳಿಗೆ	**348**	**383**
4.	ಹುಬ್ಬಳ್ಳಿ/ಮೈಸೂರು/ಮಂಗಳೂರು/ಬೆಳಗಾವಿ	**98**	**108**
5.	ಇತರೆ ಜಿಲ್ಲಾ ಕೇಂದ್ರಗಳು	**77**	**85**
6.	ಇತರೆ ಸ್ಥಳಗಳು	**41**	**46**

.2.

ನಿಗಮದ ವತಿಯಿಂದ ಇತರೆ ಸ್ಥಳಗಳಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಮಳಿಗೆ/ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಬಾಡಿಗೆ ದರವನ್ನು ಪ್ರತ್ಯೇಕವಾಗಿ ನಿಗಧಿಪಡಿಸಲಾಗುವುದು.

ನಿಗಮದಿಂದ ಬಾಡಿಗೆ ಆಧಾರದ ಮೇಲೆ ಹಂಚಿಕೆಯಾದ ಮಳಿಗೆಗಳ ಹಂಚಿಕೆದಾರರಿಗೆ ಅವರಿಗೆ ಹಂಚಿಕೆಯಾದ ಆಯಾ ಮಳಿಗೆಯ **'ಒಳ-ಆವರಣದ' (Carpet Area)** ವಿಸ್ತೀರ್ಣಕ್ಕೆ ಮಾತ್ರ ಬಾಡಿಗೆ ದರವನ್ನು ವಿಧಿಸತಕ್ಕದ್ದು ಹಾಗೂ ಕೈಗಾರಿಕೇತರ ಚಟುವಟಿಕೆಗಾಗಿ ಬಾಡಿಗೆ ಯೋಜನೆ ಅಡಿಯಲ್ಲಿ ಹಂಚಿಕೆ ಮಾಡಲಾಗುವ ಮಳಿಗೆಗಳು/ಬಹುಮಹಡಿ ಮಳಿಗೆಗಳಿಗೆ ಪ್ರಚಲಿತ ದರ + ಶೇ.20 ರಷ್ಟು ಬಾಡಿಗೆ ವಿಧಿಸತಕ್ಕದ್ದು ಮತ್ತು ಗೋದಾಮನ್ನು ಉಗ್ರಾಣವನ್ನಾಗಿ ಉಪಯೋಗಿಸದೇ, ಉಗ್ರಾಣೇತ್ತರ ಚಟುವಟಿಕೆಗೆ ಉಪಯೋಗಿಸಿದ್ದಲ್ಲಿ, ಪರಿಷ್ಕೃತ ಬಾಡಿಗೆ ದರದ **ಒಂದೂವರೆ ಪಟ್ಟು** ಬಾಡಿಗೆ ವಸೂಲಿ ಮಾಡತಕ್ಕದ್ದು. ವಾಣಿಜ್ಯ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿದ್ದಲ್ಲಿ **ದುಪ್ಪಟ್ಟು (Double)** ಬಾಡಿಗೆ ವಿಧಿಸಿ ವಸೂಲಿ ಮಾಡತಕ್ಕದ್ದು.

ಮುಂದುವರೆದು, ಈ ಮೇಲಿನ ನಿಗಧಿತ ಅವಧಿಯು ಪೂರ್ಣಗೊಂಡ ನಂತರ, ನಿಗಮದಿಂದ ಪರಿಷ್ಕೃತ ಆದೇಶ ಹೊರಡಿಸುವವರೆಗೆ ಚಾಲ್ತಿ ಬಾಡಿಗೆ ದರದ ಶೇ.10ರಷ್ಟು ಹೆಚ್ಚಳಗೊಳಿಸತಕ್ಕದ್ದು.

ಬಾಡಿಗೆ ಲೆಕ್ಕ ಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

ಮೇಲೆ ಸೂಚಿಸಲಾಗಿರುವ ಆದೇಶಗಳನ್ನು ತಪ್ಪದೇ **ಕಡ್ಡಾಯವಾಗಿ** ಹಾಗೂ **ಕಟ್ಟುನಿಟ್ಟಾಗಿ** ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಆಡಳಿತ&ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು
2. ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು
3. ಅಧೀಕ್ಷಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
4. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆಡಳಿತ), ಕರಾಸಕೈಅನಿನಿ, ಬೆಂಗಳೂರು
6. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
7. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
9. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ::ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2023-24 ದಿನಾಂಕ: 27-10-2023

ಕಛೇರಿ ಆದೇಶ

000498

ವಿಷಯ: **ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.**

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2020/23/1355 ದಿನಾಂಕ 01.10.2020.
2. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2020/1126 ದಿನಾಂಕ 03.01.2022
3. ದಿನಾಂಕ 14.11.2022ರಂದು ಜರುಗಿದ ನಿಗಮದ 368ನೇ ಮಂಡಳಿ ಸಭೆಯ ನಡವಳಿಗಳು.
4. ಕಛೇರಿ ಆದೇಶ ಸಂಖ್ಯೆ ಕೈವ :ನಿರ್ವಹಣಾನೀತಿ :ಮಾರ್ಗಸೂಚಿ : 2022-23 ದಿನಾಂಕ 08.12.2022
5. ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯ ನಡವಳಿಗಳು.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 07.09.2023 ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನವಾಗಿರುತ್ತದೆ.

> «ಮಂಡಳಿಯು ಸುದೀರ್ಘವಾಗಿ ಚರ್ಚಿಸಿ, ಹಂಚಿಕೆದಾರರ ಮನವಿಯನ್ನು ಪರಿಗಣಿಸಿ, ನಿಗಮದ 368ನೆ ಮಂಡಳಿ ನಿರ್ಧಾರದಂತೆ ದಿನಾಂಕ 08.12.2022 ರಂದು ಹೊರಡಿಸಿರುವ ಹಂಚಿಕೆ ಪುನರ್‌ಸ್ಥಾಪನೆ ಆದೇಶವನ್ನು ಮುಂದುವರೆಸಿ, ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ. 10 ರಷ್ಟು ರಿಯಾಯಿತಿ ನೀಡಿ ಹಾಗೂ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರ ವರೆಗೆ ಮುಂದುವರೆಸಲು ಅನುಮೋದನೆ ನೀಡಿತು.»

ನಿಗಮದ 370ನೇ ಮಂಡಳಿ ನಿರ್ಣಯದಂತೆ, ಉಲ್ಲೇಖ (4)ರಲ್ಲಿ ಹೊರಡಿಸಿರುವ ಆದೇಶವನ್ನು ಪರಿಷ್ಕರಿಸಿ ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರವರೆಗೆ ವಿಸ್ತರಿಸಲಾಗಿದೆ. ಉಲ್ಲೇಖ (1)ರಲ್ಲಿನ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಆದೇಶದ ಪ್ರಕಾರ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಮತ್ತು ಸಂಬಂಧಪಟ್ಟ ಶಾಖಾ ಕಛೇರಿಯ ಅಧಿಕಾರಿಗಳು ಹಂಚಿಕೆ / ಕರಾರು ನಿಬಂಧನೆಗಳನ್ನು ಉಲ್ಲಂಘಿಸಿದ ಹಂಚಿಕೆದಾರರುಗಳಿಗೆ ತಪ್ಪದೆ ಪತ್ರ ಬರೆದು ಹಂಚಿಕೆ ಪುನರ್ ಸ್ಥಾಪನೆ ಅವಕಾಶವನ್ನು ಉಪಯೋಗಿಸಿಕೊಂಡು ಉದ್ದಿಮೆ ಪ್ರಾರಂಭ ಮಾಡುವಂತೆ ನೋಟೀಸ್ ಜಾರಿಗೊಳಿಸಿ ಹಂಚಿಕೆದಾರರುಗಳಿಂದ ನಿಗಧಿತ ದಂಡ ಪಾವತಿಸಿಕೊಂಡು, ನಿಯಮಾನುಸಾರ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು (Restoration of Allotment) ಸೂಕ್ತ ಕ್ರಮ ಜರುಗಿಸುವುದು. ಈ ತರಹದ ಯಾವುದೇ ಪ್ರಕರಣಗಳು ಬಾಕಿ ಉಳಿಯದಂತೆ ನೋಟೀಸ್ ಜಾರಿಗೊಳಿಸಿ ಕ್ರಮವಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

DGM. Z-1 No. 659 Dt. 31/10/23

ಉಲ್ಲೇಖ (4)ರ ಆದೇಶದಂತೆ, ಈಗಾಗಲೇ ಕ್ರಯಪತ್ರ ವಿತರಿಸುವ ಮೊದಲು ಪಾವತಿಸಬೇಕಾಗಿದ್ದ ದಂಡವನ್ನು ಹಂಚಿಕೆದಾರರು ಈಗಾಗಲೇ ಪಾವತಿಸಿದ್ದಲ್ಲಿ, ಸದರಿ ಮೊತ್ತವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ. ಈ ಸಂಬಂಧ ಸಹಾಯಕ ಪ್ರಧಾನ ವ್ಯವಸ್ಥಾಪಕರು/ವ್ಯವಸ್ಥಾಪಕರು ತಮ್ಮ ಹಂತದಲ್ಲಿಯೇ ಹಿಂಬರಹ ನೀಡಲು ಸೂಚಿಸಿದೆ.

ಮುಂದುವರೆದು, ಹಂಚಿಕೆ ಪುನರ್ ಸ್ಥಾಪನೆ ನೀತಿಯ ಪ್ರಯೋಜನವನ್ನು ಪಡೆಯುವ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಸ್ಥಳೀಯ ನೊಂದಾಯಿತ ಕೈಗಾರಿಕಾ ಸಂಸ್ಥೆಗಳಿಗೆ ಲಿಖಿತವಾಗಿ ಮಾಹಿತಿ ನೀಡುವಂತೆಯೂ ಸೂಚಿಸಿದೆ.

ಈ ಆದೇಶವು **ತಕ್ಷಣದಿಂದ** ದಿನಾಂಕ 31.03.2024ರವರೆಗೆ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2 ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ/ಬೆಂ.ವಿ/ನೆಲ/ನೀಲಿನಕ್ಷೆಅನುಮೋದನೆ/2023 ದಿನಾಂಕ: 27.10.2023

000496

ಕಛೇರಿ ಆದೇಶ

ವಿಷಯ: **ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆ ಮಾಡಿರುವ ನಿವೇಶಗಳಲ್ಲಿ ಕೈಗಾರಿಕಾ ಕಟ್ಟಡ ನಿರ್ಮಾಣದ ನೀಲಿ ನಕ್ಷೆ ಅನುಮೋದನೆಗೆ ಹಾಗೂ ಯೋಜನೆ ಕಾರ್ಯಗತಗೊಳಿಸಲು ಕಾಲಾವಕಾಶ ನೀಡುವ ಬಗ್ಗೆ.**

ಉಲ್ಲೇಖ:
1. ದಿನಾಂಕ:06.11.2019 ರಂದು ಜರುಗಿದ ನಿಗಮದ 356ನೇ ಮಂಡಳಿ ಸಭೆಯ ನಡವಳಿಗಳು.
2. ಕಛೇರಿ ಆದೇಶ ಸಂಖ್ಯೆ:ಕೈವ/ನೆಲಮಂಗಲ/ನೀಲಿನಕ್ಷೆಅನುಮೋದನೆ/2019/2089 ದಿನಾಂಕ:07.12.2019.
3. ದಿನಾಂಕ:24.03.2022ರಂದು ಜರುಗಿದ ಮಂಡಳಿಯ 365ನೇ ಸಭೆಯ ತೀರ್ಮಾನ.
4. ಕಛೇರಿ ಆದೇಶ ಸಂಖ್ಯೆ:ಕೈವ/ನೆಲಮಂಗಲ/ನೀಲಿನಕ್ಷೆಅನುಮೋದನೆ/2022/57 ದಿನಾಂಕ:06.05.2022.
5. ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆ ನಿರ್ಣಯ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:07.09.2023ರಂದು ಜರುಗಿದ ಮಂಡಳಿಯ 370ನೇ ಸಭೆಯಲ್ಲಿ ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆಯಾದ ನಿವೇಶನಗಳಲ್ಲಿ ನೀಲಿ ನಕ್ಷೆ ಅನುಮೋದನೆ ಪಡೆದು ಕೈಗಾರಿಕಾ ಚಟುವಟಿಕೆ ಪ್ರಾರಂಭಿಸುವ ಸಂಬಂಧ ಈ ಕೆಳಗಿನಂತೆ ತೀರ್ಮಾನವಾಗಿರುತ್ತದೆ.

"ಮಂಡಳಿಯು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ನಿವೇಶನಗಳ ಹಂಚಿಕೆದಾರರಿಗೆ ದಿನಾಂಕ 31.03.2024ರವರೆಗೆ ದಂಡವಿಲ್ಲದೇ ನೀಲಿ ನಕ್ಷೆ ಅನುಮೋದನೆ ನೀಡಿ ಕೈಗಾರಿಕೆ ಕಟ್ಟಡ ಕಟ್ಟಿ, ಉದ್ದಿಮೆ ಪ್ರಾರಂಭಿಸಲು ಕಾಲಾವಕಾಶ ನೀಡಲು ಅನುಮೋದನೆ ನೀಡಿತು".

ಮಂಡಳಿಯ ತೀರ್ಮಾನದಂತೆ, ಕೈಗಾರಿಕಾ ವಸಾಹತು ನೆಲಮಂಗಲದಲ್ಲಿ ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡ ಕಟ್ಟಲು ನೀಲಿ ನಕ್ಷೆ ಅನುಮೋದನೆಯನ್ನು ದಿನಾಂಕ: 31.03.2024ರವರೆಗೆ ದಂಡವಿಲ್ಲದೇ ಅನುಮತಿ ನೀಡಲು ಆದೇಶಿಸಿದೆ ಹಾಗೂ ಸಂಬಂಧಿಸಿದ ಹಂಚಿಕೆದಾರರಿಗೆ ಈ ವಿಷಯ ತಿಳಿಸಲು ಆದೇಶಿಸಿದೆ.

DGM, Z-1
No. 658
Dt. 31/10/23

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,
ಸಹಾಯಕ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು ಅವರ ಅವಶ್ಯ ಕ್ರಮಗಳಿಗಾಗಿ.

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2 ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಕೈವ :ಹಿರೇಶಕುನ:ಮೂಲಸೌಕರ್ಯ:ಪಾವತಿ:ವಿನಾಯಿತಿ:2023 ದಿನಾಂಕ: 27-10-2023

ಕಛೇರಿ ಆದೇಶ

000495

ವಿಷಯ: ನಿಗಮದ ಹಿರೇಶಕುನ ಕೈಗಾರಿಕಾ ವಸಾಹತುನಲ್ಲಿ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸುವವರೆಗೆ ಮಳಿಗೆ/ ನಿವೇಶನಗಳ ಕಂತು ಪಾವತಿ/ಬಡ್ಡಿ ಪಾವತಿಗೆ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1. ದಿನಾಂಕ 14.11.2022ರಂದು ಜರುಗಿದ ನಿಗಮದ 368ನೇ ಮಂಡಳಿ ಸಭೆ ನಿರ್ಣಯ.
2. ಕಛೇರಿ ಆದೇಶ ಸಂಖ್ಯೆಸಮನ್ವಯ:ಕೈವ:ಮೂಲಸೌಕರ್ಯ:ಪಾವತಿ :ವಿನಾಯಿತಿ :2022 ದಿನಾಂಕ 08.12.2022
3. ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆ ನಿರ್ಣಯ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ (2)ರ ಕಛೇರಿ ಆದೇಶದಲ್ಲಿ ನಿಗಮದ 368ನೇ ಮಂಡಳಿ ತೀರ್ಮಾನದಂತೆ, ನಿಗಮವು ಅಭಿವೃದ್ಧಿಪಡಿಸಿರುವ ಶಿವಮೊಗ್ಗ ಜಿಲ್ಲೆಯ ಸಿದ್ಲಿಪುರ, ಸಾಗರ ತಾಲ್ಲೂಕಿನ ಯಲಗಳಲೆ, ದಾವಣಗೆರೆ ಜಿಲ್ಲೆಯ ಸಾರಥಿ-ಕುರುಬರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಉಳ್ಳಾರ್ಥಿಕಾವಲ್ ಮತ್ತು ಖಿದಾಪುರ ಕೈಗಾರಿಕಾ ವಸಾಹತುಗಳಿಗೆ ವಿದ್ಯುತ್‌ಚಕ್ತಿ ಸಂಪರ್ಕ ನೀಡಿದ/ನೀಡುವ ದಿನಾಂಕದವರೆಗೆ ಸದರಿ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನ/ಮಳಿಗೆಗಳನ್ನು ಹಂಚಿಕೆ ಪಡೆದಿರುವ ಉದ್ದಿಮೆದಾರರುಗಳಿಗೆ ಹಂಚಿಕೆ ಪತ್ರದಲ್ಲಿ ತಿಳಿಸಿರುವಂತೆ ನಿವೇಶನ/ಮಳಿಗೆಗಳ ಬಾಕಿ ಮೌಲ್ಯವನ್ನು ಬಡ್ಡಿ ರಹಿತವಾಗಿ ಪಾವತಿಸಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರವರಿಂದ ಆದೇಶ ಪಡೆದು ಪಾವತಿಸಿಕೊಳ್ಳಲು ಅನುಮೋದಿಸಲಾಗಿದೆ ಹಾಗೂ ಸದರಿ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನ/ಮಳಿಗೆಗಳನ್ನು ಕಂತು ರೂಪದಲ್ಲಿ ಹಂಚಿಕೆ ಪಡೆದಿರುವ ಉದ್ದಿಮೆದಾರರುಗಳಿಗೆ ನಿಗಮದಿಂದ ವಿದ್ಯುತ್ ಸಂಪರ್ಕ ನೀಡಿದ ದಿನಾಂಕದಿಂದ ಅನ್ವಯವಾಗುವಂತೆ ಕಂತು ಲೆಕ್ಕಚಾರವನ್ನು ನಿರ್ವಹಿಸಲು ಆದೇಶಿಸಲಾಗಿತ್ತು. ಮುಂದುವರೆದು, ಮಂಡಳಿಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನವಾಗಿರುತ್ತದೆ.

> « ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹಿರೇಶಕುನದಲ್ಲಿ 2017-18ನೇ ಸಾಲಿನಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುವಿಗೆ ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲವಾದ್ದರಿಂದ, ಮೇಲೆ ವಿವರಿಸಿರುವ ಕೈಗಾರಿಕಾ ವಸಾಹತುಗಳಿಗೆ ನೀಡಿರುವಂತೆ ಈ ಕೈಗಾರಿಕಾ ವಸಾಹತುವಿನಲ್ಲಿನ ಮಳಿಗೆ/ನಿವೇಶನಗಳ ಹಂಚಿಕೆದಾರರಿಗೆ ನಿಗಮದಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ದಿನಾಂಕದವರೆಗೆ ನಿವೇಶನದ ಬಾಕಿ ಮೌಲ್ಯವನ್ನು ಬಡ್ಡಿ ರಹಿತವಾಗಿ ಪಾವತಿಸಿಕೊಳ್ಳಲು ಅವಕಾಶ ಕಲ್ಪಿಸಲು ಅನುಮೋದನೆ ನೀಡಿತು »

ದಿನಾಂಕ 07.09.2023ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆ ನಿರ್ಧಾರದಂತೆ ದಿನಾಂಕ 08.12.2022 ರಂದು ಹೊರಡಿಸಿದ್ದ ಆದೇಶವನ್ನು ಹಿರೇಶಕುನ ಕೈಗಾರಿಕಾ ವಸಾಹತುವನ್ನು ಸೇರಿಸಿ ಅನ್ವಯಿಸುವಂತೆ ಈ ಆದೇಶ ಹೊರಡಿಸಿದೆ. ಉಳಿದಂತೆ, ಸದರಿ ಕಛೇರಿ ಆದೇಶದಲ್ಲಿನ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಆದೇಶವು ಈಗಾಗಲೇ ಪಾವತಿಸಿರುವ ಹಂಚಿಕೆದಾರರಿಗೆ ಅನ್ವಯವಾಗುವುದಿಲ್ಲವೆಂದು ತಿಳಿಸಲಾಗಿದೆ.

DGM, Z-1 No. 661 Dt. 31/10/23

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,
1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2 ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

000494

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080-2340 7011 ರಿಂದ 25, ಫ್ಯಾಕ್ಸ್ : 91-080-2314 3566 / 2338 9070 ತಂತಿ : ಮೈಸ್ಮಾಲ್ ಕಾರ್ಪ್
ವೆಬ್‌ಸೈಟ್ : www.kssidc.co.in

ಸಂಖ್ಯೆ/ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020 /1126 ದಿನಾಂಕ: 03.01.2022

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ:
1. ನಿಗಮದ ಕಛೇರಿ ಆದೇಶ ಸಂಖ್ಯೆ: ಸಮನ್ವಯ/ಕೈವ ನೀತಿ/ ಮಾ.ಸೂ/ 2015/972 ದಿನಾಂಕ: 22.06.2015.
2. ದಿನಾಂಕ: 20.01.2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ.
3. ದಿನಾಂಕ: 28.01.2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
4. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/108 ದಿನಾಂಕ: 12.02.2020.
5. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/108 ದಿನಾಂಕ: 08.05.2020.
6. ದಿನಾಂಕ: 15.09.2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
7. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/23 1355 ದಿನಾಂಕ: 01.10.2020.
8. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/ಪರಿಷ್ಕರಿಸುವ ಬಗ್ಗೆ / 2021 ದಿನಾಂಕ: 25.01.2021.
9. ದಿನಾಂಕ: 18.11.2021 ರಂದು ಜರುಗಿದ ನಿಗಮದ 363ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

*****

ದಿನಾಂಕ: 01.10.2020 ರಂದು ಹೊರಡಿಸಿರುವ ಉಲ್ಲೇಖ (7) ರಲ್ಲಿ ಸೂಚಿಸಿರುವ ಕಛೇರಿ ಆದೇಶದಂತೆ ಹಂಚಿಕೆ ಪುನರ್ ಸ್ಥಾಪನೆ ಆದೇಶವು ದಿನಾಂಕ: 30.09.2021 ರಂದು ಮುಕ್ತಾಯವಾಗಿರುತ್ತದೆ. ಮುಂದುವರೆದು, ದಿನಾಂಕ: 18.11.2021 ರಂದು ಜರುಗಿದ ನಿಗಮದ 363ನೇ ಮಂಡಳಿಯಲ್ಲಿ, ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ.

"ತೀರ್ಮಾನ: ಮಂಡಳಿಯು ಸುದೀರ್ಘವಾಗಿ ಚರ್ಚಿಸಿ, ಈಗಾಗಲೇ ಕೈಗಾರಿಕಾ ವಲಯಗಳಿಗೆ ನಿಗದಿಪಡಿಸಿದ ಹಂಚಿಕೆ ಪುನರ್ ಸ್ಥಾಪನೆ ನೀತಿಗೆ ದಂಡ ವಿಧಿಸುತ್ತಿರುವ ಕ್ರಮವನ್ನು ದಿನಾಂಕ: 31.12.2022 ರವರೆಗೆ ಮುಂದುವರೆಸಲು ನಿರ್ಧರಿಸಿತು ಮತ್ತು ಈ ನಿಟ್ಟಿನಲ್ಲಿ ಸೂಕ್ತ ಕ್ರಮಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಸೂಚಿಸಿತು." "

000493

ಆದುದರಿಂದ ಉಲ್ಲೇಖಗಳಲ್ಲಿ ಹೊರಡಿಸಿರುವ ಆದೇಶಗಳಲ್ಲಿ ಕೆಲವು ಅಂಶಿಕ ಬದಲಾವಣೆಗಳೊಂದಿಗೆ ಈ ಕೆಳಗೆ ವಿವರಿಸಿರುವ ಕೋಷ್ಟಕದಂತೆ ದಂಡ ವಿಧಿಸಿ ಹಂಚಿಕೆ ಪುನರ್ ಸ್ಥಾಪನೆಗೆ ಕ್ರಮವಹಿಸುವಂತೆ ಆದೇಶಿಸಲಾಗಿದೆ.

1. ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ:

ಕ್ರ.ಸಂ	ಪ್ರವರ್ಗ	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ"	ಶೇ. 25 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 20 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 15 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

2. ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸಿರುವ ಹಾಗೂ ನಿಗಧಿತ ಅವಧಿಯಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಪ್ರಾರಂಭಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ:

ಕ್ರ.ಸಂ	ಪ್ರವರ್ಗ	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ"	ಶೇ. 20 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
Karnataka State Small Industries Development Corporation Ltd.

(A Government of Karnataka Undertaking)

Regd. Office : A.O. Building, Industrial Estate, Rajajinagar, Bangalore - 560 010
Telephone : 080-2340 7011 to 25, Fax : 91-080-2314 3566 / 2338 9070 **Grams :** MYSMALCORP
Website : www.kssidc.co.in

000411

(6)

No:ENGG:CE:LAYOUT PLAN:2019-20 Date: 05-11-2019

The Executive Engineer,
KSSIDC,
Industrial Estate,
Kalaburgi.

Sir,

Sub: Approval to Revised layout plan of Industrial Estate Lingasugur, Raichur Dist.

Ref: Managing Director Approval Dtd: 24-10-2019.

*****

Referring to the above, please find herein three copies of Revised layout plans submitted by you, which are approved by the Managing director for your reference.

Yours faithfully

Chief Engineer, 5/4

Copy to:

O/C Asst. Executive Engineer, KSSIDC, Bellary for information.

Received
2 Copies of lay-out.
08/11/19
AEE

Proceedings of 165th TIC meeting held on 02/0

000410

(1)

ನಿಗಮದ ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ ರ ಆನೇಕಲ್ ತಾಲ್ಲೂಕು ಚಿಕ್ಕಹೊಸಹಳ್ಳಿ ಕೈಗಾರಿಕಾ ವಸಾಹತುವಿಗೆ ದಿನಾಂಕ 15-02-2019 ರಂದು ಭೇಟಿ ಕಾಮಗಾರಿಯನ್ನು ಪರಿಶೀಲಿಸಿ ಸ್ಥಗಿತಗೊಂಡಿರುವುದನ್ನು ಗಮನಿಸಿ ಸದರಿ ವಿಷಯದ ಬಗ್ಗೆ ಸ್ಥಳೀಯ ಶಾಸಕರೊಂ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ದಿನಾಂಕ 01-07-2 ರಿಂದ 31-10-2019 ರ ವರೆಗೆ ದಂಡ ರಹಿತವಾಗಿ ಕಾಲಾವಧಿ ವಿಸ್ತರಣೆಗೆ ನೀಡುವ ಬಗ್ಗೆ ಸಮಿತಿಯು ಒ ಸೂಚಿಸಿತು.

ಮುಂದುವರೆದು, ಗುತ್ತಿಗೆದಾರರು ಕಾಮಗಾರಿಯನ್ನು ಮರು ಪ್ರಾರಂಭಿಸುವ ವೇಳೆ ದರ ಹೆಚ್ಚ (Price Escalation) ಬಗ್ಗೆ ಗುತ್ತಿಗೆದಾರರಿಂದ ಬೇಡಿಕೆ ಬಂದಲ್ಲಿ ಇದನ್ನು ಪರಿಗಣಿಸಿ ಸೂಕ್ತ ಆಡಳಿತಾತ್ಮಕ ನಿಧಾ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಮಿತಿಯು ಅಧಿಕಾರ ನೀಡಿತು.

165/34 **ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಸರ್ವೆ ನಂ: 181/1 ರಿಂದ 181/11 ರ ವರೆಗೆ 7.00 ಎಕರೆ 31 ಗುಂಟೆ ಜಾಗದಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಿ ಮೂಲಭೂತ ಸೌಕರ್ಯಗಳ ಉನ್ನತೀಕರಣಗೊಳಿಸಲಾದ ಕಾಮಗಾರಿ/ ಪರಿಷ್ಕೃತ ಲೇಔಟ್ ನಕ್ಷೆ ಬಗ್ಗೆ.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ನಾಗಮಂಗಲದ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ ಕೈಗೊಂಡ ಸಂದರ್ಭದಲ್ಲಿ ಮೂಲ ಲೇಔಟ್ ನಕ್ಷೆಯಲ್ಲಿ 5ನೇ ಅಡ್ಡರಸ್ತೆ ಕಾಮಗಾರಿಗೆ ಸ್ಥಳೀಯ ರೈತರು ಅಡಚಣೆ ಮಾಡಿದ ಪ್ರಯುಕ್ತ ಈ ರಸ್ತೆಯನ್ನು ಹೊರತುಪಡಿ ಕಾಮಗಾರಿ ಪೂರೈಸಲಾಗಿರುತ್ತದೆ. ಇದರಿಂದ ನಿವೇಶನಗಳ ಅಳತೆಗಳನ್ನು ಪರಿಷ್ಕರಿಸಿ ಪರಿಷ್ಕೃತ ನಿವೇಶನಗಳಿಗೆ ಹಾ ರಸ್ತೆಗಳ ಸಂಪರ್ಕ ಕಲ್ಪಿಸಿ ಅಭಿವೃದ್ಧಿ ಪಡಿಸಲಾಗುತ್ತದೆ. ಪರಿಷ್ಕೃತ ಲೇಔಟ್ ನಕ್ಷೆಯಲ್ಲಿ ಒಟ್ಟು 32 ಸಂಖ್ಯೆ ವಿಶೇ ನಿವೇಶನಗಳು ಲಭ್ಯವಾಗುತ್ತಿದ್ದು ಹಾಲಿ ಪ್ರಸ್ತುತ ಲೇಔಟ್ ನಕ್ಷೆಯನ್ನು ಸಮಿತಿಯು ಮುಂದೆ ಮಂಡಿಸಲಾಗಿದ ಪರಿಷ್ಕೃತ ಲೇಔಟ್ ನಕ್ಷೆಯ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಸಮಿತಿಯು 5ನೇ ಅಡ್ಡರಸ್ತೆಯ ಕಾಮಗಾರಿಯನ ಸ್ಥಗಿತಗೊಳಿಸಿ ಹಾಗೂ ಲೇಔಟ್‌ನ ಮೂಲನಕ್ಷೆಯಲ್ಲಿ ಕೈಬಿಟ್ಟು ಹಾಲಿ ಇರುವ ನಕ್ಷೆಯನ್ನು ಕೈಗಾರಿಕಾ ವಸಾಹತುವಿ ಇಂದಿನ ವಸ್ತುಸ್ಥಿತಿಗೆ ಅನುಗುಣವಾಗಿ ನಿವೇಶನ ಅಳತೆಗಳನ್ನು ನಕ್ಷೆಯಲ್ಲಿ ಮಾರ್ಪಡಿಸಿ ಅನುಮತಿ ನೀಡಲು ಮಾನ್ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿತು.

165/35 **ರಾಯಚೂರು ಜಿಲ್ಲೆ, ಲಿಂಗಸೂಗೂರು ಕೈಗಾರಿಕಾ ವಸಾಹತುವಿನಲ್ಲಿ ಲೇಔಟ್ ಮಾರ್ಪಾಡು ಕುರಿತು.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ಲಿಂಗಸೂಗೂರು ಒಟ್ಟು ವಿಸ್ತೀರ್ಣ 5.00 ಎಕರೆ ಇದ್ದು 2016-17ನೇ ಸಾಲಿನ ಉನ್ನತೀಕರಣ ಕಾಮಗಾರಿ ಕೈಗೊಂಡಾಗ ಕೈಗಾರಿಕಾ ವಸಾಹತುವಿನ ತಗ್ಗಿನ ಜಾಗದಲ್ಲಿ ನೀರು ನಿಲ್ಲುವ ಸ್ಥಳದಲ್ಲಿ ಆರ್.ಸಿ.ಸಿ ತಡೆಗೋಡೆ ನಿರ್ಮಿಸಿದ ಕಾರಣ ಹೆಚ್ಚುವರಿಯಾಗಿ 6 ಸಂಖ್ಯೆ ನಿವೇಶನಗಳು ಲಭ್ಯವಾಗಿರುವ ಅಂಶವನ್ನು ಸಮಿತಿಯು ಗಮನಿಸಿತು. ಲೇಔಟ್‌ನ ಗಡಿಯಲ್ಲಿ ಕೇವಲ 1.00 ಮೀ ಬಫರ್‌ಜೋನ್ ಪ್ರಸ್ತಾಪಿಸಿರುವ ಬಗೆಗಿನ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಕನಿಷ್ಟ 3.00 ಮೀ ಅಗಲದ ಬಫರ್‌ಜೋನ್‌ಗೆ ಜಾಗಿ ಮೀಸಲಿರಿಸಿ ಅದರಂತೆ ನಿವೇಶನಗಳ ಅಳತೆಗಳನ್ನು ಮಾರ್ಪಾಡು ಮಾಡಿ ಅದರಂತೆ ಪರಿಷ್ಕೃತ ಲೇಔಟ್‌ಗೆ ಅನುಮೋದನೆ ನೀಡಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಮಿತಿಯು ಅಧಿಕಾರ ನೀಡಿತು.

ವ್ಯ. ನಿ

ಕರಾಸಕೈಅನಿನಿ

000409

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ಸಂಖ್ಯೆ:ಪ್ರವ್ಯ(ಕೈವ/ಹ):ಲೇ.ಔಟ್:ನಕ್ಷೆ:ಸಹಿ:2011

ದಿನಾಂಕ: 23.11.2011

30 NOV 2011

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತುಗಳ ಲೇ-ಔಟ್ ನಕ್ಷೆಗೆ ತಾಂತ್ರಿಕ ಉಪ ಸಮಿತಿ ಅನುಮೋದನೆ ಪಡೆದ ನಂತರ ನಕ್ಷೆಗಳಿಗೆ ವ್ಯವಸ್ಥಾಪಕ ನಿರ್ದೇಶಕರ ಸಹಿ ಪಡೆಯುವ ಕುರಿತು.

ದಿನಾಂಕ 12.10.2011 ರಂದು ನಡೆದ 138 ನೇ ತಾಂತ್ರಿಕ ಉಪ ಸಮಿತಿ ಸಭೆಯು ವಿಷಯಕ್ಕೆ ಸಂಬಂಧಿಸಿದಂತೆ ಸುದೀರ್ಘವಾಗಿ ಚರ್ಚಿಸಿದ ನಂತರ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

4. Obtaining approval of the Committee and signature of the Managing Director in the Layout Plans.

The Committee after detailed deliberations, decided that the Chief Engineer should take necessary action to prepare the Master Plans of the Layouts based on the ground reality to reduce the correction factor and to avoid any complication that may arise later and to place it before the Technical Sub Committee for approval and signature of the Managing Director. The Committee emphasised that the Layout Plan shall reflect the complete details of roads, drains, culverts, UGD lines, pump house, bore well etc., with any other infrastructure to be provided in the estate.

Further, the Committee also directed the Chief Engineer to ensure that all the individual sketches of the plots/sheds in the layout are finalised and duly signed and handed over to the Industrial Estate Department with correct dimension report by the concerned engineer for initiating action for allotment of sheds/plots/flats. The concerned Engineer will be held responsible for any deviations noticed later.

000408

ಕರಾಸಕ್ಕೆ ಅನಿನಿ

The Committee also decided that any corrections required to be approved and signed layout plans shall be brought out with sufficient justifications for any changes before the Technical Sub Committee once again for concurrence and signature of the Managing Director. The changes in the individual sketches if any due to modification shall be intimated to the concerned Zonal Deputy General Managers forthwith.

ಮೇಲಿನ ತೀರ್ಮಾನದಂತೆ ಇನ್ನು ಮುಂದೆ ಯಾವುದೇ ಹೊಸ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸುವ ಮುನ್ನ ಮೇಲಿನಂತೆ ಕ್ರಮ ಕೈಗೊಳ್ಳತಕ್ಕದ್ದು.

ಅಲ್ಲದೆ, ಈಗಾಗಲೇ ಅಭಿವೃದ್ಧಿಪಡಿಸಲಾಗಿರುವ ಕೈಗಾರಿಕಾ ವಸಾಹತುಗಳಲ್ಲಿಯೂ ಸಹ ಯಾವುದೇ ಕಾರಣದಿಂದ ನಕ್ಷೆ ಬದಲಾಗಬೇಕಾದಲ್ಲಿ ಸಂಪೂರ್ಣ ವಿವರಣೆ ಮತ್ತು ಸಮರ್ಥನೆಗಳನ್ನು ನೀಡುವ ಮೂಲಕವೇ ನಕ್ಷೆಗಳ ಬದಲಾವಣೆಗೆ ಪ್ರಸ್ತಾವನೆ ಸಲ್ಲಿಸಿ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆಯತಕ್ಕದ್ದು. ಅನಧಿಕೃತ ನಕ್ಷೆ ಬದಲಾವಣೆ ಬಗ್ಗೆ ನಂತರ ತಿಳಿದುಬಂದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ:

1) ಮುಖ್ಯ ಅಭಿಯಂತರರು (ಪ್ರಭಾರ)
2) ಉಪ ಪ್ರಧಾನ ವ್ಯವಸ್ಥಾಪಕರು (ವಲಯ-1/2/3)
3) ಎಲ್ಲಾ ಕಾರ್ಯಪಾಲಕ ಅಭಿಯಂತರರು
4) ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು

ಪ್ರತಿ:

1) ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ.
2) ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ.
3) ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು.
4) ಉಪಾಧ್ಯಕ್ಷರ ಆಪ್ತ ಸಹಾಯಕರು, ಕೇಂದ್ರ ಕಛೇರಿ.

000407

ದಿನಾಂಕ 02-05-2019 ರಂದು ಕ.ರಾ.ಸ.ಕೈ.ಅ.ನಿ.ನಿಗಮದ ಆಡಳಿತ ಮಂಡಳಿಯ ಕಛೇರಿಯಲ್ಲಿ ನಡೆದ ನಿಗಮದ 165ನೇ ತಾಂತ್ರಿಕ ಉಪ ಸಮಿತಿ ಸಭೆಯ ನಡಾವಳಿಗಳ ಅನುಸರಣಾ ವರದಿ.

Sub:- 165/35:- ರಾಯಚೂರು ಜಿಲ್ಲೆ, ಆಂಗಸೂಗೂರು ಕೈಗಾರಿಕಾ ವಸಾಹತುವಿನಲ್ಲಿ ಲೇಔಟ್ ಮಾರ್ಪಾಡು ಕುರಿತು.

1. ನೀರು ನಿಲ್ಲುವ ಸ್ಥಳದಲ್ಲಿ ಆರ್.ಸಿ.ಸಿ ತಡೆಗೋಡೆ ನಿರ್ಮಿಸಿರುವ ಕಾರಣ ೯ ಸಂಖ್ಯೆ (ವಿಶೇಷ ನಿವೇಶನ:8 ರಿಂದ 12) ನಿವೇಶನಗಳನ್ನು ಗುರುತಿಸಲಾಗಿತ್ತು. ಮುಂದುವರೆದಂತೆ, 165 ನೇ ತಾಂತ್ರಿಕ ಉಪ ಸಮಿತಿ ಸಭೆಯ ತೀರ್ಮಾನದಂತೆ ಸಿ.ಡಿ.ಡಿ ವರದಿಯನ್ನು ತಯಾರಿಸುವಾಗ 3.00 ಮೀ ಅಗಲದ ಬಫರ್‌ಜೋನ್‌ಗಾಗಿ ಜಾಗವನ್ನು ಕೈಗಾರಿಕಾ ವಸಾಹತುವಿನ ಪಶ್ಚಿಮ ದಿಕ್ಕಿನಲ್ಲಿ ಹಾಗೂ ಉತ್ತರ ದಿಕ್ಕಿನಲ್ಲಿ ಹೊಸದಾಗಿ ನಿರ್ಮಿಸಿದ ನಿವೇಶನಗಳಿಗೆ ಮಾತ್ರ ಅನ್ವಯವಾಗುವಂತೆ ಕಾಯ್ದಿರಿಸಿ ಆ ಪ್ರಕಾರ ಹೊಸ ಲೇಔಟ್ ನಕ್ಷೆಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲಾಗಿದೆ.

24/07/2019
ಕಾ.ಅ
ಕೈವ: ಕಲಬುರ್ಗಿ.

ಸ.ಕಾ.ಅ
ಕೈವ:ಬಳ್ಳಾರಿ

No: 232
Dt. 13/8/19

13/8/19

2. ಕಂಡಿಕೆ ಸಂಖ್ಯೆ (1) ನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

3. ಕಾರ್ಯಪಾಲಕ ಅಭಿಯಂತರರು, ಕಲಬುರ್ಗಿ ರವರು ಆಂಗಸೂಗೂರು ಕೈಗಾರಿಕಾ ವಸಾಹತುವಿನ ಲೇಔಟ್ ನಕ್ಷೆಯನ್ನು ನಿಮಗದ 165ನೇ ತಾಂತ್ರಿಕ ಉಪ ಸಮಿತಿ ಸಭೆಯ ತಿರ್ಮಾನದಂತೆ ಮಾರ್ಪಾಡು ಮಾಡಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಅದರಂತೆ, ಸದರಿ ಪರಿಷ್ಕೃತ ಲೇಔಟ್ ನಕ್ಷೆಯ 3 ಪ್ರತಿಯನ್ನು ಪರಿಶೀಲಿಸಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಸ.ಕಾ 22/10/19

ತಾ.ಸ

4. ಕಂಟೋನ್ಮೆಂಟ್ 3 ರಲ್ಲಿ ತಲೆಎತ್ತಿರುವುದರಿಂದ. ಲಿಂಗಸೂಗೂರು

000406

ಕೈಗಾರಿಕೆ ಮೀಸಲಿಟ್ಟ ಸರ್ವೆ ನಂಬರ್ ನಕ್ಷೆಯನ್ನು ಪ್ಲೇಸಮೆಂಟಿಕೆ ನಿರ್ದೇಶನದಂತೆ ಸಿ.ಎ. 6ನೆಯವರವರೆಗೆ ಮಂಜೂರು ನೆಲಬಾಡಿಗೆ ಕರಡು ಕಟ್ಟಡ ಮಂಜೂರಿಸಲಾಗಿದೆ.

5. ಕರಡು ಕಟ್ಟಡದಲ್ಲಿರುವ ಕೈಗಾರಿಕಾ ಉದ್ಯಮ ದಿನಾಂಕ 30/11/2011 ರ ಪತ್ರದಲ್ಲಿ ಮೀಸಲಿಟ್ಟಿರುವ ಸರ್ವೆ ನಕ್ಷೆಗೆ 6ನೆಯವರವರೆಗೆ ಮಂಜೂರಾದ ಪ್ಲೇಸಮೆಂಟ್‌ನಲ್ಲಿ 165 ನೆ ಅಂತ್ರೇ ಬದಲು ನಮೂದಿಸಿ ಮತ್ತು 6ನೆಯವರವರೆಗೆ ಮಂಜೂರಾಗಿರುತ್ತದೆ. ಉಳಿದ ಬಿಲ್ಡಿಂಗ್ 6. ರೆವರು ಸೆಲ್ಲಾಸಿದೆ ನಕ್ಷೆಗೆ ಪ್ಲೇಸಮೆಂಟಿಕೆ ನಿರ್ದೇಶನದಂತೆ 6ನೆಯವರವರೆಗೆ ಮಂಜೂರಿಸಲಾಗಿದೆ.

22/10/2014

(6) ಮೇಲ್ 6.

ಷರಾ (1) ರಿಂದ (5) ರವರೆಗೆ ಅಭಿಪ್ರಾಯಿಸಿದಂತೆ.

165 ನೆ ಅಂತ್ರೇ ಅಪಸೂಚಿಯಲ್ಲಿ 3.00 ಮೀ ಅಗಲದ ಪ್ರಿಫಿಕ್ಸ್ ಪೋರ್ಟಿಕೋ ಜಾಗ ಮೀಸಲಿಡದಿದ್ದರೆ ಅಭಿವೃದ್ಧಿ ಪ್ರಾಧಿಕಾರ ಮೂಲಕ ಪಡೆದು ಎ ಖಾತೆ ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಸಂಬಂಧ ಸಿಂಧನೂರು ಮನೆ ಪಿ.ಎ. ರೆವೆನ್ಯೂ ಅಧಿಕಾರಿ ಅಭಿಪ್ರಾಯ ಅಭಿಪ್ರಾಯದಂತೆ ಎ ಖಾತೆ ಜಾಗ ಅನುಮೋದನೆಗಾಗಿ ಕಡತವನ್ನು ಷರಾ (5) ರಂತೆ ಅನುಮೋದನೆಗಾಗಿ

24/10

(7) ಪಿ.ಎ. ಅನುಮೋದನೆಗೆ.

24/10

24/10

M.B. 24/10/14

8) As per approval in the above para, a letter addressed to E.E. Kalburgi communicating approval to Lingasugur layout plan is placed for signature

(9) EE TA 5/11 5/11/19

000405

ದಿನಾಂಕ 02-05-2019 ರಂದು ಕ.ರಾ.ಸ.ಕೈ.ಅ.ನಿ.ನಿಗಮದ ಆಡಳಿತ ಮಂಡಳಿಯ ಕಛೇರಿಯಲ್ಲಿ ನಡೆದ ನಿಗಮದ 165ನೇ ತಾಂತ್ರಿಕ ಉಪ ಸಮಿತಿ ಸಭೆಯ ನಡಾವಳಿಗಳು

ಹಾಜರಾದವರು:
ಸರ್ವಶ್ರೀ

1. ಹೆಚ್. ಪಿ. ಪ್ರಕಾಶ್, ಐ.ಎಫ್.ಎಸ್.
ವ್ಯವಸ್ಥಾಪಕ ನಿರ್ದೇಶಕರು,
ಕ.ರಾ.ಸ.ಕೈ.ಅ.ನಿ.ನಿ, ಕೈಗಾರಿಕಾ ವಸಾಹತು,
ರಾಜಾಜಿನಗರ, ಬೆಂಗಳೂರು 560010. : ಅಧ್ಯಕ್ಷರು

2. ಬಿ. ಎನ್. ಸುಧಾಕರ್,
ನಿರ್ದೇಶಕರು, ಎಮ್‌ಎಸ್‌ಎಮ್‌ಇ-ಡಿಐ.,
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು 560010. : ಸದಸ್ಯರು

3. ಬಸವರಾಜ್ ಜವಳಿ,
ಅಧ್ಯಕ್ಷರು, ಕಾಸಿಯಾ,
ಬೆಂಗಳೂರು 560010. : ಸದಸ್ಯರು

4. ಡಿ.ವಿ. ಸತ್ಯನಾರಾಯಣ,
ನಿವೃತ್ತ ಇಂಜಿನಿಯರ್ ಇನ್ ಛೀಫ್,
ನಂ. 136, 2-ಎ, ಕ್ರಾಸ್, 6ನೇ ಮೈನ್,
3ನೇ ಹಂತ, 3ನೇ ಬ್ಲಾಕ್,
ಬಸವೇಶ್ವರನಗರ, ಬೆಂಗಳೂರು 560079. : ಪರಿಣಿತ ಸದಸ್ಯರು

5. ಎಸ್. ಮೃತ್ಯುಂಜಯ
ನಿವೃತ್ತ ಮುಖ್ಯ ಅಭಿಯಂತರರು,
ಸರಸ್ವತಿ ನಗರ, ವಿಜಯನಗರ ಪೋಸ್ಟ್,
ಬೆಂಗಳೂರು 560040. : ಪರಿಣಿತ ಸದಸ್ಯರು

6. ಡಾ: ಉಷಾ ಎನ್. ಮೂರ್ತಿ
ಪ್ರಾಚಾರ್ಯರು ಮತ್ತು ಸಿವಿಲ್
ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು,
ಯುವಿಸಿಇ, ಜ್ಞಾನ ಭಾರತಿ,
ಬೆಂಗಳೂರು 560056. : ಪರಿಣಿತ ಸದಸ್ಯರು

7. ಮುಖ್ಯ ಅಭಿಯಂತರರು (ಸಂಪರ್ಕ & ಕಟ್ಟಡ) ದಕ್ಷಿಣ
ಲೋಕೋಪಯೋಗಿ ಇಲಾಖೆ
ಬೆಂಗಳೂರು,
ಕೆ.ಆರ್. ವೃತ್ತ, ಬೆಂಗಳೂರು 560001.
ರವರ ಪರವಾಗಿ ಶ್ರೀ. ಬಾಲಾಜಿ, ತಾಂತ್ರಿಕ ಸಹಾಯಕರು : ಪರಿಣಿತ ಸದಸ್ಯರು

ವ್ಯ. ನಿ

3/5/19

000404

8. ಮುಖ್ಯ ಅಭಿವೃದ್ಧಿ ಅಧಿಕಾರಿ : ಪರಿಣಿತ ಸದಸ್ಯರು
ಮತ್ತು ಮುಖ್ಯ ಅಭಿಯಂತರರು
ಕೆ.ಐ.ಎ.ಡಿ.ಬಿ., ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560001.
ರವರ ಪರವಾಗಿ ಶ್ರೀ. ಚಂದ್ರಕುಮಾರ್, ತಾಂತ್ರಿಕ ಸಹಾಯಕರು

9. ಬಿ. ಖಗದೀಶ್ : ಸದಸ್ಯರು ಮತ್ತು ಸಂಚಾಲಕರು
ಮುಖ್ಯ ಅಭಿಯಂತರರು,
ಕ.ರಾ.ಸ.ಕೈ.ಅ.ನಿ.ನಿ., ಬೆಂಗಳೂರು 560010.

10. ಹೆಚ್. ಪಿ. ಮಂಜುನಾಥ್, ಕೆಎಸ್ಎಎಸ್ : ಸದಸ್ಯರು
ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು ಮತ್ತು ಆಲೆಪ)
ಕ.ರಾ.ಸ.ಕೈ.ಅ.ನಿ.ನಿ., ಕೈಗಾರಿಕಾ ವಸಾಹತು,
ರಾಜಾಜಿನಗರ, ಬೆಂಗಳೂರು 560010

ಹಾಜರಿದ್ದ ನಿಗಮದ ಇತರ ಅಧಿಕಾರಿಗಳು:

11. ಶ್ರೀ. ಸೋಮಶೇಖರ್ ಬಂಕದ್
ಪ್ರಧಾನ ವ್ಯವಸ್ಥಾಪಕರು, (ಸಿಬ್ಬಂದಿ ಮತ್ತು ಸಾ.ಸಂ)

12. ಡಿ.ಹೆಚ್. ನಾಗೇಶ್,
ಕಾರ್ಯಪಾಲಕ ಅಭಿಯಂತರರು, ಹುಬ್ಬಳ್ಳಿ ವಿಭಾಗ

13. ಶ್ರೀ. ಬಿ.ಎ. ವಿಶ್ವನಾಥ
ಮುಖ್ಯ ಅಭಿಯಂತರರ ತಾಂತ್ರಿಕ ಸಹಾಯಕರು-1,

14. ಹೆಚ್. ಎಂ. ಶಶಿಧರ್,
ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು

ಮುಖ್ಯ ಅಭಿಯಂತರರು, ಕ.ರಾ.ಸ.ಕೈ.ಅ.ನಿ.ನಿ. ರವರು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು 165ನೇ ತಾಂತ್ರಿಕ ಉಪ ಸಮಿತಿಯ ಸಭೆಗೆ ಆಹ್ವಾನಿಸಿ ವಿಷಯಗಳನ್ನು ಚರ್ಚಿಸಲು ಮಾನ್ಯ ಅಧ್ಯಕ್ಷರನ್ನು ಕೋರಿದರು.

ಅಧ್ಯಕ್ಷರ ಒಪ್ಪಿಗೆ ಮೇರೆಗೆ ತಾಂತ್ರಿಕ ಉಪ ಸಮಿತಿಯಲ್ಲಿ ಮಂಡಿಸಿರುವ ಈ ಕೆಳಕಂಡ ವಿಷಯಗಳ ಕಾರ್ಯಸೂಚಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

165/01 **ದಿನಾಂಕ 06-03-2018 ರಂದು ನಡೆದ 164ನೇ ತಾಂತ್ರಿಕ ಉಪ ಸಮಿತಿಯ ನಡಾವಳಿಯನ್ನು ಓದಿ ದಾಖಲಿಸುವ ಬಗ್ಗೆ.**

ದಿನಾಂಕ 06-03-2018 ರಂದು ನಡೆದ 164ನೇ ತಾಂತ್ರಿಕ ಉಪ ಸಮಿತಿಯ ನಡಾವಳಿಯನ್ನು ಗಮನಿಸಿ ಅಂಗೀಕರಿಸಲಾಯಿತು.

ವ್ಯ. ನಿ

165/02 **ದಿನಾಂಕ 06-03-2018 ರಂದು ನಡೆದ 164ನೇ ತಾಂತ್ರಿಕ ಉಪ ಸಮಿತಿಯ ನಡಾವಳಿಗೆ ಅನುಸರಣಾ ವರದಿ ಸಲ್ಲಿಸುವ ಬಗ್ಗೆ.**

ದಿನಾಂಕ 06-03-2018 ರಂದು ನಡೆದ 164ನೇ ತಾಂತ್ರಿಕ ಉಪ ಸಮಿತಿಯ ನಡಾವಳಿಗೆ ಅನುಸರಣಾ ವರದಿಯನ್ನು ಪರಿಶೀಲಿಸಿ ಒಪ್ಪಲಾಯಿತು.

165/03 **ವೀರಸಂದ್ರ 2ನೇ ಹಂತ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

349ನೇ ನಿಗಮದ ಮಂಡಳಿ ದಿನಾಂಕ 22-01-2018 ರಂದು ನಡೆದ ಸಭೆಯಲ್ಲಿ ಕೈಗಾರಿಕಾ ವಸಾಹತುಗಳ ಮೂಲಭೂತಸೌಕರ್ಯ ಅಭಿವೃದ್ಧಿಗಾಗಿ ಮೊದಲನೇ ಹಂತ ಹಾಗೂ ಎರಡನೇ ಹಂತವಾಗಿ ರೂ. 102.19 ಕೋಟಿಗಳಿಗೆ ಅನುಮೋದನೆಯಾಗಿದ್ದ ವಿಷಯವನ್ನು ತಾಂತ್ರಿಕ ಉಪ ಸಮಿತಿಯ ಗಮನಕ್ಕೆ ತರಲಾಯಿತು.

ಎರಡನೇ ಹಂತವಾಗಿ ರೂ. 80.12 ಕೋಟಿಗಳಿಗೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಯೋಜನೆಯಡಿ ಟೆಂಡರ್ ಪ್ರಕಟಣೆಯನ್ನು ಸಂಖ್ಯೆ:ಇಪಿ-48:ಇಎಸ್‌ಜಿ:ಮು.ಅ:ಡಿಇವಿ:ವರ್ಕ್ಸ್:ಸಿ.ಐ.ಡಿ.. 2018-19 ದಿನಾಂಕ 31-01-2019 ರ ಪ್ರಕಾರ ಕರೆಯಲಾಗಿದ್ದು ಟೆಂಡರ್ ಸ್ವೀಕೃತದ ಕಡೆಯ ದಿನಾಂಕವು 28-02-2019 ಆಗಿರುವುದನ್ನು ಸಮಿತಿಯು ಗಮನಿಸಿತು.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಆರ್. ಲೊಕೇಶ್ ನಮೂದಿಸಿರುವ ಮೊತ್ತ ರೂ. 2,02,52,290.34 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,76,97,971.77 ಗಳಿಗೆ ಶೇಕಡ (+) 14.43% ರಷ್ಟು ಹೆಚ್ಚುವರಿ ಇರುವುದನ್ನು ಗಮನಿಸಿತು.

ಸಮಿತಿಯು ಗುತ್ತಿಗೆದಾರರು ಹೆಚ್ಚುವರಿ ದರ ನಮೂದಿಸಿರುವುದನ್ನು ಗಮನಿಸಿ ಕಾಮಗಾರಿಯು ಸರ್ಕಾರದ ಮೂಲಭೂತ ಸೌಕರ್ಯಗಳ ಉನ್ನತೀಕರಣ ಲೆಕ್ಕ ಶೀರ್ಷಿಕೆಯಡಿ 2017-18 ರ ಮುಂದುವರೆದ ಭಾಗವಾಗಿ ಅನುಮೋದಿಸಿದ್ದು ಈಗಾಗಲೇ ಯೋಜನಾ ಅನುಷ್ಠಾನವು ವಿಳಂಬವಾಗಿರುವುದರಿಂದ ಯೋಜನೆಯನ್ನು ಶೀಘ್ರವಾಗಿ ಕೈಗೊಂಡು ಪೂರೈಸಬೇಕಾಗಿರುತ್ತದೆಂಬ ಅಂಶವನ್ನು ಗಮನಿಸಿತು.

ಟೆಂಡರ್‌ಗಿಟ್ಟ ಮೊತ್ತವು ಜಿ.ಎಸ್.ಟಿ ಹೊರತುಪಡಿಸಿ ಸೂಚಿಸಿರುವ ದರವಾಗಿದ್ದು ಗುತ್ತಿಗೆದಾರರಿಗೆ ಜಿ.ಎಸ್.ಟಿ. ದರವನ್ನು ಪ್ರತ್ಯೇಕವಾಗಿ ಪಾವತಿಸಬೇಕಾಗಿರುತ್ತದೆ ಹಾಗೂ ಅಧ್ಯಕ್ಷರು, ಕಾಸಿಯಾ ರವರು ಕಾಮಗಾರಿಯನ್ನು ಅತ್ಯಂತ ತ್ವರಿತ ಗತಿಯಲ್ಲಿ ಕೈಗೊಳ್ಳಲು ಈಗಾಗಲೇ ಅನೇಕ ಬಾರಿ ಪತ್ರ ಮುಖೇನ ಹಾಗೂ ಮೌಖಿಕವಾಗಿ ಸೂಚಿಸಿರುತ್ತಾರೆ ಹಾಗೂ ಸಮಿತಿಯ ಮುಂದೆ ವಿಷಯವನ್ನು ಪ್ರಸ್ತಾಪಿಸಿರುತ್ತಾರೆ.

ಮರು ಟೆಂಡರ್ ಕೈಗೊಂಡಲ್ಲಿ ಹೆಚ್ಚಿನ ಕಾಲ ವಿಳಂಬವಾಗುವುದಲ್ಲದೇ ನೂತನ ದರಪಟ್ಟಿಯು ಚಾಲ್ತಿಗೆ ಬರುವುದರಿಂದ ಹೆಚ್ಚಿನ ಪೈಪೋಟಿ ತಗಲುವ ಬಗ್ಗೆ ಹಾಗೂ ನಿಗಮದಲ್ಲಿ Price Escalation Clause ಪರಿಗಣಿಸದಿರುವ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿ ಸಮಿತಿಯು, ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಹೆಚ್ಚಾಗಿದ್ದರೂ ಸಹ ಶೇಕಡ 10.00% ಕ್ಕೂ ಅಧಿಕವಾಗಿ ನಮೂದಿಸಿರುವ ಮೊತ್ತವಾಗಿದ್ದಲ್ಲಿ ಸಂಧಾನದ ಪ್ರಕ್ರಿಯೆ ನಡೆಸಿ ಕ್ರಮ ಜರುಗಿಸಲು ಸೂಚಿಸಿ ಅದರಂತೆ ಗುತ್ತಿಗೆದಾರರಾದ ಶ್ರೀ ಆರ್. ಲೊಕೇಶ್ ರವರಿಗೆ ಕಾಮಗಾರಿಯನ್ನು ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ BA 3/5

000402

165/04 ಜಿಗಣಿ 2ನೇ ಹಂತ, ಆನೇಕಲ್ ತಾಲ್ಲೂಕು ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ನಾರಾಯಣಪ್ಪ. ಹೆಚ್ (ಹನುಮಂತಯ್ಯ ನಾರಾಯಣಪ್ಪ) ನಮೂದಿಸಿರುವ ಮೊತ್ತ **ರೂ. 2,20,30,680.00** ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,93,36,652.2 ಗಳಿಗೆ ಶೇಕಡ (+) 13.638% **ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ ನಾರಾಯಣಪ್ಪ. ಹೆಚ್ (ಹನುಮಂತಯ್ಯ ನಾರಾಯಣಪ್ಪ) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/05 ರಾಮನಗರ ಜಿಲ್ಲೆ, ಮಾಗಡಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಜಿ. ಹೆಚ್. ನಾಗರಾಜು ನಮೂದಿಸಿರುವ ಮೊತ್ತ ರೂ. 1,00,47,492.00 ಗಳು ಟೆಂಡರಿಗಿಟ್ಟ ಮೊತ್ತವಾದ **ರೂ. 1,02,87,667.10** ಗಳಿಗೆ **ಶೇಕಡ** (-) 2.528% ಕಡಿಮೆ ಇರುವುದನ್ನು ಗಮನಿಸಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಭರಿಸಿಕೊಂಡು ಕಾಮಗಾರಿಯನ್ನು ಶ್ರೀ ಜಿ. ಹೆಚ್. ನಾಗರಾಜು ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/06 ಹಾಸನ ಜಿಲ್ಲೆ, ಹೊಳೆನರಸೀಪುರ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಹೆಚ್. ಎಂ. ತಿಮ್ಮೇಗೌಡ ನಮೂದಿಸಿರುವ ಮೊತ್ತ ರೂ. 1,34,25,820.00 ಗಳು ಟೆಂಡರಿಗಿಟ್ಟ ಮೊತ್ತವಾದ **ರೂ. 1,17,42,488.95** ಗಳಿಗೆ **ಶೇಕಡ** (+) 14.335% **ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ ಹೆಚ್. ಎಂ. ತಿಮ್ಮೇಗೌಡ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/07 ಮಂಗಳೂರು ಜಿಲ್ಲೆ, ಯಯ್ಯಾಡಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಉದಯ ಶೆಟ್ಟಿ (ಯು.ಎಸ್.ಕೆ ಕನ್ಸ್ಟ್ರಕ್ಷನ್ ಕಂಪನಿ ಡಿಪಿ) ನಮೂದಿಸಿರುವ ಮೊತ್ತ **ರೂ. 6,32,60,796.00** ಗಳು ಟೆಂಡರಿಗಿಟ್ಟ ಮೊತ್ತವಾದ **ರೂ. 5,64,92,081.39** ಗಳಿಗೆ **ಶೇಕಡ** (+) 11.981% **ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ ಉದಯ ಶೆಟ್ಟಿ (ಯು.ಎಸ್.ಕೆ ಕನ್ಸ್ಟ್ರಕ್ಷನ್ ಕಂಪನಿ ಡಿಪಿ) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ

165/08 **ಉಡುಪಿ ಜಿಲ್ಲೆ, ಮಣಿಪಾಲ್ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಹಾಲಾಡಿ ದಯಾನಂದ ಶೆಟ್ಟಿ (ಮೆ. ಮಂಜುಶ್ರೀ ಕನ್‌ಸ್ಟ್ರಕ್ಷನ್ಸ್) ನಮೂದಿಸಿರುವ ಮೊತ್ತ ರೂ. 2,24,01,388.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 2,10,35,913.76 ಗಳಿಗೆ **ಶೇಕಡ (+) 6.491% ಹೆಚ್ಚುವರಿ** ಇರುವುದನ್ನು ಗಮನಿಸಿ ಗುತ್ತಿಗೆದಾರರು ಸೂಚಿಸಿರುವ ಮೊತ್ತವು ಸ್ಪರ್ಧಾತ್ಮಕವಾಗಿರುವುದರಿಂದ ಕಾಮಗಾರಿಯನ್ನು ಶ್ರೀ. ಹಾಲಾಡಿ ದಯಾನಂದ ಶೆಟ್ಟಿ (ಮೆ. ಮಂಜುಶ್ರೀ ಕನ್‌ಸ್ಟ್ರಕ್ಷನ್ಸ್) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/09 **ಮೈಸೂರು ಜಿಲ್ಲೆ, ಹೆಬ್ಬಾಳ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ತ್ಯಾಗರಾಜು. ಸಿ ನಮೂದಿಸಿರುವ ಮೊತ್ತ ರೂ. 2,39,91,350.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 2,08,62,900.73 ಗಳಿಗೆ **ಶೇಕಡ (+) 4.995% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ತ್ಯಾಗರಾಜು. ಸಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/10 **ಶಿವಮೊಗ್ಗ ಜಿಲ್ಲೆ, ಹೊಸನಗರ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಕೃಷ್ಣ ನಮೂದಿಸಿರುವ ಮೊತ್ತ ರೂ. 91,56,533.65 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. **80,32,072.65** ಗಳಿಗೆ **ಶೇಕಡ (+) 14.00% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಕೃಷ್ಣ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/11 **ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಹೆಚ್. ಎಂ. ತಿಮ್ಮೇಗೌಡ ನಮೂದಿಸಿರುವ ಮೊತ್ತ ರೂ. 2,45,47,850.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 2,15,77,437.89 ಗಳಿಗೆ **ಶೇಕಡ (+) 13.766% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ ಹೆಚ್. ಎಂ. ತಿಮ್ಮೇಗೌಡ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ BAV 3/5

165/12 ಚಿಕ್ಕಮಗಳೂರು ಜಿಲ್ಲೆ, ಜೀರೂರು ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಎಂ. ವೆಂಕಟಾಚಲಪತಿ (ಮೆ. ವಸಗ ಇನ್‌ಫ್ರಾ ಪ್ರಾಜೆಕ್ಟ್ಸ್ ಎಲ್.ಎಲ್.ಪಿ) ನಮೂದಿಸಿರುವ ಮೊತ್ತ ರೂ. 1,87,51,282.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,75,91,070.36 ಗಳಿಗೆ **ಶೇಕಡ (+) 6.595% ಹೆಚ್ಚುವರಿ** ಇರುವುದನ್ನು ಗಮನಿಸಿ ಗುತ್ತಿಗೆದಾರರು ಸೂಚಿಸಿರುವ ಮೊತ್ತವು ಸ್ಪರ್ಧಾತ್ಮಕವಾಗಿರುವುದರಿಂದ ಕಾಮಗಾರಿಯನ್ನು ಶ್ರೀ. ಎಂ. ವೆಂಕಟಾಚಲಪತಿ (ಮೆ. ವಸಗ ಇನ್‌ಫ್ರಾ ಪ್ರಾಜೆಕ್ಟ್ಸ್ ಎಲ್.ಎಲ್.ಪಿ) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/13 ಹಾಸನ ಜಿಲ್ಲೆ, ಚನ್ನರಾಯಪಟ್ಟಣ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಜ್ಞಾನೇಂದ್ರ ಮೂರ್ತಿ ಎಂ. ಡಿ ನಮೂದಿಸಿರುವ ಮೊತ್ತ ರೂ. 39,63,563.60 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 39,70,818.36 ಗಳಿಗೆ **ಶೇಕಡ (–) 0.166%** ಕಡಿಮೆ ಇರುವುದನ್ನು ಗಮನಿಸಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಭರಿಸಿಕೊಂಡು ಕಾಮಗಾರಿಯನ್ನು ಶ್ರೀ. ಜ್ಞಾನೇಂದ್ರ ಮೂರ್ತಿ ಎಂ. ಡಿ. ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/14 ಧಾರವಾಡ ಜಿಲ್ಲೆ, 1 ಮತ್ತು 2ನೇ ಹಂತ ಹುಬ್ಬಳ್ಳಿ, ಎಂ.ಟಿ. ಸಾಗರ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಬಿ. ಹೆಚ್. ರಾಮಚಂದ್ರ ನಮೂದಿಸಿರುವ ಮೊತ್ತ ರೂ. 16,03,93,393.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 14,13,15,768.30 ಗಳಿಗೆ **ಶೇಕಡ (+) 13.499% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಬಿ. ಹೆಚ್. ರಾಮಚಂದ್ರ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ

000399

165/15 ಗದಗ ಜಿಲ್ಲೆ, ಗದಗ ಬೆಟಗೇರಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ.ಬಿರಾದಾರ್ ಚಂದ್ರಶೇಖರ್ ಗುರಪ್ಪ ನಮೂದಿಸಿರುವ ಮೊತ್ತ ರೂ. 66,76,033.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 74,09,624.11 ಗಳಿಗೆ ಶೇಕಡ (-) 9.900% ಕಡಿಮೆ ಇರುವುದನ್ನು ಗಮನಿಸಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಭರಿಸಿಕೊಂಡು ಕಾಮಗಾರಿಯನ್ನು ಶ್ರೀ.ಬಿರಾದಾರ್ ಚಂದ್ರಶೇಖರ್ ಗುರಪ್ಪ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/16 ಗದಗ ಜಿಲ್ಲೆ, ಗಜೇಂದ್ರಗಡ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಕೃಷ್ಣ ಎಂ. ಕೊಂಗಿ ನಮೂದಿಸಿರುವ ಮೊತ್ತ ರೂ. 56,65,894.59 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 50,31,999.75 ಗಳಿಗೆ ಶೇಕಡ (+) 12.597% ಹೆಚ್ಚುವರಿ ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಕೃಷ್ಣ ಎಂ. ಕೊಂಗಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/17 ಗದಗ ಜಿಲ್ಲೆ, ಲಕ್ಷ್ಮೇಶ್ವರ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಮಡಿವಾಳಪ್ಪ ಎಂ ಮುಂಡೇವಾಡಗಿ ನಮೂದಿಸಿರುವ ಮೊತ್ತ ರೂ. 1,10,33,766.78 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,01,41,062.50 ಗಳಿಗೆ ಶೇಕಡ (+) 8.802% ಹೆಚ್ಚುವರಿ ಇರುವುದನ್ನು ಗಮನಿಸಿ ಗುತ್ತಿಗೆದಾರರು ಸೂಚಿಸಿರುವ ಮೊತ್ತವು ಸಾರ್ಥಾತ್ಮಕವಾಗಿರುವುದರಿಂದ ಕಾಮಗಾರಿಯನ್ನು ಶ್ರೀ. ಮಡಿವಾಳಪ್ಪ ಎಂ ಮುಂಡೇವಾಡಗಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ಸಿ

000398 165/18 **ಬೆಳಗಾವಿ ಜಿಲ್ಲೆ, ಮಜಲಟ್ಟಿಯಲ್ಲಿ ನೂತನ ಕೈಗಾರಿಕಾ ವಸಾಹತು ಸ್ಥಾಪನೆ ಮತ್ತು ಅಭಿವೃದ್ಧಿ ಕಾಮಗಾರಿ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಹಿಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಮಡಿವಾಳಪ್ಪ ಎಂ ಮುಂಡೇವಾಡಗಿ ನಮೂದಿಸಿರುವ ಮೊತ್ತ ರೂ. 4,39,96,523.72 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 3,93,22,856.73 ಗಳಿಗೆ ಶೇಕಡ (+) 11.885% ಹೆಚ್ಚುವರಿ ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಮಡಿವಾಳಪ್ಪ ಎಂ ಮುಂಡೇವಾಡಗಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/19 **ಬೆಳಗಾವಿ ಜಿಲ್ಲೆ, ಉದ್ಯಮಬಾಗ್ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ಉದ್ಯಮಬಾಗ್ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗೆ ಧಾರವಾಡ ಬೆಂಚಿನ ಘನ ನ್ಯಾಯಾಲಯದಲ್ಲಿ ರಿಟ್ ಸಂಖ್ಯೆ 107010/2019 ರಂತೆ ತಡೆಯಾಜ್ಞೆ ಇರುವ ಬಗ್ಗೆ ಗಮನಿಸಿ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ಘನ ನ್ಯಾಯಲಯದ ತೀರ್ಮಾನ ಹೊರಬಿದ್ದ ನಂತರ ಅದರಂತೆ ಸೂಕ್ತ ಕ್ರಮ ಕೈಗೊಂಡು ಟೆಂಡರ್ ವಿಲೇವಾರಿಗೆ ತೀರ್ಮಾನ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿ ಕೈಗೊಂಡ ಕ್ರಮದ ಬಗ್ಗೆ ಮುಂದಿನ ತಾಂತ್ರಿಕ ಉಪ ಸಮಿತಿ ಸಭೆಗೆ ವಿಷಯವನ್ನು ಮಂಡಿಸಲು ಸೂಚಿಸಿತು.

165/20 **ಕಲಬುರ್ಗಿ ಜಿಲ್ಲೆ, ಸೇಡಮ್ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಹಿಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಗೋಲಯ್ಯ ಹಿರೇಮಠ್ ನಮೂದಿಸಿರುವ ಮೊತ್ತ ರೂ. 3,16,77,762.90 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 2,86,67,585.47 ಗಳಿಗೆ ಶೇಕಡ (+) 10.500% ಹೆಚ್ಚುವರಿ ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಗೋಲಯ್ಯ ಹಿರೇಮಠ್ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ

165/21 **ಬೀದರ್ ಜಿಲ್ಲೆ, ನವಬಾದ್–ಬೀದರ್ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಜಗದೀಶ್ ಖುಬಾ ನಮೂದಿಸಿರುವ ಮೊತ್ತ ರೂ. 1,58,35,915.70 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,35,54464.38 ಗಳಿಗೆ **ಶೇಕಡ (+) 16.831% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಜಗದೀಶ್ ಖುಬಾ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/22 **ಕಲಬುರ್ಗಿ ಜಿಲ್ಲೆ, ಕಪನೂರ್ 2ನೇ ಹಂತ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಹನಮೇಗೌಡ ಸಿ. ತಮ್ಮನಗೌಡ ನಮೂದಿಸಿರುವ ಮೊತ್ತ ರೂ. 1,89,78,996.85 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,65,75,537.13 ಗಳಿಗೆ **ಶೇಕಡ (+) 14.500% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಹನಮೇಗೌಡ ಸಿ. ತಮ್ಮನಗೌಡ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/23 **ಬಳ್ಳಾರಿ ಜಿಲ್ಲೆ, ಬಳ್ಳಾರಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಪಿ. ಬಾಬು (ಮೆ. ತಿರುಮಲ ಕನ್‌ಸ್ಟ್ರಕ್ಷನ್ಸ್) ನಮೂದಿಸಿರುವ ಮೊತ್ತ ರೂ. 1,85,18,841.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 1,59,09,843.00 ಗಳಿಗೆ **ಶೇಕಡ (+) 16.398% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಪಿ. ಬಾಬು (ಮೆ. ತಿರುಮಲ ಕನ್‌ಸ್ಟ್ರಕ್ಷನ್ಸ್) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ

BN 3/5

165/24 **ಬಳ್ಳಾರಿ ಜಿಲ್ಲೆ, ಹೊಸಪೇಟೆ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ತ್ಯಾಗರಾಜು. ಸಿ ನಮೂದಿಸಿರುವ ಮೊತ್ತ ರೂ. 6,06,41,484.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 5,41,46,120.66 ಗಳಿಗೆ **ಶೇಕಡ (+)11.995% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ತ್ಯಾಗರಾಜು. ಸಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/25 **ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಗೋವಿಂದರಾಜು. ಕೆ ನಮೂದಿಸಿರುವ ಮೊತ್ತ ರೂ. 91,79,337.30 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 77,13,765.82 ಗಳಿಗೆ **ಶೇಕಡ (+) 18.999% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಗೋವಿಂದರಾಜು. ಕೆ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/26 **ಚಾಮರಾಜನಗರ ಜಿಲ್ಲೆ, ಉತ್ತುವಳ್ಳಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಚಂದ್ರಶೇಖರ್. ಎಲ್ ನಮೂದಿಸಿರುವ ಮೊತ್ತ ರೂ. 69,41,240.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 69,44,975.70 ಗಳಿಗೆ **ಶೇಕಡ (-) 0.053%** ಕಡಿಮೆ ಇರುವುದನ್ನು ಗಮನಿಸಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಭರಿಸಿಕೊಂಡು ಕಾಮಗಾರಿಯನ್ನು ಶ್ರೀ. ಚಂದ್ರಶೇಖರ್. ಎಲ್ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/27 **ಬಾಗಲಕೋಟೆ ಜಿಲ್ಲೆ, ಹುನಗುಂದ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಮಹೇಶ್ ಕುಮಾರ್ ಗೊನ್ವಾರ್ (ಮೆ. ಜಿ ಮಲ್ಲಪ್ಪ ರೆಡ್ಡಿ & ಕಂಪನಿ) ನಮೂದಿಸಿರುವ ಮೊತ್ತ ರೂ. 2,83,18,583.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 2,43,91,536.05 ಗಳಿಗೆ ಶೇಕಡ (+) 16.100% ಹೆಚ್ಚುವರಿ ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಮಹೇಶ್ ಕುಮಾರ್ ಗೊನ್ವಾರ್ (ಮೆ. ಜಿ ಮಲ್ಲಪ್ಪ ರೆಡ್ಡಿ & ಕಂಪನಿ) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ವ್ಯ. ನಿ

3/5

165/28 **ಧಾರವಾಡ ಜಿಲ್ಲೆ, ಬೇಲೂರು ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಎನ್. ಐ. ಶೆಟ್ಟಿ ನಮೂದಿಸಿರುವ ಮೊತ್ತ ರೂ. 67,95,030.00 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 75,07,768.65 ಗಳಿಗೆ **ಶೇಕಡ** (-) 9.49% ಕಡಿಮೆ ಇರುವುದನ್ನು ಗಮನಿಸಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಭರಿಸಿಕೊಂಡು ಕಾಮಗಾರಿಯನ್ನು ಶ್ರೀ. ಎನ್. ಐ. ಶೆಟ್ಟಿ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/29 **ರಾಮನಗರ ಜಿಲ್ಲೆಯ, ಚನ್ನಪಟ್ಟಣ ಕೈಗಾರಿಕಾ ವಸಾಹತುವಿನಲ್ಲಿ** Improvements to flooring in CFC Building at Crafts Park, Thagachagere **ಕಾಮಗಾರಿಯ ಬಗ್ಗೆ.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಕೆ. ಜಿ. ಚಂದ್ರನಾಯಕ್ ನಮೂದಿಸಿರುವ ಮೊತ್ತ ರೂ. 26,25,096.09 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 23,02,713.58 ಗಳಿಗೆ **ಶೇಕಡ** (+) 14.000% **ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಕೆ. ಜಿ. ಚಂದ್ರನಾಯಕ್ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/30 **Construction of M. S. Complex at Industrial Estate Rajajinagar (in place of existing old Canteen building) ಕಾಮಗಾರಿಯ ಬಗ್ಗೆ.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಅಂದಾಜು ಪಟ್ಟಿಯನ್ನು 2016-17ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯಂತೆ ತಯಾರಿಸಲಾಗಿದ್ದು ಜಿ.ಎಸ್.ಟಿ ವ್ಯತ್ಯಾಸದ ಮೊತ್ತವನ್ನು ಪ್ರತ್ಯೇಕವಾಗಿ ನೀಡಬೇಕಾಗಿರುವ ಅಂಶ ಮತ್ತು ಕಟ್ಟಡ ನಿರ್ಮಾಣವು ರಾಜಾಜಿನಗರ ಕೈಗಾರಿಕಾ ವಸಾಹತುವಿನ ಕೇಂದ್ರ ಭಾಗದಲ್ಲಿ ಇದ್ದು ಕಟ್ಟಡ ಸಾಮಾಗ್ರಿಗಳ ಕ್ಲಿಷ್ಟ ಸಾಗಾಣಿಕೆ ಇತ್ಯಾದಿ ಅಂಶಗಳನ್ನು ಗಮನಿಸಿ ಚರ್ಚಿಸಲಾಯಿತು.

ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಠ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ. ಭರತ್ ಅತ್ತಾವರ ನಮೂದಿಸಿರುವ ಮೊತ್ತ ರೂ. 5,87,81,296.63 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. 4,98,14,638.56 ಗಳಿಗೆ **ಶೇಕಡ** (+) 18.00% **ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ. ಭರತ್ ಅತ್ತಾವರ ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

ಕೃ. ನಿ BN 3/5

165/31 ಬೆಂಗಳೂರು ಜಿಲ್ಲೆ, ಪೀಣ್ಯ 2ನೇ ಹಂತದ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ. (CID Phase-2)

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ವಿಷಯ ಸಂಖ್ಯೆ 165/03 ರಂತೆ ಮುಂದುವರೆದು ಕನಿಷ್ಟ ದರ ಸೂಚಿಸಿರುವ L-1 ಗುತ್ತಿಗೆದಾರರಾದ ಶ್ರೀ ಎಸ್. ಅಬ್ದುಲ್ ಖಾದರ್ (ಮೆ. ಲಿಯಾ ಇನ್‌ಫ್ರಾಟೆಕ್ ಪ್ರೈ. ಲಿ.) ನಮೂದಿಸಿರುವ ಮೊತ್ತ ರೂ. 26,72,39,100.71 ಗಳು ಟೆಂಡರಿಗಿಟ್ಟ ಮೊತ್ತವಾದ ರೂ. **22,66,65,301.63** ಗಳಿಗೆ **ಶೇಕಡ (+) 17.900% ಹೆಚ್ಚುವರಿ** ಇರುವುದನ್ನು ಗಮನಿಸಿ ಸಂಧಾನ ನಡೆಸಿ ಕಾಮಗಾರಿಯನ್ನು ಶ್ರೀ ಎಸ್. ಅಬ್ದುಲ್ ಖಾದರ್ (ಮೆ. ಲಿಯಾ ಇನ್‌ಫ್ರಾಟೆಕ್ ಪ್ರೈ. ಲಿ.) ರವರಿಗೆ ವಹಿಸಲು ಸಮಿತಿಯು ಅನುಮೋದಿಸಿತು.

165/32 ರಾಮನಗರ ಜಿಲ್ಲೆ ಕನಕಪುರ, ಕೈಗಾರಿಕಾ ವಸಾಹತು ಹಂತ-2 ರಲ್ಲಿ ಖಾಲಿ ಹಾಗೂ ಹಳೆಯ ಕಟ್ಟಡಗಳಿರುವ ಜಾಗವನ್ನು ಸೂಕ್ತ ನಿವೇಶನವನ್ನಾಗಿ ವಿಂಗಡಿಸಿದ ಪರಿಷ್ಕೃತ ಲೇಔಟ್ ಅನುಮೋದಿಸುವ ಬಗ್ಗೆ.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ರಾಮನಗರ ಜಿಲ್ಲೆ ಕನಕಪುರ 2ನೇ ಹಂತದ ಕೈಗಾರಿಕಾ ವಸಾಹತುವಿನಲ್ಲಿ ಒಟ್ಟು 7.14 ಎಕರೆ ಜಾಗವನ್ನು ಕೆ.ಎಸ್.ಐ.ಸಿ ರವರಿಂದ ಪಡೆದು ಇದರಲ್ಲಿ ಸುಮಾರು 4.43 ಎಕರೆ ಪ್ರದೇಶದಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲಾಗಿರುತ್ತದೆ. ಉಳಿದ ಸುಮಾರು 2.71 ಎಕರೆ ವಿಸ್ತೀರ್ಣದಲ್ಲಿ 4 ಹಳೆಯ ಕಟ್ಟಡಗಳನ್ನೊಳಗೊಂಡಂತೆ ಖಾಲಿ ಜಾಗವು ಇರುತ್ತದೆ. ಈ ಜಾಗವು ಕನಕಪುರ-ಸಂಗಮ ಮುಖ್ಯ ರಸ್ತೆಯಲ್ಲಿದ್ದು ಮುಂಭಾಗದ ನಿವೇಶನ ಸಂಖ್ಯೆ ಸ್ಪೆಷಲ್-33 ಮತ್ತು ಸ್ಪೆಷಲ್-34 ಜಾಗವನ್ನು ನಿಗಮದ ವಾಣಿಜ್ಯ ಉದ್ದೇಶಕ್ಕೆ ಮೀಸಲಿರಿಸಿ ಉಳಿದಂತೆ ಹಿಂಭಾಗದ ನಿವೇಶನಗಳಲ್ಲಿರುವ ಕಟ್ಟಡಗಳನ್ನು ಯಥಾಸ್ಥಿತಿಯಲ್ಲಿರುವಂತೆ ಉಳಿಸಿಕೊಂಡು ಸೂಕ್ತ ನಿವೇಶನಗಳಾಗಿ ವಿಂಗಡಿಸಿ ಕೈಗಾರಿಕಾ ಉದ್ದೇಶಕ್ಕೆ ಹಂಚಿಕೆ ಮಾಡುವ ಬಗ್ಗೆ ಸಮಿತಿಯು ಅಭಿಪ್ರಾಯಿಸಿತು. ಅದರಂತೆ, ಲೇಔಟ್ ನಕ್ಷೆಯಲ್ಲಿ ಸೂಕ್ತ ಮಾರ್ಪಾಡು ಮಾಡಿ ಅನುಮೋದಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲಾಯಿತು.

165/33 ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಚಿಕ್ಕಹೊಸಹಳ್ಳಿ ಸರ್ವೆ ನಂ: 112 ರ 19.00 ಎಕರೆ ಜಾಗದಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಿ ಅಭಿವೃದ್ಧಿ ಪಡಿಸುವ ಕಾಮಗಾರಿಯ ಅವಧಿ ವಿಸ್ತರಣೆ ಬಗ್ಗೆ.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಗುತ್ತಿಗೆದಾರರಿಗೆ ಕಾಮಗಾರಿ ಗುರುತು ಗೆರೆಯನ್ನು ದಿನಾಂಕ 21-12-2015 ರಂದು ನೀಡಲಾಗಿರುತ್ತದೆ. ಗುರುತು ಗೆರೆ ನೀಡುವ ಸಂದರ್ಭದಲ್ಲಿ ಸ್ಥಳೀಯರಿಂದ ಈ ಜಾಗವು ಈಗಾಗಲೇ ಎಸ್.ಸಿ/ ಎಸ್.ಟಿ ಜನಾಂಗದವರಿಗೆ ಹಂಚಿಕೆಯಾಗಿರುವುದಾಗಿ ತಿಳಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದು ನಂತರ ಮಾನ್ಯ ವಿಧಾನಸಭಾ ಶಾಸಕರು, ಆನೇಕಲ್ ತಾಲ್ಲೂಕು ರವರು ಸ್ಥಳೀಯರೊಂದಿಗೆ ಚರ್ಚಿಸಿ ಕಾಮಗಾರಿಯನ್ನು ಮುಂದುವರೆಸಲು ಸೂಚಿಸಿದ ಹಿನ್ನೆಲೆಯಲ್ಲಿ ದಿನಾಂಕ 20-07-2016 ರಂದು ಪರಿಷ್ಕೃತ ಗುರುತು ಗೆರೆಯನ್ನು ನೀಡಲಾಗಿರುತ್ತದೆ.

ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿದ ನಂತರ ಅನೇಕ ಬಾರಿ ಸ್ಥಳೀಯರು ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಕಾಮಗಾರಿ ಮುಂದುವರೆಸಲು ಸಾಧ್ಯವಾಗದೆ ಗುತ್ತಿಗೆದಾರರಿಗೆ ದಿನಾಂಕ 29-02-2018 ರಂದು ನಡೆದ 163ನೇ ತಾಂತ್ರಿಕ ಉಪ ಸಮಿತಿ ಸಭೆಯು ಮೂರನೇ ಬಾರಿಗೆ ಕಾಲಾವಧಿ ವಿಸ್ತರಣೆಯನ್ನು ದಿನಾಂಕ 30-06-2018 ರವರೆಗೆ ದಂಡ ರಹಿತವಾಗಿ ನೀಡಲಾಗಿರುತ್ತದೆ.

ವ್ಯ. ನಿ

ನಿಗಮದ ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ ರವರು ಆನೇಕಲ್ ತಾಲ್ಲೂಕು ಚಿಕ್ಕಹೊಸಹಳ್ಳಿ ಕೈಗಾರಿಕಾ ವಸಾಹತುವಿಗೆ ದಿನಾಂಕ 15-02-2019 ರಂದು ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿ ಸ್ಥಗಿತಗೊಂಡಿರುವುದನ್ನು ಗಮನಿಸಿ ಸದರಿ ವಿಷಯದ ಬಗ್ಗೆ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರಿಗೆ ದಿನಾಂಕ 01-07-2018 ರಿಂದ 31-10-2019 ರ ವರೆಗೆ ದಂಡ ರಹಿತವಾಗಿ ಕಾಲಾವಧಿ ವಿಸ್ತರಣೆಗೆ ನೀಡುವ ಬಗ್ಗೆ ಸಮಿತಿಯು ಒಪ್ಪಿಗೆ ಸೂಚಿಸಿತು.

ಮುಂದುವರೆದು, ಗುತ್ತಿಗೆದಾರರು ಕಾಮಗಾರಿಯನ್ನು ಮರು ಪ್ರಾರಂಭಿಸುವ ವೇಳೆ ದರ ಹೆಚ್ಚಳದ (Price Escalation) ಬಗ್ಗೆ ಗುತ್ತಿಗೆದಾರರಿಂದ ಬೇಡಿಕೆ ಬಂದಲ್ಲಿ ಇದನ್ನು ಪರಿಗಣಿಸಿ ಸೂಕ್ತ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಮಿತಿಯು ಅಧಿಕಾರ ನೀಡಿತು.

165/34 ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಸರ್ವೆ ನಂ: 181/1 ರಿಂದ 181/11 ರ ವರೆಗೆ 7.00 ಎಕರೆ 31 ಗುಂಟೆ ಜಾಗದಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಿ ಮೂಲಭೂತ ಸೌಕರ್ಯಗಳ ಉನ್ನತೀಕರಣಗೊಳಿಸಲಾದ ಕಾಮಗಾರಿ/ ಪರಿಷ್ಕೃತ ಲೇಔಟ್ ನಕ್ಷೆ ಬಗ್ಗೆ.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ನಾಗಮಂಗಲದಲ್ಲಿ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ ಕೈಗೊಂಡ ಸಂದರ್ಭದಲ್ಲಿ ಮೂಲ ಲೇಔಟ್ ನಕ್ಷೆಯಲ್ಲಿನ 5ನೇ ಅಡ್ಡರಸ್ತೆ ಕಾಮಗಾರಿಗೆ ಸ್ಥಳೀಯ ರೈತರು ಅಡಚಣೆ ಮಾಡಿದ ಪ್ರಯುಕ್ತ ಈ ರಸ್ತೆಯನ್ನು ಹೊರತುಪಡಿಸಿ ಕಾಮಗಾರಿ ಪೂರೈಸಲಾಗಿರುತ್ತದೆ. ಇದರಿಂದ ನಿವೇಶನಗಳ ಅಳತೆಗಳನ್ನು ಪರಿಷ್ಕರಿಸಿ ಪರಿಷ್ಕೃತ ನಿವೇಶನಗಳಿಗೆ ಹಾಲಿ ರಸ್ತೆಗಳ ಸಂಪರ್ಕ ಕಲ್ಪಿಸಿ ಅಭಿವೃದ್ಧಿ ಪಡಿಸಲಾಗುತ್ತದೆ. ಪರಿಷ್ಕೃತ ಲೇಔಟ್ ನಕ್ಷೆಯಲ್ಲಿ ಒಟ್ಟು 32 ಸಂಖ್ಯೆ ವಿಶೇಷ ನಿವೇಶನಗಳು ಲಭ್ಯವಾಗುತ್ತಿದ್ದು ಹಾಲಿ ಪ್ರಸ್ತುತ ಲೇಔಟ್ ನಕ್ಷೆಯನ್ನು ಸಮಿತಿಯು ಮುಂದೆ ಮಂಡಿಸಲಾಗಿದ್ದು ಪರಿಷ್ಕೃತ ಲೇಔಟ್ ನಕ್ಷೆಯ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಸಮಿತಿಯು 5ನೇ ಅಡ್ಡರಸ್ತೆಯ ಕಾಮಗಾರಿಯನ್ನು ಸ್ಥಗಿತಗೊಳಿಸಿ ಹಾಗೂ ಲೇಔಟ್‌ನ ಮೂಲನಕ್ಷೆಯಲ್ಲಿ ಕೈಬಿಟ್ಟು ಹಾಲಿ ಇರುವ ನಕ್ಷೆಯನ್ನು ಕೈಗಾರಿಕಾ ವಸಾಹತುವಿನ ಇಂದಿನ ವಸ್ತುಸ್ಥಿತಿಗೆ ಅನುಗುಣವಾಗಿ ನಿವೇಶನ ಅಳತೆಗಳನ್ನು ನಕ್ಷೆಯಲ್ಲಿ ಮಾರ್ಪಡಿಸಿ ಅನುಮತಿ ನೀಡಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿತು.

165/35 ರಾಯಚೂರು ಜಿಲ್ಲೆ, ಲಿಂಗಸೂಗೂರು ಕೈಗಾರಿಕಾ ವಸಾಹತುವಿನಲ್ಲಿ ಲೇಔಟ್ ಮಾರ್ಪಾಡು ಕುರಿತು.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ಲಿಂಗಸೂಗೂರು ಒಟ್ಟು ವಿಸ್ತೀರ್ಣ 5.00 ಎಕರೆ ಇದ್ದು 2016-17ನೇ ಸಾಲಿನ ಉನ್ನತೀಕರಣ ಕಾಮಗಾರಿ ಕೈಗೊಂಡಾಗ ಕೈಗಾರಿಕಾ ವಸಾಹತುವಿನ ತಗ್ಗಿನ ಜಾಗದಲ್ಲಿ ನೀರು ನಿಲ್ಲುವ ಸ್ಥಳದಲ್ಲಿ ಆರ್.ಸಿ.ಸಿ ತಡೆಗೋಡೆ ನಿರ್ಮಿಸಿದ ಕಾರಣ ಹೆಚ್ಚುವರಿಯಾಗಿ 6 ಸಂಖ್ಯೆ ನಿವೇಶನಗಳು ಲಭ್ಯವಾಗಿರುವ ಅಂಶವನ್ನು ಸಮಿತಿಯು ಗಮನಿಸಿತು. ಲೇಔಟ್‌ನ ಗಡಿಯಲ್ಲಿ ಕೇವಲ 1.00 ಮೀ ಬಫರ್‌ಜೋನ್ ಪ್ರಸ್ತಾಪಿಸಿರುವ ಬಗೆಗಿನ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಕನಿಷ್ಟ 3.00 ಮೀ ಅಗಲದ ಬಫರ್‌ಜೋನ್‌ಗೆ ಜಾಗಿ ಮೀಸಲಿರಿಸಿ ಅದರಂತೆ ನಿವೇಶನಗಳ ಅಳತೆಗಳನ್ನು ಮಾರ್ಪಾಡು ಮಾಡಿ ಅದರಂತೆ ಪರಿಷ್ಕೃತ ಲೇಔಟ್‌ಗೆ ಅನುಮೋದನೆ ನೀಡಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಮಿತಿಯು ಅಧಿಕಾರ ನೀಡಿತು.

ವ್ಯ. ನಿ

165/36 **ದಕ್ಷಿಣ ಕನ್ನಡ ಜಿಲ್ಲೆ, ಮೂಡಬಿದರೆ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ ವಹಿಸಿದ ಬಗ್ಗೆ ಘಟನೋತ್ತರ ಅನುಮೋದನೆ ಕುರಿತು.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ಮೂಡಬಿದರೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯ ಕಾರ್ಯಾದೇಶವನ್ನು ಗುತ್ತಿಗೆದಾರರಾದ ಶ್ರೀ. ಬಿ. ಎಂ. ಮಂಜಪ್ಪರವರಿಗೆ ಬೆಂಡರಿಗಿಟ್ಟ ಮೊತ್ತ ರೂ. 1,96,00,297.35 ಗಳಿಗೆ ಶೇ. (-) 6.527)% ಕಡಿಮೆ ದರದಲ್ಲಿ ರೂ. 1,83,20,853.03 ಗಳಿಗೆ ವಹಿಸಲು ವ್ಯವಸ್ಥಾಪಕ ನಿರ್ದೇಶಕರು ಕೈಗೊಂಡ ಕ್ರಮದ ಬಗ್ಗೆ ಘಟನೋತ್ತರ ಅನುಮೋದನೆಗೆ ಸಮಿತಿಯು ಸಮ್ಮತಿಸಿತು. ಕಾಮಗಾರಿಯ ಕಾರ್ಯಾದೇಶವನ್ನು ದಿನಾಂಕ 11-06-2018 ರಲ್ಲಿ ನೀಡಲಾಗಿದ್ದು ದಿನಾಂಕ 16-07-2018 ರಲ್ಲಿ ಗುರುತು ಗೆರೆ ನೀಡಿ ಕಾಮಗಾರಿಯು ಪ್ರಾರಂಭವಾಗಿ ಮುಕ್ತಾಯದ ಹಂತದಲ್ಲಿರುವ ಅಂಶವನ್ನು ಸಮಿತಿಯು ಗಮನಿಸಿತು.

165/37 **Up-gradation of infrastructure like Asphalt Roads and Repairs to Side Drains, Water supply, Bore wells, Repairs to Electrical works etc., at I.E. Khanapur, Belagavi Dist. Reg-approval of extension time.**

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ಕೈಗಾರಿಕಾ ವಸಾಹತು ಖಾನಾಪುರದ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯು ಗುತ್ತಿಗೆದಾರರಾದ ಮೆ. ತರಾಡೆ ಬ್ರದರ್ಸ್ ಕನ್‌ಸ್ಟ್ರಕ್ಷನ್ ಪ್ರೈ.ಲಿ. ರವರಿಗೆ ವಹಿಸಲಾಗಿದ್ದು ಗುತ್ತಿಗೆದಾರರು ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿರುವ ಅಂಶವನ್ನು ಸಮಿತಿಯು ಗಮನಿಸಿತು. ಕಾಮಗಾರಿಯು 241 ದಿನಗಳ (132 %) ವಿಳಂಬವಾಗಿ ಪೂರ್ಣಗೊಂಡಿದ್ದು ವಿಳಂಬಿತ ಅವಧಿಗೆ ವಿಸ್ತರಣೆ ಕೋರಿರುವ ಹಿನ್ನೆಲೆಯಲ್ಲಿ ಕಾಮಗಾರಿಯ ವಿಳಂಬಿತ ಅವಧಿಗೆ ಉಂಟಾದ ಕಾರಣಗಳು ಮತ್ತು ಗುತ್ತಿಗೆದಾರರಿಂದ ವಿಳಂಬವನ್ನು ಪರಿಗಣಿಸಿ (ವಿಳಂಬ ಅವಧಿಯಲ್ಲಿನ ಮೊತ್ತಕ್ಕೆ) ಅಂತಿಮ ಬಿಲ್ಲುಗಳನ್ನು ಪಾವತಿಸಲು ರೂ. 12,500/- ಗಳ ನಾಮಿನಲ್ ದಂಡ ವಿಧಿಸಿ ಅವಧಿ ವಿಸ್ತರಣೆಯನ್ನು ದಿನಾಂಕ 02-02-2018 ರ ವರೆಗೆ ನೀಡಲು ಸಮಿತಿಯು ತೀರ್ಮಾನಿಸಿತು.

165/38 **Re-Metalling & Chip carpeting to the existing asphalted roads (damaged roads) at IE, Kapnoor 1st stage. – Payments of final bill –reg.**
Name of the Agency: Sri. Nithin B Joshi.

ಸಮಿತಿಯು ಕಾರ್ಯಸೂಚಿಯನ್ನು ಅವಲೋಕಿಸಿತು. ವಿಷಯವು ಗುತ್ತಿಗೆದಾರ ಶ್ರೀ ನಿತಿನ್ ಬಿ. ಜೋಷಿ ರವರಿಗೆ ಪಾವತಿಸಬೇಕಾದ ಬಿಲ್ಲಿಗೆ ಸಂಬಂಧಿಸಿದ ವಿಚಾರವಾಗಿದ್ದು ಇದರಲ್ಲಿ ತಾಂತ್ರಿಕ ಉಪ ಸಮಿತಿಯು ತೆಗೆದುಕೊಳ್ಳಬೇಕಾದ ತೀರ್ಮಾನ ಯಾವುದೂ ಇಲ್ಲದಿರುವ ಬಗ್ಗೆ ಚರ್ಚಿಸಿ ವಿಷಯವನ್ನು ಸಭೆಯ ನಡಾವಳಿಯಿಂದ ಕೈಬಿಡಲು ಸೂಚಿಸಿತು.

ವ್ಯ. ನಿ

ಸಮಿತಿಯಲ್ಲಿ ಚರ್ಚಿಸಿದ ಇತರೆ ವಿಷಯ:

ವಿಷಯ: ಆನೇಕಲ್ ತಾಲ್ಲೂಕು ಚಿಕ್ಕಹೊಸಹಳ್ಳಿ ಕೈಗಾರಿಕಾ ವಸಾಹತುವಿನಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ 4 'ಸಿ' ಮತ್ತು 4 'ಡಿ' ಮಾದರಿ ಮಳಿಗೆ ಹಾಗೂ ರಾಮನಗರ ಜಿಲ್ಲೆ ಕನಕಪುರ 2ನೇ ಹಂತ ಕೈಗಾರಿಕಾ ವಸಾಹತುವಿನಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿ 1 'ಸಿ' ಮಾದರಿ ಮಳಿಗೆಗಳ ನಿರ್ಮಾಣ. (2ನೇ ಹಂತ)

****

ವಿಷಯಕ್ಕೆ ಸಂಬಂಧಿಸಿದ ಕಾಮಗಾರಿಯನ್ನು ಶ್ರೀ. ಎಂ. ರಾಮಲಿಂಗಯ್ಯ ರವರಿಗೆ ರೂ. 1,58,50,082.89 ಗಳಿಗೆ ದಿನಾಂಕ 21-03-2018 ರ ಕಾಮಗಾರಿ ಆದೇಶ ಪತ್ರದಂತೆ ವಹಿಸಲಾಗಿತ್ತು.

ಮೇಲ್ಕಂಡ ಕಾಮಗಾರಿಗಳಿಗೆ ಕನಕಪುರ ಕೈಗಾರಿಕಾ ವಸಾಹತು 2ನೇ ಹಂತದಲ್ಲಿ 1 "ಸಿ" ಮಾದರಿ ಮಳಿಗೆಗೆ ದಿನಾಂಕ 21-05-2018 ರಂದು ಗುರುತು ಗೆರೆ ನೀಡಲಾಗಿದ್ದು ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ. ಉಳಿದಂತೆ ಚಿಕ್ಕಹೊಸಹಳ್ಳಿ ಕೈಗಾರಿಕಾ ವಸಾಹತುವಿನಲ್ಲಿ 4 "ಸಿ" ಹಾಗೂ 4 "ಡಿ" ಮಾದರಿ ಮಳಿಗೆಗಳಿಗೆ ಕೈಗಾರಿಕಾ ವಸಾಹತು ಸ್ಥಾಪಿಸಲು ಇದ್ದ ಭೂ ವ್ಯಾಜ್ಯ ಹಾಗೂ ನ್ಯಾಯಾಲಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಆದೇಶವಿದ್ದರಿಂದ ಕೈಗಾರಿಕಾ ವಸಾಹತು ಕಾಮಗಾರಿಯು ಸ್ಥಗಿತಗೊಂಡಿದ್ದು ಮಳಿಗೆ ಕಾಮಗಾರಿಗೆ ಗುರುತು ಗೆರೆಯನ್ನು ಈವರೆವಿಗೂ ನೀಡಲು ಸಾಧ್ಯವಾಗಿರುವುದಿಲ್ಲ.

"ಸಿ" ಮತ್ತು 'ಡಿ" ಮಳಿಗೆ ನಿರ್ಮಾಣ ಕಾಮಗಾರಿಗಳು ಎಸ್.ಸಿ.ಪಿ/ಟಿ.ಎಸ್.ಪಿ ಸರ್ಕಾರದ ಯೋಜನೆಯಡಿ ಕೈಗೊಂಡಿದ್ದು ಈಗಾಗಲೇ ಸುಮಾರು ಒಂದು ವರ್ಷಕ್ಕೂ ಹೆಚ್ಚು ವಿಳಂಬವಾಗಿದ್ದು ಸದರಿ ಕೈಗಾರಿಕಾ ವಸಾಹತು ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು ಪೂರೈಸಿದ ನಂತರ ಕೈಗೊಂಡಲ್ಲಿ ಮತ್ತೊಂದು ವರ್ಷ ವಿಳಂಬವಾಗುವ ಸಂಭವವಿರುವುದರಿಂದ ಚಿಕ್ಕಹೊಸಹಳ್ಳಿ ಕೈಗಾರಿಕಾ ವಸಾಹತುವಿನಲ್ಲಿ 4 "ಸಿ" ಹಾಗೂ 4 "ಡಿ" ಮಾದರಿ ಮಳಿಗೆಗಳ ಕಾಮಗಾರಿಯನ್ನು ರದ್ದುಗೊಳಿಸಿ ಈಗಾಗಲೇ ಕನಕಪುರ ಕೈಗಾರಿಕಾ ವಸಾಹತು 2ನೇ ಹಂತದಲ್ಲಿ ನಿರ್ಮಾಣಗೊಂಡಿರುವ 1 "ಸಿ" ಮಾದರಿ ಮಳಿಗೆಗೆ ಮಾತ್ರ ಸೀಮಿತಗೊಳಿಸಿ ಗುತ್ತಿಗೆದಾರರ ಬಿಲ್ಲನ್ನು ಅಂತಿಮಗೊಳಿಸಲು ಮುಖ್ಯ ವ್ಯವಸ್ಥಾಪಕ ನಿರ್ದೇಶಕರವರಿಗೆ ಸಮಿತಿಯು ಅಧಿಕಾರ ನೀಡಿತು.

ವಂದನಾರ್ಪಣೆಯೊಡನೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03/05

(ಹೆಚ್. ಪಿ. ಪ್ರಕಾಶ್, ಐ.ಎಫ್.ಎಸ್)
ವ್ಯವಸ್ಥಾಪಕ ನಿರ್ದೇಶಕರು ಹಾಗೂ
ತಾಂತ್ರಿಕ ಉಪ ಸಮಿತಿಯ ಅಧ್ಯಕ್ಷರು.

8/5

3/5/19

000390

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com
ವೆಬ್‌ಸೈಟ್:www.kssidc.kar.nic.in

93

ಸಂಖ್ಯೆ:ಸಮನ್ವಯ:ಕೈವ:ನೀತಿ:ಮಾ.ಸೂಚಿ:2016/4392 ದಿನಾಂಕ: 22-02-2016

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ.

ಉಲ್ಲೇಖ: 1] ಕಛೇರಿ ಆದೇಶ ದಿನಾಂಕ ಸಮನ್ವಯ:ಕೈವ:ನಿ:ನೀತಿ:ಮಾ.ಸೂಚಿ:2015/972 ದಿನಾಂಕ 22-06-2015.

2] ದಿನಾಂಕ 14-01-2016 ರಂದು ಜರುಗಿದ ನಿಗಮದ 337ನೇ ಮಂಡಳ ಸಭೆಯ ನಡವಳಿಗಳು.

ಪ್ರಸ್ತಾವನೆ:

ದಿನಾಂಕ 22-05-2015 ರಂದು ಜರುಗಿದ ನಿಗಮದ 334ನೇ ಮಂಡಳ ನಿರ್ಣಯದನ್ವಯ, ನಿರ್ದಿಷ್ಟವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸುಧಾರಿತ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ಕೈಗಾರಿಕಾ ವಸಾಹತು ನಿರ್ವಹಣಾ ಸೇವೆಗಳ ಬಗ್ಗೆ ಕೆಲವೊಂದು ಮಾರ್ಗಸೂಚಿಗಳನ್ನು ರೂಪಿಸಿ, ಉಲ್ಲೇಖ (1)ರಲ್ಲಿ ಈಗಾಗಲೇ ಕಛೇರಿ ಆದೇಶ ಹೊರಡಿಸಲಾಗಿದೆ. ಅದರಂತೆ ಸದರಿ ಕಛೇರಿ ಅದೇಶದಲ್ಲಿನ ಕ್ರಮಾಂಕ V ರಲ್ಲಿನ ಪರ್ಯಾಯ ನಿವೇಶನ/ಮಳಿಗೆಗಳ ಹಂಚಿಕೆ ಕುರಿತಂತೆ "ಇನ್ನು ಮುಂದೆ ಸಂಬಂಧಿಸಿದ ವಿಭಾಗದವರು ಮೊದಲು ವಸಾಹತುವಿನ ಭೌತಿಕ ನಕ್ಷೆಯನ್ನು ತಯಾರಿಸಿ ಮತ್ತು ಪ್ರಕಟಿಸಿ, ವಸಾಹತುವಿನ ಭೌತಿಕ ತಪಾಸಣೆಯನ್ನು ನಡೆಸಿದ ನಂತರ ಹಂಚಿಕೆ ಮಾಡಬೇಕು ಅಥವಾ ಸಂಬಂಧಪಟ್ಟ ಏಕ ಗವಾಕ್ಷಿ ಸಮಿತಿ / ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿಗೆ, ಮಳಿಗೆ / ನಿವೇಶನ ಮತ್ತು ಇತರೆ ಕಟ್ಟಡಗಳನ್ನು ಹಂಚಿಕೆ ಮಾಡುವಂತೆ ಕೋರಬೇಕು" ಎಂದು ಸೂಚಿಸಲಾಗಿತ್ತು.

ಈ ವಿಷಯದ ಬಗ್ಗೆ, ದಿನಾಂಕ 14-01-2016 ರಂದು ಜರುಗಿದ ನಿಗಮದ 337ನೇ ಮಂಡಳ ಸಭೆಯಲ್ಲಿ, ಉಲ್ಲೇಖಿತ(1)ರ ಕಛೇರಿ ಆದೇಶದಲ್ಲಿ ನಮೂದಿತಗೊಂಡಿರುವ ಪರ್ಯಾಯ ನಿವೇಶನ/ಮಳಿಗೆಗಳ ಹಂಚಿಕೆಯ ಸಾಧಕ-ಬಾಧಕಗಳು / ವಿವಿಧ ಹಂಚಿಕೆಯಲ್ಲಿನ ವಿಳಂಭತೆ ಇತ್ಯಾದಿಗಳ ಬಗ್ಗೆ ಸುದೀರ್ಘ ಚರ್ಚೆಯಾಗಿದ್ದು, ಇತ್ತೀಚಿಗೆ ವಿವಿಧ ಪ್ರಾಧಿಕಾರಗಳು ಪರ್ಯಾಯ ಹಂಚಿಕೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಹಂಚಿಕೆದಾರರುಗಳಿಗೆ ಹಾಗೂ ನಿಗಮಕ್ಕೆ ಅನಾನುಕೂಲವಾಗುತ್ತಿರುವ ಅಂಶವನ್ನು ಮಂಡಳಯು ಗಮನಿಸಿತು. ಹಾಗೂ ಸದರಿ ಹಿನ್ನೆಲೆಯಲ್ಲಿ ಈ ಹಿಂದೆ ನಿಗಮದಲ್ಲಿ ಚಾಲ್ತಿಯಲ್ಲಿದ್ದ ನಿಗಮದ ಪರ್ಯಾಯ ಹಂಚಿಕೆ ಪದ್ಧತಿಯನ್ನು ಮುಂದುವರೆಸಿ, ವ್ಯವಸ್ಥಾಪಕ ನಿರ್ದೇಶಕರು ಪರ್ಯಾಯ ಹಂಚಿಕೆಗಳ ಬಗ್ಗೆ ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ತೀರ್ಮಾನ ತೆಗೆದುಕೊಂಡು, ಹಂಚಿಕೆದಾರರಿಗೆ ಕೈಗಾರಿಕೆಗಳನ್ನು

...2..

ಸ್ಥಾಪಿಸಲು ಅನುವು ಮಾಡಲು ಹಾಗೂ ಹಂಚಿಕೆದಾರರಿಗೆ ಸಹಾಯ-ಹಸ್ತ ನೀಡಲು ನಿರ್ಣಯಗಳನ್ನು ತೆಗೆದುಕೊಳ್ಳಲು ಮಂಡಳಿಯು ಸೂಚಿಸಿತು. ಅದರಂತೆ, ಈ ಕೆಳಕಂಡಂತೆ ಆದೇಶ.

ಆ ದೇ ಶ

ಉಲ್ಲೇಖ (1)ರ ಈ ಕಛೇರಿ ಆದೇಶಕ್ಕೆ ಮುಂದುವರೆದಂತೆ, ಸದರಿ ಆದೇಶದಲ್ಲಿನ ಕ್ರಮಾಂಕ Vರಲ್ಲಿನ ಪರ್ಯಾಯ ನಿವೇಶನ/ಮಳಿಗೆಗಳ ಹಂಚಿಕೆ ಬಗ್ಗೆ ಈ ಕೆಳಕಂಡಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

"ಈ ಹಿಂದೆ ನಿಗಮದಲ್ಲಿ ಚಾಲ್ತಿಯಲ್ಲಿದ್ದ ನಿಗಮದ ಪರ್ಯಾಯ ಹಂಚಿಕೆ ಪದ್ಧತಿಯನ್ನು ಮುಂದುವರೆಸಿ, ವ್ಯವಸ್ಥಾಪಕ ನಿರ್ದೇಶಕರು ಪರ್ಯಾಯ ಹಂಚಿಕೆಗಳ ಬಗ್ಗೆ, ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳಲು ಅನುವಾಗುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ."

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಹಾಗೂ ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ನು ತಪ್ಪದೇ ಕಟ್ಟುನಿಟ್ಟಾಗಿ [scrupulously] ಪಾಲಿಸತಕ್ಕದ್ದು. ಇದನ್ನು ಹೊರತುಪಡಿಸಿ, ಉಲ್ಲೇಖ (1)ರ ಕಛೇರಿ ಆದೇಶದಲ್ಲಿನ ಮಾರ್ಗಸೂಚಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಪ್ರಧಾನ ವ್ಯವಸ್ಥಾಪಕರು(ಆಡಳಿತ & ಭೂಸ್ವಾಧೀನ)/(ಕೈವ & ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ,
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಲೆಪ, ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ರಾಜಾಜಿನಗರ (ನ)/ (ಗ್ರಾ)/ ವಾ.ಲೆ(ಪ್ರ) / ವ&ಕಾಲೆ(ಪ್ರ)/ಸಿಬ್ಬಂದಿ/ಪೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳ/ಬೆಳಗಾವಿ/ಕಲಬುರಗಿ/ಮೈಸೂರು/ ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು,(ಭೂಸ್ವಾಧೀನ/ಸಾ.ಸಂ) / (ಸಮನ್ವಯ) / (ಕಾನೂನು), / ಬೆಂ-ನಗರ / ಸಮನ್ವಯ, ಕರಾಸಕೈಅನಿನಿ, ಬೆಂಗಳೂರು/ ವೀರಸಂದ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು[ಗಣಕಯಂತ್ರ], ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

ಪ್ರತಿಗಳು :

1. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ.

ಶ್ರೀಸಕ್ಷಿಣಿನ

000388

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆದಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂಚಿ:2015 ದಿನಾಂಕ: 22-06-2015

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ

ಉಲ್ಲೇಖ: ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಡವಳಿಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉತ್ತಮ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ, ನಿಗಮದ ಹಾಗೂ ಸಣ್ಣ ಕೈಗಾರಿಕೆಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಿಗಮವು ಕಾಲಕಾಲಕ್ಕೆ ನಿಯಮಗಳನ್ನು ಹಾಗೂ ಶಿವಮೊಗ್ಗ ನಿಬಂಧನೆಗಳನ್ನು ರೂಪಿಸುತ್ತಿರುತ್ತದೆ.

ನಿರ್ದಿಷ್ಟವಾಗಿ ಸಣ್ಣ ಕೈಗಾರಿಕೆಗಳಿಗೆ ಸುಧಾರಿತ ಸೇವೆಯನ್ನು ಒದಗಿಸಲು ಕೈಗಾರಿಕಾ ವಸಾಹತು ನಿರ್ವಹಣಾ ಸೇವೆಗಳ ಬಗ್ಗೆ ಕೆಲವೊಂದು ಮಾರ್ಗಸೂಚಿಗಳನ್ನು ರೂಪಿಸುವ ಕುರಿತು ಪ್ರಸ್ತಾವನೆಯನ್ನು ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ಮುಂದೆ ಮಂಡಿಸಲಾಗಿತ್ತು. ಸದರಿ ವಿಷಯದ ಬಗ್ಗೆ ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ:

ಈ ಹಿಂದೆ ನಿಗಮದ ವತಿಯಿಂದ ನಿವೇಶನ / ಮಳಿಗೆ /ಗೋದಾಮು / ಇತರೆ ಕಟ್ಟಡಗಳ ಹಂಚಿಕೆಯನ್ನು ನಿಯಮಗಳನ್ವಯ ರದ್ದುಪಡಿಸಿದ ಬಗ್ಗೆ ಹಲವಾರು ಕೈಗಾರಿಕೋದ್ಯಮಿಗಳು, ರದ್ದತಿ ಆದೇಶಗಳನ್ನು ನಿರಸನಗೊಳಿಸಿ, ಹಂಚಿಕೆಯಾದ ನಿವೇಶನ / ಮಳಿಗೆ / ಗೋದಾಮು / ಇತರೆ ಕಟ್ಟಡಗಳಲ್ಲಿ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾಲಾವಧಿ ನೀಡಲು ಮನವಿಗಳನ್ನು ಸಲ್ಲಿಸಿದ್ದು, ಸದರಿ ಕೈಗಾರಿಕೋದ್ಯಮಿಗಳ ಕೋರಿಕೆ ಮೇರೆಗೆ ಅಂತಹ ಹಂಚಿಕೆಯನ್ನು ಹಿಂದಕ್ಕೆ ನೀಡಿ (restoration of allotment), ಸದರಿ ನಿವೇಶನ / ಮಳಿಗೆ /ಗೋದಾಮು / ಫ್ಲಾಟ್ / ಇತರೆ ಕಟ್ಟಡಗಳನ್ನು ಮಾಜಿ ಹಂಚಿಕೆದಾರರುಗಳಿಗೆ ಹಿಂದಿರುಗಿಸುವ ಸಂಬಂಧ ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಿರ್ಣಯದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಲು ರೂಪಿಸಲಾಗಿದೆ.

i) ಎಲ್ಲ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ನಿಯಮಾನುಸಾರ ರದ್ದುಗೊಳಿಸಿ ಬೇಗಮುದ್ರಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದ ನಿಗಮದ ಸುಪರ್ದಿನಲ್ಲಿದ್ದಯೋ :

1) ಹಂಚಿಕೆಯನ್ನು ಹಿಂದಕ್ಕೆ ನೀಡುವ ದಿನಾಂಕಕ್ಕೆ ಬಾಕಿ ಇರುವ ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ ಶುಲ್ಕಗಳನ್ನು ಹಂಚಿಕೆದಾರರು ಸಂಪೂರ್ಣವಾಗಿ ಪಾವತಿಸತಕ್ಕದ್ದು.

2) ಹಂಚಿಕೆದಾರರುಗಳಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡುವ ಪ್ರಸ್ತಾವನೆಗಳನ್ನು ಬಿಡಿ ಹಂಚಿಕೆ ಸಮಿತಿಯು ಅನುಮೋದಿಸತಕ್ಕದ್ದು. ತದನಂತರ, ಹಂಚಿಕೆದಾರರುಗಳ ರದ್ದತಿ ಆದೇಶದ ನಿರಸನ ದಿನಾಂಕ್ಕೆ ಪ್ರಚಲಿತದಲ್ಲಿರುವ ಹಂಚಿಕೆಯ ಮೌಲ್ಯ ಹಾಗೂ ಹಂಚಿಕೆ ಸಮಯದಲ್ಲಿನ ಮೌಲ್ಯದ ವ್ಯತ್ಯಾಸವನ್ನು ಈ ಕೆಳಕಂಡಂತೆ ಪಾವತಿಸತಕ್ಕದ್ದು:

ಅ) 'ಎ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 75 ರಷ್ಟು ಮೌಲ್ಯದ ವ್ಯತ್ಯಾಸದ ಮೊತ್ತ.

ಬ) 'ಬಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 50 ರಷ್ಟು ವ್ಯತ್ಯಾಸದ ಮೊತ್ತ.

ಕ) ಹಿಂದುಳಿದ ಪ್ರದೇಶದ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ, 'ಸಿ' ಮತ್ತು 'ಡಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 25 ರಷ್ಟು ವ್ಯತ್ಯಾಸದ ಮೊತ್ತ.

3) ಹಂಚಿಕೆ ಸಮಯದಲ್ಲಿ ಹಾಗೂ ಹಂಚಿಕೆಯ ತರುವಾಯ ಹಾಗೂ ರದ್ದತಿ/ಬೀಗಮುದ್ರೆ ದಿನಾಂಕಕ್ಕೆ ಹಂಚಿಕೆದಾರರು ಶಾಸನಬದ್ಧ ಪಾವತಿಗಳಾದ ಕೊಳಚೆ ನಿರ್ಮೂಲನಾ ಶುಲ್ಕ, ಹಾಗೂ ಇತರೆ ಪಾವತಿಗಳಾದ ಸೇವಾ ಶುಲ್ಕ, ಇತರೆ ಯಾವುದಾದರೂ ಶುಲ್ಕಗಳನ್ನು ಪಾವತಿಸಿದ್ದಲ್ಲಿ, ಅವುಗಳನ್ನು ಯಾವುದೇ ರೀತಿಯಲ್ಲಿಯೂ ಮರು-ಪಾವತಿಸಲು ಅಥವಾ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

4) ಉಚ್ಚ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ ಹಂಚಿಕೆದಾರರ ಮನವಿಯ ಮೇರೆಗೆ ನಿಗಮವು ಮರು-ಹಂಚಿಕೆಯನ್ನು ಪರಿಗಣಿಸಬಾರದು.

5) ಎರಡು ವರ್ಷಗಳ ಕಾಲಮಿತಿಯನ್ನು ಗರ್ಭಕಾಲದ ಅವಧಿ ಎಂದು ನಿಗದಿಪಡಿಸಲಾಗಿದೆ.

ii) <u>ಎಲ್ಲ ಪದ್ಧತಿ ನಿಯಮಗಳನ್ನು ಪಾಲಿಸದೆ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ರದ್ದುಗೊಳಿಸಿ / ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದೆ ನಿಗಮದ ಸುಪರ್ದಿಯಲ್ಲಿದೆಯೋ</u> ;

1) ಕಾನೂನಿನ ಪ್ರಕ್ರಿಯೆ ಹಾಗೂ ನಿಯಮಗಳನ್ನು ಪಾಲಿಸದೇ ಮಳಿಗೆ/ನಿವೇಶನ/ಇತರೆ ಕಟ್ಟಡಗಳನ್ನು ರದ್ದುಗೊಳಿಸಲಾದ ಅಥವಾ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ಪಡೆಯಲಾದ ಪ್ರಕರಣಗಳ ಬಗೆಗಿನ ಹಂಚಿಕೆ ಹಿಂದಕ್ಕೆ ನೀಡುವುದನ್ನು ಮಂಡಳಿಯು ಪ್ರಕರಣದಿಂದ ಪ್ರಕರಣಕ್ಕೆ ಆಧಾರದ (case to case basis) ಮೇಲೆ ಪರಿಗಣಿಸುವುದು. ಈ ಪ್ರಕರಣಗಳಲ್ಲಿ ಹಂಚಿಕೆದಾರರಿಗೆ ಸ್ವಭಾವಸಿದ್ಧ ನ್ಯಾಯ ಖಚಿತಪಡಿಸಿಕೊಳ್ಳುವ ಹಾಗೂ ನಿಗಮದ ಕೈಗಾರಿಕಾ ಸ್ನೇಹಿ ಹಿತದೃಷ್ಟಿಯಿಂದ ಯಾವುದೇ ರೀತಿಯ ಹೆಚ್ಚುವರಿ ಮೊತ್ತವನ್ನು ವಿಧಿಸದೇ, ಹಂಚಿಕೆ ಸಮಯದಲ್ಲಿನ ದರವನ್ನು ವಿಧಿಸಿ ಹಂಚಿಕೆಯನ್ನು ಹಿಂದಕ್ಕೆ ನೀಡುವುದು.

2) ತಪ್ಪಾಗಿ ಬೀಗಮುದ್ರೆಗೊಳಿಸಿದ ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಿ ಸಂಬಂಧಪಟ್ಟ ಅಧಿಕಾರಿ / ನೌಕರರಿಂದ ನಷ್ಟವನ್ನು ವಸೂಲಿ ಮಾಡತಕ್ಕದ್ದು.

..3..

3) ನಿಗಮಕ್ಕೆ ಉಂಟಾದ ನಷ್ಟದ ವ್ಯತ್ಯಾಸದ ಮೊಬಲಗನ್ನು ವಸೂಲಿ ಮಾಡಲು ಸಿವಿಲ್ ವಸೂಲಾತಿ ದಾವೆಯನ್ನು ಹೂಡತಕ್ಕದ್ದು.

iii) <u>ನ್ಯಾಯಾಲಯದ ತೀರ್ಮಗಳು ;</u>

1) ನ್ಯಾಯಾಲಯದ ಪ್ರಕರಣಗಳಲ್ಲಿ, ನ್ಯಾಯಾಲಯದ ತೀರ್ಮಗಳ ಅನ್ವಯ, ಮಂಡಳಿಯ ಉಪ ಸಮಿತಿಯಾದ ಬಿಡಿ ಹಂಚಿಕೆ ಸಮಿತಿಯ ಅನುಮೋದನೆಯೊಂದಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡಬಹುದು. ಪ್ರಕರಣದ ಅರ್ಹತೆ ಮೇರೆಗೆ, ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ಬಿಡಿ ಹಂಚಿಕೆ ಸಮಿತಿಯು ಇದರ ಬಗ್ಗೆ ನಿರ್ಧರಿಸುವುದು.

2) ನಿಗಮವು ಕಾನೂನು ಅಭಿಪ್ರಾಯವನ್ನು ಪಡೆದ ನಂತರ ಮುಂದಿನ ಮೇಲ್ಮನವಿ ಸಲ್ಲಿಕೆಯು ಸಾಕಾರವಾಗುವುದಿಲ್ಲವೆಂಬ ನಿರ್ಧಾರಕ್ಕೆ ಬಂದಿರಬೇಕು.

iv) <u>ಪಾವತಿ ಮಾಡಲು ಕಾಲಾವಧಿ ವಿಸ್ತರಣೆ:</u>

ದಿನಾಂಕ 16.07.1987 ರಂದು ಜರುಗಿದ ನಿಗಮದ 192ನೇ ಮಂಡಳಿ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ, ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 90 ದಿನಗಳ ಕಾಲಾವಕಾಶ ನೀಡಲು ಪ್ರಧಾನ ವ್ಯವಸ್ಥಾಪಕರು-I ರವರಿಗೆ ಅಧಿಕಾರ ನೀಡಿರುತ್ತದೆ. ದಿನಾಂಕ 16.03.1989 ರಂದು ಜರುಗಿದ ನಿಗಮದ 202ನೇ ಮಂಡಳಿ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 30 ದಿನಗಳ ಕಾಲಾವಕಾಶ ನೀಡಲು ಮುಖ್ಯ ವ್ಯವಸ್ಥಾಪಕರು(ಕೈವ) ರವರಿಗೆ ಅಧಿಕಾರ ನೀಡಿರುತ್ತದೆ ಹಾಗೂ 90 ದಿನಗಳ ಅವಧಿಗೆ ಮೀರಿ ಕಾಲಾವಧಿ ವಿಸ್ತರಣೆಗೆ ನಿಯಮಗಳನ್ವಯ ಬಡ್ಡಿ ವಿಧಿಸಿ ಕಾಲಾವಕಾಶ ನೀಡಲು ವ್ಯವಸ್ಥಾಪಕ ನಿರ್ದೇಶಕರು ರವರಿಗೆ ಅಧಿಕಾರ ನಿಯೋಜಿಸಲಾಗಿದ್ದು, ನಿಗದಿತ ಅವಧಿ ಮೀರಿ ಪಾವತಿಗಳನ್ನು ಸ್ವೀಕರಿಸುವ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯು ಇನ್ನು ಮುಂದೆ ನಿವೇಶನ / ಮಳಿಗೆ / ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ತಡವಾದ ದಿನಗಳಿಗೆ ಬಡ್ಡಿ ವಿಧಿಸುವ ಅಥವಾ ಜಮೀನಿನ ದರ ಪರಿಷ್ಕರಣೆಯಾಗಿದ್ದಲ್ಲಿ, ಪರಿಷ್ಕೃತ ದರ ವಿಧಿಸುವ ನಿಬಂಧನೆಗೆ ಒಳಪಟ್ಟು, ಕಾಲಾವಧಿ ವಿಸ್ತರಣೆಯ ನೀಡುವ ಬಗ್ಗೆ ಕೆಳಕಂಡಂತೆ ಅಧಿಕಾರ ನಿಯೋಜಿಸಲು ನಿರ್ಣಯಿಸಿತು:

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) 30 ದಿನಗಳವರೆಗೆ
2. ಪ್ರಧಾನ ವ್ಯವಸ್ಥಾಪಕರು(ಕೈವ) 90 ದಿನಗಳವರೆಗೆ
3. ವ್ಯವಸ್ಥಾಪಕ ನಿರ್ದೇಶಕರು ... 90 ದಿನದಿಂದ ಹೆಚ್ಚಿಗೆ ಮತ್ತು 365 ದಿನಗಳವರೆಗೆ

ಮುಂದುವರೆದಂತೆ, ನಿವೇಶನ/ಮಳಿಗೆ/ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ನೀಡುವ ಕಾಲಾವಧಿ ವಿಸ್ತರಣೆಯನ್ನು ಗರಿಷ್ಠ 365 ದಿನಗಳಿಗೆ ನಿಗದಿಪಡಿಸಲು ಹಾಗೂ ಇನ್ನು ಮುಂದೆ ಯಾವುದೇ ಸಂದರ್ಭಗಳಲ್ಲಿ 365 ದಿನಗಳ ಮೀರಿ ಕಾಲಾವಧಿ ವಿಸ್ತರಣೆ ನೀಡದೇ ಇರಲು ಮಂಡಳಿಯು ನಿರ್ಣಯಿಸಿತು.

..4..

v) ಪರ್ಯಾಯ ನಿವೇಶನ / ಮಳಿಗೆಗಳು:

ಇನ್ನು ಮುಂದೆ ಸಂಬಂಧಿಸಿದ ವಿಭಾಗದವರು ಮೊದಲು ವಸಾಹತುವಿನ ಭೌತಿಕ ನಕ್ಷೆಯನ್ನು ತಯಾರಿಸಿ ಮತ್ತು ಪ್ರಕಟಿಸಿ, ವಸಾಹತುವಿನ ಭೌತಿಕ ತಪಾಸಣೆಯನ್ನು ನಡೆಸಿದ ನಂತರ ಹಂಚಿಕೆ ಮಾಡಬೇಕು ಅಥವಾ ಸಂಬಂಧಪಟ್ಟ ಏಕ ಗವಾಕ್ಷಿ ಸಮಿತಿ / ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿಗೆ, ಮಳಿಗೆ / ನಿವೇಶನ ಮತ್ತು ಇತರೆ ಕಟ್ಟಡಗಳನ್ನು ಹಂಚಿಕೆ ಮಾಡುವಂತೆ ಕೋರಬೇಕು.

ಮೇಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ.

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು ನಗರ / ಗ್ರಾಮಾಂತರ/ವಾಲೆ/ವ&ಕಾಲೆ/ವಾಣಿಜ್ಯ/ಉಗ್ರಾಣ/ಬೆಂಗಳೂರು/ಪೀಣ್ಯಾ/ತುಮಕೂರು/ಹರಿಹರ/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು
2. ವ್ಯವಸ್ಥಾಪಕರು(ಕೈವ)/(ಭೂಸ್ವಾಧೀನ), ಕರಾಸಕೈಅನಿನಿ, ವೀರಸಂದ್ರ, ಬೆಂಗಳೂರು.
3. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಬಾಗಲಕೋಟೆ/ಬೀದರ್/ ಮಂಡ್ಯ.
4. ಮಾರಾಟ ವ್ಯವಸ್ಥಾಪಕರು/ಕಿರಿಯ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಸಿರಸಿ/ವಿಜಯಪುರ/ ಹೊಸಪೇಟೆ/ಚಿಕ್ಕಮಗಳೂರು.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ ಮತ್ತು ಹಣಕಾಸು)/(ಆಡಳಿತ ಮತ್ತು ಭೂಸ್ವಾಧೀನ)/(ವಾಣಿಜ್ಯ)/ ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ)/(ಸಮನ್ವಯ)/(ಆಲೆಪ)/(ವಾಣಿಜ್ಯ),(ಯೋಜನೆ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
4. ಕಾರ್ಯಪಾಲಕ ಅಭಿಯಂತರರು-1,2,3 - ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ/(ವಿದ್ಯುತ್)
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
7. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.

Details of Cadre strength, existing strength and vacancy posistion - 01-09-2022.

I) Administration

Sl. No.	Cadre	Cadre Strength	Quota		Filled		Vacancy	
			DR	PR	DR	PR	DR	PR
1	General Manager	3	1	2	1	0	0	2
2	Dy. Genl. Manager	6	2	4	0	0	2	4
3	Asst. Genl. Manager	18	6	12	0	1	6	11
4	Company Secretary	1	1	0	0	0	1	0
5	Manager	22	6	16	2	6	4	10
6	P.S. to M.D.	1	0	1	0	1	0	0
7	Asst. Manager	45	12	33	0	16	12	17
8	Senior Steno	5	0	5	0	0	0	5
9	Stenographer	8	2	6	0	1	2	5
10	Senior Assistant	92	23	69	5	15	18	54
11	Junior Assistant	50	37	13	5	1	32	12
12	Head Typist	2	0	2	0	0	0	2
13	Senior Typist	8	0	8	0	1	0	7
14	Typist	1	1	0	0	0	1	0
15	Selection Gr. Driver	1	0	1	0	0	0	1
16	Senior Driver	9	0	9	0	2	0	7
17	Driver	2	1	1	0	0	1	1
18	Sel. Grade.Attender	1	0	1	0	0	0	1
19	Senior Attender	9	0	9	0	2	0	7
20	Attender	20	0	20	0	2	0	18
21	Peon	38	38	0	3	0	35	0
	Total A	**342**	**130**	**212**	**16**	**48**	**114**	**164**

II) Technical.

1	Chief Engineer	1	0	1	0	0	0	1
2	Supdt. Engineer	1	0	1	0	0	0	1
3	Executive Engineer	4	1	3	0	0	1	3
4	Executive Engineer(Elecl.)	1	0	1	0	0	0	1
5	Asst. Executive Engineer-I	21	5	16	1	2	4	14
6	Asst. Executive Engineer-II	4	0	4	0	0	0	4
7	Asst.Exe. Engineer(Elecl.)-I	2	1	1	0	0	1	1
8	Asst.Exe. Engineer(Elecl.)-II	1	0	1	0	0	0	1
9	Asst. Engineer(Dvn-2)-Civil	9	0	9	0	0	0	9
10	Asst. Engineer(Dvn-2)-Elecl.	2	0	2	0	1	0	1
11	Junior Engineer	1	1	0	0	0	1	0
12	Senior Tracer	1	0	1	0	0	0	1
13	Electrician	1	1	0	0	0	1	0
	Total B	**49**	**9**	**40**	**1**	**3**	**8**	**37**
	TOTAL(A+B)	***391***	***139***	***252***	***17***	***51***	***122***	***201***

Total Filled	Total Vacancy
68	323

	TECHNICAL WING				
42	***Engineering Sec., (Civil)***				
	Chief Engineer	1	0	1	
	Supdtd. Engineer	1	0	1	
		2	**0**	2	
43	***B'lore Division:***				
	Executive Engineer	1	0	1	
	A E E -1	5	2	3	B.A. Vishwanatha, M. Yashavanth Raju
	A E E -2	1	0	1	
	A E (Dvn-2)	3	0	3	
	J E	1	0	1	
		11	**2**	9	
44	***Hubli Division:***				
	Executive Engineer	1	0	1	
	A E E -1	6	0	6	
	A E E -2	1	0	1	
	A E (Dvn-2)	2	0	2	
	Tracer	1	0	1	
		11	**0**	11	
45	***Mysore Division:***				
	Executive Engineer	1	0	1	
	A E E -1	5	0	5	
	A E E -2	1	0	1	
	A E (Dvn-2)	2	0	2	
		9	**0**	9	
46	***Gulbarga Division:***				
	Executive Engineer	1	0	1	
	A E E -1	5	1	4	Manjunath. M.(Depn.)
	A E E -2	1	0	1	
	A E (Dvn-2)	2	0	2	
		9	**1**	8	
	Engineering Sec., (Ele)				
47	***B'lore Division:***				
	Executive Engineer	1	0	1	
	A E E -1	1	0	1	
	A E (Dvn.2)	1	0	1	
	Electrician	1	0	1	
		4	**0**	4	
48	***Hubli Sub Division:***				
	A E E -1	1	0	1	
	A E E -2	1	0	1	
	A E (Dvn.2)	1	0	1	
		3	**0**	3	
	Technical Total: (b)	**49**	**3**	**46**	
	GRAND TOTAL (a+b)	***391***	***66***	***325***	
	Deputation to other departments				
	Asst. Engineer(Ele)		1		N. Nagaraju(Ele)
	Manager		1		M. Mallikarjuna
	Grand Total Working		*68*		

* D/GNM/RE-ORG STT MARCH-2021/SHI

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

000382

ಸಂಖ್ಯೆ:ಸಮನ್ವಯ:ಕೈವ:ವರ್ಗೀಕರಣ:ಹೊಕೈನಿ:2020 ದಿನಾಂಕ 21-08-2020

ಕಛೇರಿ ಆದೇಶ

ಉಲ್ಲೇಖ (1) ಸರ್ಕಾರದ ಆದೇಶದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನಡಿಯಲ್ಲಿ "ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಕೈಗಾರಿಕಾ ವಸಾಹತುವಿನಲ್ಲಿ 20 ಸಂಖ್ಯೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಕೈಗಾರಿಕಾ ವಸಾಹತುವಿನಲ್ಲಿ 24 ಸಂಖ್ಯೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಕೈಗಾರಿಕಾ ವಸಾಹತುವಿನಲ್ಲಿ 40 ಸಂಖ್ಯೆ" ಒಟ್ಟು 84 ಸಂಖ್ಯೆ ಡಿ ಮಾದರಿ ಮಳಿಗೆಗಳನ್ನು ನಿಗಮದಿಂದ ನಿರ್ಮಿಸಲು ಶೇ.90 ರಷ್ಟು ಸಹಾಯಧನವನ್ನು ಮಂಜೂರು ಮಾಡಿ, ಆದೇಶದಲ್ಲಿನ ಮಾರ್ಗಸೂಚಿಯಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ. ಸರ್ಕಾರದಿಂದ ಹೊರಡಿಸುವ ಆದೇಶಗಳನ್ನು ಯಥಾವತ್ತಾಗಿ ನಿಗಮದಲ್ಲಿ ಅಳವಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ನಿಗಮದ ಆದೇಶ ಸಂಖ್ಯೆ ಸಮನ್ವಯ:ವಿಘಯೋ:ಗಿಉಯೋ:84 ಮಳಿಗೆ:ಸಹಾಯಧನ:2021
ದಿನಾಂಕ 21.06.2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಸರ್ಕಾರವು ಮಂಜೂರು ಮಾಡಲಾದ ಸಹಾಯಧನದಲ್ಲಿ ನಿಗಮವು "ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಕೈಗಾರಿಕಾ ವಸಾಹತುವಿನಲ್ಲಿ 20 ಸಂಖ್ಯೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಕೈಗಾರಿಕಾ ವಸಾಹತುವಿನಲ್ಲಿ 24 ಸಂಖ್ಯೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಕೈಗಾರಿಕಾ ವಸಾಹತುವಿನಲ್ಲಿ 40 ಸಂಖ್ಯೆ" ಒಟ್ಟು 84 ಸಂಖ್ಯೆ ಮಳಿಗೆಗಳನ್ನು ನಿರ್ಮಿಸಿದ್ದು, ಸದರಿ ಒಟ್ಟು 84 ಮಳಿಗೆಗಳಿಗೆ ಸರ್ಕಾರದ ಆದೇಶದಂತೆ ನಿವೇಶನದ

..2..

ಕೆ.ರಾ.ಸ.ಕೈ.ಅ.ನಿ.ನಿ. ಸಂಖ್ಯೆ 110 ದಿನಾಂಕ 28/06/21

21/6/2021

ಮೌಲ್ಯವನ್ನು ಒಳಗೊಂಡಂತೆ, ಮಳಿಗೆ ನಿರ್ಮಾಣ ವೆಚ್ಚದ ಶೇ.90 ರಷ್ಟು ಸಹಾಯಧನವನ್ನು ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಅನುಸರಿಸಿ ಹಾಗೂ ಸರ್ಕಾರಿ ಆದೇಶದ ಜೊತೆ ಲಗತ್ತಿಸಿರುವ ಮಾರ್ಗಸೂಚಿಗಳನ್ವಯ ವಿಸ್ತರಿಸಲು ಹಾಗೂ ಹೊಂದಾಣಿಕೆ ಮಾಡುವ ಕುರಿತು ಅವಶ್ಯ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ. ತದನಂತರ ಉಪಯುಕ್ತತಾ ಪ್ರಮಾಣ ಪತ್ರವನ್ನು ಪೂರಕ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸಹ ಸೂಚಿಸಲಾಗಿದೆ ಹಾಗೂ ಸದರಿ ಸರ್ಕಾರಿ ಆದೇಶದಲ್ಲಿನ ಇತರೆ ಷರತ್ತು ಮತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಸಿ. ಸತ್ಯಭಾಮ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು

ಅಡಕ: ಸರ್ಕಾರಿ ಆದೇಶದ ಪ್ರತಿ

ಗೆ,
1) ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ & ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು
2) ಅಧೀಕ್ಷಕ ಅಭಿಯಂತರರು-ಪ್ರ, ಕರಾಸಕೈಅನಿನಿ, ಬೆಂಗಳೂರು
3) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1/(ಹಣಕಾಸು)/(ವಾಣಿಜ್ಯ)/(ಆ.ಲೆ.ಪ), ಕರಾಸಕೈಅನಿನಿ, ಬೆಂಗಳೂರು
4) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವ&ಕಾಲೆ)/(ವಾಲೆ)/(ಸಮನ್ವಯ)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು.
5) ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ
6) ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು
7) ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್‌ಸೈಟಿನಲ್ಲಿ ಪ್ರಕಟಿಸಲು ಸೂಚಿಸಿದೆ
8) ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
9) ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
10) ವ್ಯ.ನಿ., ರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

KSSIDC Karnataka State Small Industries Development Corporation Limited
(A Government of Karnataka Undertaking)
Regd Office: A.O Building, Industrial Estate, Rajajinagar, Bangalore - 44.
✆: 3407011 to 25
Fax: 091-080-3389526
3389070

000347

No:MD:NTF:ALT:STRAY PLOT:2005

Date:
25.05.2005

OFFICE ORDER

Sub: Allotment of **Stray plots and Stray Sheds under closed bid tender system** - Revised format for issue of Notification - reg.

Ref: 1. OO.No.FEA :PLOTS: RATES: NOTIFICATION: 2005, Dtd 30.4.2005.
2. OO.No: FEA :IE Categorisation : 2005, dtd. 3.5.2005
3. OO.No: FEA : IE:RE-ALLOTTED:SP:2005 Dtd. 9.5.05
4. ION No: CRD : ALLT : RULES : 2005, Dtd.12.5.05

****

A uniform format of Notification for allotment of Stray plots (Regular size/Irregular size) and Stray sheds under closed tender system has been finalised along with the Notification and other relevant procedures to be followed & are enclosed herewith with a direction to adopt the same in future while processing for allotment of Stray plots and stray sheds in your jurisdiction.

1. "STRAY PLOTS" means any plot once allotted and subsequently cancelled/resumed from the allottee or a plot surrendered by the allottee or land reserved for civic amenities or any plot which is irregular in size and is in

28 MAY 2005

variance in size from other regular L,M,N,P,Q,R,S Types of plots in an Industrial Estate therefore, clearly to be indicated as STRAY in the layout plan.

2. A Stray shed means any shed once allotted and subsequently cancelled/resumed from the allottee or a shed surrendered by the allottee or any shed in variance in size from the regular sheds constructed by KSSIDC.

3. Notification as in Annexure-A is to be published in the largest circulated Kannada and English newspapers of the concerned Districts. A clear time of 25 days should be indicated as the last date for receipt of filled in applications from the date of the notification. The date for opening the financial bid should be 05 days from the last date of receipt of applications.

4. Before issue of notification, details in respect of vacancy of stray plots and stray sheds should be clearly indicated and approval of the Managing Director may be obtained on file for issuing the notification.

5. The copies of the Notification should be sent to the offices of the Deputy Commissioner of the concerned District, JD, DIC, Assistant Director, TIC and all the SSI Associations in the district/division by RPAD on the same day on which notification is published in the newspapers.

6. The Notification should be displayed prominently on the same day in all offices of KSSIDC starting from the Zonal Chief Managers, DCMs (IEs) Branch Managers, Sales Managers. A copy of the notification should also be sent to the computer section at Head office for publishing in the KSSIDC Website on the same day.

7. The application form, supplementary application and notarized affidavit are free of cost and should be made available to any applicant along-with a copy of the notification. Further documents like E.M.D. payable at base price, details of EMI payable at base price, details of stray plots and stray sheds costing, pre-qualification criteria to be made available to the applicants on request. Applicants can also see the stray plots and stray sheds before participating in the allotment procedure. Each application received has to be given an acknowledgement as at Annexure-B.

8. A register for receiving the application along with the SSI registration certificate, project report, other documents as called for in the application & supplementary application form,EMD and the sealed financial bid to be maintained as per the format at Annexure-C to be updated on daily basis.

9. The undertaking to be obtained from the applicants in respect of allotment of stray plots/stray sheds under financial bid are enclosed with a direction to obtain the same from the applicants (Annexure-D). This is to be obtained at the time of submission of filled in application.
10. The notarized affidavit on Rs.100/- Stamp Paper to be obtained from the applicants whether they or their family have any sheds /plots allotted by us(Annexure-E). This is to be obtained at the time of submission of filled in application.
11. After last date for receipt of applications, the points detailed as per Pre-qualification check list enclosed (Annexure- F) to be followed at the time of scrutiny of applications.

12. DCM(IEs) may assist the Applicant who desires to inspect the stray plots/stray sheds before filing in the Application as we are proposing to allot plots/sheds on as is where is basis.

13. The financial bids received should be kept in safe custody and are not to be opened. It is the personal responsibility of the DCM to maintain and keep in safe custody the financial bids.

14. DCM of the district is to draw detailed proceedings containing details of the scrutiny of the applications based on the pre qualification check-list (Page 1 & 2 of Annexure-F).

15. DCM should complete the scrutiny of applications within 3 days from the last date of receipt of the applications and the detailed proceedings be drawn on the pre qualification scrutiny and details of applicants who have not qualified the pre-qualification criteria along with reasons to be mentioned and recorded clearly.

16. During the opening of the financial bids on the prescribed date as per the News Paper Notification, DCM(IEs) should ensure that the following officers are present during the opening of the sealed bids in the presence of the applicant who chose to be present at that time:

    (i) Joint Director (DIC)

    (ii) The concerned Zonal Chief Managers should invariably be present.

17. The date and time for opening the financial bid is as indicated in the notification published. DCM to see that the date for opening of financial bids does not extend

beyond 05 working days of the last date of receipt of applications.

18. All the applications and financial offers received shall be placed before such applicants who choose to be present on the date of opening of financial offers. The results of pre-qualification to be mentioned to all. Those applicants who have not cleared the pre-qualification criteria, their financial offers are not to be opened.

19. During the opening of the financial bid, a separate register should be maintained by the DCM and indicate applicant-wise mentioning the name of the applicant, base price, Plot number or numbers/shed number or numbers, and bid amount and obtain the signature of all the bidders, who choose to be present during the opening of the bid.

20. After opening of the financial bids, in case 2 financial offers are the same, the procedure of drawing of lots to decide on the allottee shall be followed in front of the applicants.

21. Detailed proceedings of the above shall be drawn and signature of all such applicants present shall be taken. Allotment intimation letters should be sent to the eligible applicants within three days from the date of opening of the financial bids.

22. Thereafter, the proceedings of pre-qualification and opening of the financial bids shall be placed before the DLSWA for formal approval. The DCM shall see to it that the proceedings are placed before the DLSWA at the earliest for approval.

23. All Office Orders / ION issued under reference pertaining to allotment rules, costing of plots, categorization of various Industrial Estate etc., should be followed meticulously.

24. The concerned Chief Manager and DCM should send a certificate to the Managing Director stating that all the allotments have been made as per the various circulars, guidelines issued in this regard prevailing as on date and no deviation what so ever made. The certificate should be sent within 10 days from the date of issue of allotment letters.

25. In case of plots, all allottees have to make payment of 99% of their quoted price in case of allotment within a period of 45 days from the date of the allotment intimation letter. In case of sheds, all allottees have to make payment as per *two* options:

000340

(i) either 99% payment of their quoted price within a period of 45 days from the date of allotment intimation letter or;

(ii) a lease period of SIX years with EMIs spread over this period.

26. The successful bidder who gets the allotment of the plots is required to construct the factory building on this plot and start the operations of the industry within the stipulated period of two years for industrial estate in Bangalore Rural & Urban and three years in industrial estates which are not in Bangalore Rural & Urban Districts. Sale Deed can be given only after the period of two years for Bangalore (Rural & Urban) and Five years in other estates after construction of the factory and initiation of production. In the case of Sheds, sale deed can be given only after three years for Bangalore (Rural & Urban) after commencement of production & two years for other Districts. This condition and any other relevant conditions, which form part of this note, should be circulated to the applicants while handing over the application form.

Above instructions should be followed by concerned DCM(IES). Chief Managers of the Zone to ensure absolute objectivity and transparency on the part of DCMs in implementing this. A copy of the allottees list should be sent to Dy.Chief Manager(EDP) within seven days of opening of the financial bid for display on the website.

MANAGING DIRECTOR

TO: All DCM(IEs)

Copy to:

1. The Executive Director, KSSIDC Ltd., Industrial Estate, Rajajinagara, Bangalore-44. for information and necessary action.
2. Chief Manager (IES) Z-I/II/III, KSSIDC LTD., Industrial Estate, Bangalore/Hubli/Mysore - for information and with a direction to monitor the issue with concerned DCM(IES).
3. Chief Manager (F)I/c.,/(IA) I/c.,/ DCM (LAW) / (EDP), KSSIDC Ltd., Industrial Estate, Rajajinagar, Bangalore-44 for information.

P.S. to MD.

GUIDELINES/STRAY PLOTS

000338

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾನೀ:ಮಾರ್ಗಸೂಚಿ:ಪರಿಷ್ಕರಿಸುವ:ಬಗ್ಗೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಮಂಡಳ ಸಭೆಯ ನಡವಳಿ.

****

ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಕಛೇರಿ ಆದೇಶ ದಿನಾಂಕ: 22-06-2015ಕ್ಕೆ ಹಾಗೂ ಸದರಿ ನೀತಿಗಳ ಪರಿಷ್ಕೃತ ಕಛೇರಿ ಆದೇಶ ದಿನಾಂಕ: 01-10-2020 ಮುಂದುವರೆದಂತೆ ದಿನಾಂಕ: 15-09-2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳ ಸಭೆಗೆ ಮಂಡಿಸಿದ ಪ್ರಸ್ತಾವನೆಯಲ್ಲಿ 2014-19ರ ಕೈಗಾರಿಕಾ ನೀತಿಯಂತೆ ಸರ್ಕಾರವು ರಾಜ್ಯದ ಜಿಲ್ಲೆಗಳನ್ನು 4 ವಲಯಗಳನ್ನಾಗಿ ವಿಂಗಡಿಸಿದ್ದು, ನಿಗಮವು ಸಹ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಕೈಗಾರಿಕಾ ವಸಾಹತುಗಳ ನಿರ್ವಹಣೆಗಾಗಿ ಹಾಗೂ ಸುಲಲಿತವಾದ ಆಡಳಿತಕ್ಕಾಗಿ 4 ವಲಯಗಳನ್ನಾಗಿ ವಿಂಗಡಿಸಲಾಗಿರುತ್ತದೆ.

ಆದರೆ ರಾಜ್ಯ ಸರ್ಕಾರವು ವಲಯಗಳೆಂದು ತಿಳಿಸಿರುವುದರಿಂದ ನಮ್ಮ ನಿಗಮವು ಸಹ ತನ್ನ ವಿಭಾಗೀಯ ಕಛೇರಿಗಳನ್ನು ವಿಂಗಡಿಸಿ 4 ವಲಯಗಳನ್ನಾಗಿ ವಿಂಗಡಿಸಿರುವುದರಿಂದ, ವಲಯ ಎಂಬ ಶಬ್ದ ಪುನರಾವರ್ತನೆಯಾಗುವುದರಿಂದ ನಿಗಮವು ಸದರಿ ವಲಯಗಳನ್ನು ಪ್ರವರ್ಗಗಳೆಂದು ವಿಂಗಡಿಸಿ "ಎ","ಬಿ","ಸಿ","ಡಿ" ಗಳೆಂದು ಅನ್ವಯಿಸಿಕೊಂಡಿರುತ್ತದೆ. ಅದರಂತೆಯೇ ನಾಲ್ಕು ಪ್ರವರ್ಗಗಳೆಂದು ಇದುವರೆವಿಗೂ ರೂಢಿಸಿಕೊಂಡು ಬಂದಿರುತ್ತದೆ. ಅಂತೆಯೇ ಈ ಹಿಂದೆ ಮಾರ್ಗಸೂಚಿಗಳನ್ನು ಸಿದ್ದಪಡಿಸುವಾಗ ನಾಲ್ಕು ಪ್ರವರ್ಗಗಳೆಂದು ಅನ್ವಯಿಸಿಕೊಂಡಿದ್ದು, ಅದೇ ಮುಂದುವರೆದಿರುತ್ತದೆ.

ಪ್ರಸ್ತುತ, ಸರ್ಕಾರವು ಹೊಸ ಕೈಗಾರಿಕಾ ನೀತಿ 2020-25ರ ಅನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಮೂರು ವಲಯಗಳಾಗಿ ರಚಿಸಿದ್ದು, ಅದನ್ನು ನಿಗಮವು ಎ.ಬಿ.ಸಿ. ಪ್ರವರ್ಗಗಳೆಂದು ಅನ್ವಯಿಸಿಕೊಂಡಿರುತ್ತದೆ.

ಈ ಹಿನ್ನಲೆಯಲ್ಲಿ, ಕೈಗಾರಿಕಾ ವಸಾಹತುಗಳ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಸಹ ಅದರಂತೆಯೇ ಪುನರ್ ಪರಿಷ್ಕರಿಸಬೇಕಾಗುತ್ತದೆ. ಆದುದರಿಂದ, ದಿನಾಂಕ: 15-09-2020 ರಂದು ಜರುಗಿದ ನಿಗಮದ 360ನೇ ಮಂಡಳ ಸಭೆಯ ತೀರ್ಮಾನದಂತೆ ನಿಗದಿಪಡಿಸಿರುವ ದಂಡದ ಕೋಷ್ಟಕಗಳನ್ನು ಪರಿಷ್ಕರಿಸಿ ನಿಗದಿಪಡಿಸಲು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳ ಸಭೆಗೆ ಪ್ರಸ್ತಾವನೆಯನ್ನು ಮಂಡಿಸಿದ್ದು, ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

ತೀರ್ಮಾನ:- ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಸರ್ಕಾರವು ತನ್ನ ಕೈಗಾರಿಕಾ ನೀತಿ 2020-25ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಿದಂತೆ ಹಾಗೂ ಅದನ್ನು ನಿಗಮದಲ್ಲಿಯೂ ಸಹ ಅಳವಡಿಸಿಕೊಂಡಿರುವಂತೆ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ನಾಲ್ಕು ಪ್ರವರ್ಗಗಳನ್ನು ಬದಲಾಯಿಸಿ ಮೂರು ಪ್ರವರ್ಗಗಳನ್ನಾಗಿ ಹಾಗೂ ಅದರಂತೆ ವಿಧಿಸುವ ದಂಡದ ಪ್ರಮಾಣವನ್ನು ಈ ಕೆಳಕಂಡಂತೆ ವಿಧಿಸಲು ತೀರ್ಮಾನಿಸಿತು.

1) ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ.

ಕ್ರ.ಸಂ	ಪ್ರವರ್ಗ	ಮನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ"	ಶೇ. 15 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 10 ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 5ರಷ್ಟು ಬಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

000337

(4)

2) ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸಿರುವ ಹಾಗೂ ನಿಗದಿತ ಅವಧಿಯಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಪ್ರಾರಂಭಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ.

ಕ್ರ.ಸಂ	ಪ್ರವರ್ಗ	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ"	ಶೇ.10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 3ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

ಮೇಲ್ಕಂಡ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಪ್ರವರ್ಗ ಅನುಸಾರ ನಿಗಧಿಪಡಿಸಿದ ದಂಡವನ್ನು ಪಾವತಿಸಿಕೊಂಡು ಪುನರ್ ಪ್ರತಿ ಸ್ಥಾಪನೆ ಮಾಡಲು ಸೂಚಿಸಲಾಗಿದೆ.

ಪುನರ್ ಪ್ರತಿ ಸ್ಥಾಪನೆಗೆ ಸಂಬಂಧಿಸಿದಂತೆ ನಿಯಮ ಮತ್ತು ನಿಬಂಧನೆಗಳು ದಿನಾಂಕ: 01-10-2020ರ ಕಛೇರಿ ಆದೇಶದಂತೆ ಮುಂದುವರೆಯುತ್ತವೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ),/(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ಮಳಿಗೆ:ನಿರ್ವಹಣಾನೀತಿ:ಪುನರ್‌ಸ್ಥಾಪನೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಪುನರ್ ಸ್ಥಾಪನೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಆಡಳಿತ ಮಂಡಳಿ ಸಭೆಯ ನಡವಳಿ.

*****

ನಿಗಮವು ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯ ಅಭಿವೃದ್ಧಿಗೆ ತಗಲುವ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಸೇರಿಸಿ ಪ್ರೋರೇಟಾ ಆಧಾರದ ಮೇಲೆ ನಿವೇಶನಗಳ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ಎ, ಬಿ, ಸಿ, ಡಿ, ಸೂಪರ ಮಿನಿ, ಮಿನಿ, ಮಾದರಿ ಮಳಿಗೆಗಳನ್ನು, ಗೋದಾಮುಗಳು ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತದೆ. ಸದರಿ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಮಳಿಗೆಯನ್ನು ನಿರ್ಮಾಣ ಮಾಡಲು ಅಗತ್ಯವಿರುವ ಕಾಮಗಾರಿ ವೆಚ್ಚಗಳನ್ನು ಅಂದಾಜಿಸಿ ಅದಕ್ಕೆ ಮೇಲ್ವಿಚಾರಣಾ ಶುಲ್ಕ, ನಿಗಮದ ಸೇವಾ ಶುಲ್ಕಗಳನ್ನು ಸೇರಿಸಿ ಹಾಗೂ ಮೇಲೆ ತಿಳಿಸಿದಂತೆ ಲೆಕ್ಕಾಚಾರ ಮಾಡಿ ನಿಗಧಿಪಡಿಸಿದ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಗಳ ಮೌಲ್ಯವನ್ನು ನಿರ್ಧರಿಸಲಾಗುವುದು.

ಮಳಿಗೆಗಳ ಮೌಲ್ಯವನ್ನು ನಿರ್ಧರಿಸಿದ ನಂತರ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರುಗಳು ಹಂಚಿಕೆ ಪತ್ರ ಮತ್ತು ಕರಾರು ಒಪ್ಪಂದದ ಪ್ರಕಾರ ನಿಗಧಿತ ಅವಧಿಯಲ್ಲಿ ಕಂತು / ಮಳಿಗೆಗಳ ಮೌಲ್ಯವನ್ನು ಪಾವತಿಸದೇ ಇದ್ದಲ್ಲಿ, ಮಳಿಗೆಯನ್ನು ಕೆ.ಪಿ.ಪಿ ಕಾಯ್ದೆಯನುಸಾರ ಕ್ರಮ ತೆಗೆದುಕೊಂಡು ನಿಗಮದ ಸ್ವಾಧೀನಕ್ಕೆ ಪಡೆದು, ಹಂಚಿಕೆದಾರರುಗಳು ಪಾವತಿಸಬೇಕಾದ ಮಳಿಗೆಗಳ ಮೌಲ್ಯ ಮತ್ತು ಬಡ್ಡಿ, ವಿಳಂಬಿತ ಅವಧಿ ಬಡ್ಡಿ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಲೆಕ್ಕಾಚಾರ ಮಾಡಿ ಒಟ್ಟು ಮೊತ್ತಕ್ಕೆ ಆರ್.ಆರ್.ಸಿ ವಿತರಣೆ ಮಾಡಲಾಗುವುದು. ತದನಂತರ ಸದರಿ ಮಳಿಗೆಗಳನ್ನು ಮರು-ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಮಳಿಗೆಗಳನ್ನು ಹಂಚಿಕೆಗಾಗಿ ಮರು-ಪ್ರಕಟಣೆ ನೀಡುವ ಮುನ್ನ, ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಸದರಿ ಮಳಿಗೆಯ ನಿವೇಶನದ ಮೌಲ್ಯವನ್ನು ಸರ್ಕಾರವು ಆಯಾ ವರ್ಷಗಳಲ್ಲಿ ನಿಗಧಿಪಡಿಸಲ್ಪಡುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ನಿಗಮವು ರೂಪಿಸಿರುವ ಮಾನದಂಡಗಳಂತೆ ಲೆಕ್ಕಾಚಾರ ಮಾಡಿ ದರಗಳನ್ನು ನಿಗಧಿಪಡಿಸಿ ಆಯಾ ನಿವೇಶನಗಳ ವಿಸ್ತೀರ್ಣಕ್ಕೆ ತಕ್ಕಂತೆ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ರೂಪಿಸಿರುವ ಮಾನದಂಡಗಳನ್ವಯ ಸರ್ಕಾರದ ಆಯಾ ವರ್ಷದ ಪಿ.ಡಬ್ಲ್ಯೂ.ಡಿ ಎಸ್.ಆರ್. ದರಗಳಂತೆ ಮಳಿಗೆಯ ಕಟ್ಟಡ ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಅದರಲ್ಲಿ ಮಳಿಗೆಯ ನಿರ್ಮಾಣ ಸಾಲಿನಿಂದ ಹಂಚಿಕೆ ಮಾಡುವ ಸಾಲಿನವರೆವಿಗಿನ ಅವಧಿಗೆ ಸವಕಳಿಯನ್ನು ಲೆಕ್ಕಾಚಾರ ಮಾಡಿ, ಮಳಿಗೆಯ ಕಟ್ಟಡದ ಅಂದಾಜು ಮೌಲ್ಯದಲ್ಲಿ ಕಳೆದು, ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ನಂತರ ಮಳಿಗೆಯ ಕಟ್ಟಡದ ಮೌಲ್ಯಕ್ಕೆ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಯ ಒಟ್ಟು ಮೌಲ್ಯವನ್ನು ನಿರ್ಧರಿಸಿ ಹಂಚಿಕೆಗೆ ಪರಿಗಣಿಸಲಾಗುವುದು.

ಮಳಿಗೆಗಳನ್ನು ಕಂತು ಖರೀದಿ ಆಧಾರದ ಮೇಲೆ, ಈ ಹಿಂದೆ 6/ 10ವರ್ಷಗಳ ಕರಾರು ಅವಧಿಗೆ ಹಂಚಿಕೆ ಮಾಡಲಾಗುತ್ತಿದೆ.ಮಳಿಗೆಯ ಮೌಲ್ಯವನ್ನು 6/10 ವರ್ಷಗಳಿಗೆ ವಿಸ್ತರಿತ ಕಂತುಗಳನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರು ವಿಸ್ತರಿತ ಕಂತುಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ವಿಳಂಬಿತ ಅವಧಿಗೆ ನಿಗಮವು ನಿಗಧಿಪಡಿಸಿದ ಬಡ್ಡಿಯ ದರವನ್ನು ಆಕರಿಸಿ ಪಾವತಿಸಿಕೊಳ್ಳಲಾಗುವುದು ಆದಾಗ್ಯೂ ಹಂಚಿಕೆದಾರರು ಕಾರಣಾಂತರಗಳಿಂದ ಮಳಿಗೆಯ ಬಾಕಿ ಮೌಲ್ಯವನ್ನು ಆಕರಿತ ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ, ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಗಳನ್ನು ತೆಗೆದುಕೊಂಡು, ತದನಂತರವು ಪಾವತಿಸದೇ ಇದ್ದಲ್ಲಿ ಮಳಿಗೆಯನ್ನು ನಿಗಮದ ನಿಯಮಾನುಸಾರ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ತೆಗೆದುಕೊಂಡು, ಹಂಚಿಕೆದಾರರು ಪಾವತಿಸಬೇಕಾದ ಮೊತ್ತಕ್ಕೆ ಆರ್.ಆರ್.ಸಿ ವಿತರಿಸಿ ಅವರ ಆಸ್ತಿ ದೊರೆತಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುವುದು.

-2-

ಸದರಿ ಮಾಜಿ ಹಂಚಿಕೆದಾರರು ತಮಗೆ ಈ ಹಿಂದೆ ಹಂಚಿಕೆಯಾದ ಮಳಿಗೆಯನ್ನು ಮರು-ಸ್ವಾಧೀನ ಪಡೆಯಲು ಇಚ್ಛಿಸಿದಲ್ಲಿ, ನಿಗಮದ ಮಂಡಳಿಯು ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ವಯ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶ ಹಾಗೂ ಮುಂದುವರೆದಂತೆ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ ದಂಡವನ್ನು ವಿಧಿಸಲಾಗುವುದು. ಅದರಂತೆ ಬಾಕಿ ಹಾಗೂ ದಂಡವನ್ನು ಮಾಜಿ ಹಂಚಿಕೆದಾರರು ಪಾವತಿಸಿದಲ್ಲಿ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಮರು-ಸ್ವಾಧೀನ ನೀಡಲಾಗುವುದು.

ಸದರಿ ಮಳಿಗೆಗಳ ಬಾಕಿ ಕಂತುಗಳನ್ನು /ಮೌಲ್ಯವನ್ನು ಪಾವತಿಸದೇ ಇದ್ದ ಮಳಿಗೆಗಳನ್ನು ಬೀಗಮುದ್ರೆಗೊಳಿಸಿ ನಿಗಮದ ಸ್ವಾಧೀನಕ್ಕೆ ಪಡೆದ ನಂತರ ಹಂಚಿಕೆದಾರರು ಮರು ಸ್ವಾಧೀನ ಪಡೆಯಲು ಉದ್ದೇಶಿಸಿದಲ್ಲಿ ಕಛೇರಿ ಆದೇಶದನ್ವಯ ಹಂಚಿಕೆದಾರರು ನಿಗಮಕ್ಕೆ ಪಾವತಿಸಬೇಕಾದ ಮಳಿಗೆಯ ಬಾಕಿ ಕಂತುಗಳು ಮತ್ತು ವಿಳಂಭಿತ ಅವಧಿಗೆ ಆಕರಿಸಲ್ಪಟ್ಟ ಬಡ್ಡಿಯೊಂದಿಗೆ ಒಟ್ಟು ಮೊತ್ತದ ಶೇ. ೫೦ ರಷ್ಟನ್ನು ಪಾವತಿಸಿದಲ್ಲಿ ಮಳಿಗೆಯನ್ನು ಮರು-ಸ್ವಾಧೀನ ನೀಡಲಾಗುವುದು.

ಆದರೆ, ಮೇಲ್ಕಂಡಂತೆ ದಿನಾಂಕ 22-06-2015 ರಂದು ಹೊರಡಿಸಲಾದ ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳ ಕಛೇರಿ ಆದೇಶ ಹಾಗೂ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ, ಹಂಚಿಕೆದಾರರು ಮಳಿಗೆಯ ಬಾಕಿ ಮೌಲ್ಯ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪ್ರವರ್ಗವಾರು ಕೈಗಾರಿಕಾ ವಸಾಹತುಗಳಿಗೆ ನಿಗಧಿಪಡಿಸಿದ ಮಳಿಗೆ/ನಿವೇಶನಗಳ ಪ್ರಚಲಿತ ಮೌಲ್ಯದ ಮೇಲೆ ವಿಧಿಸುವ ಶೇಕಡವಾರು ಪ್ರಮಾಣ ದಂಡದ ಮೊತ್ತದೊಂದಿಗೆ ಒಂದೇ ಇಡಿಗಂಟಿನಲ್ಲಿ ಪಾವತಿಸಿದರೆ ಮಾತ್ರ ಮನರ್ ಸ್ಥಾಪನೆಗೆ (Restoration) ಅನುಮತಿಸಲಾಗುವುದು. ಈ ನಿಯಮವು ಮಳಿಗೆ ಹಂಚಿಕೆದಾರರುಗಳ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆಯಾಗಲಿದ್ದು, ರೋಗಗ್ರಸ್ಥ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮವಾಗಿರುವುದಿಲ್ಲ.

ನಿಗಮವು ಆಯಾ ಮಳಿಗೆಗಳ ಮೌಲ್ಯಕ್ಕೆ ಬಡ್ಡಿಯನ್ನು ಸೇರಿಸಿ ವಿಸ್ತರಿತ ಕಂತುಗಳನ್ನು ನಿರ್ಧರಿಸಿದ್ದು, ತದನಂತರ ವಿಳಂಭಿತ ಪಾವತಿ ಅವಧಿಗೂ ಸಹ ಕಂತಿನಲ್ಲಿನ ಬಡ್ಡಿಗಿಂತ ಶೇ.2ರಷ್ಟು ಹೆಚ್ಚುವರಿ ಬಡ್ಡಿ ದರವನ್ನು ಆಕರಿಸಿ ಪಾವತಿಸಿಕೊಳ್ಳುವುದರಿಂದ ನಿಗಮಕ್ಕೆ ನಷ್ಟವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ದೇಶಾದ್ಯಂತ ಹರಡಿರುವ ಕರೋನಾ /ಕೋವಿಡ್-19 ರೋಗದಿಂದಾಗಿ ವಾಣಿಜ್ಯ ಚಟುವಟಿಕೆಗಳು ಸರ್ವತೋಮುಖವಾಗಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೇ ನಿಗಮದ ಮೂಲ ಧ್ಯೇಯೋದ್ದೇಶವಾಗಿದ್ದು, ಸಣ್ಣ ಕೈಗಾರಿಕೆಗಳ ಸ್ನೇಹಿಯಾಗಿ ಇರುವುದರಿಂದ, ಮಳಿಗೆ ಮತ್ತು ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿ ಇತ್ಯಾದಿ ಕಟ್ಟಡಗಳಿಗೆ, ಮೇಲ್ಕಂಡ ಆದೇಶಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಅಂಶಗಳನ್ನು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದ್ದು, ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> ತೀರ್ಮಾನ:- ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ನಿವೇಶನಗಳ ಜೊತೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸಹ ಸೇರಿದ್ದು, ಅವುಗಳನ್ನು, ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ಹಾಗೂ ತತ್ಸಬಂಧ ಪರಿಷ್ಕೃತ ಆದೇಶವನ್ನು ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.

ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಕಂಡಿಕೆಗಳಲ್ಲಿ ನಿಗಮವು ತನ್ನ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಿಸಿರುವ ಮಳಿಗೆಗಳ ಮೌಲ್ಯ ನಿರ್ಧರಣೆ, ಹಂಚಿಕೆ, ಕಂತು ನಿರ್ಧರಣೆ, ವಸೂಲಾತಿ ಹಾಗೂ ವಿಳಂಭಿತ ಅವಧಿಗೆ ಆಕರಿಸಿರುವ ಬಡ್ಡಿ ಪಾವತಿಸದೇ ಇದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿದ್ದು, ಅದರಂತೆ ಮಳಿಗೆ/ ಗೋದಾಮು /ಸಂಕೀರ್ಣ ಮಳಿಗೆ/ಅಂಗಡಿಗಳಿಗೆ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಮಂಡಳಿಯು ತೆಗೆದುಕೊಂಡ ನಿರ್ಧಾರದ ಮೇರೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ನಿರ್ಧರಿಸಿ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ವಿಭಾಗೀಯ ಕಛೇರಿಗಳು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

25/01/2021

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

000334

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ),/(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

000333

AFFIDAVIT

I _____ S/o _____ aged about ____ years residing at _____ do hereby solemnly declare on oath as under.

That I am applying for an allotment of Shed/Plot at Industrial Estate, _____ against Notification No. _____ Dated _____. Issued by the KARNATAKA STATE SMALL INDUSTRIES DEVELOPMENT CORPORATION LIMITED.

Whereas, that I do here by declare that, I or our family members (means where the applicant is individual, or a firm, his or her spouse children and partners) have not applied for allotment of Sheds Plots for the same Notification through other application.

That, I here by declare that, I or our family members/partners have not been allotted Sheds/Plots by the KARNATAKA STATE SMALL INDUSTRIES DEVELOPMENT CORPORATION LIMITED any where in Karnataka since 1960 at any point of time.

That, the information declared above is true and correct to the best of my knowledge. In case, I the above declaration is found to be false, the allotment made in my favour is liable to be cancelled. In addition to forfeiture of EMD and other amounts paid by me to KARNATAKA STATE SMALL INDUSTRIES DEVELOPMENT CORPORATION LIMITED.

DEPONDENT

Place:

Date:

Identified by me

Sworn to before me

Advocate

No. of corrections

000332

179

KARNATAKA STATE SMALL INDUSTRIES DEVELOPMENT CORPN. LTD
(INDUSTRIAL ESTATE, RAJAJINAGAR, BANGALORE-560 044)
KSSIDC

NO: CO-ORD:OPEN SPACE:COST:SHEDS/PLOTS:2008 DATE: 6/3/2008

OFFICE ORDER

Sub : Guidelines for calculating the cost of area in excess of "Standard area , area mentioned in the Possession Certificate, voluntarily disclosed area & encroached area in case of allotments done before 1/1/2008-reg.

Ref 1. Office Order NO:CM(CO- SHEDS/PLOTS/DIMENSIONS/ 2002- 03 dated 6/5/2002.
2. Office Order No:MD:CRD:ASSET:2007 dated 28/7/2007.
3. Note No: CO-ORD:OTS-II:GUIDELINES:BC:2007 dated 2/1/2008 .
4. Decisions of 308TH Board held on 29/2/2008.

****

Preamble :

As per the decision of the 275th Board meeting held on 13/7/2001, the Sub-Committee of the Board had discussed the issue of charging the rates for the excess area noticed between the area mentioned in the Possession Certificate and the actual area mentioned in the CDD (Correct Dimension Diagram) made at the time of issuing the sale deed. The recommendation of the Sub –Committee was accepted in the 278th Board meeting held on 28/3/2002. Accordingly, Office order was also issued on 6/5/2002. In line with the said Office Order, the excess area noticed between the area mentioned in the Possession Certificate and the Actual area as per CDD prepared before issuing Sale Deed is being regularised irrespective of the extent of area involved and the cost is being worked out and collected.

There are certain instances wherein, the excess area is ranging up to 50% of the original allotted area or even more and hence, it is felt necessary to fix the outer limit for the Excess area to be considered under the provisions of the Office Order

.....2...

issued on 6/5/2002. Hence, the issue has been discussed and internal guidelines have been issued vide note dated 2/1/2008 (Reference-3).

Further, it is observed that some of the SSI Units are utilising land in excess of what is allotted to them. In order to regularise such un-authorised utilization, the subject has been discussed during 305th Board Meeting held on 24/7/2007 and certain guidelines have been issued in this regard vide Office Order reference 2.

In the above Office Orders and guidelines, since the issues are interlinked, it is necessary that clarifications are issued explicitly to remove any ambiguity and hence, the following Office Order :

ORDER :

In suppression of all the Office Orders / Note in this regard in reference, the following guidelines are issued in respect of calculation of cost of extra open space & regularization of encroachments:

1. In cases where the Corporation itself has provided the compound wall, for the excess area over and above the area mentioned in the possession Certificate , the cost at the rate prevailing at the time of allotment is to be collected.

2. In respect of all other cases
   a. where the Sital area indicated in the Possession Certificate is notional and the actual area is more & in possession since original allotment
   b. where the actual area according to the boundaries mentioned in the Possession certificate does not tally with the area mentioned in the Possession Certificate but does not amount to encroachment
   c. where the excess area has resulted due to relocation of the infrastructural facilities such as roads or drains
   d. where an additional strip of land which could be only used by the allottee is available,

for the difference in area observed between the Possession Certificate (for plots / bit of lands / sheds/ flats/ shops/ Godowns) and the Actual area as per CDD prepared at

000330

the time of issuing Sale Deed, the cost prevailing at the time of original allotment together with simple interest at 10 % or the current allotment rate which ever is less is to be collected subject to the upper limit as follows:

Sl.No.	Category of Industrial Estate	Upper limit of difference in area between the PC & CDD (eligible for original rates + 10% Interest)
1.	A	10 % of PC area
2.	B	20 % of PC area
3.	C	30 % of PC area
4.	D	30 % of PC area

3. However, in respect of cases where area mentioned in the Possession Certificate is over and above the Standard area, for the difference in area between PC and the Standard area, the cost prevailing at the time of allotment together with simple interest at 10 % or the present allotment rate which ever is less is to be collected with out any area restriction as above.(sl.no.2).

4. In respect of cases coming under Sl.No. 2 and 3 , for the excess area observed over and above the area indicated in the Possession certificate, beyond 10% /20%/30%/30% for industrial Estates coming under category A, B, C and D respectively. current land rates applicable for different Estates as per the Circular issued is to be collected.

5. In respect of voluntary disclosure of excess area utilized by the allottees / encroachments which does not affect the Intrastructural facilities of the Corporation or the neighboring units , entire area can be regularized by collecting the current land rates applicable for different Estates as per the Circular issued.

000329

6. All cases coming under sl.no.5 are to be regularized with the prior approval of the Managing Director irrespective of the extent involved.

7. In respect of regularization of cases as in 1 to 4 above, concerned officers can decide following the above guidelines meticulously and as per the delegation of powers vide Office Order dated 19/11/1994.

This Office Order comes into effect from 2/1/2008 and shall be in force until further orders.

MANAGING DIRECTOR.

All Concerned.

To: All GMs / SE /ALL CMs /ALL DCMs / EEs/AEE/

000328

KARNATAKA STATE SMALL INDUSTRIES DEVELOPMENT CORPON.LTD

Industrial Estate, Rajajinagar, Bangalore – 560 044.

KSSIDC

CRD/LEASE/PERIOD/SHEDS/PLOTS/2005 DATE 20-10-2005

OFFICE ORDER 3598

Sub: Lease period for sheds/plots.
Ref : 296th Board Meeting held on 23.9.2005
2.Office Order No. CRD/SALE-DEED/SHEDS/ 2005 DATE 15-10-2005

****

The Board in its 296th Meeting held on 23.09.05 has ordered to impose a condition of mandatory lease period of 6 years for all allotments made from 1st April 2005 both under regular/stray/ allotment of sheds/plots, before sale deed is given and for no reason the period of lease can be waived.

Therefore, in respect of sheds/plots allotted both under regular/ stray allotment made on or after 1.4.2005, a condition of mandatory lease period of six years shall be imposed. This shall be suitably incorporated in all notifications/ allotment letters/lease-cum-sale agreement.

Further, the guidelines issued vide O.O dated 15.10.2005 under reference-2 shall be followed for issue of sale deed.

MANAGING DIRECTOR

TO : CM (IES) Z-I,II,III. / All DCMs (IES)
Copy : CM (F)I/c/ CM (IA)I/c. DCM (LAW)/ PS TO [illegible]

MYDO/CIR-04/SALE-DEED

No. IES/HBL/LEASE/PERIOD/SHEDS/plots/2005
Copy of the above office order is forwarded to the Sales Manager [illegible], Gadag & Haveri D HA Kulkarni, @ HB Kattigi [illegible], D.B. & [illegible] @ B Parameshwarappa @ BH Kumar @ Smt. Sunita. [illegible] & DCM (IES) Section Hbl. for information & with a direction to follow the instructions in the above office order.

Deputy Chief Manager (IES)
KSSIDC Ltd., [illegible]

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸೂಂದಾಯಿತ ಕಛೇರಿ : ಎಸ್ಎಸ್ಐಡಿಸಿ ಕಟ್ಟಡ, ಕೈಗಾರಿಕಾ ವಸಾಹತು, ಕೋಲಾರನಗರ, ಬೆಂಗಳೂರು -560 010
ಫೋನ್ : 23407011 ರಿಂದ 23 ಫ್ಯಾಕ್ಸ್ : 01-080-23143500 / 23380070 ತಂತಿ : ಮೈಸ್ಕಾಲ್ ಕಾರ್ಡ
ಇ-ಮೇಲ್ : kssidclho@vsnl.com ವೆಬ್‌ಸೈಟ್ : www.kssidc.co.in

000327

ಸಂಖ್ಯೆ: ಸಮನ್ವಯ:ಕೈವ:ಮಳಿಗೆ:ನಿವೇಶನ:ಕರಾರು ಅವಧಿ:ಹಂಚಿಕೆ:2017 ದಿನಾಂಕ: 06-09-2017

ಕಛೇರಿ ಆದೇಶ

ವಿಷಯ : ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿಯ ನಿವೇಶನ/ಮಳಿಗೆಗಳ ಹಂಚಿಕೆ ಕಾರ್ಯನೀತಿಗೆ ತಿದ್ದುಪಡಿಗಳಿಗೆ ಅನುಮೋದನೆ ಬಗ್ಗೆ. – ನಿಗಮದಿಂದ ಹಂಚಿಕೆ ಮಾಡಲಾಗುವ ಮಳಿಗೆ/ಫ್ಲಾಟ್/ಗೋದಾಮು/ಅಂಗಡಿ ಹಾಗೂ ನಿವೇಶನಗಳನ್ನು 10 ವರ್ಷಗಳ ಗುತ್ತಿಗೆ ಕ್ರಯ ಮಾರಾಟ ಆಧಾರದ ಮೇಲೆ (Lease cum Sale basis) ಹಂಚಿಕೆ ಮಾಡುವ ಕುರಿತು.

ಉಲ್ಲೇಖ :
1) ಸರ್ಕಾರಿ ಆದೇಶ ಸಂಖ್ಯೆ./ಸಿಪ/511/ಎಸ್ಪಿಕ್ಯೂ/2013 ದಿನಾಂಕ: 07.08.2014.
2) ಸರ್ಕಾರಿ ಆದೇಶ ಸಂಖ್ಯೆ/ಸಿಪ/58/ಎಸ್ಪಿಪಿ/2013 ದಿನಾಂಕ 01.10.2014.
3) ದಿನಾಂಕ 26.12.2014 ರ ನಿಗಮದ 332ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
4) ಕಛೇರಿ ಆದೇಶ ಸಂಖ್ಯೆ/ಸಮನ್ವಯ/ಮನಿ ದೀರ್ಘಾವಧಿ/ಹಂಚಿಕೆ-ವರದಿ/2015/5478 ದಿನಾಂಕ 10.02.2015.
5) ದಿನಾಂಕ 14.01.2016 ರ ನಿಗಮದ 337ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
6) ಸರ್ಕಾರಿ ಆದೇಶ ಸಂಖ್ಯೆ/ಸಿಪ:105:ಎಸ್ಪಿಪಿ:2017 ದಿನಾಂಕ 11.07.2017

* * * * *

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮಂಡಳಿಯು ಕಾಲಕಾಲಕ್ಕೆ ಹಂಚಿಕೆಯ ಷರತ್ತು ಮತ್ತು ನಿಬಂಧನೆಗಳ ಕಾರ್ಯನೀತಿಗಳು, ಗುತ್ತಿಗೆ ಕಾಲಾವಧಿ, ಮೂಲಸೌಕರ್ಯಗಳ ದರ, ಕೈಗಾರಿಕಾ ವಸಾಹತುಗಳ ವರ್ಗೀಕರಣ, ನಿರ್ಗಮನ ನೀತಿ, ಕ್ರಯಪತ್ರಗಳ ನಿರ್ವಹಣೆ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಪಟ್ಟಂತೆ ನಿಗಮದಿಂದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಮಳಿಗೆ, ನಿವೇಶನ, ಗೋದಾಮು ಮತ್ತು ಫ್ಲಾಟ್ಸ್ ಹಂಚಿಕೆ ಸಂಬಂಧ ಕಾರ್ಯನೀತಿಗಳನ್ನು ರೂಪಿಸುತ್ತಿತ್ತು. ಮಂಡಳಿಯಿಂದ ಅನುಮೋದಿಸಲ್ಪಡುತಿದ್ದಂತೆ ಮತ್ತು ರೂಪಿಸಲ್ಪಟ್ಟ ಮಾರ್ಗಸೂಚಿಗಳನ್ವಯ ಹಂಚಿಕೆಯ ಕಾಲಾವಧಿಯ ಬಗ್ಗೆ ಮಂಡಳಿ ನಿರ್ಧಾರದಂತೆ ಸಣ್ಣ ಪ್ರಮಾಣ ಕೈಗಾರಿಕಾ ಘಟಕಗಳಿಗೆ ಕಂತು-ಖರೀದಿ ಆಧಾರದ ಮೇಲೆ ಹಂಚಿಕೆಗಳನ್ನು ಮಾಡಲಾಗುತ್ತಿತ್ತು ಮತ್ತು ಕ್ರಯಪತ್ರಗಳನ್ನು ನಿರ್ವಹಿಸಿಕೊಡಲಾಗುತ್ತಿತ್ತು.

ಕೈಗಾರಿಕಾ ವಸಾಹತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಕಾರ್ಯನೀತಿಗಳು, ಮಾರ್ಗಸೂಚಿಗಳು, ಸುತ್ತೋಲೆಗಳು ಇತ್ಯಾದಿಗಳು ನಿಗಮದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲ್ಪಡುತ್ತಿದ್ದವು. ಮಂಡಳಿಯು ಹಂಚಿಕೆ ಪ್ರಕ್ರಿಯೆಯಿಂದ ಕ್ರಯಪತ್ರದವರೆಗಿನ ಕಾರ್ಯವಿಧಾನವನ್ನು ಸರ್ಕಾರದ ನಿರ್ದೇಶನಗಳ ಸೇರ್ಪಡೆಗಳೊಂದಿಗೆ, ಸೇರ್ಪಡೆಗಳಿಲ್ಲದ ಹಾಗೂ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಅಳವಡಿಸಿಕೊಳ್ಳುತ್ತಿತ್ತು.

ದಿನಾಂಕ 01.10.2014ರ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ನಿರ್ಣಯವು ಪ್ರಪ್ರಥಮ ಬಾರಿಗೆ ಕೆ.ಎಸ್.ಎಸ್.ಐ.ಡಿ.ಸಿ.ಯು. ನಿಗಮದಿಂದ ಅಭಿವೃದ್ಧಿಪಡಿಸುವ ಎಲ್ಲಾ ಮಳಿಗೆ/ನಿವೇಶನ/ಗೋದಾಮು/ಫ್ಲಾಟ್ಸ್/ಅಂಗಡಿ ಹಾಗೂ ಇತರ ಹಂಚಿಕೆಗಳನ್ನು ಕಡ್ಡಾಯವಾಗಿ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವಂತೆ ಷರತ್ತು ವಿಧಿಸಿದೆ. ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19 ರಲ್ಲಿ 99 ವರ್ಷಗಳ ಗುತ್ತಿಗೆ ಸಂಬಂಧ ನೀಡಿರುವ ಮಾರ್ಗಸೂಚಿಗಳನ್ನು, ಅವುಗಳನ್ನೇ ಉಚಿತ ವ್ಯತ್ಯಾಸಗಳೊಂದಿಗೆ (mutatis-mutandis) ಅಳವಡಿಸಿಕೊಳ್ಳುವ ಬಗ್ಗೆ ಮಂಡಳಿಯ ಮುಂದೆ ತರಲು ನಿರ್ಧರಿಸಲಾಯಿತು ಹಾಗೂ ಅದರನ್ವಯ ಅಳವಡಿಸಿಕೊಳ್ಳಲಾಯಿತು ಮತ್ತು ಹಂಚಿಕೆಗಳನ್ನು ಮಾಡಲಾಯಿತು.

ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ನಿವೇಶಗಳು/ಫ್ಲ್ಯಾಟ್ಸ್‌ಗಳು/ಗೋದಾಮುಗಳು/ಅಂಗಡಿಗಳು ಇವುಗಳ ಹಂಚಿಕೆಯನ್ನು 99 ವರ್ಷಗಳ ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡುವ ಬಗ್ಗೆ ಒಂದು ಕಾರ್ಯಸೂಚಿಯನ್ನು ದಿನಾಂಕ 26.12.2014 ರಂದು ಜರುಗಿದ ನಿಗಮದ 332ನೇ ಆಡಳಿತ ಮಂಡಳಿ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಮಂಡಳಿಯ ಅನುಮೋದನೆಯನ್ವಯ, ದಿನಾಂಕ 10.02.2015 ರಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶದವರೆವಿಗೂ ಜಾರಿಯಲ್ಲಿರುವಂತೆ, ಇನ್ನು ಮುಂದೆ ಕೆ.ಎಸ್.ಎಸ್.ಐ.ಡಿ.ಸಿ ನಿಗಮದಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ಫ್ಲ್ಯಾಟ್ಸ್‌ಗಳು/ಅಂಗಡಿಗಳು/ಗೋದಾಮುಗಳು ಮತ್ತು ನಿವೇಶನಗಳನ್ನು 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಿ, ದಿನಾಂಕ 10.02.2015 ರಂದು ಕಛೇರಿ ಆದೇಶವನ್ನು ಹೊರಡಿಸಲಾಯಿತು.

99 ವರ್ಷಗಳ ಗುತ್ತಿಗೆ ಮೇಲಿನ ಹಂಚಿಕೆಗಳು, ನಿರ್ಗಮನ ನೀತಿ, ಘಟಕದ ಕಾರ್ಯಚರಣೆ ಹಾಗೂ ಕಾರ್ಯವಿಧಾನಗಳು ಮತ್ತು ಗುತ್ತಿಗೆ ನೀತಿ ಇತ್ಯಾದಿಗಳನ್ನು ರೂಪಿಸಿಕೊಳ್ಳುವ ಬಗ್ಗೆ ಸವಿವರವಾದ ಕಾರ್ಯನೀತಿ ದಾಖಲೆಯನ್ನು ರೂಪಿಸಿ ದಿನಾಂಕ 14.01.2016ರಂದು ಜರುಗಿದ ನಿಗಮದ 337ನೇ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲಾಗಿತ್ತು ಮತ್ತು ಮಂಡಳಿಯ ಅನುಮೋದನೆ ತದನಂತರದಲ್ಲಿ, ಅದನ್ನು ಸಮಗ್ರ ರೂಪದಲ್ಲಿ ತದನಂತರದ ಹಂಚಿಕೆಗಳಿಗೆ ಅನುಷ್ಠಾನಗೊಳಿಸಲಾಯಿತು.

ಕರ್ನಾಟಕ ಸರ್ಕಾರವು ಅನುಕ್ರಮವಾಗಿ, ದಿನಾಂಕ 07.08.2014ರ ಸರ್ಕಾರಿ ಆದೇಶಗಳ ಸಂಖ್ಯೆ: CI:511:SPQ:2013 ಹಾಗೂ 07.07.2015 ಮತ್ತು CI:15:SPQ:2017 ದಿನಾಂಕ 09.03.2017 ಕ್ಕೆ ಈ ಕೆಳಕಂಡಂತೆ ಸೇರ್ಪಡೆ ಮಾಡುವುದರೊಂದಿಗೆ ಉಲ್ಲೇಖ(1) ರಂತೆ "ತಿದ್ದೋಲೆ ಆದೇಶ"ವನ್ನು ಹೊರಡಿಸಿದ್ದು ದಿನಾಂಕ 09.03.2017 ರ ಸರ್ಕಾರಿ ಆದೇಶದ ಕ್ರಮಾಂಕ 9ರ ಸೇರ್ಪಡೆ ವಿವರಗಳು ಕೆಳಕಂಡಂತಿವೆ.

ವಿವರಗಳು:

1) ದಿನಾಂಕ 09.03.2017 ರ ಸರ್ಕಾರಿ ಆದೇಶ ಸಂಖ್ಯೆ: CI:511:SPQ:2017 ಕ್ಕೆ ಕೆಳಕಂಡಂತೆ ಸೇರ್ಪಡೆ ಮಾಡುವುದು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ/ಮಳಿಗೆಗಳನ್ನು ಗುತ್ತಿಗೆ-ಕ್ರಯ ಆಧಾರದ ಮೇಲಿನ ಹಂಚಿಕೆಗೆ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸುವುದು ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ಹಂಚಿಕೆಯಾದ ಜಾಗದ ತೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸಬೇಕು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸುವಂತಿಲ್ಲ.
- ನಿಚ್ಚಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರಲೇಬೇಕು. ಕ್ರಯಪತ್ರ ನೀಡಿದ ನಂತರದಲ್ಲಿ ,ನಿವೇಶನ/ಮಳಿಗೆಯನ್ನು ಕೈಗಾರಿಕಾ ಉದ್ದೇಶಗಳಿಗೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಉದ್ಯಮಗಳು	ಉತ್ಪಾದನಾ ಉದ್ಯಮಗಳು	ಸೇವಾ ಉದ್ಯಮಗಳು
	ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ	ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ
ಸೂಕ್ಷ್ಮ	ರೂ. 25 ಲಕ್ಷಗಳವರೆಗೆ	ರೂ. 10 ಲಕ್ಷಗಳವರೆಗೆ
ಸಣ್ಣ	ರೂ. 25-500 ಲಕ್ಷಗಳವರೆಗೆ	ರೂ. 10-200 ಲಕ್ಷಗಳವರೆಗೆ
ಮಧ್ಯಮ	ರೂ. 500-1000 ಲಕ್ಷಗಳವರೆಗೆ	ರೂ. 200-500 ಲಕ್ಷಗಳವರೆಗೆ

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೇ ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಕರಾರು ಡೀಡ್‌ನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.
- ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಅಡ್ಡಿಗಳು/ಸಮಸ್ಯೆಗಳು ಸಂಭವಿಸಿದಲ್ಲಿ ಕೆ.ವಿ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಈ ಯೋಜನೆ ಅನುಷ್ಠಾನಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನುಮೋದನೆ ಪಡೆಯುವುದು.

ಮೇಲಿನ ಅಂಶಗಳ ಹಿನ್ನೆಯಲ್ಲಿ ಉಲ್ಲೇಖ(6) ರಲ್ಲಿನ ಸರ್ಕಾರಿ ಆದೇಶದಲ್ಲಿ ನೀಡಿರುವ ಆದೇಶಗಳು/ವಿಧಿಸಿರುವ ಮಾರ್ಗಸೂಚಿಗಳನ್ನು ನಿಗಮದಲ್ಲಿಯು ಸಹ ಉಚಿತ ವ್ಯತ್ಯಾಸಗಳೊಂದಿಗೆ (mutatis mutandis) ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ಅದರನ್ವಯ ಈ ಕೆಳಕಂಡಂತೆ ಆದೇಶಗಳನ್ನು ಹೊರಡಿಸಲಾಗಿದೆ.

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ / ಮಳಿಗೆ / ಗೋದಾಮು / ಅಂಗಡಿ / ಫ್ಲಾಟ್ಸ್‌ಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಲಾಗಿದೆ.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸಲಾಗಿದೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ನಿಗಮದಿಂದ ಹಂಚಿಕೆಯಾದ ಜಾಗದ ಶೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸತಕ್ಕದ್ದು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸಲಾಗುವುದಿಲ್ಲ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಿಸಿದಂತೆ ನಿಗಮದಿಂದ ಮಂಡಳಿಯಿಂದ ಈಗಾಗಲೇ ಅನುಮೋದನೆಗೊಂಡಿರುವ ಕಾರ್ಯನೀತಿಗಳನ್ನು ಅಳವಡಿಸಿಕೊಳ್ಳತಕ್ಕದ್ದು ಮತ್ತು ಜಾರಿಯಲ್ಲಿರತಕ್ಕದ್ದು.
- ನಿಗಮದಿಂದ ನಿಚ್ಚಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ವಿವಿಧ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರತಕ್ಕದ್ದು ಹಾಗೂ ಕ್ರಯಪತ್ರ ನೀಡಿದ ತದನಂತರದಲ್ಲಿ ನಿವೇಶನ/ಮಳಿಗೆ/ಗೋದಾಮು/ಅಂಗಡಿ/ಫ್ಲಾಟ್ಸ್ ಗಳನ್ನು ಕೈಗಾರಿಕಾ ಉದ್ದೇಶಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಉದ್ಯಮಗಳು	ಉತ್ಪಾದನಾ ಉದ್ಯಮಗಳು	ಸೇವಾ ಉದ್ಯಮಗಳು
	ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ	ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ
ಸೂಕ್ಷ್ಮ	ರೂ. 25 ಲಕ್ಷಗಳವರೆಗೆ	ರೂ. 10 ಲಕ್ಷಗಳವರೆಗೆ
ಸಣ್ಣ	ರೂ. 25-500 ಲಕ್ಷಗಳವರೆಗೆ	ರೂ. 10-200 ಲಕ್ಷಗಳವರೆಗೆ
ಮಧ್ಯಮ	ರೂ. 500-1000 ಲಕ್ಷಗಳವರೆಗೆ	ರೂ. 200-500 ಲಕ್ಷಗಳವರೆಗೆ

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರ: ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ನಿಗಮದಿಂದ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಗುತ್ತಿಗೆಪತ್ರ (Lease Deed) ಅನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.

ಈ ಹಿಂದೆ 10 ವರ್ಷಗಳ ಗುತ್ತಿಗೆ ಅವಧಿಗೆ ಸಂಬಂಧಿಸಿದಂತೆ ಹೊರಡಿಸಲ್ಪಟ್ಟಿದ್ದ ನಿಗಮದ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ಅದೇ ಸೌಲಭ್ಯಗಳನ್ನು ವಿಸ್ತರಿಸುವುದರೊಂದಿಗೆ, ಪ್ರಸ್ತುತ 10 ವರ್ಷಗಳ ಗುತ್ತಿಗೆ ಅವಧಿಯನ್ನು ಈಗಾಗಲೇ ದಿನಾಂಕ 01.10.2014 ರಿಂದ ಈವರೆವಿಗೂ ನಿಗಮದಿಂದ 99 ವರ್ಷಗಳ ದೀರ್ಘಕಾಲದ ಗುತ್ತಿಗೆ ಕರಾರು ಅವಧಿ ಮೇಲೆ ಹಂಚಿಕೆ ಮಾಡಿರುವ ಎಲ್ಲಾ ಹಂಚಿಕೆದಾರರುಗಳಿಗೂ ಸಹ ಪೂರ್ವಾನ್ವಯವಾಗುವಂತೆ ಅನ್ವಯಿಸತಕ್ಕದ್ದು ಹಾಗೂ ತದನುಸಾರವಾಗಿ ಕ್ರಯ ಪತ್ರಗಳನ್ನು ನಿರ್ವಹಿಸಿಕೊಡಲು ಆದೇಶಿಸಿದೆ.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಆದೇಶವು ತತ್‌ಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಲಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ಹರಿಹರ/ ಮಂಗಳೂರು/ ವಿಜಯಪುರ/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ)./(ಸಮನ್ವಯ/ಸಾ.ಸಂ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆ.ಲ.ಪ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು ಮಾಹಿತಿಗೆ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080-2340 7011 ಇಂದ 25, ಫ್ಯಾಕ್ಸ್ : 080-2314 3566 / 2338 9070
ಇ-ಮೈಲ್ : kssidcho@karnataka.gov.in ವೆಬ್‌ಸೈಟ್ : www.kssidc.co.in

000323

ಸಂಖ್ಯೆ/ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2022/1926 ದಿನಾಂಕ: 19.01.2022

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/23 1355 ದಿನಾಂಕ: 01.10.2020.

*****

ದಿನಾಂಕ: 01.10.2020 ರಂದು ಹೊರಡಿಸಿರುವ ಉಲ್ಲೇಖಿತ ಕಛೇರಿ ಆದೇಶದಲ್ಲಿ ದಿನಾಂಕ: 30.09.2021 ರೊಳಗೆ ಹಂಚಿಕೆ ಪುನರ್ ಸ್ಥಾಪನೆ ನಿಯಮದಡಿ ದಂಡ ಪಾವತಿಸಿ ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುತ್ತಿರುವ ಘಟಕಗಳಿಗೆ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ಶೇ.10 ರಷ್ಟು ನಿವೇಶನದ ಬಾಲ್ತಿದರದ ದಂಡವನ್ನು ವಿಧಿಸಲು ರಿಯಾಯಿತಿಯನ್ನು ನೀಡಲಾಗಿತ್ತು.

ಸದರಿ ಆದೇಶದನ್ವಯ ಈಗಾಗಲೇ ದಿನಾಂಕ: 30.09.2021 ರೊಳಗಾಗಿ, ಹಂಚಿಕೆ ಪುನರ್ ಸ್ಥಾಪನೆ ಆದೇಶದನ್ವಯ ನಿಗದಿತ ಅವಧಿಯಲ್ಲಿ ದಂಡ ಪಾವತಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಿ ಕ್ರಯಪತ್ರ ನಿರ್ವಹಿಸಲು ಅಗತ್ಯವಾದ ದಾಖಲೆಗಳನ್ನು ಸಲ್ಲಿಸಿರುವ ಘಟಕದ ಹಂಚಿಕೆದಾರರುಗಳಿಗೆ ಉಲ್ಲೇಖಿತ ಕಛೇರಿ ಆದೇಶದನ್ವಯ ವಿಧಿಸಬೇಕಾಗಿದ್ದ ಶೇ.10 ರಷ್ಟು ನಿವೇಶನದ ಬಾಲ್ತಿದರದ ದಂಡವನ್ನು ವಿಧಿಸದೇ ಕ್ರಯಪತ್ರ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

(ಭಾಮಾ ಸಿ.)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು / ತುಮಕೂರು / ಹುಬ್ಬಳ್ಳಿ / ಬೆಳಗಾವಿ / ಕಲಬುರಗಿ/ ಮೈಸೂರು / ಶಿವಮೊಗ್ಗ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು (ಕೈವ) / (ಆಡಳಿತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ವ-1 (ಹಣಕಾಸು) / (ಆಲೆಪ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ) /(ವಾಲೆ), ಕರಾಸಕೈಅನಿನಿ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ಮಳಿಗೆ:ನಿರ್ವಹಣಾನೀತಿ:ಪುನರ್‌ಸ್ಥಾಪನೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಪುನರ್ ಸ್ಥಾಪನೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಆಡಳಿತ ಮಂಡಳಿ ಸಭೆಯ ನಡವಳಿ.

*****

ನಿಗಮವು ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯ ಅಭಿವೃದ್ಧಿಗೆ ತಗಲುವ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಸೇರಿಸಿ ಪ್ರೋರೇಟಾ ಆಧಾರದ ಮೇಲೆ ನಿವೇಶನಗಳ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ಎ, ಬಿ, ಸಿ, ಡಿ, ಸೂಪರ ಮಿನಿ, ಮಿನಿ, ಮಾದರಿ ಮಳಿಗೆಗಳನ್ನು, ಗೋದಾಮುಗಳು ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತದೆ. ಸದರಿ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಮಳಿಗೆಯನ್ನು ನಿರ್ಮಾಣ ಮಾಡಲು ಅಗತ್ಯವಿರುವ ಕಾಮಗಾರಿ ವೆಚ್ಚಗಳನ್ನು ಅಂದಾಜಿಸಿ ಅದಕ್ಕೆ ಮೇಲ್ವಿಚಾರಣಾ ಶುಲ್ಕ, ನಿಗಮದ ಸೇವಾ ಶುಲ್ಕಗಳನ್ನು ಸೇರಿಸಿ ಹಾಗೂ ಮೇಲೆ ತಿಳಿಸಿದಂತೆ ಲೆಕ್ಕಾಚಾರ ಮಾಡಿ ನಿಗಧಿಪಡಿಸಿದ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಗಳ ಮೌಲ್ಯವನ್ನು ನಿರ್ಧರಿಸಲಾಗುವುದು.

ಮಳಿಗೆಗಳ ಮೌಲ್ಯವನ್ನು ನಿರ್ಧರಿಸಿದ ನಂತರ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರುಗಳು ಹಂಚಿಕೆ ಪತ್ರ ಮತ್ತು ಕರಾರು ಒಪ್ಪಂದದ ಪ್ರಕಾರ ನಿಗಧಿತ ಅವಧಿಯಲ್ಲಿ ಕಂತು / ಮಳಿಗೆಗಳ ಮೌಲ್ಯವನ್ನು ಪಾವತಿಸದೇ ಇದ್ದಲ್ಲಿ, ಮಳಿಗೆಯನ್ನು ಕೆ.ಪಿ.ಪಿ ಕಾಯ್ದೆಯನುಸಾರ ಕ್ರಮ ತೆಗೆದುಕೊಂಡು ನಿಗಮದ ಸ್ವಾಧೀನಕ್ಕೆ ಪಡೆದು, ಹಂಚಿಕೆದಾರರುಗಳು ಪಾವತಿಸಬೇಕಾದ ಮಳಿಗೆಗಳ ಮೌಲ್ಯ ಮತ್ತು ಬಡ್ಡಿ, ವಿಳಂಭಿತ ಅವಧಿ ಬಡ್ಡಿ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಲೆಕ್ಕಾಚಾರ ಮಾಡಿ ಒಟ್ಟು ಮೊತ್ತಕ್ಕೆ ಆರ್.ಆರ್.ಸಿ ವಿತರಣೆ ಮಾಡಲಾಗುವುದು. ತದನಂತರ ಸದರಿ ಮಳಿಗೆಗಳನ್ನು ಮರು-ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಮಳಿಗೆಗಳನ್ನು ಹಂಚಿಕೆಗಾಗಿ ಮರು-ಪ್ರಕಟಣೆ ನೀಡುವ ಮುನ್ನ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಸದರಿ ಮಳಿಗೆಯ ನಿವೇಶನದ ಮೌಲ್ಯವನ್ನು ಸರ್ಕಾರವು ಆಯಾ ವರ್ಷಗಳಲ್ಲಿ ನಿಗಧಿಪಡಿಸಲ್ಪಡುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ನಿಗಮವು ರೂಪಿಸಿರುವ ಮಾನದಂಡಗಳಂತೆ ಲೆಕ್ಕಾಚಾರ ಮಾಡಿ ದರಗಳನ್ನು ನಿಗಧಿಪಡಿಸಿ ಆಯಾ ನಿವೇಶನಗಳ ವಿಸ್ತೀರ್ಣಕ್ಕೆ ತಕ್ಕಂತೆ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ರೂಪಿಸಿರುವ ಮಾನದಂಡಗಳನ್ವಯ ಸರ್ಕಾರದ ಆಯಾ ವರ್ಷದ ಪಿ.ಡಬ್ಲ್ಯೂ.ಡಿ ಎಸ್.ಆರ್. ದರಗಳಂತೆ ಮಳಿಗೆಯ ಕಟ್ಟಡ ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಅದರಲ್ಲಿ ಮಳಿಗೆಯ ನಿರ್ಮಾಣ ಸಾಲಿನಿಂದ ಹಂಚಿಕೆ ಮಾಡುವ ಸಾಲಿನವರೆವಿಗಿನ ಅವಧಿಗೆ ಸವಕಳಿಯನ್ನು ಲೆಕ್ಕಾಚಾರ ಮಾಡಿ, ಮಳಿಗೆಯ ಕಟ್ಟಡದ ಅಂದಾಜು ಮೌಲ್ಯದಲ್ಲಿ ಕಳೆದು, ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ನಂತರ ಮಳಿಗೆಯ ಕಟ್ಟಡದ ಮೌಲ್ಯಕ್ಕೆ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಯ ಒಟ್ಟು ಮೌಲ್ಯವನ್ನು ನಿರ್ಧರಿಸಿ ಹಂಚಿಕೆಗೆ ಪರಿಗಣಿಸಲಾಗುವುದು.

ಮಳಿಗೆಗಳನ್ನು ಕಂತು ಖರೀದಿ ಆಧಾರದ ಮೇಲೆ, ಈ ಹಿಂದೆ 6/ 10ವರ್ಷಗಳ ಕರಾರು ಅವಧಿಗೆ ಹಂಚಿಕೆ ಮಾಡಲಾಗುತ್ತಿದೆ.ಮಳಿಗೆಯ ಮೌಲ್ಯವನ್ನು 6/10 ವರ್ಷಗಳಿಗೆ ವಿಸ್ತರಿತ ಕಂತುಗಳನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರು ವಿಸ್ತರಿತ ಕಂತುಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ವಿಳಂಭಿತ ಅವಧಿಗೆ ನಿಗಮವು ನಿಗಧಿಪಡಿಸಿದ ಬಡ್ಡಿಯ ದರವನ್ನು ಆಕರಿಸಿ ಪಾವತಿಸಿಕೊಳ್ಳಲಾಗುವುದು ಆದಾಗ್ಯೂ ಹಂಚಿಕೆದಾರರು ಕಾರಣಾಂತರಗಳಿಂದ ಮಳಿಗೆಯ ಬಾಕಿ ಮೌಲ್ಯವನ್ನು ಆಕರಿತ ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ, ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಗಳನ್ನು ತೆಗೆದುಕೊಂಡು, ತದನಂತರವು ಪಾವತಿಸದೇ ಇದ್ದಲ್ಲಿ ಮಳಿಗೆಯನ್ನು ನಿಗಮದ ನಿಯಮಾನುಸಾರ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ತೆಗೆದುಕೊಂಡು, ಹಂಚಿಕೆದಾರರು ಪಾವತಿಸಬೇಕಾದ ಮೊತ್ತಕ್ಕೆ ಆರ್.ಆರ್.ಸಿ ವಿತರಿಸಿ ಅವರ ಆಸ್ತಿ ದೊರೆತಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುವುದು.

ಸದರಿ ಮಾಜಿ ಹಂಚಿಕೆದಾರರು ತಮಗೆ ಈ ಹಿಂದೆ ಹಂಚಿಕೆಯಾದ ಮಳಿಗೆಯನ್ನು ಮರು-ಸ್ವಾಧೀನ ಪಡೆಯಲು ಇಚ್ಛಿಸಿದಲ್ಲಿ, ನಿಗಮದ ಮಂಡಳಿಯು ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ವಯ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶ ಹಾಗೂ ಮುಂದುವರೆದಂತೆ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ ದಂಡವನ್ನು ವಿಧಿಸಲಾಗುವುದು. ಅದರಂತೆ ಬಾಕಿ ಹಾಗೂ ದಂಡವನ್ನು ಮಾಜಿ ಹಂಚಿಕೆದಾರರು ಪಾವತಿಸಿದಲ್ಲಿ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಮರು-ಸ್ವಾಧೀನ ನೀಡಲಾಗುವುದು.

ಸದರಿ ಮಳಿಗೆಗಳ ಬಾಕಿ ಕಂತುಗಳನ್ನು /ಮೌಲ್ಯವನ್ನು ಪಾವತಿಸದೇ ಇದ್ದ ಮಳಿಗೆಗಳನ್ನು ಬೀಗಮುದ್ರೆಗೊಳಿಸಿ ನಿಗಮದ ಸ್ವಾಧೀನಕ್ಕೆ ಪಡೆದ ನಂತರ ಹಂಚಿಕೆದಾರರು ಮರು ಸ್ವಾಧೀನ ಪಡೆಯಲು ಉದ್ದೇಶಿಸಿದಲ್ಲಿ ಕಛೇರಿ ಆದೇಶದನ್ವಯ ಹಂಚಿಕೆದಾರರು ನಿಗಮಕ್ಕೆ ಪಾವತಿಸಬೇಕಾದ ಮಳಿಗೆಯ ಬಾಕಿ ಕಂತುಗಳು ಮತ್ತು ವಿಳಂಭಿತ ಅವಧಿಗೆ ಆಕರಿಸಲ್ಪಟ್ಟ ಬಡ್ಡಿಯೊಂದಿಗೆ ಒಟ್ಟು ಮೊತ್ತದ ಶೇ. 50 ರಷ್ಟನ್ನು ಪಾವತಿಸಿದಲ್ಲಿ ಮಳಿಗೆಯನ್ನು ಮರು-ಸ್ವಾಧೀನ ನೀಡಲಾಗುವುದು.

ಆದರೆ, ಮೇಲ್ಕಂಡಂತೆ ದಿನಾಂಕ 22-06-2015 ರಂದು ಹೊರಡಿಸಲಾದ ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳ ಕಛೇರಿ ಆದೇಶ ಹಾಗೂ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ, ಹಂಚಿಕೆದಾರರು ಮಳಿಗೆಯ ಬಾಕಿ ಮೌಲ್ಯ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪ್ರವರ್ಗವಾರು ಕೈಗಾರಿಕಾ ವಸಾಹತುಗಳಿಗೆ ನಿಗಧಿಪಡಿಸಿದ ಮಳಿಗೆ/ನಿವೇಶನಗಳ ಪ್ರಚಲಿತ ಮೌಲ್ಯದ ಮೇಲೆ ವಿಧಿಸುವ ಶೇಕಡವಾರು ಪ್ರಮಾಣ ದಂಡದ ಮೊತ್ತದೊಂದಿಗೆ ಒಂದೇ ಇಡಿಗಂಟಿನಲ್ಲಿ ಪಾವತಿಸಿದರೆ ಮಾತ್ರ ಪುನರ್ ಸ್ಥಾಪನೆಗೆ (Restoration) ಅನುಮತಿಸಲಾಗುವುದು. ಈ ನಿಯಮವು ಮಳಿಗೆ ಹಂಚಿಕೆದಾರರುಗಳ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆಯಾಗಲಿದ್ದು, ರೋಗಗ್ರಸ್ಥ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮವಾಗಿರುವುದಿಲ್ಲ.

ನಿಗಮವು ಆಯಾ ಮಳಿಗೆಗಳ ಮೌಲ್ಯಕ್ಕೆ ಬಡ್ಡಿಯನ್ನು ಸೇರಿಸಿ ವಿಸ್ತರಿತ ಕಂತುಗಳನ್ನು ನಿರ್ಧರಿಸಿದ್ದು, ತದನಂತರ ವಿಳಂಭಿತ ಪಾವತಿ ಅವಧಿಗೂ ಸಹ ಕಂತಿನಲ್ಲಿನ ಬಡ್ಡಿಗಿಂತ ಶೇ.2ರಷ್ಟು ಹೆಚ್ಚುವರಿ ಬಡ್ಡಿ ದರವನ್ನು ಆಕರಿಸಿ ಪಾವತಿಸಿಕೊಳ್ಳುವುದರಿಂದ ನಿಗಮಕ್ಕೆ ನಷ್ಟವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ದೇಶಾದ್ಯಂತ ಹರಡಿರುವ ಕರೋನಾ /ಕೋವಿಡ್-19 ರೋಗದಿಂದಾಗಿ ವಾಣಿಜ್ಯ ಚಟುವಟಿಕೆಗಳು ಸರ್ವತೋಮುಖವಾಗಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೇ ನಿಗಮದ ಮೂಲ ಧ್ಯೇಯೋದ್ದೇಶವಾಗಿದ್ದು, ಸಣ್ಣ ಕೈಗಾರಿಕೆಗಳ ಸ್ನೇಹಿಯಾಗಿ ಇರುವುದರಿಂದ, ಮಳಿಗೆ ಮತ್ತು ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿ ಇತ್ಯಾದಿ ಕಟ್ಟಡಗಳಿಗೆ, ಮೇಲ್ಕಂಡ ಆದೇಶಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಅಂಶಗಳನ್ನು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದ್ದು, ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> **ತೀರ್ಮಾನ:-** ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ನಿವೇಶನಗಳ ಹೊತಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸಹ ಸೇರಿಸಿದ್ದು, ಅವುಗಳನ್ನು, ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ಹಾಗೂ ತತ್ಸಬಂಧ ಪರಿಷ್ಕೃತ ಆದೇಶವನ್ನು ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.

ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಕಂಡಿಕೆಗಳಲ್ಲಿ ನಿಗಮವು ತನ್ನ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಿಸಿರುವ ಮಳಿಗೆಗಳ ಮೌಲ್ಯ ನಿರ್ಧರಣೆ, ಹಂಚಿಕೆ, ಕಂತು ನಿರ್ಧರಣೆ, ವಸೂಲಾತಿ ಹಾಗೂ ವಿಳಂಭಿತ ಅವಧಿಗೆ ಆಕರಿಸಿರುವ ಬಡ್ಡಿ ಪಾವತಿಸದೇ ಇದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿದ್ದು, ಅದರಂತೆ ಮಳಿಗೆ/ ಗೋದಾಮು /ಸಂಕೀರ್ಣ ಮಳಿಗೆ/ಅಂಗಡಿಗಳಿಗೆ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಮಂಡಳಿಯು ತೆಗೆದುಕೊಂಡ ನಿರ್ಧಾರದ ಮೇರೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ನಿರ್ಧರಿಸಿ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ವಿಭಾಗೀಯ ಕಛೇರಿಗಳು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

25/01/2021

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

000320

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ),/(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

000319

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಮೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/1 ದಿನಾಂಕ: 8-5-2020

ಪರಿಷ್ಕರಣೆ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ: 1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ.
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂ:2015:972 ದಿನಾಂಕ: 22-06-2015.
4. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 12-02-2020.

*****

ದಿನಾಂಕ 12-02-2020 ರಂದು ಹೊರಡಿಸಿದ್ದ ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕಛೇರಿ ಆದೇಶವನ್ನು ಹಿಂಪಡೆಯಲಾಗಿದೆ.

ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳನ್ನು ಉಲ್ಲೇಖ-3 ರ ಕಛೇರಿ ಆದೇಶದಲ್ಲಿ ವಿವರಿಸಲಾಗಿದೆ. ಸದರಿ ಕಛೇರಿ ಆದೇಶದಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ಮಾರ್ಪಾಡುಗೊಳಿಸಿ ಈ ಕೆಳಕಂಡಂತೆ ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕ್ರ.ಸಂ	ಕೈಗಾರಿಕಾ ವಸಾಹತುವಿನ ವರ್ಗೀಕರಣ	ನಿವೇಶನ/ಮಳಿಗೆಯ ಚಾಲ್ತಿದರದ ದಂಡದ ಪ್ರಮಾಣ
1	'ಎ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 15 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
2	'ಬಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 10 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
3	'ಸಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 7.5 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
4	'ಡಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 5 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ

1. **ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳು:-** ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಅಂದರೆ ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಎಲ್ಲಾ ಹಂಚಿಕೆಗಳನ್ನು ಕೂಡಲೇ ರದ್ದುಗೊಳಿಸಿ, ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು.

2. <u>ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ ಘಟಕಗಳಿಗೆ ರದ್ದತಿ ಆದೇಶ ನಿರಸನಗೊಳಿಸುವ ಘಟಕಗಳು</u>:-ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ್ದಲ್ಲಿ, ರದ್ದತಿ ಆದೇಶವನ್ನು ನಿರಸನಗೊಳಿಸಲು ಸಹಾ ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ ಇತರೆ) ಪಾವತಿಸಿಕೊಂಡು ಹಂಚಿಕೆ ಪುನರ್‌ಸ್ಥಾಪನೆಗೊಳಿಸಲು (Restoration of allotment) ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆಯತಕ್ಕದ್ದು.

3. <u>ಹಂಚಿಕೆ ರದ್ದತಿ ಆದೇಶ ನಿರಸನ ಗೊಳಿಸದೆ ಕಾರ್ಯಚರಣೆ ನಡೆಸುತ್ತಿರುವ ಘಟಕಗಳು</u>:- ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶ ಹೊರಡಿಸಿದ ನಂತರ ರದ್ದತಿ ಆದೇಶವನ್ನು ನಿರಸನಗೊಳಿಸದೆ ಕಟ್ಟಡ ಕಟ್ಟಲು / ವಿದ್ಯುತ್ ಸಂಪರ್ಕ ಪಡೆಯಲು / ಸಂವಿಧಾನ ಬದಲಾವಣೆ/ ಉತ್ಪಾದನಾ ಬದಲಾವಣೆ ಇನ್ನಿತರೆ ಉದ್ದೇಶಗಳಿಗೆ ಅನುಮತಿ ನೀಡಿದ್ದರೂ ಸಹ ಮತ್ತು ಗುತ್ತಿಗೆ ಕರಾರು ಅವಧಿ ಪೂರ್ಣಗೊಂಡಿರುವ ಘಟಕಗಳಲ್ಲಿ ಕೈಗಾರಿಕೆ ಕಾರ್ಯಾಚರಣೆ ನಡೆಯುತ್ತಿದ್ದಲ್ಲಿ, ಅಂತಹ ಹಂಚಿಕೆದಾರರಿಂದ ಒಂದೇ ಬಾರಿ ಕೋಷ್ಟಕದಲ್ಲಿ ತಿಳಿಸಿರುವ ದಂಡದ ಜೊತೆ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಮತ್ತು ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ವಿಧಿಸಬೇಕಾದ ಚಾಲ್ತಿ/ಪ್ರಚಲಿತ ಮಳಿಗೆ/ ನಿವೇಶನದ ಮೌಲ್ಯದ ಮೇಲೆ ಶೇಕಡ 10 ರಷ್ಟು ದಂಡವನ್ನು ಪ್ರಚಲಿತ ಅನ್ವಯವಾಗುವ ತೆರಿಗೆಗಳೊಂದಿಗೆ ಒಟ್ಟಾರೆಯಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ (Restoration of allotment) ಪುನರ್‌ಸ್ಥಾಪನೆ ಆದೇಶ ಹೊರಡಿಸಿ ನಂತರ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿಕೊಡುವುದು.

4. <u>ನಿಗಮದ ಸ್ವಾಧೀನದಲ್ಲಿರುವ ಘಟಕಗಳು</u>:- ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಕೈಗೊಂಡು ನಿಯಮಾನುಸಾರ ಮಹಜರ್ ಮಾಡಿ ಬೀಗಮುದ್ರೆಗೊಳಿಸಿ (Seizure) / ನಿಗಮದ ವಶಕ್ಕೆ (custody)/ ಪಡೆದಿದ್ದಲ್ಲಿ, ಹಂಚಿಕೆ ಪುನರ್‌ಸ್ಥಾಪನೆಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ) ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆದು ಮಳಿಗೆ/ನಿವೇಶನದ ಮರುಸ್ವಾಧೀನವನ್ನು ನೀಡತಕ್ಕದ್ದು.

000317

ಕರಾಸಕ್ಕೈಅನಿನಿ

5. <u>ನ್ಯಾಯಾಲಯದಲಿರುವ ಪ್ರಕರಣಗಳ ಘಟಕಗಳು:-</u> ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಹಂಚಿಕೆದಾರರು ನಿಗಮದ ಕ್ರಮವನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿದಲ್ಲಿ, ಘನ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ, ಹಂಚಿಕೆದಾರರ ಮನವಿಯನ್ನು ಪರಿಗಣಿಸದೆ, ನಿಯಮಾನುಸಾರ ಹಂಚಿಕೆಗೆ ಪ್ರಕಟಣೆ ನೀಡಿ ಕ್ರಮಕೈಗೊಳ್ಳುವುದು.

6. <u>ಹಂಚಿಕೆದಾರರ ಸ್ವಾಧೀನದಲ್ಲಿರುವ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u> ಈ ಮೇಲೆ ಕೋಷ್ಟಕದಲ್ಲಿ ತಿಳಿಸಿದಂತೆ, ನಿಗಮವು ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ / ಹೊರಡಿಸುವ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್‌ಸ್ಥಾಪನೆಗೊಳಿಸುವುದು (Restoration of allotment). ಪುನರ್‌ಸ್ಥಾಪನೆ ಆದೇಶ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷದ ಕಾಲಾವಕಾಶದಲ್ಲಿ ನಿವೇಶನದಲ್ಲಿ ಕಡ್ಡಾಯವಾಗಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವೂದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

7. <u>ನಿಗಮದ ಸ್ವಾಧೀನದಲ್ಲಿರುವ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u>ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್‌ಸ್ಥಾಪನೆಗೊಳಿಸಿ (Restoration of allotment), ಮಳಿಗೆ/ನಿವೇಶನದ ಮರು-ಸ್ವಾಧೀನ ನೀಡುವುದು. ಮಳಿಗೆ/ನಿವೇಶನದ ಮರು-ಸ್ವಾಧೀನ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷ ಕಾಲಾವಕಾಶದಲ್ಲಿ ಕಡ್ಡಾಯವಾಗಿ ಮಳಿಗೆಯಲ್ಲಿ ಕಾರ್ಯಾಚರಣೆ ಪ್ರಾರಂಭಿಸುವುದು ಮತ್ತು ನಿವೇಶನದ ಹಂಚಿಕೆದಾರರು ಕಟ್ಟಡ ನಿರ್ಮಿಸಿ / ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವೂದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

8. ಪುನರ್‌ಸ್ಥಾಪನೆ ಆದೇಶ ಪಡೆದ ನಂತರ <u>ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-</u>ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಪುನರ್‌ಸ್ಥಾಪನೆಗೊಂಡ ಮಳಿಗೆಯಲ್ಲಿ ಕಾರ್ಯಾಚರಣೆ/ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಮಂಜೂರಾಗಿದ್ದ ಅವಧಿ ಮುಗಿದ ಕೂಡಲೇ ಅಂತಹ ಹಂಚಿಕೆದಾರರ ನಿವೇಶನ / ಮಳಿಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಸದರಿ ಹಂಚಿಕೆದಾರರು ಪಾವತಿಸಿರುವ ಎಲ್ಲಾ ಪಾವತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿ ಮಾಹಿತಿಯನ್ನು ಕಡ್ಡಾಯವಾಗಿ ನಿಗಮದ ಹಣಕಾಸು ವಿಭಾಗಕ್ಕೆ ಮಾಹಿತಿ ನೀಡುವುದು.

000316

9. **ಪುನರ್‌ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸಿ/ಕೈಗಾರಿಕಾ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ**:-:-ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಈ ಮೇಲೆ ತಿಳಿಸಿರುವ ಕೋಷ್ಟಕದಂತೆ ದಂಡವನ್ನು ಪಾವತಿಸಿ ಪುನರ್‌ಸ್ಥಾಪನೆ ಆದೇಶ/ಮರುಸ್ವಾಧೀನ ಪಡೆದು ಮಳಿಗೆ/ ನಿವೇಶನದಲ್ಲಿ ಕೈಗಾರಿಕಾ ಕಾರ್ಯಾಚರಣೆ ನಡೆಸಿ ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಘಟಕಗಳಿಗೆ ಕ್ರಯಪತ್ರವನ್ನು ವಿತರಿಸುವ ಸಂದರ್ಭದಲ್ಲಿನ ಚಾಲ್ತಿ / ಪ್ರಚಲಿತ ಮಳಿಗೆ/ ನಿವೇಶನದ ಮೌಲ್ಯದ ಮೇಲೆ ಶೇಕಡ 10 ರಷ್ಟು ದಂಡವನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ ಪಾವತಿಸಿಕೊಂಡು ಕ್ರಯಪತ್ರ ನಿರ್ವಹಿಸುವುದು.

ಈ ಆದೇಶ ತಲುಪಿದ 30 ದಿವಸದಳೋಳಗೆ ಸಹಾಯಕ ಪ್ರಧಾನ ವ್ಯವಸ್ಥಾಕರುಗಳು ಮತ್ತು ಸಂಬಂಧಪಟ್ಟ ವಿಭಾಗೀಯ ಕಚೇರಿ ಅಧಿಕಾರಿಗಳು ಕಡ್ಡಾಯವಾಗಿ ಹಂಚಿಕೆದಾರರುಗಳಿಗೆ ಪತ್ರ ಬರೆದು ಪತ್ರ ತಲುಪಿದ ದಿನಾಂಕದಿಂದ 15 ದಿವಸದಳೊಳಗೆ ಒಪ್ಪಿಗೆ ಪತ್ರವನ್ನು ಪಡೆದು ಹಂಚಿಕೆ ರದ್ದತಿಯನ್ನು ನಿರಸನಗೊಳಿಸಿ (Restoration of allotment) ಪುನರ್‌ಸ್ಥಾಪನೆಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಈ ಆದೇಶ ವಿಶ್ವ ಮಳಿಗೆಯ ಹಂಚಿಕೆಗೆ ಅನ್ವಯಿಸುವುದಿಲ್ಲ.

ಈ ಸೌಲಭ್ಯವನ್ನು ಒಮ್ಮೆ ಮಾತ್ರ ಈ ಬಾರಿ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶವಿರುವುದಿಲ್ಲ.

ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ)/(ಆಡಳಿತ & ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
9. ಜಿಲ್ಲಾ ಕೈಗಾರಿಕ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು.

ಕರಾಸಕೈಅನಿನಿ

ಅನುಬಂಧ - 8

(66)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

000315

ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂಚ:2015/972

ದಿನಾಂಕ: 22-06-2015

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ

ಉಲ್ಲೇಖ: ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಡವಳಿಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉತ್ತಮ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ, ನಿಗಮದ ಹಾಗೂ ಸಣ್ಣ ಕೈಗಾರಿಕೆಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಿಗಮವು ಕಾಲಕಾಲಕ್ಕೆ ನಿಯಮಗಳನ್ನು ಹಾಗೂ ನಿಬಂಧನೆಗಳನ್ನು ರೂಪಿಸುತ್ತಿರುತ್ತದೆ.

ನಿರ್ಧಿಷ್ಟವಾಗಿ ಸಣ್ಣ ಕೈಗಾರಿಕೆಗಳಿಗೆ ಸುಧಾರಿತ ಸೇವೆಯನ್ನು ಒದಗಿಸಲು, ಕೈಗಾರಿಕಾ ವಸಾಹತು ನಿರ್ವಹಣಾ ಸೇವೆಗಳ ಬಗ್ಗೆ ಕೆಲವೊಂದು ಮಾರ್ಗಸೂಚಿಗಳನ್ನು ರೂಪಿಸುವ ಕುರಿತು ಪ್ರಸ್ತಾವನೆಯನ್ನು ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ಮುಂದೆ ಮಂಡಿಸಲಾಗಿತ್ತು. ಸದರಿ ವಿಷಯದ ಬಗ್ಗೆ ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ:

ಈ ಹಿಂದೆ ನಿಗಮದ ಪತಿಯಿಂದ ನಿವೇಶನ / ಮಳಿಗೆ /ಗೋದಾಮು / ಇತರೆ ಕಟ್ಟಡಗಳ ಹಂಚಿಕೆಯನ್ನು ನಿಯಮಗಳನ್ವಯ ರದ್ದುಪಡಿಸಿದ ಬಗ್ಗೆ ಹಲವಾರು ಕೈಗಾರಿಕೋದ್ಯಮಿಗಳು, ರದ್ದತಿ ಆದೇಶಗಳನ್ನು ನಿರಸನಗೊಳಿಸಿ, ಹಂಚಿಕೆಯಾದ ನಿವೇಶನ / ಮಳಿಗೆ / ಗೋದಾಮು / ಇತರೆ ಕಟ್ಟಡಗಳಲ್ಲಿ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾಲಾವಧಿ ನೀಡಲು ಮನವಿಗಳನ್ನು ಸಲ್ಲಿಸಿದ್ದು, ಸದರಿ ಕೈಗಾರಿಕೋದ್ಯಮಿಗಳ ಕೋರಿಕೆ ಮೇರೆಗೆ ಅಂತಹ ಹಂಚಿಕೆಯನ್ನು ಹಿಂದಕ್ಕೆ ನೀಡಿ (restoration of allotment), ಸದರಿ ನಿವೇಶನ / ಮಳಿಗೆ /ಗೋದಾಮು / ಫ್ಲಾಟ್ / ಇತರೆ ಕಟ್ಟಡಗಳನ್ನು ಮಾಜಿ ಹಂಚಿಕೆದಾರರುಗಳಿಗೆ ಹಿಂದಿರುಗಿಸುವ ಸಂಬಂಧ ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಿರ್ಣಯದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಲು ರೂಪಿಸಲಾಗಿದೆ.

I) <u>ಎಲ್ಲ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ನಿಯಮಾನುಸಾರ ರದ್ದುಗೊಳಿಸಿ ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದೆ ನಿಗಮದ ಸುಪರ್ದಿನಲ್ಲಿದೆಯೋ ;</u>

1) ಹಂಚಿಕೆಯನ್ನು ಹಿಂದಕ್ಕೆ ನೀಡುವ ದಿನಾಂಕಕ್ಕೆ ಬಾಕಿ ಇರುವ ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ ಶುಲ್ಕಗಳನ್ನು ಹಂಚಿಕೆದಾರರು ಸಂಪೂರ್ಣವಾಗಿ ಪಾವತಿಸತಕ್ಕದ್ದು.

..2..

2) ಹಂಚಿಕೆದಾರರುಗಳಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡುವ ಪ್ರಸ್ತಾವನೆಗಳನ್ನು ಬಿಡಿ ಹಂಚಿಕೆ ಸಮಿತಿಯು ಅನುಮೋದಿಸತಕ್ಕದ್ದು. ತದನಂತರ, ಹಂಚಿಕೆದಾರರುಗಳ ರದ್ದತಿ ಆದೇಶದ ನಿರಸನ ದಿನಾಂಕ್ಕೆ ಪ್ರಚಲಿತದಲ್ಲಿರುವ ಹಂಚಿಕೆಯ ಮೌಲ್ಯ ಹಾಗೂ ಹಂಚಿಕೆ ಸಮಯದಲ್ಲಿನ ಮೌಲ್ಯದ ವ್ಯತ್ಯಾಸವನ್ನು ಈ ಕೆಳಕಂಡಂತೆ ಪಾವತಿಸತಕ್ಕದ್ದು:

ಅ) 'ಎ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 75 ರಷ್ಟು ಮೌಲ್ಯದ ವ್ಯತ್ಯಾಸದ ಮೊತ್ತ.

ಬ) 'ಬಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 50 ರಷ್ಟು ವ್ಯತ್ಯಾಸದ ಮೊತ್ತ.

ಕ) ಹಿಂದುಳಿದ ಪ್ರದೇಶದ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ, 'ಸಿ' ಮತ್ತು 'ಡಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 25 ರಷ್ಟು ವ್ಯತ್ಯಾಸದ ಮೊತ್ತ.

3) ಹಂಚಿಕೆ ಸಮಯದಲ್ಲಿ ಹಾಗೂ ಹಂಚಿಕೆಯ ತರುವಾಯ ಹಾಗೂ ರದ್ದತಿ/ಬೀಗಮುದ್ರೆ ದಿನಾಂಕಕ್ಕೆ ಹಂಚಿಕೆದಾರರು ಶಾಸನಬದ್ಧ ಪಾವತಿಗಳಾದ ಕೊಳಚೆ ನಿರ್ಮೂಲನಾ ಶುಲ್ಕ, ಹಾಗೂ ಇತರೆ ಪಾವತಿಗಳಾದ ಸೇವಾ ಶುಲ್ಕ, ಇತರೆ ಯಾವುದಾದರೂ ಶುಲ್ಕಗಳನ್ನು ಪಾವತಿಸಿದ್ದಲ್ಲಿ, ಅವುಗಳನ್ನು ಯಾವುದೇ ರೀತಿಯಲ್ಲಿಯೂ ಮರು-ಪಾವತಿಸಲು ಅಥವಾ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

4) ಉಚ್ಚ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ ಹಂಚಿಕೆದಾರರ ಮನವಿಯ ಮೇರೆಗೆ ನಿಗಮವು ಮರು-ಹಂಚಿಕೆಯನ್ನು ಪರಿಗಣಿಸಬಾರದು.

5) ಎರಡು ವರ್ಷಗಳ ಕಾಲಮಿತಿಯನ್ನು ಗರ್ಭಕಾಲದ ಅವಧಿ ಎಂದು ನಿಗದಿಪಡಿಸಲಾಗಿದೆ.

ii) <u>ಎಲ್ಲ ಪದ್ಧತಿ ನಿಯಮಗಳನ್ನು ಪಾಲಿಸದೆ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ರದ್ದುಗೊಳಿಸಿ / ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದೆ ನಿಗಮದ ಸುಪರ್ದಿಯಲ್ಲಿದೆಯೋ</u> :

1) ಕಾನೂನಿನ ಪ್ರಕ್ರಿಯೆ ಹಾಗೂ ನಿಯಮಗಳನ್ನು ಪಾಲಿಸದೇ ಮಳಿಗೆ/ನಿವೇಶನ/ಇತರೆ ಕಟ್ಟಡಗಳನ್ನು ರದ್ದುಗೊಳಿಸಲಾದ ಅಥವಾ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ಪಡೆಯಲಾದ ಪ್ರಕರಣಗಳ ಬಗೆಗಿನ ಹಂಚಿಕೆ ಹಿಂದಕ್ಕೆ ನೀಡುವುದನ್ನು ಮಂಡಳಿಯು ಪ್ರಕರಣದಿಂದ ಪ್ರಕರಣಕ್ಕೆ ಆಧಾರದ (case to case basis) ಮೇಲೆ ಪರಿಗಣಿಸುವುದು. ಈ ಪ್ರಕರಣಗಳಲ್ಲಿ ಹಂಚಿಕೆದಾರರಿಗೆ ಸ್ವಭಾವಸಿದ್ಧ ನ್ಯಾಯ ಖಚಿತಪಡಿಸಿಕೊಳ್ಳುವ ಹಾಗೂ ನಿಗಮದ ಕೈಗಾರಿಕಾ ಸ್ನೇಹಿ ಹಿತದೃಷ್ಟಿಯಿಂದ ಯಾವುದೇ ರೀತಿಯ ಹೆಚ್ಚುವರಿ ಮೊತ್ತವನ್ನು ವಿಧಿಸದೇ, ಹಂಚಿಕೆ ಸಮಯದಲ್ಲಿನ ದರವನ್ನು ವಿಧಿಸಿ ಹಂಚಿಕೆಯನ್ನು ಹಿಂದಕ್ಕೆ ನೀಡುವುದು.

2) ತಪ್ಪಾಗಿ ಬೀಗಮುದ್ರೆಗೊಳಿಸಿದ ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಿ ಸಂಬಂಧಪಟ್ಟ ಅಧಿಕಾರಿ / ನೌಕರರಿಂದ ನಷ್ಟವನ್ನು ವಸೂಲಿ ಮಾಡತಕ್ಕದ್ದು.

..3..

3) ನಿಗಮಕ್ಕೆ ಉಂಟಾದ ನಷ್ಟದ ವ್ಯತ್ಯಾಸದ ಮೊಬಲಗನ್ನು ವಸೂಲಿ ಮಾಡಲು ಸಿವಿಲ್ ವಸೂಲಾತಿ ದಾವೆಯನ್ನು ಹೂಡತಕ್ಕದ್ದು.

iii) **ನ್ಯಾಯಾಲಯದ ತೀರ್ಪುಗಳು ;**

1) ನ್ಯಾಯಾಲಯದ ಪ್ರಕರಣಗಳಲ್ಲಿ, ನ್ಯಾಯಾಲಯದ ತೀರ್ಪುಗಳ ಅನ್ವಯ, ಮಂಡಳಿಯ ಉಪ ಸಮಿತಿಯಾದ ಬಡಿ ಹಂಚಿಕೆ ಸಮಿತಿಯ ಅನುಮೋದನೆಯೊಂದಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡಬಹುದು. ಪ್ರಕರಣದ ಅರ್ಹತೆ ಮೇರೆಗೆ, ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ಬಡಿ ಹಂಚಿಕೆ ಸಮಿತಿಯು ಇದರ ಬಗ್ಗೆ ನಿರ್ಧರಿಸುವುದು.

2) ನಿಗಮವು ಕಾನೂನು ಅಭಿಪ್ರಾಯವನ್ನು ಪಡೆದ ನಂತರ ಮುಂದಿನ ಮೇಲ್ಮನವಿ ಸಲ್ಲಿಕೆಯು ಸಾಕಾರವಾಗುವುದಿಲ್ಲವೆಂಬ ನಿರ್ಧಾರಕ್ಕೆ ಬಂದಿರಬೇಕು.

iv) **ಪಾವತಿ ಮಾಡಲು ಕಾಲಾವಧಿ ವಿಸ್ತರಣೆ:**

ದಿನಾಂಕ 16.07.1987 ರಂದು ಜರುಗಿದ ನಿಗಮದ 192ನೇ ಮಂಡಳ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ, ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 90 ದಿನಗಳ ಕಾಲಾವಕಾಶ ನೀಡಲು ಪ್ರಧಾನ ವ್ಯವಸ್ಥಾಪಕರು-I ರವರಿಗೆ ಅಧಿಕಾರ ನೀಡಿರುತ್ತದೆ. ದಿನಾಂಕ 16.03.1989 ರಂದು ಜರುಗಿದ ನಿಗಮದ 202ನೇ ಮಂಡಳ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 30 ದಿನಗಳ ಕಾಲಾವಕಾಶ ನೀಡಲು ಮುಖ್ಯ ವ್ಯವಸ್ಥಾಪಕರು(ಕೈವ) ರವರಿಗೆ ಅಧಿಕಾರ ನೀಡಿರುತ್ತದೆ ಹಾಗೂ 90 ದಿನಗಳ ಅವಧಿಗೆ ಮೀರಿ ಕಾಲಾವಧಿ ವಿಸ್ತರಣೆಗೆ ನಿಯಮಗಳನ್ವಯ ಬಡ್ಡಿ ವಿಧಿಸಿ ಕಾಲಾವಕಾಶ ನೀಡಲು ವ್ಯವಸ್ಥಾಪಕ ನಿರ್ದೇಶಕರು ರವರಿಗೆ ಅಧಿಕಾರ ನಿಯೋಜಿಸಲಾಗಿದ್ದು, ನಿಗದಿತ ಅವಧಿ ಮೀರಿ ಪಾವತಿಗಳನ್ನು ಸ್ವೀಕರಿಸುವ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯು ಇನ್ನು ಮುಂದೆ ನಿವೇಶನ / ಮಳಿಗೆ / ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ತಡವಾದ ದಿನಗಳಿಗೆ ಬಡ್ಡಿ ವಿಧಿಸುವ ಅಥವಾ ಜಮೀನಿನ ದರ ಪರಿಷ್ಕರಣೆಯಾಗಿದ್ದಲ್ಲಿ, ಪರಿಷ್ಕೃತ ದರ ವಿಧಿಸುವ ನಿಬಂಧನೆಗೆ ಒಳಪಟ್ಟು, ಕಾಲಾವಧಿ ವಿಸ್ತರಣೆಯ ನೀಡುವ ಬಗ್ಗೆ ಕೆಳಕಂಡಂತೆ ಅಧಿಕಾರ ನಿಯೋಜಿಸಲು ನಿರ್ಣಯಿಸಿತು:

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) 30 ದಿನಗಳವರೆಗೆ
2. ಪ್ರಧಾನ ವ್ಯವಸ್ಥಾಪಕರು(ಕೈವ) 90 ದಿನಗಳವರೆಗೆ
3. ವ್ಯವಸ್ಥಾಪಕ ನಿರ್ದೇಶಕರು ... 90 ದಿನದಿಂದ ಹೆಚ್ಚಿಗೆ ಮತ್ತು 365 ದಿನಗಳವರೆಗೆ

ಮುರಿದುವರೆದಂತೆ, ನಿವೇಶನ/ಮಳಿಗೆ/ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ನೀಡುವ ಕಾಲಾವಧಿ ವಿಸ್ತರಣೆಯನ್ನು ಗರಿಷ್ಠ 365 ದಿನಗಳಿಗೆ ನಿಗದಿಪಡಿಸಲು ಹಾಗೂ ಇನ್ನು ಮುಂದೆ ಯಾವುದೇ ಸಂದರ್ಭಗಳಲ್ಲಿ 365 ದಿನಗಳ ಮೀರಿ ಕಾಲಾವಧಿ ವಿಸ್ತರಣೆ ನೀಡದೇ ಇರಲು ಮಂಡಳಿಯು ನಿರ್ಣಯಿಸಿತು.

..4..

000312

v) <u>ಪರ್ಯಾಯ ನಿವೇಶನ / ಮಳಿಗೆಗಳು:</u>

ಇನ್ನು ಮುಂದೆ ಸಂಬಂಧಿಸಿದ ವಿಭಾಗದವರು ಮೊದಲು ವಸಾಹತುವಿನ ಭೌತಿಕ ನಕ್ಷೆಯನ್ನು ತಯಾರಿಸಿ ಮತ್ತು ಪ್ರಕಟಿಸಿ, ವಸಾಹತುವಿನ ಭೌತಿಕ ತಪಾಸಣೆಯನ್ನು ನಡೆಸಿದ ನಂತರ ಹಂಚಿಕೆ ಮಾಡಬೇಕು ಅಥವಾ ಸಂಬಂಧಪಟ್ಟ ಏಕ ಗವಾಕ್ಷಿ ಸಮಿತಿ / ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿಗೆ, ಮಳಿಗೆ / ನಿವೇಶನ ಮತ್ತು ಇತರೆ ಕಟ್ಟಡಗಳನ್ನು ಹಂಚಿಕೆ ಮಾಡುವಂತೆ ಕೋರಬೇಕು.

ಮೇಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ.

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು ನಗರ / ಗ್ರಾಮಾಂತರ/ವಾಲೆ/ವ&ಕಾಲೆ/ವಾಣಿಜ್ಯ/ಉಗ್ರಾಣ/ಬೆಂಗಳೂರು/ಪೀಣ್ಯ/ತುಮಕೂರು/ಹರಿಹರ/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು
2. ವ್ಯವಸ್ಥಾಪಕರು(ಕೈವ)/(ಭೂಸ್ವಾಧೀನ), ಕರಾಸಕೈಅನಿನಿ, ವೀರಸಂದ್ರ, ಬೆಂಗಳೂರು.
3. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಬಾಗಲಕೋಟೆ/ಬೀದರ್/ ಮಂಡ್ಯ
4. ಮಾರಾಟ ವ್ಯವಸ್ಥಾಪಕರು/ಕಿರಿಯ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಸಿರಸಿ/ವಿಜಯಪುರ/ ಹೊಸಪೇಟೆ/ಚಿಕ್ಕಮಗಳೂರು.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ ಮತ್ತು ಹಣಕಾಸು)/(ಆಡಳಿತ ಮತ್ತು ಭೂಸ್ವಾಧೀನ)/(ವಾಣಿಜ್ಯ)/ ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ)/(ಸಮನ್ವಯ)/(ಆಲೇಖ)/(ವಾಣಿಜ್ಯ),(ಯೋಜನೆ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
4. ಕಾರ್ಯಪಾಲಕ ಅಭಿಯಂತರರು-1,2,3 - ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ/(ವಿದ್ಯುತ್)
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
7. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.

ಫೋನ್ : 080-2340 7011 ಇಂದ 25, ಫ್ಯಾಕ್ಸ್ : 080-2314 3566 / 2338 9070

ಇ-ಮೈಲ್ : kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ/ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2022/1226 ದಿನಾಂಕ: 19.01.2022

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ: ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/23 1355 ದಿನಾಂಕ: 01.10.2020.

*****

ದಿನಾಂಕ: 01.10.2020 ರಂದು ಹೊರಡಿಸಿರುವ ಉಲ್ಲೇಖಿತ ಕಛೇರಿ ಆದೇಶದಲ್ಲಿ ದಿನಾಂಕ: 30.09.2021 ರೊಳಗೆ ಹಂಚಿಕೆ ಪುನರ್ ಸ್ಥಾಪನೆ ನಿಯಮದಡಿ ದಂಡ ಪಾವತಿಸಿ ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುತ್ತಿರುವ ಘಟಕಗಳಿಗೆ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ಶೇ.10 ರಷ್ಟು ನಿವೇಶನದ ಬಾಲ್ತಿದರದ ದಂಡವನ್ನು ವಿಧಿಸಲು ರಿಯಾಯಿತಿಯನ್ನು ನೀಡಲಾಗಿತ್ತು.

ಸದರಿ ಆದೇಶದನ್ವಯ ಈಗಾಗಲೇ ದಿನಾಂಕ: 30.09.2021 ರೊಳಗಾಗಿ, ಹಂಚಿಕೆ ಪುನರ್ ಸ್ಥಾಪನೆ ಆದೇಶದನ್ವಯ ನಿಗದಿತ ಅವಧಿಯಲ್ಲಿ ದಂಡ ಪಾವತಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಿ ಕ್ರಯಪತ್ರ ನಿರ್ವಹಿಸಲು ಅಗತ್ಯವಾದ ದಾಖಲೆಗಳನ್ನು ಸಲ್ಲಿಸಿರುವ ಘಟಕದ ಹಂಚಿಕೆದಾರರುಗಳಿಗೆ ಉಲ್ಲೇಖಿತ ಕಛೇರಿ ಆದೇಶದನ್ವಯ ವಿಧಿಸಬೇಕಾಗಿದ್ದ ಶೇ.10 ರಷ್ಟು ನಿವೇಶನದ ಬಾಲ್ತಿದರದ ದಂಡವನ್ನು ವಿಧಿಸದೇ ಕ್ರಯಪತ್ರ ನಿರ್ವಹಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

(ಪ್ರಿಯಾಭಾಮ ಸಿ.)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು / ತುಮಕೂರು / ಹುಬ್ಬಳ್ಳಿ / ಬೆಳಗಾವಿ / ಕಲಬುರಗಿ/ ಮೈಸೂರು / ಶಿವಮೊಗ್ಗ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು (ಕೈವ) / (ಆಡಳಿತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ವ-1 (ಹಣಕಾಸು) / (ಆಲೆಪ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ) /(ವಾಲೆ), ಕರಾಸಕೈಅನಿನಿ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

000310

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.

ಫೋನ್ : 080-2340 7011 ರಿಂದ 25, ಫ್ಯಾಕ್ಸ್ : 91-080-2314 3566 / 2338 9070 ತಂತಿ : ಮೈನ್ಸ್ಮಾಲ್ ಕಾರ್ಪ್

ವೆಬ್‌ಸೈಟ್ : www.kssidc.co.in

ಸಂಖ್ಯೆ/ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020 /1126 ದಿನಾಂಕ: 03.01.2022

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ: 1. ನಿಗಮದ ಕಛೇರಿ ಆದೇಶ ಸಂಖ್ಯೆ: ಸಮನ್ವಯ/ಕೈವ ನೀತಿ/ ಮಾ.ಸೂ/ 2015/972 ದಿನಾಂಕ: 22.06.2015.

2. ದಿನಾಂಕ: 20.01.2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ.

3. ದಿನಾಂಕ: 28.01.2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

4. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/108 ದಿನಾಂಕ: 12.02.2020.

5. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/108 ದಿನಾಂಕ: 08.05.2020.

6. ದಿನಾಂಕ: 15.09.2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

7. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/2020/23 1355 ದಿನಾಂಕ: 01.10.2020.

8. ಕಛೇರಿ ಆದೇಶ ಸಂಖ್ಯೆ: ಕೈವ/ನಿರ್ವಹಣಾನೀತಿ/ಮಾರ್ಗಸೂಚಿ/ಪರಿಷ್ಕರಿಸುವ ಬಗ್ಗೆ / 2021 ದಿನಾಂಕ: 25.01.2021.

9. ದಿನಾಂಕ: 18.11.2021 ರಂದು ಜರುಗಿದ ನಿಗಮದ 363ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

*****

ದಿನಾಂಕ: 01.10.2020 ರಂದು ಹೊರಡಿಸಿರುವ ಉಲ್ಲೇಖ (7) ಲ್ಲಿ ಸೂಚಿಸಿರುವ ಕಛೇರಿ ಆದೇಶದಂತೆ ಹಂಚಿಕೆ ಪುನರ್ ಸ್ಥಾಪನೆ ಆದೇಶವು ದಿನಾಂಕ: 30.09.2021 ರಂದು ಮುಕ್ತಾಯವಾಗಿರುತ್ತದೆ. ಮುಂದುವರೆದು, ದಿನಾಂಕ: 18.11.2021 ರಂದು ಜರುಗಿದ ನಿಗಮದ 363ನೇ ಮಂಡಳಿಯಲ್ಲಿ, ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ.

"ತೀರ್ಮಾನ: ಮಂಡಳಿಯು ಸುದೀರ್ಘವಾಗಿ ಚರ್ಚಿಸಿ, ಈಗಾಗಲೇ ಕೈಗಾರಿಕಾ ವಲಯಗಳಿಗೆ ನಿಗದಿಪಡಿಸಿದ ಹಂಚಿಕೆ ಪುನರ್ ಸ್ಥಾಪನೆ ನೀತಿಗೆ ದಂಡ ವಿಧಿಸುತ್ತಿರುವ ಕ್ರಮವನ್ನು ದಿನಾಂಕ: 31.12.2022 ರವರೆಗೆ ಮುಂದುವರೆಸಲು ನಿರ್ಧರಿಸಿತು ಮತ್ತು ಈ ನಿಟ್ಟಿನಲ್ಲಿ ಸೂಕ್ತ ಕ್ರಮಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರವರಿಗೆ ಸೂಚಿಸಿತು." "

000309

ಆದುದರಿಂದ ಉಲ್ಲೇಖಗಳಲ್ಲಿ ಹೊರಡಿಸಿರುವ ಆದೇಶಗಳಲ್ಲಿ ಕೆಲವು ಅಂಶಿಕ ಬದಲಾವಣೆಗಳೊಂದಿಗೆ ಈ ಕೆಳಗೆ ವಿವರಿಸಿರುವ ಕೋಷ್ಟಕದಂತೆ ದಂಡ ವಿಧಿಸಿ ಹಂಚಿಕೆ ಪುನರ್ ಸ್ಥಾಪನೆಗೆ ಕ್ರಮವಹಿಸುವಂತೆ ಆದೇಶಿಸಲಾಗಿದೆ.

1. ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ:

ಕ್ರ.ಸಂ	ಪ್ರವರ್ಗ	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ "	ಶೇ. 25 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	" ಬಿ"	ಶೇ. 20 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 15 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

2. ಹಂಚಿಕೆಯಾದ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸಿರುವ ಹಾಗೂ ನಿಗಧಿತ ಅವಧಿಯಲ್ಲಿ ಕೈಗಾರಿಕಾ ಚಟುವಟಿಕೆಗಳನ್ನು ಪ್ರಾರಂಭಿಸದೇ ಇರುವ ಹಂಚಿಕೆದಾರರಿಗೆ ವಿಧಿಸಬಹುದಾದ ದಂಡದ ಪ್ರಮಾಣ:

ಕ್ರ.ಸಂ	ಪ್ರವರ್ಗ	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಪಾವತಿಸಬೇಕಾದ ಮೊತ್ತ ದಂಡದ ಪ್ರಮಾಣ
1	"ಎ "	ಶೇ. 20 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	" ಬಿ"	ಶೇ 18 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 13 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

ಈ ಆದೇಶದ ಪ್ರಕಾರ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಮತ್ತು ಸಂಬಂಧಪಟ್ಟ ಶಾಖಾ ಕಛೇರಿಯ ಅಧಿಕಾರಿಗಳು ಹಂಚಿಕೆ / ಕರಾರು ನಿಬಂಧನೆಗಳನ್ನು ಉಲ್ಲಂಘಿಸಿದ ಹಂಚಿಕೆದಾರರುಗಳಿಗೆ ಪತ್ರ ಬರೆದು ಹಂಚಿಕೆ ಪುನರ್ ಸ್ಥಾಪನೆ ಅವಕಾಶವನ್ನು ಉಪಯೋಗಿಸಿಕೊಂಡು ಉದ್ದಿಮೆ ಪ್ರಾರಂಭ ಮಾಡುವಂತೆ ನೋಟೀಸ್ ನೀಡಿ ಹಂಚಿಕೆದಾರರುಗಳಿಂದ ನಿಗಧಿತ ದಂಡ ಪಾವತಿಸಿಕೊಂಡು, ನಿಯಮಾನುಸಾರ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು (Restoration of Allotment) ಸೂಕ್ತ ಕ್ರಮ ಜರುಗಿಸುವುದು.

ಮುಂದುವರೆದು, ದಿನಾಂಕ: 01.04.2021 ರ ನಂತರ ಹಂಚಿಕೆ ಪುನರ್ ಸ್ಥಾಪನೆ ಸಂಬಂಧ ಹಳೆಯ ದರಗಳಂತೆ ದಂಡ ವಸೂಲಿ ಮಾಡಿರುವ ಪ್ರಕರಣಗಳಲ್ಲಿ, ದಿನಾಂಕ: 01.04.2021 ರಿಂದ ಕೈಗಾರಿಕಾ ವಸಾಹತುಗಳ ಭೂದರ ಪರಿಷ್ಕರಣೆಯಾಗಿದ್ದು, ಅದರಂತೆ ಹಂಚಿಕೆದಾರರಿಂದ ವ್ಯತ್ಯಾಸದ ಮೊತ್ತವನ್ನು ತೆರಿಗೆಯೊಂದಿಗೆ ವಸೂಲಿ ಮಾಡುವುದು.ಉಳಿದಂತೆ ಉಲ್ಲೇಖ (7) ರಂತೆ ಹೊರಡಿಸಿರುವ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ಆದೇಶವು ದಿನಾಂಕ: 01.10.2021 ರಿಂದ ದಿನಾಂಕ: 31.12.2022 ರವರೆಗೆ ಜಾರಿಯಲ್ಲಿರುತ್ತದೆ.

(ಸತ್ಯಪ್ರಕಾಶ್ ಸಿ.)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು / ತುಮಕೂರು / ಹುಬ್ಬಳ್ಳಿ / ಬೆಳಗಾವಿ / ಕಲಬುರಗಿ/ ಮೈಸೂರು / ಶಿವಮೊಗ್ಗ.

000308

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು (ಕೈವ) / (ಆಡಳತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ವ-1 (ಹಣಕಾಸು) / (ಆಲೆಪ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ) /(ವಾಲೆ), ಕರಾಸಕೈಅನಿನಿ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
7. ವ್ಯ.ನಿ.ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರುರವರಿಗೆ ಈ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
9. ಜಿಲ್ಲಾ ಕೈಗಾರಿಕಾ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ಮಳಿಗೆ:ನಿರ್ವಹಣಾನೀತಿ:ಪುನರ್‌ಸ್ಥಾಪನೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಪುನರ್ ಸ್ಥಾಪನೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಆಡಳಿತ ಮಂಡಳಿ ಸಭೆಯ ನಡವಳಿ.

*****

ನಿಗಮವು ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯ ಅಭಿವೃದ್ಧಿಗೆ ತಗಲುವ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಸೇರಿಸಿ ಪ್ರೋರೇಟಾ ಆಧಾರದ ಮೇಲೆ ನಿವೇಶನಗಳ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ಎ, ಬಿ, ಸಿ, ಡಿ, ಸೂಪರ ಮಿನಿ, ಮಿನಿ, ಮಾದರಿ ಮಳಿಗೆಗಳನ್ನು, ಗೋದಾಮುಗಳು ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತದೆ. ಸದರಿ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಮಳಿಗೆಯನ್ನು ನಿರ್ಮಾಣ ಮಾಡಲು ಅಗತ್ಯವಿರುವ ಕಾಮಗಾರಿ ವೆಚ್ಚಗಳನ್ನು ಅಂದಾಜಿಸಿ ಅದಕ್ಕೆ ಮೇಲ್ವಿಚಾರಣಾ ಶುಲ್ಕ, ನಿಗಮದ ಸೇವಾ ಶುಲ್ಕಗಳನ್ನು ಸೇರಿಸಿ ಹಾಗೂ ಮೇಲೆ ತಿಳಿಸಿದಂತೆ ಲೆಕ್ಕಾಚಾರ ಮಾಡಿ ನಿಗಧಿಪಡಿಸಿದ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಗಳ ಮೌಲ್ಯವನ್ನು ನಿರ್ಧರಿಸಲಾಗುವುದು.

ಮಳಿಗೆಗಳ ಮೌಲ್ಯವನ್ನು ನಿರ್ಧರಿಸಿದ ನಂತರ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರುಗಳು ಹಂಚಿಕೆ ಪತ್ರ ಮತ್ತು ಕರಾರು ಒಪ್ಪಂದದ ಪ್ರಕಾರ ನಿಗಧಿತ ಅವಧಿಯಲ್ಲಿ ಕಂತು / ಮಳಿಗೆಗಳ ಮೌಲ್ಯವನ್ನು ಪಾವತಿಸದೇ ಇದ್ದಲ್ಲಿ, ಮಳಿಗೆಯನ್ನು ಕೆ.ಪಿ.ಪಿ ಕಾಯ್ದೆಯನುಸಾರ ಕ್ರಮ ತೆಗೆದುಕೊಂಡು ನಿಗಮದ ಸ್ವಾಧೀನಕ್ಕೆ ಪಡೆದು, ಹಂಚಿಕೆದಾರರುಗಳು ಪಾವತಿಸಬೇಕಾದ ಮಳಿಗೆಗಳ ಮೌಲ್ಯ ಮತ್ತು ಬಡ್ಡಿ, ವಿಳಂಬಿತ ಅವಧಿ ಬಡ್ಡಿ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಲೆಕ್ಕಾಚಾರ ಮಾಡಿ ಒಟ್ಟು ಮೊತ್ತಕ್ಕೆ ಆರ್.ಆರ್.ಸಿ ವಿತರಣೆ ಮಾಡಲಾಗುವುದು. ತದನಂತರ ಸದರಿ ಮಳಿಗೆಗಳನ್ನು ಮರು-ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಮಳಿಗೆಗಳನ್ನು ಹಂಚಿಕೆಗಾಗಿ ಮರು-ಪ್ರಕಟಣೆ ನೀಡುವ ಮುನ್ನ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಸದರಿ ಮಳಿಗೆಯ ನಿವೇಶನದ ಮೌಲ್ಯವನ್ನು ಸರ್ಕಾರವು ಆಯಾ ವರ್ಷಗಳಲ್ಲಿ ನಿಗಧಿಪಡಿಸಲ್ಪಡುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ನಿಗಮವು ರೂಪಿಸಿರುವ ಮಾನದಂಡಗಳಂತೆ ಲೆಕ್ಕಾಚಾರ ಮಾಡಿ ದರಗಳನ್ನು ನಿಗಧಿಪಡಿಸಿ ಆಯಾ ನಿವೇಶನಗಳ ವಿಸ್ತೀರ್ಣಕ್ಕೆ ತಕ್ಕಂತೆ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ರೂಪಿಸಿರುವ ಮಾನದಂಡಗಳನ್ವಯ ಸರ್ಕಾರದ ಆಯಾ ವರ್ಷದ ಪಿ.ಡಬ್ಲ್ಯು.ಡಿ ಎಸ್.ಆರ್. ದರಗಳಂತೆ ಮಳಿಗೆಯ ಕಟ್ಟಡ ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಅದರಲ್ಲಿ ಮಳಿಗೆಯ ನಿರ್ಮಾಣ ಸಾಲಿನಿಂದ ಹಂಚಿಕೆ ಮಾಡುವ ಸಾಲಿನವರೆವಿಗಿನ ಅವಧಿಗೆ ಸವಕಳಿಯನ್ನು ಲೆಕ್ಕಾಚಾರ ಮಾಡಿ, ಮಳಿಗೆಯ ಕಟ್ಟಡದ ಅಂದಾಜು ಮೌಲ್ಯದಲ್ಲಿ ಕಳೆದು, ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ನಂತರ ಮಳಿಗೆಯ ಕಟ್ಟಡದ ಮೌಲ್ಯಕ್ಕೆ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಯ ಒಟ್ಟು ಮೌಲ್ಯವನ್ನು ನಿರ್ಧರಿಸಿ ಹಂಚಿಕೆಗೆ ಪರಿಗಣಿಸಲಾಗುವುದು.

ಮಳಿಗೆಗಳನ್ನು ಕಂತು ಖರೀದಿ ಆಧಾರದ ಮೇಲೆ, ಈ ಹಿಂದೆ 6/ 10ವರ್ಷಗಳ ಕರಾರು ಅವಧಿಗೆ ಹಂಚಿಕೆ ಮಾಡಲಾಗುತ್ತಿದೆ.ಮಳಿಗೆಯ ಮೌಲ್ಯವನ್ನು 6/10 ವರ್ಷಗಳಿಗೆ ವಿಸ್ತರಿತ ಕಂತುಗಳನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರು ವಿಸ್ತರಿತ ಕಂತುಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ವಿಳಂಬಿತ ಅವಧಿಗೆ ನಿಗಮವು ನಿಗಧಿಪಡಿಸಿದ ಬಡ್ಡಿಯ ದರವನ್ನು ಆಕರಿಸಿ ಪಾವತಿಸಿಕೊಳ್ಳಲಾಗುವುದು. ಆದಾಗ್ಯೂ ಹಂಚಿಕೆದಾರರು ಕಾರಣಾಂತರಗಳಿಂದ ಮಳಿಗೆಯ ಬಾಕಿ ಮೌಲ್ಯವನ್ನು ಆಕರಿತ ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ, ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಗಳನ್ನು ತೆಗೆದುಕೊಂಡು, ತದನಂತರವು ಪಾವತಿಸದೇ ಇದ್ದಲ್ಲಿ ಮಳಿಗೆಯನ್ನು ನಿಗಮದ ನಿಯಮಾನುಸಾರ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ತೆಗೆದುಕೊಂಡು, ಹಂಚಿಕೆದಾರರು ಪಾವತಿಸಬೇಕಾದ ಮೊತ್ತಕ್ಕೆ ಆರ್.ಆರ್.ಸಿ ವಿತರಿಸಿ ಅವರ ಆಸ್ತಿ ದೊರೆತಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುವುದು.

-2-

000306

(2)

ಸದರಿ ಮಾಜಿ ಹಂಚಿಕೆದಾರರು ತಮಗೆ ಈ ಹಿಂದೆ ಹಂಚಿಕೆಯಾದ ಮಳಿಗೆಯನ್ನು ಮರು-ಸ್ವಾಧೀನ ಪಡೆಯಲು ಇಚ್ಛಿಸಿದಲ್ಲಿ, ನಿಗಮದ ಮಂಡಳಿಯು ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ವಯ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶ ಹಾಗೂ ಮುಂದುವರೆದಂತೆ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ ದಂಡವನ್ನು ವಿಧಿಸಲಾಗುವುದು. ಅದರಂತೆ ಬಾಕಿ ಹಾಗೂ ದಂಡವನ್ನು ಮಾಜಿ ಹಂಚಿಕೆದಾರರು ಪಾವತಿಸಿದಲ್ಲಿ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಮರು-ಸ್ವಾಧೀನ ನೀಡಲಾಗುವುದು.

ಸದರಿ ಮಳಿಗೆಗಳ ಬಾಕಿ ಕಂತುಗಳನ್ನು /ಮೌಲ್ಯವನ್ನು ಪಾವತಿಸದೇ ಇದ್ದ ಮಳಿಗೆಗಳನ್ನು ಬೀಗಮುದ್ರೆಗೊಳಿಸಿ ನಿಗಮದ ಸ್ವಾಧೀನಕ್ಕೆ ಪಡೆದ ನಂತರ ಹಂಚಿಕೆದಾರರು ಮರು ಸ್ವಾಧೀನ ಪಡೆಯಲು ಉದ್ದೇಶಿಸಿದಲ್ಲಿ ಕಛೇರಿ ಆದೇಶದನ್ವಯ ಹಂಚಿಕೆದಾರರು ನಿಗಮಕ್ಕೆ ಪಾವತಿಸಬೇಕಾದ ಮಳಿಗೆಯ ಬಾಕಿ ಕಂತುಗಳು ಮತ್ತು ವಿಳಂಭಿತ ಅವಧಿಗೆ ಆಕರಿಸಲ್ಪಟ್ಟ ಬಡ್ಡಿಯೊಂದಿಗೆ ಒಟ್ಟು ಮೊತ್ತದ ಶೇ. ೫೦ ರಷ್ಟನ್ನು ಪಾವತಿಸಿದಲ್ಲಿ ಮಳಿಗೆಯನ್ನು ಮರು-ಸ್ವಾಧೀನ ನೀಡಲಾಗುವುದು.

ಆದರೆ, ಮೇಲ್ಕಂಡಂತೆ ದಿನಾಂಕ 22-06-2015 ರಂದು ಹೊರಡಿಸಲಾದ ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳ ಕಛೇರಿ ಆದೇಶ ಹಾಗೂ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ, ಹಂಚಿಕೆದಾರರು ಮಳಿಗೆಯ ಬಾಕಿ ಮೌಲ್ಯ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪ್ರವರ್ಗವಾರು ಕೈಗಾರಿಕಾ ವಸಾಹತುಗಳಿಗೆ ನಿಗಧಿಪಡಿಸಿದ ಮಳಿಗೆ/ನಿವೇಶನಗಳ ಪ್ರಚಲಿತ ಮೌಲ್ಯದ ಮೇಲೆ ವಿಧಿಸುವ ಶೇಕಡವಾರು ಪ್ರಮಾಣ ದಂಡದ ಮೊತ್ತದೊಂದಿಗೆ ಒಂದೇ ಇಡಿಗಂಟಿನಲ್ಲಿ ಪಾವತಿಸಿದರೆ ಮಾತ್ರ ಪುನರ್ ಸ್ಥಾಪನೆಗೆ (Restoration) ಅನುಮತಿಸಲಾಗುವುದು. ಈ ನಿಯಮವು ಮಳಿಗೆ ಹಂಚಿಕೆದಾರರುಗಳ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆಯಾಗಲಿದ್ದು, ರೋಗಗ್ರಸ್ಥ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮವಾಗಿರುವುದಿಲ್ಲ.

ನಿಗಮವು ಆಯಾ ಮಳಿಗೆಗಳ ಮೌಲ್ಯಕ್ಕೆ ಬಡ್ಡಿಯನ್ನು ಸೇರಿಸಿ ವಿಸ್ತರಿತ ಕಂತುಗಳನ್ನು ನಿರ್ಧರಿಸಿದ್ದು, ತದನಂತರ ವಿಳಂಭಿತ ಪಾವತಿ ಅವಧಿಗೂ ಸಹ ಕಂತಿನಲ್ಲಿನ ಬಡ್ಡಿಗಿಂತ ಶೇ.2ರಷ್ಟು ಹೆಚ್ಚುವರಿ ಬಡ್ಡಿ ದರವನ್ನು ಆಕರಿಸಿ ಪಾವತಿಸಿಕೊಳ್ಳುವುದರಿಂದ ನಿಗಮಕ್ಕೆ ನಷ್ಟವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ದೇಶಾದ್ಯಂತ ಹರಡಿರುವ ಕರೋನಾ /ಕೋವಿಡ್-19 ರೋಗದಿಂದಾಗಿ ವಾಣಿಜ್ಯ ಚಟುವಟಿಕೆಗಳು ಸರ್ವತೋಮುಖವಾಗಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೇ ನಿಗಮದ ಮೂಲ ಧ್ಯೇಯೋದ್ದೇಶವಾಗಿದ್ದು, ಸಣ್ಣ ಕೈಗಾರಿಕೆಗಳ ಸ್ನೇಹಿಯಾಗಿ ಇರುವುದರಿಂದ, ಮಳಿಗೆ ಮತ್ತು ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿ ಇತ್ಯಾದಿ ಕಟ್ಟಡಗಳಿಗೆ, ಮೇಲ್ಕಂಡ ಆದೇಶಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಅಂಶಗಳನ್ನು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದ್ದು, ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> ತೀರ್ಮಾನ:- ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ನಿವೇಶನಗಳ ಜೊತೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸಹ ಸೇರಿದ್ದು, ಅವುಗಳನ್ನು, ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ಹಾಗೂ ತತ್ಸಬಂಧ ಪರಿಷ್ಕೃತ ಆದೇಶವನ್ನು ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.

ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಕಂಡಿಕೆಗಳಲ್ಲಿ ನಿಗಮವು ತನ್ನ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಿಸಿರುವ ಮಳಿಗೆಗಳ ಮೌಲ್ಯ ನಿರ್ಧರಣೆ, ಹಂಚಿಕೆ, ಕಂತು ನಿರ್ಧರಣೆ, ವಸೂಲಾತಿ ಹಾಗೂ ವಿಳಂಭಿತ ಅವಧಿಗೆ ಆಕರಿಸಿರುವ ಬಡ್ಡಿ ಪಾವತಿಸದೇ ಇದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿದ್ದು, ಅದರಂತೆ ಮಳಿಗೆ/ /ಗೋದಾಮು /ಸಂಕೀರ್ಣ ಮಳಿಗೆ/ಅಂಗಡಿಗಳಿಗೆ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಮಂಡಳಿಯು ತೆಗೆದುಕೊಂಡ ನಿರ್ಧಾರದ ಮೇರೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ನಿರ್ಧರಿಸಿ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ವಿಭಾಗೀಯ ಕಛೇರಿಗಳು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

25/01/2021

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

000305

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ),/(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾ:ನೀತಿ:ಮಾರ್ಗಸೂಚಿ:2020/23/1355 ದಿನಾಂಕ: 01-10-2020

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ
1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ: ಸಮನ್ವಯ: ಕೈವ: ನಿರ್ವಹಣಾ: ನೀತಿ: ಮಾ. ಸೂ: 2015:972 ದಿನಾಂಕ: 22-06-2015.
4. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 12-02-2020.
5. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 08-05-2020.
6. ದಿನಾಂಕ 15-09-2020 ರಂದು ಜರುಗಿದ ನಿಗಮದ 360ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.

****

ನಮ್ಮ ರಾಜ್ಯ/ದೇಶ ಮತ್ತು ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿಯು ಹರಡುತ್ತಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕ್ರಮಗಳನ್ನು/ನಿಯಮಗಳನ್ನು ದೇಶದಾದ್ಯಂತ ಅನ್ವಯಿಸುವಂತೆ ಜಾರಿಗೆ ತಂದಿರುತ್ತದೆ. ಅದರಲ್ಲಿ ದಿನಾಂಕ: 23.03.2020 ರಿಂದ ಜಾರಿಗೆ ಬರುವಂತೆ ದಿನಾಂಕ: 17.05.2020 ರವರೆಗೆ ದೇಶಾದಾದ್ಯಂತ ಲಾಕ್‌ಡೌನ್ ಘೋಷಿಸಿರುತ್ತದೆ. ಇದರಿಂದ ಆರ್ಥಿಕ ಹಿಂಜರಿತ ಉಂಟಾದುದರಿಂದ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಕೈಗಾರಿಕಾ ಚಟುವಟಿಕೆಗಳನ್ನು ನಡೆಸಲು ಕಷ್ಟ ಸಾಧ್ಯವಾಗಿದ್ದು ಹಾಗೂ ಕೈಗಾರಿಕೋದ್ಯಮಿಗಳು ಹೊಸ ಕೈಗಾರಿಕೆಗಳ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಈಡಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸಣ್ಣ, ಅತೀ ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಈ ಹಿಂದೆ ಹೊರಡಿಸಲಾಗಿದ್ದ ದಿನಾಂಕ 08-05-2020ರ ಪರಿಷ್ಕರಣೆ ಆದೇಶದಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ನಿಗಮದ 360ನೇ ಆಡಳಿತ ಮಂಡಳಿಯು ಮಾರ್ಪಾಡುಗೊಳಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಹಂಚಿಕೆದಾರರು ತಮಗೆ ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಸಮಯದಲ್ಲಿ ಕೈಗಾರಿಕಾ ಕಟ್ಟಡಗಳನ್ನು ನಿರ್ಮಿಸದೇ ಇರುವಂತಹ ಹಂಚಿಕೆದಾರರುಗಳಿಗೆ ಕೆಳಕಂಡ ತಖ್ತೆ:ಯಲ್ಲಿ ಸೂಚಿಸಿರುವ ದಂಡದ ಮೊತ್ತವನ್ನು ಪಾವತಿಸಿಕೊಂಡು ಮರು ಸ್ವಾಧೀನ ನೀಡುವುದು.

ಕ್ರ.ಸಂ	ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ)	ಮನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ನಿವೇಶನ / ಮಳಿಗೆಯ ಚಾಲ್ತಿ ದರದ ದಂಡದ ಪ್ರಮಾಣ
1	"ಎ"	ಶೇ.15 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
4	"ಡಿ"	ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ, ಕರಾರು ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಹಾಗೂ ಕಾರ್ಯ ನಿರ್ವಹಿಸುತ್ತಿರುವ ದಿನಾಂಕ: 08.05.2020ರ ಕಛೇರಿ ಆದೇಶಕ್ಕೆ ಮುನ್ನ ಇರುವಂತಹ ಘಟಕಗಳಿಗೆ ಈ ಕೆಳಕಂಡ ತಖ್ತೆ:ಯಲ್ಲಿ ಸೂಚಿಸಿರುವಂತೆ ದಂಡವನ್ನು ಪಾವತಿಸಿಕೊಂಡು ಮರುಸ್ವಾಧೀನ ನೀಡಲು ಸೂಚಿಸಲಾಗಿದೆ.

ಕ್ರ.ಸಂ	ಕೈಗಾರಿಕಾ ವಸಾಹತುಗಳ ವರ್ಗೀಕರಣ (ಪ್ರವರ್ಗ)	ಪುನರ್ ಸ್ಥಾಪನೆ ಮಾಡುವ ಸಂದರ್ಭದಲ್ಲಿ ಹಂಚಿಕೆದಾರರು ಪಾವತಿಸಬೇಕಾದ ನಿವೇಶನ / ಮಳಿಗೆಯ ಚಾಲ್ತಿ ದರದ ದಂಡದ ಪ್ರಮಾಣ
1	"ಎ"	ಶೇ.10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
2	"ಬಿ"	ಶೇ. 8 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
3	"ಸಿ"	ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ
4	"ಡಿ"	ಶೇ. 3 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ

ಈ ಕಛೇರಿ ಆದೇಶ ಹೊರಡಿಸುವ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020 ರಂದು ಹೊರಡಿಸಲಾಗಿದ್ದ ಕಛೇರಿ ಆದೇಶದಲ್ಲಿ ತಿಳಿಸಿದಂತೆ ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಚಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ರಿಯಾಯಿತಿ ನೀಡುವಂತೆ ಸೂಚಿಸಲಾಗಿದೆ. ಈ ಸೌಲಭ್ಯ ಈ ಕಛೇರಿ ಆದೇಶದ ದಿನಾಂಕದಿಂದ ಒಂದು ವರ್ಷದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆ ಪ್ರಾರಂಭಿಸುವವರಿಗೆ ಮಾತ್ರ ಲಭ್ಯವಿರುತ್ತದೆ.

ಮುಂದುವರೆದಂತೆ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಲು ಸೂಚಿಸಿದೆ.

1. <u>ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ ಘಟಕಗಳಿಗೆ ರದ್ದತಿ ಆದೇಶ ನಿರಸನಗೊಳಿಸುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ್ದಲ್ಲಿ, ರದ್ದತಿ ಆದೇಶವನ್ನು ನಿರಸನಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ ಇತರೆ) ಪಾವತಿಸಿಕೊಂಡು ಹಂಚಿಕೆ ಪುನರ್ ಸ್ಥಾಪನೆಗೊಳಿಸಲು (Restoration of allotment) ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆಯತಕ್ಕದ್ದು.

2. <u>ಹಂಚಿಕೆ ರದ್ದತಿ ಆದೇಶ ನಿರಸನಗೊಳಿಸದೆ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶ ಹೊರಡಿಸಿದ ನಂತರ ರದ್ದತಿ ಆದೇಶವನ್ನು ನಿರಸನಗೊಳಿಸದೆ ಕಟ್ಟಡ ಕಟ್ಟಲು/ವಿದ್ಯುತ್ ಸಂಪರ್ಕ ಪಡೆಯಲು/ಸಂವಿಧಾನ ಬದಲಾವಣೆ/ ಉತ್ಪಾದನಾ ಬದಲಾವಣೆ ಇನ್ನಿತರೆ ಉದ್ದೇಶಗಳಿಗೆ ಅನುಮತಿ ನೀಡಿದ್ದರೂ ಸಹ ಗುತ್ತಿಗೆ ಕರಾರು ಅವಧಿ ಪೂರ್ಣಗೊಂಡಿರುವ ಘಟಕಗಳಲ್ಲಿ ಕೈಗಾರಿಕೆ ಕಾರ್ಯಾಚರಣೆ ನಡೆಯುತ್ತಿದ್ದಲ್ಲಿ, ಅಂತಹ ಹಂಚಿಕೆದಾರರಿಂದ ಒಂದೆ ಬಾರಿಗೆ ಕೋಷ್ಟಕದಲ್ಲಿ ತಿಳಿಸಿರುವ ದಂಡದ ಜೊತೆ ಸೇವಾ ಶುಲ್ಕ ಮತ್ತು ಇತರೆ ಶಾಸನ ಬದ್ಧ ಶುಲ್ಕಗಳನ್ನು ಪ್ರಚಲಿತ

ಅನ್ವಯವಾಗುವ ತೆರಿಗೆಗಳೊಂದಿಗೆ ಒಟ್ಟಾರೆಯಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ ಹಂಚಿಕೆ ಪುನರ್ ಸ್ಥಾಪನೆ (Restoration of allotment) ಆದೇಶ ಹೊರಡಿಸಿ ಕರಾರು ಅವಧಿ ಪೂರೈಸಿದ ನಂತರ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿ ಕೊಡುವುದು.

3. <u>ನಿಗಮದ ಸ್ವಾಧೀನದಲ್ಲಿರುವ ನಿವೇಶನ/ಮಳಿಗೆಗಳು:-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಕೈಗೊಂಡು ನಿಯಮಾನುಸಾರ ಮಹಜರ್ ಮಾಡಿ ಬೀಗಮುದ್ರೆಗೊಳಿಸಿ (Seizure) ನಿಗಮದ ವಶಕ್ಕೆ (custody) ಪಡೆದಿದ್ದಲ್ಲಿ, ಮಾಜೀ ಹಂಚಿಕೆದರರು ಹಂಚಿಕೆ ಪುನರ್ ಸ್ಥಾಪನೆಗೆ ಮನವಿ ಸಲ್ಲಿಸಿದಲ್ಲಿ ಅಂತಹ ನಿವೇಶನ/ಮಳಿಗೆಗಳು ನಿಗಮದ ಸ್ವಾಧೀನದಲ್ಲಿದ್ದಲ್ಲಿ ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ) ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆದು ಮಳಿಗೆ/ನಿವೇಶನಗಳ ಮರು ಸ್ವಾಧೀನವನ್ನು ನೀಡತಕ್ಕದ್ದು.

4. <u>ನ್ಯಾಯಾಲಯದಲ್ಲಿರುವ ಪ್ರಕರಣಗಳ ಘಟಕಗಳು :-</u>

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಹಂಚಿಕೆದಾರರು ನಿಗಮದ ಕ್ರಮವನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿದಲ್ಲಿ, ಘನ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ, ಹಂಚಿಕೆದಾರರ ಮನವಿಯನ್ನು ಪರಿಗಣಿಸದೆ, ನಿಯಮಾನುಸಾರ ಮರು ಹಂಚಿಕೆಗೆ ಪ್ರಕಟಣೆ ನೀಡಿ ಕ್ರಮಕೈಗೊಳ್ಳುವುದು.

5. <u>ಹಂಚಿಕೆದಾರರ ಸ್ವಾಧೀನದಲ್ಲಿರುವ ಮಳಿಗೆ / ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u>

ಈ ಮೇಲೆ ಕೋಷ್ಟಕದಲ್ಲಿ ತಿಳಿಸಿದಂತೆ, ನಿಗಮವು ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ / ಹೊರಡಿಸುವ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸುವುದು (Restoration of allotment). ಪುನರ್ ಸ್ಥಾಪನೆ ಆದೇಶ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷದ ಕಾಲಾವಕಾಶದಲ್ಲಿ ನಿವೇಶನದಲ್ಲಿ ಕಡ್ಡಾಯವಾಗಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

6. <u>ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:</u>

ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್ ಸ್ಥಾಪನೆಗೊಳಿಸಿ (Restoration of allotment), ಮಳಿಗೆ/ನಿವೇಶನದ ಮರು-ಸ್ವಾಧೀನ ನೀಡುವುದು. ಮಳಿಗೆ/ನಿವೇಶನದ ಮರು-ಸ್ವಾಧೀನ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷ ಕಾಲಾವಕಾಶದಲ್ಲಿ ಕಡ್ಡಾಯವಾಗಿ ಮಳಿಗೆಯಲ್ಲಿ ಕಾರ್ಯಾಚರಣೆ ಪ್ರಾರಂಭಿಸುವುದು ಮತ್ತು ನಿವೇಶನದ ಹಂಚಿಕೆದಾರರು ಕಟ್ಟಡ ನಿರ್ಮಿಸಿ/ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು

ಹಾಕಿಕೊಂಡು, ಮಳಗೆ /ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವುದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಕೆ ಪತ್ರ ಪಡೆಯುವುದು.

7. <u>ಪುನರ್ ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-</u>

ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಪುನರ್ ಸ್ಥಾಪನೆಗೊಂಡ ಮಳಗೆಯಲ್ಲಿ ಕಾರ್ಯಾಚರಣೆ/ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಅಂತಹ ಹಂಚಿಕೆದಾರರ ನಿವೇಶನ/ಮಳಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಸದರಿ ಹಂಚಿಕೆದಾರರು ಪಾವತಿಸಿರುವ ಎಲ್ಲಾ ಪಾವತಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿ ಮಾಹಿತಿಯನ್ನು ಕಡ್ಡಾಯವಾಗಿ ನಿಗಮದ ಹಣಕಾಸು ವಿಭಾಗಕ್ಕೆ ಮಾಹಿತಿ ನೀಡುವುದು. ಹಾಗೂ ಸದರಿ ಮಳಗೆ/ನಿವೇಶನಗಳ ಹಂಚಿಕೆಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ಕ್ರಮ ಜರುಗಿಸುವುದು.

8. <u>ಪುನರ್ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸಿ / ಕೈಗಾರಿಕಾ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-</u>

ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಈ ಮೇಲೆ ತಿಳಿಸಿರುವ ಕೋಷ್ಟಕದಂತೆ ದಂಡವನ್ನು ಪಾವತಿಸಿ ಪುನರ್ ಸ್ಥಾಪನೆ ಆದೇಶ/ಮರುಸ್ವಾಧೀನ ಪಡೆದು ಮಳಗೆ/ ನಿವೇಶನದಲ್ಲಿ ನಿಗಧಿತ ಅವಧಿಯಲ್ಲಿ ಕೈಗಾರಿಕಾ ಕಾರ್ಯಾಚರಣೆ ನಡೆಸಿ ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಘಟಕಗಳಿಗೆ ನಿಗಮದ ನಿಯಮಗಳನ್ವಯ ಕ್ರಮವನ್ನು ಜರುಗಿಸಿ ಕ್ರಯಪತ್ರವನ್ನು ವಿತರಿಸುವುದು.

9. **ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳು :-**

ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಅಂದರೆ ಹಂಚಿಕೆಯಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಎಲ್ಲಾ ಹಂಚಿಕೆಗಳನ್ನು ಕೆ.ಪಿ.ಪಿ. ಕಾಯ್ದೆಯನ್ವಯ ಕ್ರಮ ತೆಗೆದುಕೊಂಡು ಕೂಡಲೇ ರದ್ದುಗೊಳಿಸಿ, ಮಳಗೆ /ನಿವೇಶನಗಳನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು ನಿಗಮದ ನಿಯಮವಾಗಿದ್ದು, ಈ ನಿಯಮವನ್ನು ವಿಭಾಗೀಯ ಕಛೇರಿಗಳು ಕಟ್ಟುನಿಟ್ಟಾಗಿ ನಿರ್ವಹಿಸಲು ಸೂಚಿಸಿದೆ.

ಮುಂದುವರೆದಂತೆ, ಈ ಆದೇಶ ತಲುಪಿದ 30 ದಿನಗಳೊಳಗಾಗಿ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ಕಡ್ಡಾಯವಾಗಿ ಹಂಚಿಕೆಯಾಗಿ ಕಟ್ಟಡ ನಿರ್ಮಿಸದೇ ಇರುವ, ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೇ ಇರುವ, ಕಾರ್ಯಾಚರಣೆ ನಡೆಸದೇ ಇರುವ, ನಿಗಧಿತ ಕರಾರು ಅವಧಿಯ ನಂತರ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆದು ಕಾರ್ಯಾಚರಣೆ ನಡೆಸುತ್ತಿರುವ ಹಾಗೂ ನಕ್ಷೆ ಅನುಮೋದನೆ ಪಡೆಯದೇ ಕಟ್ಟಡ ನಿರ್ಮಿಸಿ ಉದ್ಯಮ ನಡೆಸುತ್ತಿರುವ ಹಂಚಿಕೆದಾರರುಗಳಿಗೆ ನೋಟೀಸ್ ನೀಡಿ ನೋಟೀಸ್ ತಲುಪಿದ 15 ದಿನಗಳೊಳಗೆ ಒಪ್ಪಿಗೆ ಪತ್ರವನ್ನು ಪಡೆದು ದಂಡ ಮತ್ತು ಶಾಸನಬದ್ಧ ತೆರಿಗೆ ಮತ್ತು ಇನ್ನಿತರೆ ಪಾವತಿಗಳನ್ನು ಪೂರ್ಣವಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಹಂಚಿಕೆ ರದ್ದತಿ ಆದೇಶವನ್ನು ನಿರಸನಗೊಳಿಸಿ (Restoration of allotment) ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಮುಂದುವರೆದಂತೆ, ಹಂಚಿಕೆಯಾದ ನಿವೇಶನಗಳಲ್ಲಿ ನಿಗಧಿತ ಅವಧಿಯಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಸದೇ ಅವಧಿ ಮುಗಿದ ನಂತರ ಕಟ್ಟಡ ನಿರ್ಮಿಸಲು ಪ್ರಾರಂಭಿಸಿರುವಂತಹ ಮತ್ತು ಅರೆ ನಿರ್ಮಾಣದಲ್ಲಿರುವ ಹಂತದಲ್ಲಿರುವ ಘಟಕಗಳಿಗೆ ಹಾಗೂ ಕಟ್ಟಡ ನಿರ್ಮಿಸಿ ವಿದ್ಯುಚ್ಛಕ್ತಿ ಪಡೆಯದೆ ಇರುವಂತಹ ಹಾಗೂ ವಿದ್ಯುಚ್ಛಕ್ತಿ ಪಡೆದು ಕಾರ್ಯ ನಿರ್ವಹಿಸದೇ ಇರುವ ಘಟಕಗಳಿಗೆ ಇಂದಿನಿಂದ ಅಂದರೆ ದಿನಾಂಕ 01.10.2020 ರಿಂದ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಮೇಲ್ಕಂಡ ತಖ್ತೆ:ಯಲ್ಲಿ ಸೂಚಿಸಿರುವಂತೆ ದಂಡವನ್ನು ಪಾವತಿಸಿಕೊಂಡು ಹಂಚಿಕೆ ಪುನರ್ ಸ್ಥಾಪನೆಗೊಳಿಸಲು ಸೂಚಿಸಲಾಗಿದೆ.

000300

ಕಛೇರಿ ಆದೇಶದ ಪ್ರಕಾರ ಹಂಚಿಕೆ ಪುನರ್ ಸ್ಥಾಪನೆಗೊಂಡ ನಂತರ ಒಂದು ವರ್ಷದೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ, ವಿದ್ಯುಚ್ಛಕ್ತಿ ಪಡೆದು ಕೈಗಾರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಂತಹ ಘಟಕಗಳಿಗೆ ಕ್ರಯಪತ್ರ ನೀಡುವ ಸಂದರ್ಭದಲ್ಲಿ ನಿಗದಿಪಡಿಸಿದ್ದ ಶೇ.10 ರಷ್ಟು ಬಾಲ್ತಿ ದರದ ದಂಡದ ಪ್ರಮಾಣವನ್ನು ಕೋವಿಡ್-19 ಇರುವ ಹಿನ್ನೆಲೆಯಲ್ಲಿ ದಿನಾಂಕ: 30.09.2021 ರವರೆಗೆ ರಿಯಾಯಿತಿ ನೀಡಿದೆ. ತದನಂತರ ಕ್ರಯಪತ್ರ ನಿರ್ವಹಿಸಿಕೊಳ್ಳುವ ಹಂಚಿಕೆದಾರರುಗಳಿಗೆ ದಿನಾಂಕ: 08-05-2020ರ ಕೋಷ್ಟಕದಲ್ಲಿ ತಿಳಿಸಿದ ಕ್ರಯಪತ್ರ ನಿರ್ವಹಿಸಿಕೊಳ್ಳುವ ಸಂದರ್ಭದಲ್ಲಿ ವಿಧಿಸುವ ಶೇ.10 ರಷ್ಟು ಬಾಲ್ತಿ ಧರದ ದಂಡ ಮತ್ತು ತೆರಿಗೆಯನ್ನು ವಿಧಿಸಿ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳುವುದು.

ಈ ಆದೇಶ ವಿಶ್ವ ಮಳಿಗೆಯ ಹಂಚಿಕೆಗೆ ಅನ್ವಯಿಸುವುದಿಲ್ಲ. ಈ ಸೌಲಭ್ಯವನ್ನು ಒಮ್ಮೆ ಮಾತ್ರ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶವಿರುವುದಿಲ್ಲ.

ಈ ಆದೇಶವು ದಿನಾಂಕ 01.10.2020 ರಿಂದ ಅನ್ವಯವಾಗುವಂತೆ ದಿನಾಂಕ: 30-09-2021 ರವರೆವಿಗೆ ಬಾಲ್ತಿಯಲ್ಲಿರುತ್ತದೆ. ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಪ್ರಕರಣಗಳಿಗೆ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆ ಪಡೆದು ರಿಯಾಯಿತಿಯನ್ನು ವಿಸ್ತರಿಸಲು ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಬೆಂಗಳೂರು ವಿಭಾಗ, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ) ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು, ವ-1 (ಹಣಕಾಸು)/(ಆ.ಲೆ.ಪ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ) ಕರಾಸಕೈಅನಿನಿ, ಬೆಂಗಳೂರು
4. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
5. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
7. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
9. ಜಿಲ್ಲಾ ಕೈಗಾರಿಕಾ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು.

000299

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/1 ದಿನಾಂಕ: 8-5-2020

ಪರಿಷ್ಕರಣೆ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು.

ಉಲ್ಲೇಖ: 1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ.
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂ:2015:972 ದಿನಾಂಕ: 22-06-2015.
4. ಕಛೇರಿ ಆದೇಶ ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ 12-02-2020.

*****

ದಿನಾಂಕ 12-02-2020 ರಂದು ಹೊರಡಿಸಿದ್ದ ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕಛೇರಿ ಆದೇಶವನ್ನು ಹಿಂಪಡೆಯಲಾಗಿದೆ.

ಕೈಗಾರಿಕಾ ವಸಾಹತು ನಿರ್ವಾಹಣಾ ನೀತಿಗೆ ಮಾರ್ಗಸೂಚಿಗಳನ್ನು ಉಲ್ಲೇಖ-3 ರ ಕಛೇರಿ ಆದೇಶದಲ್ಲಿ ವಿವರಿಸಲಾಗಿದೆ. ಸದರಿ ಕಛೇರಿ ಆದೇಶದಲ್ಲಿ ವಿವರಿಸಿರುವ ಮಾರ್ಗಸೂಚಿಗಳನ್ನು ಮಾರ್ಪಾಡುಗೊಳಿಸಿ ಈ ಕೆಳಕಂಡಂತೆ ಪರಿಷ್ಕರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕ್ರ.ಸಂ	ಕೈಗಾರಿಕಾ ವಸಾಹತುವಿನ ವರ್ಗೀಕರಣ	ನಿವೇಶನ/ಮಳಿಗೆಯ ಚಾಲ್ತಿದರದ ದಂಡದ ಪ್ರಮಾಣ
1	'ಎ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 15 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
2	'ಬಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 10 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
3	'ಸಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 7.5 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ
4	'ಡಿ'	ನಿವೇಶನ/ಮಳಿಗೆಯ ಚಾಲ್ತಿ ದರದ ಮೇಲೆ ಶೇ. 5 ರಷ್ಟು ದಂಡ ಮತ್ತು ಪ್ರಚಲಿತ ತೆರಿಗೆ

1. <u>ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳು:-</u> ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ ಅಂದರೆ ಕಟ್ಟಡ ನಿರ್ಮಿಸದೆ / ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಎಲ್ಲಾ ಹಂಚಿಕೆಗಳನ್ನು ಕೂಡಲೇ ರದ್ದುಗೊಳಿಸಿ, ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು.

ಕರಾಸಕೈಅನಿನಿ

2. <u>ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ ಘಟಕಗಳಿಗೆ ರದ್ದತಿ ಆಧೇಶ ನಿರಸನಗೊಳಿಸುವ ಘಟಕಗಳು</u>:-ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ್ದಲ್ಲಿ, ರದ್ದತಿ ಆದೇಶವನ್ನು ನಿರಸನಗೊಳಿಸಲು ಸಹಾ ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ ಇತರೆ) ಪಾವತಿಸಿಕೊಂಡು ಹಂಚಿಕೆ ಪುನರ್‌ಸ್ಥಾಪನೆಗೊಳಿಸಲು (Restoration of allotment) ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆಯತಕ್ಕದ್ದು.

3. <u>ಹಂಚಿಕೆ ರದ್ದತಿ ಆದೇಶ ನಿರಸನ ಗೊಳಿಸದೆ ಕಾರ್ಯಚರಣೆ ನಡೆಸುತ್ತಿರುವ ಘಟಕಗಳು</u>:- ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶ ಹೊರಡಿಸಿದ ನಂತರ ರದ್ದತಿ ಆದೇಶವನ್ನು ನಿರಸನಗೊಳಿಸದೆ ಕಟ್ಟಡ ಕಟ್ಟಲು / ವಿದ್ಯುತ್ ಸಂಪರ್ಕ ಪಡೆಯಲು / ಸಂವಿಧಾನ ಬದಲಾವಣೆ/ ಉತ್ಪಾದನಾ ಬದಲಾವಣೆ ಇನ್ನಿತರೆ ಉದ್ದೇಶಗಳಿಗೆ ಅನುಮತಿ ನೀಡಿದ್ದರೂ ಸಹ ಮತ್ತು ಗುತ್ತಿಗೆ ಕರಾರು ಅವಧಿ ಪೂರ್ಣಗೊಂಡಿರುವ ಘಟಕಗಳಲ್ಲಿ ಕೈಗಾರಿಕೆ ಕಾರ್ಯಾಚರಣೆ ನಡೆಯುತ್ತಿದ್ದಲ್ಲಿ, ಅಂತಹ ಹಂಚಿಕೆದಾರರಿಂದ ಒಂದೇ ಬಾರಿ ಕೋಷ್ಟಕದಲ್ಲಿ ತಿಳಿಸಿರುವ ದಂಡದ ಜೊತೆ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಮತ್ತು ಕ್ರಯಪತ್ರ ನಿರ್ವಹಿಸುವ ಸಂದರ್ಭದಲ್ಲಿ ವಿಧಿಸಬೇಕಾದ ಚಾಲ್ತಿ/ಪ್ರಚಲಿತ ಮಳಿಗೆ/ ನಿವೇಶನದ ಮೌಲ್ಯದ ಮೇಲೆ ಶೇಕಡ 10 ರಷ್ಟು ದಂಡವನ್ನು ಪ್ರಚಲಿತ ಅನ್ವಯವಾಗುವ ತೆರಿಗೆಗಳೊಂದಿಗೆ ಒಟ್ಟಾರೆಯಾಗಿ ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ (Restoration of allotment) ಪುನರ್‌ಸ್ಥಾಪನೆ ಆದೇಶ ಹೊರಡಿಸಿ ನಂತರ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿಕೊಡುವುದು.

4. <u>ನಿಗಮದ ಸ್ವಾಧೀನದಲ್ಲಿರುವ ಘಟಕಗಳು</u>:- ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಕೈಗೊಂಡು ನಿಯಮಾನುಸಾರ ಮಹಜರ್ ಮಾಡಿ ಬೀಗಮುದ್ರೆಗೊಳಿಸಿ (Seizure) / ನಿಗಮದ ವಶಕ್ಕೆ (custody)/ ಪಡೆದಿದ್ದಲ್ಲಿ, ಹಂಚಿಕೆ ಪುನರ್‌ಸ್ಥಾಪನೆಗೊಳಿಸಲು ಈ ಆದೇಶದಲ್ಲಿ ತಿಳಿಸಿರುವಂತೆ ಕೈಗಾರಿಕಾ ವಸಾಹತುವಿನ ವರ್ಗೀಕರಣದ ಆಧಾರದ ಮೇಲೆ ದಂಡ ಮತ್ತು ನಿಗಮಕ್ಕೆ ಪಾವತಿಸಬೇಕಿರುವ ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ (ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ) ಪಾವತಿಸಿಕೊಂಡು ವ್ಯವಸ್ಥಾಪಕ ನಿರ್ದೇಶಕರ ಅನುಮತಿ ಪಡೆದು ಮಳಿಗೆ/ನಿವೇಶನದ ಮರುಸ್ವಾಧೀನವನ್ನು ನೀಡತಕ್ಕದ್ದು.

ಕರಾಸಕ್ಕೆ ಅನಿನಿ

5. <u>ನ್ಯಾಯಾಲಯದಲಿರುವ ಪ್ರಕರಣಗಳ ಘಟಕಗಳು:-</u> ಹಂಚಿಕೆ ಪತ್ರ ಹಾಗೂ ಕರಾರು ಪತ್ರದ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಮೇರೆಗೆ ಹಂಚಿಕೆ ರದ್ದತಿ ಆದೇಶವನ್ನು ಹೊರಡಿಸಿದ ನಂತರ ಹಂಚಿಕೆದಾರರು ನಿಗಮದ ಕ್ರಮವನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿದಲ್ಲಿ, ಘನ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ, ಹಂಚಿಕೆದಾರರ ಮನವಿಯನ್ನು ಪರಿಗಣಿಸದೆ, ನಿಯಮಾನುಸಾರ ಹಂಚಿಕೆಗೆ ಪ್ರಕಟಣೆ ನೀಡಿ ಕ್ರಮಕೈಗೊಳ್ಳುವುದು.

6. <u>ಹಂಚಿಕೆದಾರರ ಸ್ವಾಧೀನದಲ್ಲಿರುವ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:-</u> ಈ ಮೇಲೆ ಕೋಷ್ಟಕದಲ್ಲಿ ತಿಳಿಸಿದಂತೆ, ನಿಗಮವು ಹಂಚಿಕೆ ರದ್ದತಿ ಆದೇಶ ಹೊರಡಿಸಿರುವ / ಹೊರಡಿಸುವ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್‌ಸ್ಥಾಪನೆಗೊಳಿಸುವುದು (Restoration of allotment). ಪುನರ್‌ಸ್ಥಾಪನೆ ಆದೇಶ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷದ ಕಾಲಾವಕಾಶದಲ್ಲಿ ನಿವೇಶನದಲ್ಲಿ ಕಡ್ಡಾಯವಾಗಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವೂದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

7. <u>ನಿಗಮದ ಸ್ವಾಧೀನದಲ್ಲಿರುವ ರದ್ದತಿ ಆದೇಶ ನಿರಸನಗೊಳಿಸಿದ ನಂತರ ನಿರ್ವಹಿಸಬೇಕಾದ ಕ್ರಮ:</u>-ನಿಗಮದ ಸ್ವಾಧೀನದಲ್ಲಿರುವ ಮಳಿಗೆ/ನಿವೇಶನದ ಹಂಚಿಕೆದಾರರಿಂದ ದಂಡ ಮತ್ತು ಶಾಸನಬದ್ಧ ಶುಲ್ಕಗಳನ್ನು ಪ್ರಚಲಿತ ತೆರಿಗೆಗಳೊಂದಿಗೆ ಪಾವತಿಸಿಕೊಂಡು, ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ರದ್ದತಿಯನ್ನು ನಿರಸನಗೊಳಿಸಿ ಹಂಚಿಕೆಯನ್ನು ಪುನರ್‌ಸ್ಥಾಪನೆಗೊಳಿಸಿ (Restoration of allotment), ಮಳಿಗೆ/ನಿವೇಶನದ ಮರು-ಸ್ವಾಧೀನ ನೀಡುವುದು. ಮಳಿಗೆ/ನಿವೇಶನದ ಮರು-ಸ್ವಾಧೀನ ಪಡೆದ ಹಂಚಿಕೆದಾರರು, ಆದೇಶ ಪಡೆದ ಒಂದು ವರ್ಷ ಕಾಲಾವಕಾಶದಲ್ಲಿ ಕಡ್ಡಾಯವಾಗಿ ಮಳಿಗೆಯಲ್ಲಿ ಕಾರ್ಯಾಚರಣೆ ಪ್ರಾರಂಭಿಸುವುದು ಮತ್ತು ನಿವೇಶನದ ಹಂಚಿಕೆದಾರರು ಕಟ್ಟಡ ನಿರ್ಮಿಸಿ / ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತನ್ನು ವಿಧಿಸುವುದು. ತಪ್ಪಿದಲ್ಲಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆ / ನಿವೇಶನವನ್ನು ನಿಗಮದ ವಶಕ್ಕೆ ಪಡೆಯಲು ಯಾವೂದೇ ಆಭ್ಯಂತರವಿಲ್ಲದ ಬಗ್ಗೆ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯುವುದು.

8. ಪುನರ್‌ಸ್ಥಾಪನೆ ಆದೇಶ ಪಡೆದ ನಂತರ <u>ಕಟ್ಟಡ ನಿರ್ಮಿಸದೆ/ಕೈಗಾರಿಕಾ ಕಾರ್ಯಾಚರಣೆ ನಡೆಸದಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:</u>-ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಪುನರ್‌ಸ್ಥಾಪನೆಗೊಂಡ ಮಳಿಗೆಯಲ್ಲಿ ಕಾರ್ಯಾಚರಣೆ/ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಮಂಜೂರಾಗಿದ್ದ ಅವಧಿ ಮುಗಿದ ಕೂಡಲೇ ಅಂತಹ ಹಂಚಿಕೆದಾರರ ನಿವೇಶನ / ಮಳಿಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಸದರಿ ಹಂಚಿಕೆದಾರರು ಪಾವತಿಸಿರುವ ಎಲ್ಲಾ ಪಾವತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಿ ಮಾಹಿತಿಯನ್ನು ಕಡ್ಡಾಯವಾಗಿ ನಿಗಮದ ಹಣಕಾಸು ವಿಭಾಗಕ್ಕೆ ಮಾಹಿತಿ ನೀಡುವುದು.

000296

9. **ಪುನರ್‌ಸ್ಥಾಪನೆ ಆದೇಶ ಪಡೆದ ನಂತರ ಕಟ್ಟಡ ನಿರ್ಮಿಸಿ/ಕೈಗಾರಿಕಾ ಕಾರ್ಯಾಚರಣೆ ನಡೆಸುತ್ತಿರುವ ಘಟಕಗಳಿಗೆ ನಿರ್ವಹಿಸಬೇಕಾದ ಕ್ರಮ:-:-**ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಈ ಮೇಲೆ ತಿಳಿಸಿರುವ ಕೋಷ್ಟಕದಂತೆ ದಂಡವನ್ನು ಪಾವತಿಸಿ ಪುನರ್‌ಸ್ಥಾಪನೆ ಆದೇಶ/ಮರುಸ್ವಾಧೀನ ಪಡೆದು ಮಳಿಗೆ/ ನಿವೇಶನದಲ್ಲಿ ಕೈಗಾರಿಕಾ ಕಾರ್ಯಾಚರಣೆ ನಡೆಸಿ ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಘಟಕಗಳಿಗೆ ಕ್ರಯಪತ್ರವನ್ನು ವಿತರಿಸುವ ಸಂದರ್ಭದಲ್ಲಿನ ಚಾಲ್ತಿ / ಪ್ರಚಲಿತ ಮಳಿಗೆ/ ನಿವೇಶನದ ಮೌಲ್ಯದ ಮೇಲೆ ಶೇಕಡ 10 ರಷ್ಟು ದಂಡವನ್ನು ಪ್ರಚಲಿತ ಅನ್ವಯವಾಗುವ ತೆರಿಗೆಯೊಂದಿಗೆ ಪಾವತಿಸಿಕೊಂಡು ಕ್ರಯಪತ್ರ ನಿರ್ವಹಿಸುವುದು.

ಈ ಆದೇಶ ತಲುಪಿದ 30 ದಿವಸದಳೋಳಗೆ ಸಹಾಯಕ ಪ್ರಧಾನ ವ್ಯವಸ್ಥಾಕರುಗಳು ಮತ್ತು ಸಂಬಂಧಪಟ್ಟ ವಿಬಾಗೀಯ ಕಚೇರಿ ಅಧಿಕಾರಿಗಳು ಕಡ್ಡಾಯವಾಗಿ ಹಂಚಿಕೆದಾರರುಗಳಿಗೆ ಪತ್ರ ಬೆರೆದು ಪತ್ರ ತಲುಪಿದ ದಿನಾಂಕದಿಂದ 15 ದಿವಸದಳೊಳಗೆ ಒಪ್ಪಿಗೆ ಪತ್ರವನ್ನು ಪಡೆದು ಹಂಚಿಕೆ ರದ್ದತಿಯನ್ನು ನಿರಸನಗೊಳಿಸಿ (Restoration of allotment) ಪುನರ್‌ಸ್ಥಾಪನೆಗೊಳಿಸಲು ಸೂಕ್ತ ಕ್ರಮ ಜರುಗಿಸುವುದು.

ಈ ಆದೇಶ ವಿಶ್ವ ಮಳಿಗೆಯ ಹಂಚಿಕೆಗೆ ಅನ್ವಯಿಸುವುದಿಲ್ಲ.

ಈ ಸೌಲಭ್ಯವನ್ನು ಒಮ್ಮೆ ಮಾತ್ರ ಈ ಬಾರಿ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆಗೆ ಅವಕಾಶವಿರುವುದಿಲ್ಲ.

ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ)/(ಆಡಳಿತ & ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಅ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
9. ಜಿಲ್ಲಾ ಕೈಗಾರಿಕ ಕೇಂದ್ರಗಳು.
10. ಕೈಗಾರಿಕಾ ಸಂಘ ಸಂಸ್ಥೆಗಳು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010
ಫೋನ್ : 23407011 ರಿಂದ 25 ಫ್ಯಾಕ್ಸ್ : 91-080-23143566 / 23389070
ಇ-ಮೇಲ್ : kssidcho@gmail.com ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಕ್ರಯಪತ್ರ:ಡ್ರೈವ್:2022 ದಿನಾಂಕ: 06-01-2022

ಸು ತ್ತೋ ಲೆ

ವಿಷಯ: ನಿಗಮದಿಂದ ಹಂಚಿಕೆ ಮಾಡಿದ ನಿವೇಶನ / ಮಳಿಗೆಗಳಿಗೆ ಕ್ರಯಪತ್ರ ನೀಡಲು ಡ್ರೈವ್ ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಟಿಪ್ಪಣಿ ಸಂಖ್ಯೆ ಸಮನ್ವಯ:ಮಳಿಗೆ:ನಿವೇಶನ:ಕ್ರಯಪತ್ರ:2021 ದಿನಾಂಕ 12.02.2021
2. ಸುತ್ತೋಲೆ ಸಂಖ್ಯೆ: ಸಮನ್ವಯ:ಮಳಿಗೆ:ನಿವೇಶನ:ಕ್ರಪ:2021 ದಿನಾಂಕ 26.05.2021
3. ಕಛೇರಿ ಆದೇಶ ಸಂಖ್ಯೆ: ಕೈವ:ನಿರ್ವಹಣಾನೀತಿ:ಮಾರ್ಗಸೂಚಿ: 2020/1196 ದಿನಾಂಕ 03.01.2022
4. ದಿನಾಂಕ 5.1.2022 ರಂದು ಜರುಗಿದ ಪ್ರಗತಿ ಪರಿಶೀಲನಾ ಸಭೆ.

ದಿನಾಂಕ 05.01.2022 ರಂದು ಜರುಗಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿಗಮದಿಂದ ಹಂಚಿಕೆ ಪಡೆದ ನಿವೇಶನ ಹಾಗೂ ಮಳಿಗೆಗಳ ಹಂಚಿಕೆದಾರರಿಗೆ ಕಾಲಮಿತಿಯೊಳಗೆ ಕ್ರಯಪತ್ರ ನಿರ್ವಹಿಸಿಕೊಡುವ ಬಗ್ಗೆ ಚರ್ಚಿಸಿ, ಈ ಕುರಿತು ಅಗತ್ಯ ಕ್ರಮವಹಿಸಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಹಾಗೂ ಶಾಖಾ ವ್ಯವಸ್ಥಾಪಕರವರು ಕಾರ್ಯೋನ್ಮುಖರಾಗಿ ಈ ನಿಟ್ಟಿನಲ್ಲಿ ಈ ಕೆಳಗೆ ಸೂಚಿಸಿದಂತೆ ತುರ್ತು ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

(ಅ) <u>ಈಗಾಗಲೇ ಕ್ರಯಪತ್ರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕೇಂದ್ರ ಕಛೇರಿಯ ಹಣಕಾಸು / ಆಲೆಪ / ಕಾನೂನು ವಿಭಾಗಗಳಿಂದ ಪರಿಶೀಲನೆಯಾದ ಕಡತಗಳ ಕುರಿತು ವಹಿಸಬೇಕಾದ ಕ್ರಮ:</u>

- ಈಗಾಗಲೇ ಕ್ರಯಪತ್ರಕ್ಕೆ ಪ್ರಸ್ತಾವನೆ ಸಲ್ಲಿಸಿ, ಕೇಂದ್ರ ಕಛೇರಿಯ ಹಣಕಾಸು / ಆಲೆಪ / ಕಾನೂನು ವಿಭಾಗಗಳಿಂದ ಪರಿಶೀಲನೆಯಾದ ನಂತರ ಅದರಲ್ಲಿನ ಆಕ್ಷೇಪಣೆಗಳನ್ನು ಪೂರೈಸಿಕೊಂಡು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದನೆ ಪಡೆಯದೇ ಇದ್ದ ಪಕ್ಷದಲ್ಲಿ, ತಕ್ಷಣ ಒಂದು ವಾರದಲ್ಲಿ ಎಲ್ಲಾ ಕಡತಗಳನ್ನು ಅನುಮೊದನೆಗೆ ಸಲ್ಲಿಸಿ, ಅನುಮೋದನೆ ಪಡೆಯುವುದು.

- ಎಲ್ಲಾ ರೀತಿಯಿಂದ ಅನುಮೋದನೆ ಪಡೆದ ಕಡತಗಳ ಪಟ್ಟಿ ಮಾಡಿ, ವ್ಯವಸ್ಥಾಪಕ ನಿರ್ದೇಶಕರವರಿಗೆ ತಕ್ಷಣ ಸಲ್ಲಿಸುವುದು ಹಾಗೂ ಈ ಹಂಚಿಕೆದಾರರಿಗೆ ಕರಡು ಕ್ರಯಪತ್ರ ವಿತರಿಸಿ, ಶುದ್ಧ ಕ್ರಯಪತ್ರ ವಿತರಿಸಲು ತಯಾರಿ ಮಾಡಿಕೊಳ್ಳುವುದು.

(ಆ) ಹಂಚಿಕೆದಾರರು ಕ್ರಯಪತ್ರಕ್ಕೆ ಸಲ್ಲಿಸಿರುವ ಪ್ರಕರಣಗಳ ಬಗ್ಗೆ:

ನಿವೇಶನ / ಮಳಿಗೆ ಹಂಚಿಕೆ ಪಡೆದು ಕ್ರಯದ ಅವಧಿ(Lease period) ಮುಗಿದ ನಂತರ ಕ್ರಯಪತ್ರಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ಆದ್ಯತೆ ಮೇಲೆ ಪರಿಶೀಲಿಸಿ, ಕಡತವನ್ನು ತಯಾರಿಸಿ, ಉಲ್ಲೇಖ (1), (2) ಮತ್ತು (3)ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಅಗತ್ಯ ಕ್ರಮವಹಿಸಿ, ದಂಡ ಇತ್ಯಾದಿ ನಿಗಮಕ್ಕೆ ಬರತಕ್ಕ ಬಾಕಿ ವಸೂಲಿ ಮಾಡಿದ ನಂತರ ಕ್ರಯಪತ್ರ ನಿರ್ವಹಿಸಲು ಪರಿಶೀಲನೆಗಾಗಿ ಕಡತಗಳನ್ನು ಜಿ.ಪಿ.ಎಸ್.(GPS) ಫೋಟೋ ಪಡೆದು ಮತ್ತು ಸ್ಥಳ ಪರಿಶೀಲನೆ ವರದಿಯೊಂದಿಗೆ ದಿನಾಂಕ 06.01.2022ರಂದು ನಡೆದ ವಿಡಿಯೋ ಕಾನ್ಫರೇನ್ಸ್‌ನಲ್ಲಿ ನೀಡಿದ ಸೂಚನೆಯಂತೆ ದಿನಾಂಕ 21.01.2022ರೊಳಗೆ ಸೂಕ್ತ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ತಪ್ಪದೇ ಸಲ್ಲಿಸುವುದು.

(ಇ) ಕ್ರಯದ ಅವಧಿ (Lease period) ಮುಗಿದ ಪ್ರಕರಣಗಳ ಬಗ್ಗೆ:

ನಿವೇಶನ / ಮಳಿಗೆ ಹಂಚಿಕೆ ಪಡೆದು ಕ್ರಯದ ಅವಧಿ (Lease period) ಮುಗಿದಂತಹ ಹಂಚಿಕೆದಾರರಿಗೆ ತಕ್ಷಣ ಪತ್ರ ಬರೆದು, ದೂರವಾಣಿ ಮೂಲಕ ಸಂಪರ್ಕಿಸಿ, ಚೆಕ್ ಲಿಸ್ಟ್ ಪ್ರಕಾರ ಅಗತ್ಯ ದಾಖಲಾತಿಗಳನ್ನು ಪಡೆದು, ಈ ದಾಖಲಾತಿಗಳನ್ನು ಸಲ್ಲಿಸಿದ ನಂತರ ಉಲ್ಲೇಖ (1), (2) ಮತ್ತು (3)ರಲ್ಲಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಅಗತ್ಯ ಕ್ರಮವಹಿಸಿ, ದಂಡ ಇತ್ಯಾದಿ ನಿಗಮಕ್ಕೆ ಬರತಕ್ಕ ಬಾಕಿ ವಸೂಲಿ ಮಾಡಿದ ನಂತರ ಕ್ರಯಪತ್ರ ನಿರ್ವಹಿಸಲು ಪರಿಶೀಲನೆಗಾಗಿ ಕಡತಗಳನ್ನು ಜಿ.ಪಿ.ಎಸ್.(GPS) ಫೋಟೋ ಪಡೆದು ಮತ್ತು ಸ್ಥಳ ಪರಿಶೀಲನೆ ವರದಿಯೊಂದಿಗೆ ದಿನಾಂಕ 06.01.2022ರಂದು ನಡೆದ ವಿಡಿಯೋ ಕಾನ್ಫರೇನ್ಸ್‌ನಲ್ಲಿ ನೀಡಿದ ಸೂಚನೆಯಂತೆ ದಿನಾಂಕ 21.01.2022ರೊಳಗೆ ಸೂಕ್ತ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ತಪ್ಪದೇ ಸಲ್ಲಿಸುವುದು.

ಈ ಮೇಲಿನ ಎಲ್ಲಾ ಕೆಲಸಗಳಲ್ಲಿ ಸಂಬಂಧಪಟ್ಟ ಅಭಿಯಂತರರು ಸಹಕರಿಸಿ, ಕಾಲಮಿತಿಯೊಳಗೆ ನಿವೇಶನಗಳ ಸ್ಥಳ ತನಿಖೆ ಮಾಡಿ, ಇತ್ತೀಚಿನ ನಕ್ಷೆ(CDD)ಗಳನ್ನು ತಪ್ಪದೆ ನೀಡುವುದು.

ಮುಂಬರುವ ದಿನಗಳಲ್ಲಿ ನಿಗಮದ ಮಾನ್ಯ ಅಧ್ಯಕ್ಷರು / ಉಪಾಧ್ಯಕ್ಷರು / ಮಂಡಳಿ ನಿರ್ದೇಶಕರವರ ಸಮಯ ಪಡೆದು ವಿಭಾಗೀಯ ಮಟ್ಟದಲ್ಲಿ ಸಮಾರಂಭ ಏರ್ಪಡಿಸಿ, ಕ್ರಯಪತ್ರ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲು ಕಾರ್ಯಕ್ರಮ ಏರ್ಪಡಿಸಲು ಸೂಚಿಸಲಾಗುವುದು.

ಇದನ್ನು ಕಟ್ಟುನಿಟ್ಟಾಗಿ ಚಾಚು ತಪ್ಪದೇ ಪಾಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ನಿಗಮದ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ತಿಳಿಯಿರಿ.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)(ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಎಲ್ಲಾ ಕಾರ್ಯಪಾಲಕ / ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ.
4. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು) / (ಆ.ಲೆ.ಪ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವಾ.ಲೆ)/(ವ&ಕಾಲ)/(ಸಿಬ್ಬಂದಿ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
6. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
7. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು.
9. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
10. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

000293

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಕ್ರಯಪತ್ರ:2021/2565. ದಿನಾಂಕ 12.02.2021

ಟಿಪ್ಪಣಿ

ವಿಷಯ: ಹಂಚಿಕೆ ಪಡೆದು ಉದ್ದಿಮೆ ಆರಂಭಿಸಿರುವ ನಿಗಮದ ಕೈಗಾರಿಕಾ ವಸಾಹತುಗಳಲ್ಲಿ ನಿವೇಶನ/ಮಳಿಗೆಗಳ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸುವ ಬಗ್ಗೆ.

ದಿನಾಂಕ 11.02.2021 ರಂದು ಜರುಗಿದ ನಿಗಮದ ಕಾರ್ಯಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಪಡೆದು ಉದ್ದಿಮೆ ಆರಂಭಿಸಿರುವ ಉದ್ದಿಮೆದಾರರಿಗೆ ಕ್ರಯಪತ್ರ ನಿರ್ವಹಿಸಿಕೊಡಬೇಕಾಗಿರುತ್ತದೆ. ಈ ಹಿಂದೆ ಮಳಿಗೆ/ನಿವೇಶನಗಳನ್ನು ಹಂಚಿಕೆ ಪಡೆದು ಉದ್ದಿಮೆದಾರರು ಈಗಾಗಲೇ ಗುತ್ತಿಗೆ ಅವಧಿ ಮುಗಿದು, ಉದ್ದಿಮೆ ನಡೆಸುತ್ತಿದ್ದರೂ ಸಹ ಅವರಿಗೆ ಕ್ರಯಪತ್ರ ನಿರ್ವಹಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳು ಉದಾಸೀನ ತೋರಿಸುತ್ತಿರುವುದು ಹಾಗೂ ವಿಳಂಭದೊರಣೆ ಅನುಸರಿಸುತ್ತಿರುವುದು ಈ ಕೆಳಸಹಿದಾರರ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ನಿಯಮಾನುಸಾರ ಕ್ರಮ ಜರುಗಿಸಿ ಹಂಚಿಕೆದಾರರು, ಹಂಚಿಕೆ ಪಡೆದ ನಿವೇಶನ/ಮಳಿಗೆಗಳಲ್ಲಿ ತಮ್ಮ ಉದ್ದಿಮೆಯನ್ನು ನಡೆಸುತ್ತಿದ್ದರೆ, ಅವರಿಗೆ ಯಾವುದೇ ರೀತಿಯ ತೊಂದರೆ ತಾಪತ್ರಯ ನೀಡದೇ ಕಾಲಮಿತಿಯೊಳಗೆ ನಿಯಮಾನುಸಾರ ಕ್ರಯಪತ್ರ ನಿರ್ವಹಿಸಿಕೊಡಲು ತೀರ್ಮಾನಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಕ್ರಯಪತ್ರ ನಿರ್ವಹಿಸಿಕೊಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಕ್ರಯಪತ್ರ ನಿರ್ವಹಿಸುವ ಮಾರ್ಗಸೂಚಿಗಳು:-

1) ನಿಗಮದ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಪಡೆದ ನಿವೇಶನ/ಮಳಿಗೆಗಳ ಉದ್ದಿಮೆದಾರರ ಕರಾರು ಅವಧಿ ಮುಕ್ತಾಯವಾಗಿರಬೇಕು ಹಾಗೂ ಘಟಕದಲ್ಲಿ ನಿರಂತರ ಕಾರ್ಯಚಟುವಟಿಕೆಗಳು ನಡೆಯುತ್ತಿರಬೇಕು.
2) ಕ್ರಯದ ಅವಧಿ ಮುಗಿದ ಹಂಚಿಕೆದಾರರೆಲ್ಲರಿಗೂ ಈ ಪತ್ರ ತಲುಪಿದ ಒಂದು ವಾರದಲ್ಲಿ ಪತ್ರ ಬರೆದು ಕ್ರಯಪತ್ರ ನಿರ್ವಹಿಸಲು ಅಗತ್ಯವಿರುವ ದಾಖಲಾತಿಗಳನ್ನು ಕಾಲಮಿತಿಯೊಳಗೆ ಸಲ್ಲಿಸಲು ತಿಳಿಸುವುದು.
3) ಸ್ಥಳೀಯ ಕೈಗಾರಿಕಾ ಸಂಘ ಸಂಸ್ಥೆಗಳಿಗೂ ಈ ವಿಷಯದ ಮನವರಿಕೆ ಮಾಡುವುದು.
4) ಉದ್ದಿಮೆದಾರರು ಸಲ್ಲಿಸುವ ದಾಖಲಾತಿಗಳನ್ನು ಹಾಗೂ ಸಂಬಂದಪಟ್ಟ ಕಡತವನ್ನು ಪರಿಶೀಲಿಸಿ, ನಿಗಮಕ್ಕೆ ಬರತಕ್ಕ ಬಾಕಿ ಏನಾದರೂ ಇದ್ದಲ್ಲಿ, ಖಚಿತಪಡಿಸಿಕೊಂಡು ಹಣ ಪಾವತಿಸಿಕೊಳ್ಳುವುದು.
5) ನಿರಂತರ ಉದ್ದಿಮೆ ನಡೆಯುತ್ತಿರುವ ಬಗ್ಗೆ ವಿದ್ಯುತ್ ಮಂಡಳಿಯವರು ನೀಡುವ ಈ ಹಿಂದಿನ ಒಂದು ವರ್ಷದ ವಿದ್ಯುತ್ ಬಳಕೆ ಪ್ರಮಾಣ ಪತ್ರ ತರಿಸಿಕೊಂಡು ಖಾತ್ರಿಪಡಿಸಿಕೊಳ್ಳುವುದು.
6) ನಿಯಮಾನುಸಾರ ಸಮಂಜಸವಾಗಿರುವ ಕಡತಗಳನ್ನು ದಾಖಲಾತಿ ಸಲ್ಲಿಸಿದ 03 ದಿನಗಳ ಒಳಗಾಗಿ ತಾಂತ್ರಿಕ ವಿಭಾಗಕ್ಕೆ CDD ನೀಡಲು ಕಡತ ಸಲ್ಲಿಸುವುದು
7) ಸಂಬಂಧಪಟ್ಟ ತಾಂತ್ರಿಕ ವಿಭಾಗದ ಅಭಿಯಂತರರು ಕಡತ ಸ್ವೀಕರಿಸಿದ ಒಂದು ವಾರದಲ್ಲಿ ಸ್ಥಳ ಪರಿಶೀಲಿಸಿ ಇತ್ತೀಚಿನ ನಕ್ಷೆ (CDD) ಯೊಂದಿಗೆ ಕಡತ ಹಿಂತಿರುಗಿಸುವುದು.
8) ಈ ರೀತಿ ತಾಂತ್ರಿಕ ವಿಭಾಗಕ್ಕೆ ಕಡತ ಸಲ್ಲಿಸುವಾಗ ಕೈಗಾರಿಕಾ ವಸಾಹತುವಾರು ಪ್ರತ್ಯೇಕವಾಗಿ ಎಲ್ಲ ಕಡತಗಳನ್ನು ಕ್ರೋಢಿಕರಿಸಿ ಸಲ್ಲಿಸುವುದು.
9) ತಾಂತ್ರಿಕ ವಿಭಾಗದ ನಕ್ಷೆ ಸ್ವೀಕರಿಸಿದ ನಂತರ 03 ದಿನಗಳಲ್ಲಿ ಅಗತ್ಯ ದಾಖಲಾತಿಗಳೊಂದಿಗೆ, ಕ್ರಯಪತ್ರ ನಿರ್ವಹಿಸಲು ಚೆಕ್ ಲಿಸ್ಟ್ ತಯಾರಿಸಿ, ಕಡತವನ್ನು ಉಪ ಪ್ರಧಾನ ವ್ಯವಸ್ಥಾಪಕರು(ಕೈವ) ಮೂಲಕ ಪ್ರಧಾನ ವ್ಯವಸ್ಥಾಪಕರು(ಕೈವ) ರವರಿಗೆ ಸಲ್ಲಿಸುವುದು.

000292

ಕರಾಸಕೈಅನಿನಿ

10) ಪ್ರಧಾನ ವ್ಯವಸ್ಥಾಪಕರು(ಕೈವ) ರವರು ಪರಿಶೀಲಿಸಿ, 03 ದಿನಗಳ ಒಳಗಾಗಿ ಆರ್ಥಿಕ ತಿರುವಳಿ ನೀಡಲು ಕಡತವನ್ನು ಹಣಕಾಸು ವಿಭಾಗಕ್ಕೆ ರವಾನಿಸುವುದು.

11) ಹಣಕಾಸು ವಿಭಾಗವು ಪರಿಶೀಲಿಸಿ 03 ದಿನಗಳಲ್ಲಿ ಆರ್ಥಿಕ ತಿರುವಳಿ ನೀಡಿ ನೇರವಾಗಿ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗಕ್ಕೆ ಕಡತ ಸಲ್ಲಿಸುವುದು.

12) ಆಂತರಿಕ ಲೆಕ್ಕ ಪರಿಶೋಧನಾ ವಿಭಾಗವು ಕಡತವನ್ನು ಕೂಲಂಕಷವಾಗಿ ಪರಿಶೀಲಿಸಿ, ಅಭಿಪ್ರಾಯದೊಂದಿಗೆ 07 ದಿನಗಳಲ್ಲಿ ಕಡತವನ್ನು ಕಾನೂನು ವಿಭಾಗಕ್ಕೆ ರವಾನಿಸುವುದು.

13) ಕಾನೂನು ವಿಭಾಗವು ಕಡತವನ್ನು ಪರಿಶೀಲಿಸಿ, ಅಭಿಪ್ರಾಯದೊಂದಿಗೆ 03 ದಿನಗಳಲ್ಲಿ ಕಡತವನ್ನು ಪ್ರಧಾನ ವ್ಯವಸ್ಥಾಪಕರು(ಕೈವ) ರವರಿಗೆ ಸಲ್ಲಿಸುವುದು.

14) ಪ್ರಧಾನ ವ್ಯವಸ್ಥಾಪಕರು(ಕೈವ) ರವರು ಪರಿಶೀಲಿಸಿ, ಕಡತವನ್ನು ಸಂಬಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ರವರಿಗೆ 03 ದಿನಗಳಲ್ಲಿ ರವಾನಿಸುವುದು.

15) ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು ಸ್ವೀಕೃತವಾದ ಕಡತ ಪರಿಶೀಲಿಸಿ, ಹಣಕಾಸು/ಆಲೆಪ/ಕಾನೂನು ವಿಭಾಗಗಳ ಅಭಿಪ್ರಾಯದಂತೆ ಎಲ್ಲಾ ಅಂಶಗಳ ಬಗ್ಗೆ ಕ್ರಯ ಜರುಗಿಸಿ 03 ದಿನಗಳಲ್ಲಿ ಕರಡು ಕ್ರಯಪತ್ರ ತಯಾರಿಸಿ ಹಂಚಿಕೆದಾರರಿಗೆ ನೀಡುವುದು.

16) ಪ್ರಧಾನ ವ್ಯವಸ್ಥಾಪಕರು(ಕೈವ), ರವರು ನಿರಂತರ ಕ್ರಮವಹಿಸಿ, ಈ ಮೇಲಿನಂತೆ ಕ್ರಮ ಕೈಗೊಳ್ಳುವಂತೆ ಜವಾಬ್ದಾರಿ ನಿಗಧಿಪಡಿಸಿದ್ದು, ಈ ಕೆಳಸಹಿದಾರರಿಗೆ ಕಾಲಕಾಲಕ್ಕೆ ವರಧಿ ಸಲ್ಲಿಸುವುದು.

17) ಯಾವುದೇ ಹಂತದಲ್ಲಿ ಯಾವುದೇ ಅಧಿಕಾರಿ/ಸಿಬ್ಬಂದಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸುವುದು ಜೊತೆಗೆ ಹಂಚಿಕೆದಾರರಿಗೆ ಯಾವುದೇ ರೀತಿಯ ಆರೋಪಗಳಿಗೆ ಅವಕಾಶ ನೀಡಬಾರದೆಂದು ಸೂಚಿಸಲಾಗಿದೆ.

ಈ ಮೇಲಿನ ಮಾರ್ಗಸೂಚಿಗಳಂತೆ ಕ್ರಮ ಕೈಗೊಳ್ಳದೇ ಇರುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಯಾವುದೇ ರೀತಿಯ ಮುತುವರ್ಜಿ ತೋರಿಸಿದ, ನಿರ್ದಾಕ್ಷಿಣ್ಯವಾಗಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಲಾಗುವುದು ಹಾಗೂ ದಿನಾಂಕ 30.04.2021ರ ಒಳಗಾಗಿ ನಿಯಮಾನುಸಾರ ಸಮಂಜಸವಾಗಿರುವ ಎಲ್ಲಾ ಹಂಚಿಕೆದಾರರಿಗೆ ಕ್ರಯಪತ್ರ ನಿರ್ವಹಿಸಿಕೊಡುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

19/02/2021

ವ್ಯವಸ್ಥಾಪಕ ನಿರ್ದೇಶಕರು

ಗೆ,

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆ&ಭೂಸ್ವಾ), ಕರಾಸಕೈಅನಿನಿ, ಬೆಂಗಳೂರು
2. ಅಧೀಕ್ಷಕ ಅಭಿಯಂತರರು-ಪ್ರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು ವಲಯ-1/ವಲಯ-2/(ಆ.ಲೆ.ಪ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವಾಲೆ)/(ವ&ಕಾಲೆ), ಕರಾಸಕೈಅನಿನಿ, ಬೆಂಗಳೂರು/ ಮೈಸೂರು/ ಶಿವಮೊಗ್ಗ/ ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ
5. ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು/ಪೀಣ್ಯಾ/ ತುಮಕೂರು/ ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ ಶಿವಮೊಗ್ಗ/ಮೈಸೂರು/ಬಳ್ಳಾರಿ
7. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಪೀಣ್ಯಾ/ದಾವಣಗೆರೆ/ಮಂಗಳೂರು/ಬಳ್ಳಾರಿ
8. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು
9. ಸಲಹೆಗಾರರು(ಕೈವ), ಕರಾಸಕೈಅನಿನಿ, ಬೆಂಗಳೂರು
10. ವ್ಯ.ನಿ.ರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

000291

ಸಂಖ್ಯೆ:ಸಮನ್ವಯ:ಪ.ಜಾತಿ:ಪ.ಪಂ:ಬಿಡ್-ಹಂಚಿಕೆ:ರಿಯಾಯಿತಿ:2020/128 ದಿನಾಂಕ 19-03-2020

7 MAY 2020

ಕಛೇರಿ ಆದೇಶ

ವಿಷಯ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿ ನಿಗಧಿಪಡಿಸಿ ಉಳಿದಿರುವ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್‌ಗಳಲ್ಲಿ ಸಾಮಾನ್ಯ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸಹ ಅರ್ಜಿ ಸಲ್ಲಿಸಿ ಬಿಡ್‌ನಲ್ಲಿ ಭಾಗವಹಿಸಿ, ಬಿಡ್ ಮೌಲ್ಯದಲ್ಲಿ ಶೇ.50ರಷ್ಟು ರಿಯಾಯಿತಿ ಪಡೆಯುತ್ತಿರುವ ಬಗ್ಗೆ. - ಸ್ಪಷ್ಟೀಕರಣ ಕುರಿತು.

ಉಲ್ಲೇಖ:
1. ಕೆ.ಎಸ್.ಎಸ್.ಐ.ಡಿ.ಸಿ. ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳು 2004
2. Office Order No.GM-IE&FIN:ALT:RULE:AMNDT:2011 dated 18.05.2011
3. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಕೈಗಾರಿಕೆ ಇಲಾಖೆ, ಬೆಂಗಳೂರು ಇವರಿಗೆ ಸಂಬೋಧಿಸಿ ಬರೆಯಲಾಗಿರುವ ಪತ್ರ ಸಂಖ್ಯೆ ವ್ಯನಿ:ಕೈವ:ಸಾಮಾನ್ಯ ಬಿಡ್:2019/225 ದಿನಾಂಕ:09.01.2020 .
4. ಸರ್ಕಾರ ಪ್ರಧಾನ ಕಾರ್ಯದರ್ಶಿ(ಎಂಎಸ್‌ಎಂಇ&ಗಣಿ), ವಾ&ಕೈಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ ಸಿಐ 11 ಸಿಎಸ್‌ಸಿ 2020 ದಿನಾಂಕ 20.02.2020.

ಪ್ರಸ್ತಾವನೆ:-

ರಾಜ್ಯದಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಈವರೆವಿಗೂ ರಾಜ್ಯದ ವಿವಿಧ ಸ್ಥಳಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನೊಳಗೊಂಡ ಒಟ್ಟು 188 ಸಂಖ್ಯೆ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ವಿವಿಧ ಮಾದರಿಗಳ ಕೈಗಾರಿಕಾ ಮಳಿಗೆಗಳು, ಗೋದಾಮು, ಫ್ಲ್ಯಾಟ್ಸ್, ಅಂಗಡಿ ನಿರ್ಮಿಸಿ ಹಾಗೂ ವಿವಿಧ ವಿಸ್ತೀರ್ಣ / ಮಾದರಿಗಳ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿಪಡಿಸಿ ನಿಗಮದ ಮಳಿಗೆ/ನಿವೇಶನಗಳ ನಿಯಮಾವಳಿಗಳ ಅನ್ವಯ ಅರ್ಹ ಆಸಕ್ತ ಉದಯೋನ್ಮುಖ ಸಣ್ಣ ಉದ್ದಿಮೆದಾರರುಗಳಿಗೆ ಮಳಿಗೆ/ಫ್ಲ್ಯಾಟ್ಸ್/ಗೋದಾಮು/ಅಂಗಡಿ ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ.

ನಿಗಮವು ಅಭಿವೃದ್ಧಿಪಡಿಸಿರುವ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಮೀಸಲಿರಿಸಿ, ನಿಗಧಿಪಡಿಸಿ, ಉಳಿದಿರುವ ಮಳಿಗೆ/ನಿವೇಶನ/ಗೋದಾಮು/ಪ್ಲಾಟ್‌ಗಳಲ್ಲಿ ಸಾಮಾನ್ಯ ವರ್ಗದವರ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳೂ ಸಹ ಹಂಚಿಕೆಗೆ ಅರ್ಜಿಗಳನ್ನು ಸಲ್ಲಿಸುತ್ತಿದ್ದು, ನಿಗಮದ ಪ್ರಚಲಿತ ಹಂಚಿಕೆ ನಿಯಮಗಳಲ್ಲಿರುವಂತೆ ಯಾವುದೇ ಒಂದು ಪ್ರತ್ಯೇಕ ಮಳಿಗೆ/ಫ್ಲ್ಯಾಟ್ಸ್/ಗೋದಾಮು/ಅಂಗಡಿ ಹಾಗೂ ನಿವೇಶನಗಳ ಹಂಚಿಕೆಗಾಗಿ 6 ಮತ್ತು 6 ಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಗೊಂಡ ಸಂದರ್ಭದಲ್ಲಿ, ಸದರಿ ಅರ್ಜಿದಾರರುಗಳ ಸಮ್ಮುಖದಲ್ಲಿ **ಬಿಡ್ ಮುಖೇನ / ಹರಾಜು** (AUCTION) ಪ್ರಕ್ರಿಯೆಯನ್ನು ನಡೆಸಿ, ಅತಿ ಹೆಚ್ಚಿನ ಬಿಡ್ ಕೂಗಿದ ಅರ್ಜಿದಾರರಿಗೆ ಹಂಚಿಕೆ ಮಾಡಲಾಗುತ್ತಿದೆ.

ಅಂತೆಯೇ, ಬಿಡ್ ಪ್ರಕ್ರಿಯೆಯಲ್ಲಿ ಸಾಮಾನ್ಯ ವರ್ಗದ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರುಗಳು ಬಿಡ್ ಕೂಗುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರು ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದು, ಸರ್ಕಾರವು ಸದರಿ ಪ್ರವರ್ಗದ ಉದ್ದಿಮೆದಾರರುಗಳಿಗೆ ನಿವೇಶನದ ಮೌಲ್ಯದಲ್ಲಿ ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡುತ್ತಿರುವ ಕಾರಣ, ಒಟ್ಟು ಬಿಡ್ ಮೊತ್ತದ ಶೇಕಡಾ 50 ರಷ್ಟು ರಿಯಾಯಿತಿ ಪಡೆಯುತ್ತಿರುವುದರಿಂದ, ಸದರಿ ಯೋಜನೆಯ ಪ್ರಯೋಜನವನ್ನು ಪಡೆಯುವ ಸಲುವಾಗಿ ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದು, ತತ್ಫಲಿತವಾಗಿ, ಸಾಮಾನ್ಯ ವರ್ಗಕ್ಕೆ ಸೇರಿದ ಅರ್ಜಿದಾರರುಗಳು ಅಷ್ಟೊಂದು ಹೆಚ್ಚಿನ ಮೊತ್ತಕ್ಕೆ ಬಿಡ್ ಕೂಗಲು ಸಾಧ್ಯವಾಗದೇ ತಕರಾರು / ಆಕ್ಷೇಪಣೆ ಮಾಡುತ್ತಿರುವುದರಿಂದಾಗಿ, ಬಿಡ್ ಪ್ರಕ್ರಿಯೆಯಲ್ಲಿ ತೀವ್ರ ಗೊಂದಲ ಉಂಟಾಗಿರುವ ಕಾರಣ, ಹಲವಾರು ಕಡೆ ಬಿಡ್ ಹಂಚಿಕೆ ಪ್ರಕ್ರಿಯೆಯನ್ನೇ ನಿಲ್ಲಿಸುವ ಪ್ರಮೇಯವು ಉದ್ಭವಿಸಿರುತ್ತದೆ.

ಸದರಿ ಗೊಂದಲಗಳು ಸೃಷ್ಟಿಯಾದ ಹಿನ್ನೆಲೆಯಲ್ಲಿ, ಹಂಚಿಕೆ ಮೀಸಲಾತಿಗೆ ಹೊರತಾಗಿರುವ ಕೈಗಾರಿಕಾ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್ ಇತ್ಯಾದಿಗಳ ಕಟ್ಟಡಗಳನ್ನು ಬಿಡ್ ಮಾಡುವ ಸಂದರ್ಭದಲ್ಲಿ ಬಿಡ್‌ನಲ್ಲಿ ಭಾಗವಹಿಸುವ

..2..

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿದಾರರುಗಳಿಗೆ ಆಯಾ ಮಳಿಗೆ/ನಿವೇಶನ/ ಗೋದಮು/ ಫ್ಲ್ಯಾಟ್ಸ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡುವುದು ಸೂಕ್ತವೇ? ಅಥವಾ ಒಟ್ಟು ಬಿಡ್ ಮೌಲ್ಯಕ್ಕೆ ಶೇಕಡಾ 50 ರಷ್ಟು ರಿಯಾಯಿತಿಯನ್ನು ವಿಸ್ತರಿಸುವುದು ಸೂಕ್ತವೇ? ಎಂಬುದರ ಬಗ್ಗೆ ಸರ್ಕಾರದ ಮಾರ್ಗದರ್ಶನ ಮತ್ತು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರಿಗೆ ಉಲ್ಲೇಖ (3)ರಂತೆ ಪತ್ರ ಬರೆಯಲಾಗಿತ್ತು.

ಸದರಿ ಪತ್ರಕ್ಕೆ ಪ್ರತಿಕ್ರಿಯೆಯಾಗಿ, ಉಲ್ಲೇಖ (4)ರಲ್ಲಿನ ಸರ್ಕಾರದ ಪತ್ರದಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಣ / ಮಾರ್ಗದರ್ಶನ ನೀಡಲಾಗಿರುತ್ತದೆ.

"ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನೀಡುತ್ತಿರುವ ಶೇ.೫೦ರಷ್ಟು ಭೂ-ಸಹಾಯಧನವನ್ನು ನಿಗಮವು ನಿಗಧಿಪಡಿಸುವ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇ.೫೦ರಷ್ಟು ರಿಯಾಯಿತಿಯನ್ನು ನೀಡಬಹುದಾಗಿದ್ದು, ಅದರ ಮೇಲಿನ ಮೌಲ್ಯಕ್ಕೆ ರಿಯಾಯಿತಿ ರಹಿತ ಎಂದು ಪರಿಗಣಿಸಿ ಮೂಲ ಮೌಲ್ಯದ ಮೇಲಿನ ಬಿಡ್ ಮೌಲ್ಯವನ್ನು ಹಂಚಿಕೆದಾರರು ಭರಿಸಿಕೊಳ್ಳುವಂತೆ ಕ್ರಮವಹಿಸುವುದು"

ಮೇಲೆ ನಮೂದಿಸಿರುವ ವಿವಿಧ ಅಂಶಗಳನ್ನು ಪರಿಶೀಲಿಸಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

ನಿಗಮದ ಆದೇಶ ಸಂಖ್ಯೆ ಸಮನ್ವಯ:ಪ.ಜಾ:ಪ.ಪಂ:ಬಿಡ್-ಹಂಚಿಕೆ:ರಿಯಾಯಿತಿ:2019 ಬೆಂಗಳೂರು, ದಿನಾಂಕ 19-03-2020.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ವಿವಿಧ ಅಂಶಗಳು ಹಾಗೂ ದಿನಾಂಕ 20.02.2020ರ ಸರ್ಕಾರದ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ, ಇನ್ನು ಮುಂದೆ ನಿಗಮವು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಮೀಸಲಾತಿಗೆ ಹೊರತಾಗಿರುವ ಕೈಗಾರಿಕಾ ಮಳಿಗೆ/ನಿವೇಶನ/ಗೋದಾಮು/ಫ್ಲ್ಯಾಟ್ಸ್ ಇತ್ಯಾದಿ ಕಟ್ಟಡಗಳನ್ನು ಬಿಡ್ ಮೂಲಕ ಹಂಚಿಕೆ ಮಾಡುವ ಸಂದರ್ಭದಲ್ಲಿ ಬಿಡ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿಗಮವು ನಿಗಧಿಪಡಿಸಿರುವ / ನಿಗಧಿಪಡಿಸುವ ಆಯಾ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳ **ಮೂಲ ಮೌಲ್ಯಕ್ಕೆ ಮಾತ್ರವೇ (ORIGINAL COST ONLY) ಶೇಕಡಾ 50 ರಷ್ಟು ರಿಯಾಯಿತಿಯನ್ನು ನೀಡಬೇಕೆಂದು** ಆದೇಶಿಸಿದೆ. ಅದರ ಮೇಲಿನ ಮೌಲ್ಯಕ್ಕೆ **'ರಿಯಾಯಿತಿ ರಹಿತ'** ಎಂಬುದಾಗಿ ಪರಿಗಣಿಸಿ, ಮೂಲ ಮೌಲ್ಯದ ಮೇಲಿನ ಬಿಡ್ ಮೌಲ್ಯವನ್ನು ಆಯಾ ಹಂಚಿಕೆದಾರರುಗಳೇ **ಭರಿಸಿಕೊಳ್ಳುವಂತೆ** ಅವಶ್ಯ ಕ್ರಮ ಕೈಗೊಳ್ಳುವಂತೆಯೂ ಆದೇಶಿಸಿದೆ.

ನಿಗಮದ ಎಲ್ಲಾ ಇಲಾಖಾ/ವಲಯ/ವಿಭಾಗ/ಶಾಖಾ ಮುಖ್ಯಸ್ಥರುಗಳು ಮೇಲಿನ ಆದೇಶದಲ್ಲಿನ ಸೂಚನೆಗಳನ್ನು **ಕಟ್ಟುನಿಟ್ಟಾಗಿ** ಹಾಗೂ **ಕಡ್ಡಾಯವಾಗಿ** ಪಾಲಿಸತಕ್ಕದ್ದು. ಸದರಿ ಸೂಚನೆಗಳನ್ನು ಪಾಲಿಸುವಲ್ಲಿ ಯಾವುದೇ ಉಲ್ಲಂಘನೆಯಾಗಿರುವುದು (DEVIATION) ಕಂಡುಬಂದಲ್ಲಿ, ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ನಿಗಮದ ನಿಯಮಾನುಸಾರ ಅವಶ್ಯ ಕ್ರಮ ಜರುಗಿಸಲಾಗುವುದು.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು,(ಕೈವ),ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ ಮೈಸೂರು/ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಮುಂದಿನ ಅವಶ್ಯ ಕ್ರಮಗಳಿಗಾಗಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ)/(ಸಮನ್ವಯ)/(ಸಾ.ಸಂ)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಆ.ಲೆ.ಪ)/(ವಾಣಿಜ್ಯ)/ವಲಯ-1 / ವಲಯ-2 ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವಾ.ಲೆ)/(ವ&ಕಾಲೆ)/(ಸಿಬ್ಬಂದಿ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ / ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
7. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
8. ವ್ಯ.ನಿ.,ರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು -560001. ದೂ. 22034319

000289

ಸಂಖ್ಯೆ: ಸಿಐ 11 ಸಿಎಸ್ ಸಿ 2020 ದಿನಾಂಕ: 20.02.2020.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸ ಸೌಧ, ಬೆಂಗಳೂರು-01.

ಇವರಿಗೆ:

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ,
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು-01.

ಮಾನ್ಯರೇ,

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿ ನಿಗಧಿಪಡಿಸಿ ಉಳಿದಿರುವ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳಲ್ಲಿ ಸಾಮಾನ್ಯ ವರ್ಗದವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸಹ ಅರ್ಜಿ ಸಲ್ಲಿಸಿ ಬಿಡ್ ನಲ್ಲಿ ಭಾಗವಹಿಸಿ ಬಿಡ್ ಮೌಲ್ಯದಲ್ಲಿ ಶೇ .50 ರಷ್ಟು ರಿಯಾಯಿತಿ ಪಡೆಯುತ್ತಿರುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ವ್ಯ.ನೀ:ಕೈವ :ಸಾಮಾನ್ಯ :ಬಿಡ್:2019/2281, ದಿ: 09.01.2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದ ಕಡೆಗೆ ತಮ್ಮ ಗಮನ ಸೆಳೆಯುತ್ತಾ, ನಿಗಮವು ಅಭಿವೃದ್ಧಿಪಡಿಸಿರುವ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿ ಸಾಮಾನ್ಯರಿಗೆ ನಿಗದಿಪಡಿಸಿ ರುವ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳು ಇತ್ಯಾದಿಗಳಿಗೆ 6 ಮತ್ತು 6 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದ ಸಂದರ್ಭದಲ್ಲಿ, ಬಿಡ್ ಮೂಲಕ ಹಂಚಿಕೆ ಮಾಡುತ್ತಿದ್ದು, ಸದರಿ ಬಿಡ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರು ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದಾರೆ . ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರಿಗೆ ನಿವೇಶನದ ಮೌಲ್ಯದಲ್ಲಿ ಶೇ .50 ರಷ್ಟು ರಿಯಾಯಿತಿಯನ್ನು ನೀಡುತ್ತಿರುವ ಕಾರಣ ಒಟ್ಟು ಬಿಡ್ ಮೊತ್ತದ ಶೇ . 50 ರಷ್ಟು ಸಹಾಯಧನ ಪಡೆಯುತ್ತಿರುವುದರಿಂದ ಈ ಯೋಜನೆಯ ಪ್ರಯೋಜನವನ್ನು ಪಡೆದು ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗದ ಅರ್ಜಿದಾರರು ಅಷ್ಟು ಮೊತ್ತಕ್ಕೆ ಬಿಡ್ ಕೂಗಲು ಸಾಧ್ಯವಾಗದೇ ತಕರಾರು / ಆಕ್ಷೇಪಣೆ ಮಾಡುತ್ತಿರುವುದರಿಂದ ಬಿಡ್ ಪ್ರಕ್ರಿಯಲ್ಲಿ ಗೊಂದಲ ಉಂಟಾಗಿರುತ್ತದೆ. ಇದು ಹಲವು ಕಡೆ ಬಿಡ್ ಹಂಚಿಕೆ ಪ್ರಕ್ರಿಯೆಯನ್ನೇ ನಿಲ್ಲಿಸುವ ಹಂತಕ್ಕೆ ತಲುಪಿದೆ . ಈ ಹಿನ್ನೆಲೆಯಲ್ಲಿ ಮೀಸಲಾತಿಗೆ ಹೊರತಾಗಿರುವ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್ ಇತ್ಯಾದಿ ಕಟ್ಟಡಗಳನ್ನು ಬಿಡ್ ಮಾಡುವ ಸಂಧರ್ಭದಲ್ಲಿ ಬಿಡ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರಿಗೆ ಆಯಾ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇ .50 ರಷ್ಟು ರಿಯಾಯಿತಿಯನ್ನು ನೀಡುವುದು ಸೂಕ್ತವೇ ಅಥವಾ ಬಿಡ್ ಮೌಲ್ಯಕ್ಕೆ ಶೇ . 50 ರಷ್ಟು ರಿಯಾಯಿತಿಯನ್ನು ವಿಸ್ತರಿಸುವುದು

(192)

000288

ಸೂಕ್ತವೇ ಎಂಬ ಬಗ್ಗೆ ಸರ್ಕಾರದ ಮಾರ್ಗದರ್ಶನ ಮತ್ತು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುವುದು ಸರಿಯಷ್ಟೇ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದಾಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನೀಡುತ್ತಿರುವ ಶೇ.50 ರಷ್ಟು ಭೂ-ಸಹಾಯಧನವನ್ನು ನಿಗಮವು ನಿಗಧಿಪಡಿಸುವ ಮಳಿಗೆ / ನಿವೇಶನ / ಗೋದಾಮು / ಫ್ಲ್ಯಾಟ್‌ಗಳ ಮೂಲ ಮೌಲ್ಯಕ್ಕೆ ಮಾತ್ರ ಶೇ .50 ರಷ್ಟು ರಿಯಾಯಿತಿಯನ್ನು ನೀಡಬಹುದಾಗಿದ್ದು, ಅದರ ಮೇಲಿನ ಮೌಲ್ಯಕ್ಕೆ ರಿಯಾಯಿತಿ-ರಹಿತ ಎಂದು ಪರಿಗಣಿಸಿ ಮೂಲ ಮೌಲ್ಯದ ಮೇಲಿನ ಬಿಡ್ ಮೌಲ್ಯವನ್ನು ಹಂಚಿಕೆದಾರರು ಭರಿಸಿಕೊಳ್ಳುವಂತೆ ಕ್ರಮ ವಹಿಸಲು ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಂದ ಅನುಮೋದಿತ)

ತಮ್ಮ ನಂಬುಗೆಯ,

(ಸುಮತಿ ಎಸ್.) ೩೦/೩/೨೦೨೦

ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ಮಳಿಗೆ:ನಿರ್ವಹಣಾನೀತಿ:ಪುನರ್‌ಸ್ಥಾಪನೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಪುನರ್ ಸ್ಥಾಪನೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಆಡಳಿತ ಮಂಡಳ ಸಭೆಯ ನಡವಳಿ.

*****

ನಿಗಮವು ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯ ಅಭಿವೃದ್ಧಿಗೆ ತಗಲುವ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಸೇರಿಸಿ ಪ್ರೋರೇಟಾ ಆಧಾರದ ಮೇಲೆ ನಿವೇಶನಗಳ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ಎ, ಬಿ, ಸಿ, ಡಿ, ಸೂಪರ ಮಿನಿ, ಮಿನಿ, ಮಾದರಿ ಮಳಿಗೆಗಳನ್ನು, ಗೋದಾಮುಗಳು ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತದೆ. ಸದರಿ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಮಳಿಗೆಯನ್ನು ನಿರ್ಮಾಣ ಮಾಡಲು ಅಗತ್ಯವಿರುವ ಕಾಮಗಾರಿ ವೆಚ್ಚಗಳನ್ನು ಅಂದಾಜಿಸಿ ಅದಕ್ಕೆ ಮೇಲ್ವಿಚಾರಣಾ ಶುಲ್ಕ, ನಿಗಮದ ಸೇವಾ ಶುಲ್ಕಗಳನ್ನು ಸೇರಿಸಿ ಹಾಗೂ ಮೇಲೆ ತಿಳಿಸಿದಂತೆ ಲೆಕ್ಕಾಚಾರ ಮಾಡಿ ನಿಗಧಿಪಡಿಸಿದ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಗಳ ಮೌಲ್ಯವನ್ನು ನಿರ್ಧರಿಸಲಾಗುವುದು.

ಮಳಿಗೆಗಳ ಮೌಲ್ಯವನ್ನು ನಿರ್ಧರಿಸಿದ ನಂತರ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರುಗಳು ಹಂಚಿಕೆ ಪತ್ರ ಮತ್ತು ಕರಾರು ಒಪ್ಪಂದದ ಪ್ರಕಾರ ನಿಗಧಿತ ಅವಧಿಯಲ್ಲಿ ಕಂತು / ಮಳಿಗೆಗಳ ಮೌಲ್ಯವನ್ನು ಪಾವತಿಸದೇ ಇದ್ದಲ್ಲಿ, ಮಳಿಗೆಯನ್ನು ಕೆ.ಪಿ.ಪಿ ಕಾಯ್ದೆಯನುಸಾರ ಕ್ರಮ ತೆಗೆದುಕೊಂಡು ನಿಗಮದ ಸ್ವಾಧೀನಕ್ಕೆ ಪಡೆದು, ಹಂಚಿಕೆದಾರರುಗಳು ಪಾವತಿಸಬೇಕಾದ ಮಳಿಗೆಗಳ ಮೌಲ್ಯ ಮತ್ತು ಬಡ್ಡಿ, ವಿಳಂಭಿತ ಅವಧಿ ಬಡ್ಡಿ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಲೆಕ್ಕಾಚಾರ ಮಾಡಿ ಒಟ್ಟು ಮೊತ್ತಕ್ಕೆ ಆರ್.ಆರ್.ಸಿ ವಿತರಣೆ ಮಾಡಲಾಗುವುದು. ತದನಂತರ ಸದರಿ ಮಳಿಗೆಗಳನ್ನು ಮರು-ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಮಳಿಗೆಗಳನ್ನು ಹಂಚಿಕೆಗಾಗಿ ಮರು-ಪ್ರಕಟಣೆ ನೀಡುವ ಮುನ್ನ, ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಸದರಿ ಮಳಿಗೆಯ ನಿವೇಶನದ ಮೌಲ್ಯವನ್ನು ಸರ್ಕಾರವು ಆಯಾ ವರ್ಷಗಳಲ್ಲಿ ನಿಗಧಿಪಡಿಸಲ್ಪಡುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ನಿಗಮವು ರೂಪಿಸಿರುವ ಮಾನದಂಡಗಳಂತೆ ಲೆಕ್ಕಾಚಾರ ಮಾಡಿ ದರಗಳನ್ನು ನಿಗಧಿಪಡಿಸಿ ಆಯಾ ನಿವೇಶನಗಳ ವಿಸ್ತೀರ್ಣಕ್ಕೆ ತಕ್ಕಂತೆ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ರೂಪಿಸಿರುವ ಮಾನದಂಡಗಳನ್ವಯ ಸರ್ಕಾರದ ಆಯಾ ವರ್ಷದ ಪಿ.ಡಬ್ಲ್ಯೂ.ಡಿ ಎಸ್.ಆರ್. ದರಗಳಂತೆ ಮಳಿಗೆಯ ಕಟ್ಟಡ ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಅದರಲ್ಲಿ ಮಳಿಗೆಯ ನಿರ್ಮಾಣ ಸಾಲಿನಿಂದ ಹಂಚಿಕೆ ಮಾಡುವ ಸಾಲಿನವರೆವಿಗಿನ ಅವಧಿಗೆ ಸವಕಳಿಯನ್ನು ಲೆಕ್ಕಾಚಾರ ಮಾಡಿ, ಮಳಿಗೆಯ ಕಟ್ಟಡದ ಅಂದಾಜು ಮೌಲ್ಯದಲ್ಲಿ ಕಳೆದು, ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ನಂತರ ಮಳಿಗೆಯ ಕಟ್ಟಡದ ಮೌಲ್ಯಕ್ಕೆ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಯ ಒಟ್ಟು ಮೌಲ್ಯವನ್ನು ನಿರ್ಧರಿಸಿ ಹಂಚಿಕೆಗೆ ಪರಿಗಣಿಸಲಾಗುವುದು.

ಮಳಿಗೆಗಳನ್ನು ಕಂತು ಖರೀದಿ ಆಧಾರದ ಮೇಲೆ, ಈ ಹಿಂದೆ 6/ 10ವರ್ಷಗಳ ಕರಾರು ಅವಧಿಗೆ ಹಂಚಿಕೆ ಮಾಡಲಾಗುತ್ತಿದೆ.ಮಳಿಗೆಯ ಮೌಲ್ಯವನ್ನು 6/10 ವರ್ಷಗಳಿಗೆ ವಿಸ್ತರಿತ ಕಂತುಗಳನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರು ವಿಸ್ತರಿತ ಕಂತುಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ವಿಳಂಭಿತ ಅವಧಿಗೆ ನಿಗಮವು ನಿಗಧಿಪಡಿಸಿದ ಬಡ್ಡಿಯ ದರವನ್ನು ಆಕರಿಸಿ ಪಾವತಿಸಿಕೊಳ್ಳಲಾಗುವುದು. ಆದಾಗ್ಯೂ ಹಂಚಿಕೆದಾರರು ಕಾರಣಾಂತರಗಳಿಂದ ಮಳಿಗೆಯ ಬಾಕಿ ಮೌಲ್ಯವನ್ನು ಆಕರಿತ ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ, ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಗಳನ್ನು ತೆಗೆದುಕೊಂಡು, ತದನಂತರವು ಪಾವತಿಸದೇ ಇದ್ದಲ್ಲಿ ಮಳಿಗೆಯನ್ನು ನಿಗಮದ ನಿಯಮಾನುಸಾರ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ತೆಗೆದುಕೊಂಡು, ಹಂಚಿಕೆದಾರರು ಪಾವತಿಸಬೇಕಾದ ಮೊತ್ತಕ್ಕೆ ಆರ್.ಆರ್.ಸಿ ವಿತರಿಸಿ ಅವರ ಆಸ್ತಿ ದೊರೆತಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುವುದು.

ಸದರಿ ಮಾಜಿ ಹಂಚಿಕೆದಾರರು ತಮಗೆ ಈ ಹಿಂದೆ ಹಂಚಿಕೆಯಾದ ಮಳಿಗೆಯನ್ನು ಮರು-ಸ್ವಾಧೀನ ಪಡೆಯಲು ಇಚ್ಛಿಸಿದಲ್ಲಿ, ನಿಗಮದ ಮಂಡಳಿಯು ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ವಯ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶ ಹಾಗೂ ಮುಂದುವರೆದಂತೆ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ ದಂಡವನ್ನು ವಿಧಿಸಲಾಗುವುದು. ಅದರಂತೆ ಬಾಕಿ ಹಾಗೂ ದಂಡವನ್ನು ಮಾಜಿ ಹಂಚಿಕೆದಾರರು ಪಾವತಿಸಿದಲ್ಲಿ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಮರು-ಸ್ವಾಧೀನ ನೀಡಲಾಗುವುದು.

ಸದರಿ ಮಳಿಗೆಗಳ ಬಾಕಿ ಕಂತುಗಳನ್ನು /ಮೌಲ್ಯವನ್ನು ಪಾವತಿಸದೇ ಇದ್ದ ಮಳಿಗೆಗಳನ್ನು ಬೀಗಮುದ್ರೆಗೊಳಿಸಿ ನಿಗಮದ ಸ್ವಾಧೀನಕ್ಕೆ ಪಡೆದ ನಂತರ ಹಂಚಿಕೆದಾರರು ಮರು ಸ್ವಾಧೀನ ಪಡೆಯಲು ಉದ್ದೇಶಿಸಿದಲ್ಲಿ ಕಛೇರಿ ಆದೇಶದನ್ವಯ ಹಂಚಿಕೆದಾರರು ನಿಗಮಕ್ಕೆ ಪಾವತಿಸಬೇಕಾದ ಮಳಿಗೆಯ ಬಾಕಿ ಕಂತುಗಳು ಮತ್ತು ವಿಳಂಭಿತ ಅವಧಿಗೆ ಆಕರಿಸಲ್ಪಟ್ಟ ಬಡ್ಡಿಯೊಂದಿಗೆ ಒಟ್ಟು ಮೊತ್ತದ ಶೇ. ೦೦ ರಷ್ಟನ್ನು ಪಾವತಿಸಿದಲ್ಲಿ ಮಳಿಗೆಯನ್ನು ಮರು-ಸ್ವಾಧೀನ ನೀಡಲಾಗುವುದು.

ಆದರೆ, ಮೇಲ್ಕಂಡಂತೆ ದಿನಾಂಕ 22-06-2015 ರಂದು ಹೊರಡಿಸಲಾದ ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳ ಕಛೇರಿ ಆದೇಶ ಹಾಗೂ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ, ಹಂಚಿಕೆದಾರರು ಮಳಿಗೆಯ ಬಾಕಿ ಮೌಲ್ಯ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪ್ರವರ್ಗವಾರು ಕೈಗಾರಿಕಾ ವಸಾಹತುಗಳಿಗೆ ನಿಗಧಿಪಡಿಸಿದ ಮಳಿಗೆ/ನಿವೇಶನಗಳ ಪ್ರಚಲಿತ ಮೌಲ್ಯದ ಮೇಲೆ ವಿಧಿಸುವ ಶೇಕಡವಾರು ಪ್ರಮಾಣ ದಂಡದ ಮೊತ್ತದೊಂದಿಗೆ ಒಂದೇ ಇಡಿಗಂಟಿನಲ್ಲಿ ಪಾವತಿಸಿದರೆ ಮಾತ್ರ ಪುನರ್ ಸ್ಥಾಪನೆಗೆ (Restoration) ಅನುಮತಿಸಲಾಗುವುದು. ಈ ನಿಯಮವು ಮಳಿಗೆ ಹಂಚಿಕೆದಾರರುಗಳ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆಯಾಗಲಿದ್ದು, ರೋಗಗ್ರಸ್ಥ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮವಾಗಿರುವುದಿಲ್ಲ.

ನಿಗಮವು ಆಯಾ ಮಳಿಗೆಗಳ ಮೌಲ್ಯಕ್ಕೆ ಬಡ್ಡಿಯನ್ನು ಸೇರಿಸಿ ವಿಸ್ತರಿತ ಕಂತುಗಳನ್ನು ನಿರ್ಧರಿಸಿದ್ದು, ತದನಂತರ ವಿಳಂಭಿತ ಪಾವತಿ ಅವಧಿಗೂ ಸಹ ಕಂತಿನಲ್ಲಿನ ಬಡ್ಡಿಗಿಂತ ಶೇ.2ರಷ್ಟು ಹೆಚ್ಚುವರಿ ಬಡ್ಡಿ ದರವನ್ನು ಆಕರಿಸಿ ಪಾವತಿಸಿಕೊಳ್ಳುವುದರಿಂದ ನಿಗಮಕ್ಕೆ ನಷ್ಟವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ದೇಶಾದ್ಯಂತ ಹರಡಿರುವ ಕರೋನಾ /ಕೋವಿಡ್-19 ರೋಗದಿಂದಾಗಿ ವಾಣಿಜ್ಯ ಚಟುವಟಿಕೆಗಳು ಸರ್ವತೋಮುಖವಾಗಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೇ ನಿಗಮದ ಮೂಲ ಧ್ಯೇಯೋದ್ದೇಶವಾಗಿದ್ದು, ಸಣ್ಣ ಕೈಗಾರಿಕೆಗಳ ಸ್ನೇಹಿಯಾಗಿ ಇರುವುದರಿಂದ, ಮಳಿಗೆ ಮತ್ತು ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿ ಇತ್ಯಾದಿ ಕಟ್ಟಡಗಳಿಗೆ, ಮೇಲ್ಕಂಡ ಆದೇಶಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಅಂಶಗಳನ್ನು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದ್ದು. ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> ತೀರ್ಮಾನ:- ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ನಿವೇಶನಗಳ ಜೊತೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸಹ ಸೇರಿದ್ದು, ಅವುಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ಹಾಗೂ ತತ್ಸಬಂಧ ಪರಿಷ್ಕೃತ ಆದೇಶವನ್ನು ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.

ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಕಂಡಿಕೆಗಳಲ್ಲಿ ನಿಗಮವು ತನ್ನ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಿಸಿರುವ ಮಳಿಗೆಗಳ ಮೌಲ್ಯ ನಿರ್ಧರಣೆ, ಹಂಚಿಕೆ, ಕಂತು ನಿರ್ಧರಣೆ, ವಸೂಲಾತಿ ಹಾಗೂ ವಿಳಂಭಿತ ಅವಧಿಗೆ ಆಕರಿಸಿರುವ ಬಡ್ಡಿ ಪಾವತಿಸದೇ ಇದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿದ್ದು, ಅದರಂತೆ ಮಳಿಗೆ/ ಗೋದಾಮು /ಸಂಕೀರ್ಣ ಮಳಿಗೆ/ಅಂಗಡಿಗಳಿಗೆ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಮಂಡಳಿಯು ತೆಗೆದುಕೊಂಡ ನಿರ್ಧಾರದ ಮೇರೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ನಿರ್ಧರಿಸಿ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ವಿಭಾಗೀಯ ಕಛೇರಿಗಳು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

25/01/2021

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

000285

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ)./(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ಮಳಿಗೆ:ನಿರ್ವಹಣಾನೀತಿ:ಪುನರ್‌ಸ್ಥಾಪನೆ:2021 ದಿನಾಂಕ: 25-01-2021

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಪುನರ್ ಸ್ಥಾಪನೆ ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ: 19-12-2020 ರಂದು ಜರುಗಿದ 361ನೇ ಆಡಳಿತ ಮಂಡಳಿ ಸಭೆಯ ನಡವಳಿ.

*****

ನಿಗಮವು ಸ್ವಾಧೀನಪಡಿಸಿಕೊಂಡ ಜಮೀನಿನ ಮೌಲ್ಯ ಅಭಿವೃದ್ಧಿಗೆ ತಗಲುವ ವೆಚ್ಚ ಹಾಗೂ ಇತರೆ ಶಾಸನಬದ್ಧ ವೆಚ್ಚಗಳನ್ನು ಸೇರಿಸಿ ಪ್ರೋರೇಟಾ ಆಧಾರದ ಮೇಲೆ ನಿವೇಶನಗಳ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ಎ, ಬಿ, ಸಿ, ಡಿ, ಸೂಪರ ಮಿನಿ, ಮಿನಿ, ಮಾದರಿ ಮಳಿಗೆಗಳನ್ನು, ಗೋದಾಮುಗಳು ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತದೆ. ಸದರಿ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಮಳಿಗೆಯನ್ನು ನಿರ್ಮಾಣ ಮಾಡಲು ಅಗತ್ಯವಿರುವ ಕಾಮಗಾರಿ ವೆಚ್ಚಗಳನ್ನು ಅಂದಾಜಿಸಿ ಅದಕ್ಕೆ ಮೇಲ್ವಿಚಾರಣಾ ಶುಲ್ಕ, ನಿಗಮದ ಸೇವಾ ಶುಲ್ಕಗಳನ್ನು ಸೇರಿಸಿ ಹಾಗೂ ಮೇಲೆ ತಿಳಿಸಿದಂತೆ ಲೆಕ್ಕಾಚಾರ ಮಾಡಿ ನಿಗಧಿಪಡಿಸಿದ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಗಳ ಮೌಲ್ಯವನ್ನು ನಿರ್ಧರಿಸಲಾಗುವುದು.

ಮಳಿಗೆಗಳ ಮೌಲ್ಯವನ್ನು ನಿರ್ಧರಿಸಿದ ನಂತರ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರುಗಳು ಹಂಚಿಕೆ ಪತ್ರ ಮತ್ತು ಕರಾರು ಒಪ್ಪಂದದ ಪ್ರಕಾರ ನಿಗಧಿತ ಅವಧಿಯಲ್ಲಿ ಕಂತು / ಮಳಿಗೆಗಳ ಮೌಲ್ಯವನ್ನು ಪಾವತಿಸದೇ ಇದ್ದಲ್ಲಿ, ಮಳಿಗೆಯನ್ನು ಕೆ.ಪಿ.ಪಿ ಕಾಯ್ದೆಯನುಸಾರ ಕ್ರಮ ತೆಗೆದುಕೊಂಡು ನಿಗಮದ ಸ್ವಾಧೀನಕ್ಕೆ ಪಡೆದು, ಹಂಚಿಕೆದಾರರುಗಳು ಪಾವತಿಸಬೇಕಾದ ಮಳಿಗೆಗಳ ಮೌಲ್ಯ ಮತ್ತು ಬಡ್ಡಿ, ವಿಳಂಭಿತ ಅವಧಿ ಬಡ್ಡಿ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಲೆಕ್ಕಾಚಾರ ಮಾಡಿ ಒಟ್ಟು ಮೊತ್ತಕ್ಕೆ ಆರ್.ಆರ್.ಸಿ ವಿತರಣೆ ಮಾಡಲಾಗುವುದು. ತದನಂತರ ಸದರಿ ಮಳಿಗೆಗಳನ್ನು ಮರು-ಪ್ರಕಟಣೆ ನೀಡಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂತಹ ಮಳಿಗೆಗಳನ್ನು ಹಂಚಿಕೆಗಾಗಿ ಮರು-ಪ್ರಕಟಣೆ ನೀಡುವ ಮುನ್ನ ಮಳಿಗೆಗಳ ಮೌಲ್ಯವನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ, ಸದರಿ ಮಳಿಗೆಯ ನಿವೇಶನದ ಮೌಲ್ಯವನ್ನು ಸರ್ಕಾರವು ಆಯಾ ವರ್ಷಗಳಲ್ಲಿ ನಿಗಧಿಪಡಿಸಲ್ಪಡುವ ಮಾರ್ಗಸೂಚಿ ದರಗಳನ್ನು ಅನ್ವಯಿಸಿ ನಿಗಮವು ರೂಪಿಸಿರುವ ಮಾನದಂಡಗಳಂತೆ ಲೆಕ್ಕಾಚಾರ ಮಾಡಿ ದರಗಳನ್ನು ನಿಗಧಿಪಡಿಸಿ ಆಯಾ ನಿವೇಶನಗಳ ವಿಸ್ತೀರ್ಣಕ್ಕೆ ತಕ್ಕಂತೆ ಮೌಲ್ಯವನ್ನು ನಿಗಧಿಪಡಿಸಲಾಗುವುದು.

ನಿಗಮವು ರೂಪಿಸಿರುವ ಮಾನದಂಡಗಳನ್ವಯ ಸರ್ಕಾರದ ಆಯಾ ವರ್ಷದ ಪಿ.ಡಬ್ಲ್ಯು.ಡಿ ಎಸ್.ಆರ್. ದರಗಳಂತೆ ಮಳಿಗೆಯ ಕಟ್ಟಡ ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಅದರಲ್ಲಿ ಮಳಿಗೆಯ ನಿರ್ಮಾಣ ಸಾಲನಿಂದ ಹಂಚಿಕೆ ಮಾಡುವ ಸಾಲನವರೆವಿಗಿನ ಅವಧಿಗೆ ಸವಕಳಿಯನ್ನು ಲೆಕ್ಕಾಚಾರ ಮಾಡಿ, ಮಳಿಗೆಯ ಕಟ್ಟಡದ ಅಂದಾಜು ಮೌಲ್ಯದಲ್ಲಿ ಕಳೆದು, ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ಮಳಿಗೆಯ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗುವುದು. ನಂತರ ಮಳಿಗೆಯ ಕಟ್ಟಡದ ಮೌಲ್ಯಕ್ಕೆ ನಿವೇಶನದ ಮೌಲ್ಯವನ್ನು ಸೇರಿಸಿ ಮಳಿಗೆಯ ಒಟ್ಟು ಮೌಲ್ಯವನ್ನು ನಿರ್ಧರಿಸಿ ಹಂಚಿಕೆಗೆ ಪರಿಗಣಿಸಲಾಗುವುದು.

ಮಳಿಗೆಗಳನ್ನು ಕಂತು ಖರೀದಿ ಆಧಾರದ ಮೇಲೆ, ಈ ಹಿಂದೆ 6/ 10ವರ್ಷಗಳ ಕರಾರು ಅವಧಿಗೆ ಹಂಚಿಕೆ ಮಾಡಲಾಗುತ್ತಿದೆ.ಮಳಿಗೆಯ ಮೌಲ್ಯವನ್ನು 6/10 ವರ್ಷಗಳಿಗೆ ವಿಸ್ತರಿತ ಕಂತುಗಳನ್ನು ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಹಂಚಿಕೆದಾರರು ವಿಸ್ತರಿತ ಕಂತುಗಳನ್ನು ನಿಗಧಿತ ಅವಧಿಯಲ್ಲಿ ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ವಿಳಂಭಿತ ಅವಧಿಗೆ ನಿಗಮವು ನಿಗಧಿಪಡಿಸಿದ ಬಡ್ಡಿಯ ದರವನ್ನು ಆಕರಿಸಿ ಪಾವತಿಸಿಕೊಳ್ಳಲಾಗುವುದು ಆದಾಗ್ಯೂ ಹಂಚಿಕೆದಾರರು ಕಾರಣಾಂತರಗಳಿಂದ ಮಳಿಗೆಯ ಬಾಕಿ ಮೌಲ್ಯವನ್ನು ಆಕರಿತ ಬಡ್ಡಿಯೊಂದಿಗೆ ಪಾವತಿಸದೇ ಇದ್ದಲ್ಲಿ, ಕೆ.ಪಿ.ಪಿ ಕಾಯ್ದೆಯನ್ವಯ ಕ್ರಮಗಳನ್ನು ತೆಗೆದುಕೊಂಡು, ತದನಂತರವು ಪಾವತಿಸದೇ ಇದ್ದಲ್ಲಿ ಮಳಿಗೆಯನ್ನು ನಿಗಮದ ನಿಯಮಾನುಸಾರ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ತೆಗೆದುಕೊಂಡು, ಹಂಚಿಕೆದಾರರು ಪಾವತಿಸಬೇಕಾದ ಮೊತ್ತಕ್ಕೆ ಆರ್.ಆರ್.ಸಿ ವಿತರಿಸಿ ಅವರ ಆಸ್ತಿ ದೊರೆತಲ್ಲಿ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯನ್ನು ನಡೆಸಲಾಗುವುದು.

ಸದರಿ ಮಾಜಿ ಹಂಚಿಕೆದಾರರು ತಮಗೆ ಈ ಹಿಂದೆ ಹಂಚಿಕೆಯಾದ ಮಳಿಗೆಯನ್ನು ಮರು-ಸ್ವಾಧೀನ ಪಡೆಯಲು ಇಚ್ಛಿಸಿದಲ್ಲಿ, ನಿಗಮದ ಮಂಡಳಿಯು ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ವಯ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶ ಹಾಗೂ ಮುಂದುವರೆದಂತೆ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ ದಂಡವನ್ನು ವಿಧಿಸಲಾಗುವುದು. ಅದರಂತೆ ಬಾಕಿ ಹಾಗೂ ದಂಡವನ್ನು ಮಾಜಿ ಹಂಚಿಕೆದಾರರು ಪಾವತಿಸಿದಲ್ಲಿ ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆದು ಮರು-ಸ್ವಾಧೀನ ನೀಡಲಾಗುವುದು.

ಸದರಿ ಮಳಿಗೆಗಳ ಬಾಕಿ ಕಂತುಗಳನ್ನು /ಮೌಲ್ಯವನ್ನು ಪಾವತಿಸದೇ ಇದ್ದ ಮಳಿಗೆಗಳನ್ನು ಬೀಗಮುದ್ರೆಗೊಳಿಸಿ ನಿಗಮದ ಸ್ವಾಧೀನಕ್ಕೆ ಪಡೆದ ನಂತರ ಹಂಚಿಕೆದಾರರು ಮರು ಸ್ವಾಧೀನ ಪಡೆಯಲು ಉದ್ದೇಶಿಸಿದಲ್ಲಿ ಕಛೇರಿ ಆದೇಶದನ್ವಯ ಹಂಚಿಕೆದಾರರು ನಿಗಮಕ್ಕೆ ಪಾವತಿಸಬೇಕಾದ ಮಳಿಗೆಯ ಬಾಕಿ ಕಂತುಗಳು ಮತ್ತು ವಿಳಂಭಿತ ಅವಧಿಗೆ ಆಕರಿಸಲ್ಪಟ್ಟ ಬಡ್ಡಿಯೊಂದಿಗೆ ಒಟ್ಟು ಮೊತ್ತದ ಶೇ. 50 ರಷ್ಟನ್ನು ಪಾವತಿಸಿದಲ್ಲಿ ಮಳಿಗೆಯನ್ನು ಮರು-ಸ್ವಾಧೀನ ನೀಡಲಾಗುವುದು.

ಆದರೆ, ಮೇಲ್ಕಂಡಂತೆ ದಿನಾಂಕ 22-06-2015 ರಂದು ಹೊರಡಿಸಲಾದ ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳ ಕಛೇರಿ ಆದೇಶ ಹಾಗೂ ದಿನಾಂಕ: 08-05-2020 ಮತ್ತು 01-10-2020 ರಂದು ಹೊರಡಿಸಿರುವ ಪರಿಷ್ಕೃತ ಕಛೇರಿ ಆದೇಶಗಳನ್ವಯ, ಹಂಚಿಕೆದಾರರು ಮಳಿಗೆಯ ಬಾಕಿ ಮೌಲ್ಯ ಮತ್ತು ಇತರೆ ಶಾಸನಬದ್ಧ ಪಾವತಿಗಳನ್ನು ಪ್ರವರ್ಗವಾರು ಕೈಗಾರಿಕಾ ವಸಾಹತುಗಳಿಗೆ ನಿಗಧಿಪಡಿಸಿದ ಮಳಿಗೆ/ನಿವೇಶನಗಳ ಪ್ರಚಲಿತ ಮೌಲ್ಯದ ಮೇಲೆ ವಿಧಿಸುವ ಶೇಕಡವಾರು ಪ್ರಮಾಣ ದಂಡದ ಮೊತ್ತದೊಂದಿಗೆ ಒಂದೇ ಇಡಿಗಂಟಿನಲ್ಲಿ ಪಾವತಿಸಿದರೆ ಮಾತ್ರ ಪುನರ್ ಸ್ಥಾಪನೆಗೆ (Restoration) ಅನುಮತಿಸಲಾಗುವುದು. ಈ ನಿಯಮವು ಮಳಿಗೆ ಹಂಚಿಕೆದಾರರುಗಳ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆಯಾಗಲಿದ್ದು, ರೋಗಗ್ರಸ್ಥ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತಹ ಕ್ರಮವಾಗಿರುವುದಿಲ್ಲ.

ನಿಗಮವು ಆಯಾ ಮಳಿಗೆಗಳ ಮೌಲ್ಯಕ್ಕೆ ಬಡ್ಡಿಯನ್ನು ಸೇರಿಸಿ ವಿಸ್ತರಿತ ಕಂತುಗಳನ್ನು ನಿರ್ಧರಿಸಿದ್ದು, ತದನಂತರ ವಿಳಂಭಿತ ಪಾವತಿ ಅವಧಿಗೂ ಸಹ ಕಂತಿನಲ್ಲಿನ ಬಡ್ಡಿಗಿಂತ ಶೇ.2ರಷ್ಟು ಹೆಚ್ಚುವರಿ ಬಡ್ಡಿ ದರವನ್ನು ಆಕರಿಸಿ ಪಾವತಿಸಿಕೊಳ್ಳುವುದರಿಂದ ನಿಗಮಕ್ಕೆ ನಷ್ಟವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಹಾಗೂ ಪ್ರಸಕ್ತ ದೇಶಾದ್ಯಂತ ಹರಡಿರುವ ಕರೋನಾ /ಕೋವಿಡ್-19 ರೋಗದಿಂದಾಗಿ ವಾಣಿಜ್ಯ ಚಟುವಟಿಕೆಗಳು ಸರ್ವತೋಮುಖವಾಗಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯೇ ನಿಗಮದ ಮೂಲ ಧ್ಯೇಯೋದ್ದೇಶವಾಗಿದ್ದು, ಸಣ್ಣ ಕೈಗಾರಿಕೆಗಳ ಸ್ನೇಹಿಯಾಗಿ ಇರುವುದರಿಂದ, ಮಳಿಗೆ ಮತ್ತು ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿ ಇತ್ಯಾದಿ ಕಟ್ಟಡಗಳಿಗೆ, ಮೇಲ್ಕಂಡ ಆದೇಶಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು ಮೇಲ್ಕಂಡ ಅಂಶಗಳನ್ನು ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯ ನಿರ್ಣಯಕ್ಕಾಗಿ ಮಂಡಿಸಿದ್ದು. ಮಂಡಳಿಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

> ತೀರ್ಮಾನ:- ಮಂಡಳಿಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿ, ಕೈಗಾರಿಕಾ ವಸಾಹತು ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಸಂದರ್ಭದಲ್ಲಿ ನಿವೇಶನಗಳ ಜೊತೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸಹ ಸೇರಿದ್ದು, ಅವುಗಳನ್ನು, ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ಹಾಗೂ ತತ್ಸಬಂಧ ಪರಿಷ್ಕೃತ ಆದೇಶವನ್ನು ಹೊರಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.

ದಿನಾಂಕ: 19-12-2020 ರಂದು ಜರುಗಿದ ನಿಗಮದ 361ನೇ ಆಡಳಿತ ಮಂಡಳಿಯು ತೆಗೆದುಕೊಂಡ ತೀರ್ಮಾನದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ಮೇಲ್ಕಂಡ ಕಂಡಿಕೆಗಳಲ್ಲಿ ನಿಗಮವು ತನ್ನ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ನಿರ್ಮಿಸಿರುವ ಮಳಿಗೆಗಳ ಮೌಲ್ಯ ನಿರ್ಧರಣೆ, ಹಂಚಿಕೆ, ಕಂತು ನಿರ್ಧರಣೆ, ವಸೂಲಾತಿ ಹಾಗೂ ವಿಳಂಭಿತ ಅವಧಿಗೆ ಆಕರಿಸಿರುವ ಬಡ್ಡಿ ಪಾವತಿಸದೇ ಇದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ವಿವರಿಸಿದ್ದು, ಅದರಂತೆ ಮಳಿಗೆ/ ಗೋದಾಮು /ಸಂಕೀರ್ಣ ಮಳಿಗೆ/ಅಂಗಡಿಗಳಿಗೆ ನಿರ್ವಹಣಾ ನೀತಿ ಮಾರ್ಗಸೂಚಿಗಳನ್ನು ಅನ್ವಯಿಸುವುದು ಸೂಕ್ತವಲ್ಲವೆಂದು ಮಂಡಳಿಯು ತೆಗೆದುಕೊಂಡ ನಿರ್ಧಾರದ ಮೇರೆಗೆ ಮಳಿಗೆ, ಸಂಕೀರ್ಣ ಮಳಿಗೆ, ಗೋದಾಮು, ಅಂಗಡಿಗಳನ್ನು ಸದರಿ ನಿರ್ವಹಣಾ ನೀತಿ ಮಾರ್ಗಸೂಚಿಗಳ ಯೋಜನೆಯಿಂದ ಪೂರ್ವಾನ್ವಯವಾಗುವಂತೆ ಕೈಬಿಡಲು ನಿರ್ಧರಿಸಿ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ವಿಭಾಗೀಯ ಕಛೇರಿಗಳು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ.

25/01/2021

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

000282

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ),/(ಆಡಳಿತ & ಭೂಸ್ವಾಧೀನ),ಕರಾಸಕೈಅನಿನಿ,ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2,ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.

ಕರ್ನಾಸಕೈಲಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸೂಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

000281

ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂಚಿ:2015 / 913

ದಿನಾಂಕ: 22-06-2015

ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ

ಉಲ್ಲೇಖ: ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಡವಳಿಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉತ್ತಮ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ, ನಿಗಮದ ಹಾಗೂ ಸಣ್ಣ ಕೈಗಾರಿಕೆಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಿಗಮವು ಕಾಲಕಾಲಕ್ಕೆ ನಿಯಮಗಳನ್ನು ನಿಬಂಧನೆಗಳನ್ನು ರೂಪಿಸುತ್ತಿರುತ್ತದೆ.

ನಿರ್ದಿಷ್ಟವಾಗಿ ಸಣ್ಣ ಕೈಗಾರಿಕೆಗಳಿಗೆ ಸುಧಾರಿತ ಸೇವೆಯನ್ನು ಒದಗಿಸಲು, ಕೈಗಾರಿಕಾ ವಸಾಹತು ನಿರ್ವಹಣಾ ಸೇವೆಗಳ ಬಗ್ಗೆ ಕೆಲವೊಂದು ಮಾರ್ಗಸೂಚಿಗಳನ್ನು ರೂಪಿಸುವ ಕುರಿತು ಪ್ರಸ್ತಾವನೆಯನ್ನು ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ಮುಂದ ಮಂಡಿಸಲಾಗಿತ್ತು. ಸದರಿ ವಿಷಯದ ಬಗ್ಗೆ ಮಂಡಳಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ:

ಈ ಹಿಂದೆ ನಿಗಮದ ವತಿಯಿಂದ ನಿವೇಶನ / ಮಳಿಗೆ /ಗೋದಾಮು / ಇತರೆ ಕಟ್ಟಡಗಳ ಹಂಚಿಕೆಯನ್ನು ನಿಯಮಗಳನ್ವಯ ರದ್ದುಪಡಿಸಿದ ಬಗ್ಗೆ ಹಲವಾರು ಕೈಗಾರಿಕೋದ್ಯಮಿಗಳು, ರದ್ದತಿ ಆದೇಶಗಳನ್ನು ನಿರಸನಗೊಳಿಸಿ, ಹಂಚಿಕೆಯಾದ ನಿವೇಶನ / ಮಳಿಗೆ / ಗೋದಾಮು / ಇತರೆ ಕಟ್ಟಡಗಳಲ್ಲಿ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾಲಾವಧಿ ನೀಡಲು ಮನವಿಗಳನ್ನು ಸಲ್ಲಿಸಿದ್ದು. ಸದರಿ ಕೈಗಾರಿಕೋದ್ಯಮಿಗಳ ಕೋರಿಕೆ ಮೇರೆಗೆ ಅಂತಹ ಹಂಚಿಕೆಯನ್ನು ಹಿಂದಕ್ಕೆ ನೀಡಿ (restoration of allotment), ಸದರಿ ನಿವೇಶನ / ಮಳಿಗೆ /ಗೋದಾಮು / ಫ್ಲಾಟ್ / ಇತರೆ ಕಟ್ಟಡಗಳನ್ನು ಮಾಜಿ ಹಂಚಿಕೆದಾರರುಗಳಿಗೆ ಹಿಂದಿರುಗಿಸುವ ಸಂಬಂಧ ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಿರ್ಣಯದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಲು ರೂಪಿಸಲಾಗಿದೆ.

i) ಎಲ್ಲ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ನಿಯಮಾನುಸಾರ ರದ್ದುಗೊಳಿಸಿ ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದ ನಿಗಮದ ಸುಪರ್ದಿನಲ್ಲಿದೆಯೋ ;

1) ಹಂಚಿಕೆಯನ್ನು ಹಿಂದಕ್ಕೆ ನೀಡುವ ದಿನಾಂಕಕ್ಕೆ ಬಾಕಿ ಇರುವ ಸೇವಾ ಶುಲ್ಕ, ನೀರಿನ ಶುಲ್ಕ, ಇತರೆ ಶುಲ್ಕಗಳನ್ನು ಹಂಚಿಕೆದಾರರು ಸಂಪೂರ್ಣವಾಗಿ ಪಾವತಿಸತಕ್ಕದ್ದು.

2) ಹಂಚಿಕೆದಾರರುಗಳಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡುವ ಪ್ರಸ್ತಾವನೆಗಳನ್ನು ಬಿಡಿ ಹಂಚಿಕೆ ಸಮಿತಿಯು ಅನುಮೋದಿಸತಕ್ಕದ್ದು. ತದನಂತರ, ಹಂಚಿಕೆದಾರರುಗಳ ರದ್ದತಿ ಆದೇಶದ ನಿರಸನ ದಿನಾಂಕ್ಕೆ ಪ್ರಚಲಿತದಲ್ಲಿರುವ ಹಂಚಿಕೆಯ ಮೌಲ್ಯ ಹಾಗೂ ಹಂಚಿಕೆ ಸಮಯದಲ್ಲಿನ ಮೌಲ್ಯದ ವ್ಯತ್ಯಾಸವನ್ನು ಈ ಕೆಳಕಂಡಂತೆ ಪಾವತಿಸತಕ್ಕದ್ದು:

ಅ) 'ಎ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 75 ರಷ್ಟು ಮೌಲ್ಯದ ವ್ಯತ್ಯಾಸದ ಮೊತ್ತ.

ಬ) 'ಬಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ ೫೦ ರಷ್ಟು ವ್ಯತ್ಯಾಸದ ಮೊತ್ತ.

ಕ) ಹಿಂದುಳಿದ ಪ್ರದೇಶದ ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ, 'ಸಿ' ಮತ್ತು 'ಡಿ' ಪ್ರವರ್ಗದಡಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ, ಹಂಚಿಕೆ ಸಮಯದಲ್ಲಿನ ಮೌಲ್ಯ ಹಾಗೂ ಪ್ರಚಲಿತ ಮೌಲ್ಯದ ಶೇಕಡಾ 25 ರಷ್ಟು ವ್ಯತ್ಯಾಸದ ಮೊತ್ತ.

3) ಹಂಚಿಕೆ ಸಮಯದಲ್ಲಿ ಹಾಗೂ ಹಂಚಿಕೆಯ ತರುವಾಯ ಹಾಗೂ ರದ್ದತಿ/ಬೀಗಮುದ್ರೆ ದಿನಾಂಕಕ್ಕೆ ಹಂಚಿಕೆದಾರರು ಶಾಸನಬದ್ಧ ಪಾವತಿಗಳಾದ ಕೊಳಚೆ ನಿರ್ಮೂಲನಾ ಶುಲ್ಕ, ಹಾಗೂ ಇತರೆ ಪಾವತಿಗಳಾದ ಸೇವಾ ಶುಲ್ಕ, ಇತರೆ ಯಾವುದಾದರೂ ಶುಲ್ಕಗಳನ್ನು ಪಾವತಿಸಿದ್ದಲ್ಲಿ, ಅವುಗಳನ್ನು ಯಾವುದೇ ರೀತಿಯಲ್ಲಿಯೂ ಮರು-ಪಾವತಿಸಲು ಅಥವಾ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

4) ಉಚ್ಚ ನ್ಯಾಯಾಲಯವು ನಿಗಮದ ಪರವಾಗಿ ತೀರ್ಪು ನೀಡಿದಾಗ ಹಂಚಿಕೆದಾರರ ಮನವಿಯ ಮೇರೆಗೆ ನಿಗಮವು ಮರು-ಹಂಚಿಕೆಯನ್ನು ಪರಿಗಣಿಸಬಾರದು.

5) ಎರಡು ವರ್ಷಗಳ ಕಾಲಮಿತಿಯನ್ನು ಗರ್ಭಕಾಲದ ಅವಧಿ ಎಂದು ನಿಗದಿಪಡಿಸಲಾಗಿದೆ.

ii) <u>ಎಲ್ಲ ಪದ್ಧತಿ ನಿಯಮಗಳನ್ನು ಪಾಲಿಸದೆ ಮಳಿಗೆ / ನಿವೇಶನ / ಇತರೆ ಕಟ್ಟಡಗಳನ್ನು ರದ್ದುಗೊಳಿಸಿ / ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದೆ ನಿಗಮದ ಸುಪರ್ದಿಯಲ್ಲಿದೆಯೋ</u> ;

1) ಕಾನೂನಿನ ಪ್ರಕ್ರಿಯೆ ಹಾಗೂ ನಿಯಮಗಳನ್ನು ಪಾಲಿಸದೇ ಮಳಿಗೆ/ನಿವೇಶನ/ಇತರೆ ಕಟ್ಟಡಗಳನ್ನು ರದ್ದುಗೊಳಿಸಲಾದ ಅಥವಾ ಬೀಗಮುದ್ರೆಗೊಳಿಸಿ ನಿಗಮದ ವಶಕ್ಕೆ ಪಡೆಯಲಾದ ಪ್ರಕರಣಗಳ ಬಗೆಗಿನ ಹಂಚಿಕೆ ಹಿಂದಕ್ಕೆ ನೀಡುವುದನ್ನು ಮಂಡಳಿಯು ಪ್ರಕರಣದಿಂದ ಪ್ರಕರಣಕ್ಕೆ ಆಧಾರದ (case to case basis) ಮೇಲೆ ಪರಿಗಣಿಸುವುದು. ಈ ಪ್ರಕರಣಗಳಲ್ಲಿ ಹಂಚಿಕೆದಾರರಿಗೆ ಸ್ವಭಾವಸಿದ್ಧ ನ್ಯಾಯ ಖಚಿತಪಡಿಸಿಕೊಳ್ಳುವ ಹಾಗೂ ನಿಗಮದ ಕೈಗಾರಿಕಾ ಸ್ನೇಹಿ ಹಿತದೃಷ್ಟಿಯಿಂದ ಯಾವುದೇ ರೀತಿಯ ಹೆಚ್ಚುವರಿ ಮೊತ್ತವನ್ನು ವಿಧಿಸದೇ, ಹಂಚಿಕೆ ಸಮಯದಲ್ಲಿನ ದರವನ್ನು ವಿಧಿಸಿ ಹಂಚಿಕೆಯನ್ನು ಹಿಂದಕ್ಕೆ ನೀಡುವುದು.

2) ತಪ್ಪಾಗಿ ಬೀಗಮುದ್ರೆಗೊಳಿಸಿದ ಸಂಬಂಧಪಟ್ಟ ಅಧಿಕಾರಿ / ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಿ ಸಂಬಂಧಪಟ್ಟ ಅಧಿಕಾರಿ / ನೌಕರರಿಂದ ನಷ್ಟವನ್ನು ವಸೂಲಿ ಮಾಡತಕ್ಕದ್ದು.

..3..

3) ನಿಗಮಕ್ಕೆ ಉಂಟಾದ ನಷ್ಟದ ವ್ಯತ್ಯಾಸದ ಮೊಬಲಗನ್ನು ವಸೂಲಿ ಮಾಡಲು ಸಿವಿಲ್ ವಸೂಲಾತಿ ದಾವೆಯನ್ನು ಹೂಡತಕ್ಕದ್ದು.

iii) <u>ನ್ಯಾಯಾಲಯದ ತೀರ್ಪುಗಳು ;</u>

1) ನ್ಯಾಯಾಲಯದ ಪ್ರಕರಣಗಳಲ್ಲಿ, ನ್ಯಾಯಾಲಯದ ತೀರ್ಪುಗಳ ಅನ್ವಯ, ಮಂಡಳಿಯ ಉಪ ಸಮಿತಿಯಾದ ಬಿಡಿ ಹಂಚಿಕೆ ಸಮಿತಿಯ ಅನುಮೋದನೆಯೊಂದಿಗೆ ಹಂಚಿಕೆಯನ್ನು ಹಿಂದಕ್ಕೆ ನೀಡಬಹುದು. ಪ್ರಕರಣದ ಅರ್ಹತೆ ಮೇರೆಗೆ, ಪ್ರಕರಣದಿಂದ ಪ್ರಕರಣದ ಆಧಾರದ ಮೇಲೆ ಬಿಡಿ ಹಂಚಿಕೆ ಸಮಿತಿಯು ಇದರ ಬಗ್ಗೆ ನಿರ್ಧರಿಸುವುದು.

2) ನಿಗಮವು ಕಾನೂನು ಅಭಿಪ್ರಾಯವನ್ನು ಪಡೆದ ನಂತರ ಮುಂದಿನ ಮೇಲ್ಮನವಿ ಸಲ್ಲಿಕೆಯು ಸಾಕಾರವಾಗುವುದಿಲ್ಲವೆಂಬ ನಿರ್ಧಾರಕ್ಕೆ ಬಂದಿರಬೇಕು.

iv) <u>ಪಾವತಿ ಮಾಡಲು ಕಾಲಾವಧಿ ವಿಸ್ತರಣೆ:</u>

ದಿನಾಂಕ 16.07.1987 ರಂದು ಜರುಗಿದ ನಿಗಮದ 192ನೇ ಮಂಡಳಿ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ, ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 90 ದಿನಗಳ ಕಾಲಾವಕಾಶ ನೀಡಲು ಪ್ರಧಾನ ವ್ಯವಸ್ಥಾಪಕರು-I ರವರಿಗೆ ಅಧಿಕಾರ ನೀಡಿರುತ್ತದೆ. ದಿನಾಂಕ 16.03.1989 ರಂದು ಜರುಗಿದ ನಿಗಮದ 202ನೇ ಮಂಡಳಿ ಸಭೆಯ ನಿರ್ಣಯದನ್ವಯ ಪ್ರದತ್ತವಾದ ಅಧಿಕಾರದಂತೆ ನಿಗದಿತ ಅವಧಿಯಲ್ಲಿ ಮೌಲ್ಯವನ್ನು ಪಾವತಿಸದೇ ಇರುವ ಘಟಕಗಳಿಗೆ, 30 ದಿನಗಳ ಕಾಲಾವಕಾಶ ನೀಡಲು ಮುಖ್ಯ ವ್ಯವಸ್ಥಾಪಕರು(ಕೈವ) ರವರಿಗೆ ಅಧಿಕಾರ ನೀಡಿರುತ್ತದೆ ಹಾಗೂ 90 ದಿನಗಳ ಅವಧಿಗೆ ಮೀರಿ ಕಾಲಾವಧಿ ವಿಸ್ತರಣೆಗೆ ನಿಯಮಗಳನ್ವಯ ಬಡ್ಡಿ ವಿಧಿಸಿ ಕಾಲಾವಕಾಶ ನೀಡಲು ವ್ಯವಸ್ಥಾಪಕ ನಿರ್ದೇಶಕರು ರವರಿಗೆ ಅಧಿಕಾರ ನಿಯೋಜಿಸಲಾಗಿದ್ದು, ನಿಗದಿತ ಅವಧಿ ಮೀರಿ ಪಾವತಿಗಳನ್ನು ಸ್ವೀಕರಿಸುವ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯು ಇನ್ನು ಮುಂದೆ ನಿವೇಶನ / ಮಳಿಗೆ / ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ತಡವಾದ ದಿನಗಳಿಗೆ ಬಡ್ಡಿ ವಿಧಿಸುವ ಅಥವಾ ಜಮೀನಿನ ದರ ಪರಿಷ್ಕರಣೆಯಾಗಿದ್ದಲ್ಲಿ, ಪರಿಷ್ಕೃತ ದರ ವಿಧಿಸುವ ನಿಬಂಧನೆಗೆ ಒಳಪಟ್ಟು, ಕಾಲಾವಧಿ ವಿಸ್ತರಣೆಯ ನೀಡುವ ಬಗ್ಗೆ ಕೆಳಕಂಡಂತೆ ಅಧಿಕಾರ ನಿಯೋಜಿಸಲು ನಿರ್ಣಯಿಸಿತು:

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) 30 ದಿನಗಳವರೆಗೆ
2. ಪ್ರಧಾನ ವ್ಯವಸ್ಥಾಪಕರು(ಕೈವ) 90 ದಿನಗಳವರೆಗೆ
3. ವ್ಯವಸ್ಥಾಪಕ ನಿರ್ದೇಶಕರು ... 90 ದಿನದಿಂದ ಹೆಚ್ಚಿಗೆ ಮತ್ತು 365 ದಿನಗಳವರೆಗೆ

ಮುಂದುವರೆದಂತೆ, ನಿವೇಶನ/ಮಳಿಗೆ/ಇತರೆ ಕಟ್ಟಡಗಳ ಮೌಲ್ಯವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡದೇ ಇರುವ ಘಟಕಗಳಿಗೆ ನೀಡುವ ಕಾಲಾವಧಿ ವಿಸ್ತರಣೆಯನ್ನು ಗರಿಷ್ಟ 365 ದಿನಗಳಿಗೆ ನಿಗದಿಪಡಿಸಲು ಹಾಗೂ ಇನ್ನು ಮುಂದೆ ಯಾವುದೇ ಸಂದರ್ಭಗಳಲ್ಲಿ 365 ದಿನಗಳ ಮೀರಿ ಕಾಲಾವಧಿ ವಿಸ್ತರಣೆ ನೀಡದೇ ಇರಲು ಮಂಡಳಿಯು ನಿರ್ಣಯಿಸಿತು.

v) ಪರ್ಯಾಯ ನಿವೇಶನ /ಮಳಿಗೆಗಳು:

ಇನ್ನು ಮುಂದೆ ಸಂಬಂದಿಸಿದ ವಿಭಾಗದವರು ಮೊದಲು ವಸಾಹತುವಿನ ಭೌತಿಕ ನಕ್ಷೆಯನ್ನು ತಯಾರಿಸಿ ಮತ್ತು ಪ್ರಕಟಿಸಿ, ವಸಾಹತುವಿನ ಭೌತಿಕ ತಪಾಸಣೆಯನ್ನು ನಡೆಸಿದ ನಂತರ ಹಂಚಿಕೆ ಮಾಡಬೇಕು ಅಥವಾ ಸಂಬಂಧಪಟ್ಟ ಏಕ ಗವಾಕ್ಷಿ ಸಮಿತಿ / ರಾಜ್ಯ ಮಟ್ಟದ ಮಳಿಗೆ ಹಂಚಿಕೆ ಸಮಿತಿಗೆ, ಮಳಿಗೆ / ನಿವೇಶನ ಮತ್ತು ಇತರೆ ಕಟ್ಟಡಗಳನ್ನು ಹಂಚಿಕೆ ಮಾಡುವಂತೆ ಕೋರಬೇಕು.

ಮೇಲಿನ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಗೆ.

1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು ನಗರ / ಗ್ರಾಮಾಂತರ/ವಾಲೆ/ವ&ಕಾಲೆ/ವಾಣಿಜ್ಯ/ಉಗ್ರಾಣ/ಬೆಂಗಳೂರು/ಪೀಣ್ಯಾ/ತುಮಕೂರು/ಹರಿಹರ/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು
2. ವ್ಯವಸ್ಥಾಪಕರು(ಕೈವ)/(ಭೂಸ್ವಾಧೀನ), ಕರಾಸಕೈಅನಿನಿ, ವೀರಸಂದ್ರ, ಬೆಂಗಳೂರು.
3. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಬಾಗಲಕೋಟೆ/ಬೀದರ್/ ಮಂಡ್ಯ.
4. ಮಾರಾಟ ವ್ಯವಸ್ಥಾಪಕರು/ಕಿರಿಯ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಸಿರಸಿ/ವಿಜಯಪುರ/ ಹೊಸಪೇಟೆ/ಚಿಕ್ಕಮಗಳೂರು.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ ಮತ್ತು ಹಣಕಾಸು)/(ಆಡಳಿತ ಮತ್ತು ಭೂಸ್ವಾಧೀನ)/(ವಾಣಿಜ್ಯ)/ ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ)/(ಸಮನ್ವಯ)/(ಆಲೆಪ)/(ವಾಣಿಜ್ಯ),(ಯೋಜನೆ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
4. ಕಾರ್ಯಪಾಲಕ ಅಭಿಯಂತರರು-1,2,3 - ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ/(ವಿದ್ಯುತ್)
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
6. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
7. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು.

000277

(211)

KARNATAKA STATE SMALL INDUSTRIES DEVELOPMENT CORPORATION LIMITED
(A Government of Karnataka undertaking)

Registered Office,
Administrative Office Building,
Industrial Estate, Rajajinagar,
BANGALORE-560 044.

Ref. No. IEA:CIR:94

Dt: 19-11-1994

CIRCULAR

Sub: Delegation of powers for allotment of additional land wherever available in and around plots/sheds to the concerned allottee.

Ref: File of M/s. Lakshmi Venkateshwara Oil Industries, N.3 and Spl.M.5/2, I.E. Bijapur.

In the file referred above, DCM (IA) had suggested delegation of powers for allotment of additional land in order to remove administrative problems.

On the above issue, Managing Director has approved the following on 11-11-1994 vide para 537 at N.F. 140.

Wherever additional land is available in and around plots/sheds for allotment to the concerned allottee.

Sl. No.	Land available	Granting authority
1	Upto 50 Smtr.	DCM(IEs)/CM(IEs)Level
2.	above 50 and below 100 Smtr.	GM (F&E)
3.	Above 100 smtr.	Managing Director.

The above approval of Managing Director is sent for information.

GENERAL MANAGER (F AND E)

Copy to:
(1) The Chief Manager (IEs) Zone-I, II & III, Bangalore, Hubli, Mysore.
(2) The Chief Manager (Law) for information.
(3) Chief Manager (IEs) and Co-ordinating officer.
(4) The Dy. Chief Manager (IA)
(5) The Dy. Chief Manager (IEs) Peenya/Rajajinagar/Mysore/Tumkur/Hubli/Gulbarga/Shimoga.
(6) Manager (Project).

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

000276

ಸಂಖ್ಯೆ:ಸಮನ್ವಯ:ಪ.ಜಾ:ಪ.ಪಂ:ಸಹಾಯಧನ:2020/491 ದಿನಾಂಕ 18-06-2020

ಕಛೇರಿ ಆದೇಶ

ವಿಷಯ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನಕ್ಕೆ ಹಾಲಿ ನೀಡುತ್ತಿರುವ ಸಹಾಯಧನವನ್ನು ಶೇಕಡ 50 ರಿಂದ 75ಕ್ಕೆ ಹೆಚ್ಚಿಸಿ ಜಾರಿಗೊಳಿಸುವ ಕುರಿತು.

ಓದಲಾಗಿದೆ:
1. ಕಛೇರಿ ಆದೇಶ ಸಂಖ್ಯೆ ಸಮನ್ವಯ:ಯೋಜನೆ:ಅನುಷ್ಠಾನ:ಪ.ಜಾ:ಪ.ಪಂ: ಹಂಚಿಕೆ:2016/1293 ದಿನಾಂಕ 22.07.2016
2. ಸರ್ಕಾರಿ ಆದೇಶ ಸಂಖ್ಯೆ ಸಿಐ 76 ಸಪ್ರಕೈ 2019, ಬೆಂಗಳೂರು ದಿನಾಂಕ 28.05.2020

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಕಛೇರಿ ಆದೇಶದಲ್ಲಿ, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವಂತೆ, ಸರ್ಕಾರದ ಆದೇಶ ಸಂಖ್ಯೆ ಸಿಐ 81 ಸಿಎಸ್ ಸಿ 2015 ದಿನಾಂಕ 27.06.2016ರಲ್ಲಿ ಆದೇಶಿದಂತೆ, ಹಾಗೂ 22.06.2016ರಂದು ಜರುಗಿದ ನಿಗಮದ 339ನೇ ಮಂಡಳಿ ಸಭೆಯ ನಿರ್ಣಯದಂತೆ, ದಿನಾಂಕ 01.04.2016 ರಿಂದ ಅನ್ವಯವಾಗುವಂತೆ ನಿಗಮದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆ ಮಾಡುವ ಮಳಿಗೆ/ನಿವೇಶನಗಳಿಗೆ ಶೇಕಡ 50ರಷ್ಟು ಸಹಾಯಧನ ವಿಸ್ತರಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ, ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನಗಳಿಗೆ ಹಾಲಿ ಇರುವ ಸಹಾಯಧನದ ಮಿತಿಯನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿರುತ್ತದೆ.

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ಉದ್ಯಮ ಸ್ಥಾಪನೆಗೆ ಗರಿಷ್ಠ 3 ವರ್ಷಗಳ ಕಾಲಾವಕಾಶ ನೀಡುವುದು.
2. ಉದ್ಯಮಿಯನ್ನು ಯಾವುದೇ ಸಂವಿಧಾನದಡಿ ಸ್ಥಾಪಿಸಿದಲ್ಲಿ ಎಲ್ಲಾ ಸ್ಥಾಪಕರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು.
3. ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡಿ ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ನಿಗಮ ಹಾಗೂ ಮಂಡಳಿಯು ಫಲಾನುಭವಿಯಿಂದ ವಸೂಲಾತಿ ಮಾಡಿಕೊಳ್ಳತಕ್ಕದ್ದು.
4. ಕೈಗಾರಿಕಾ ನಿವೇಶನವನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವುದು ಹಾಗೂ ಈ ಅವಧಿಯಲ್ಲಿ ವರ್ಗಾಯಿಸಲು ಸಾಧ್ಯವಿಲ್ಲ.
5. ನಿವೇಶನ (ಎ&ಬಿ ಶೆಡ್ ಸೇರಿ) ನೀಡುವ ದರದಲ್ಲಿ 75% ರಷ್ಟು ಅಥವಾ ಗರಿಷ್ಠ ರೂ. 2.00 ಕೋಟಿ ಸಹಾಯಧನ ಮಿತಿಯೊಳಗೆ ಯಾವುದು ಕಡಿಮೆಯೋ ಅದನ್ನು ನೀಡುವುದು. ಸಹಾಯಧನ ಹೊರತುಪಡಿಸಿ ಉಳಿದ ವೆಚ್ಚವನ್ನು ಫಲಾನುಭವಿಗಳು ಭರಿಸುವುದು.ಸದರಿ ಸೌಲಭ್ಯವನ್ನು ಎಸ್.ಸಿ/ಎಸ್.ಟಿ ಉದ್ಯಮಿದಾರರಿಗೆ ಮೀಸಲಿರಿಸಿರುವ ಮಳಿಗೆಗಳಿಗೂ ವಿಸ್ತರಿಸುವುದು.

..2..

6. ಒಂದು ಉದ್ಯಮಿಗೆ ಗರಿಷ್ಠ 2 ಎಕರೆ ಕೈಗಾರಿಕಾ ನಿವೇಶನಕ್ಕೆ ಶೇ.75 ರಂತೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವುದು. ಒಬ್ಬರೇ ಉದ್ಯಮಿಯು ಹಲವು ಕಂಪನಿಗಳಿಗೆ ಪ್ರವರ್ತಕರಾಗಿದ್ದಲ್ಲಿ, ಒಂದು ಬಾರಿ ಮಾತ್ರ ಈ ಸೌಲಭ್ಯ ನೀಡುವುದು ಮತ್ತು ಒಂದು ಕುಂಟುಂಬದಲ್ಲಿ ಒಬ್ಬರಿಗೆ ಮಾತ್ರ ಈ ಸೌಲಭ್ಯ ನೀಡುವುದು.

7. ಶೇ. 75% ರಷ್ಟು ಸಹಾಯಧನದ ಯೋಜನೆಯು ಹೊಸದಾಗಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಆದರೆ, 2019-20ನೇ ಸಾಲಿನಲ್ಲಿ 50% ಸಹಾಯಧನ ಯೋಜನೆಯಡಿ ಈಗಾಗಲೇ ಕೈಗಾರಿಕಾ ನಿವೇಶನಗಳನ್ನು ಪಡೆದು ನಿಯಮಾನುಸಾರ ಒಡಂಬಡಿಕೆ ಮತ್ತು ಪಾವತಿ ಇತ್ಯಾದಿ ಮಾಡಿರುವ ಪ್ರಕರಣಗಳನ್ನು ಅದೇ ಮಿತಿಯಲ್ಲಿ ಮುಂದುವರೆಸುವುದು.

8. ಭೂ ಸಹಾಯಧನ ಹೊರತುಪಡಿಸಿದ ಇತರೆ ಸಹಾಯಧನ / ರಿಯಾಯಿತಿಗಳನ್ನು ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಯ ಪ್ರಕಾರ ನೀಡುವುದು.

ಇಲಾಖೆಯು/ ಜಾರಿಗೊಳಿಸುವ ಸಂಸ್ಥೆಯು ಎಸ್ ಸಿಪಿ/ಟಿಎಸ್ ಪಿ ಯೋಜನೆಯಡಿ ಸದರಿ ಯೋಜನೆಗೆ ಆಯಾ ವರ್ಷ ಲಭ್ಯವಿರುವ ಆಯವ್ಯಯಕ್ಕೆ ಅನುಗುಣವಾಗಿ ಫಲಾನುಭವಿ ಘಟಕಗಳ ಸಂಖ್ಯೆಯನ್ನು ನಿರ್ಬಂಧಿಸುವುದು ಮತ್ತು ಮುಂಬರುವ ವರ್ಷಗಳಲ್ಲಿ ಆಯವ್ಯಯವನ್ನು ನಿರೀಕ್ಷಿಸಿ ಸದರಿ ಯೋಜನೆಗೆ ವೆಚ್ಚ (committed liability) ಉಂಟುಮಾಡಬಾರದು.

ನಿಗಮವು ಸರ್ಕಾರದಿಂದ ಹೊರಡಿಸುವ ಸರ್ಕಾರಿ ಆದೇಶಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

<u>ನಿಗಮದ ಆದೇಶ ಸಂಖ್ಯೆ:ಸಮನ್ವಯ:ಪ.ಜಾ:ಪ.ಪಂ:ಸಹಾಯಧನ:2020, ಬೆಂಗಳೂರು</u>
<u>ದಿನಾಂಕ 18-06-2020</u>

ಸರ್ಕಾರಿ ಆದೇಶವನ್ನು ಯಥಾವತ್ತಾಗಿ ನಿಗಮದಲ್ಲಿ ಜಾರಿಗೊಳಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮತದಿಂದ (ಕೆ.ಎಸ್.ಎಸ್.ಐ.ಡಿ.ಸಿ), ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನಗಳಿಗೆ ಹಾಲಿ ನೀಡುವ ಸಹಾಯಧನ ಮಿತಿಯನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಶೇಕಡ 50 ರಿಂದ ಶೇಕಡ 75ಕ್ಕೆ ಹೆಚ್ಚಿಸಿ ಜಾರಿಗೊಳಿಸಲಾಗಿದೆ.

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನಗಳನ್ನು ಮೂಲಭೂತ ಸೌಕರ್ಯ ಕಲ್ಪಿಸಿ ಪೂರ್ಣ ಪ್ರಮಾಣದಲ್ಲಿ ಉದ್ಯಮ ಸ್ಥಾಪನೆಗೆ ಗರಿಷ್ಠ 3 ವರ್ಷಗಳ ಕಾಲಾವಕಾಶ ನೀಡುವುದು.

2. ಉದ್ಯಮಿಯನ್ನು ಯಾವುದೇ ಸಂವಿಧಾನದಡಿ ಸ್ಥಾಪಿಸಿದಲ್ಲಿ ಎಲ್ಲಾ ಸ್ಥಾಪಕರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

3. ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ ನಂತರ ನಿವೇಶನವನ್ನು ಫಲಾನುಭವಿಗೆ ಸ್ವಾಧೀನ ಪತ್ರದ ಮೂಲಕ ನೀಡಿ ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಫಲಾನುಭವಿಯಿಂದ ವಸೂಲಾತಿ ಮಾಡುವುದು.

4. ಕೈಗಾರಿಕಾ ನಿವೇಶನವನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡುವುದು ಹಾಗೂ ಈ ಅವಧಿಯಲ್ಲಿ ವರ್ಗಾಯಿಸಲು ಸಾಧ್ಯವಿರುವುದಿಲ್ಲ.

5. ನಿವೇಶನ (ಎ&ಬಿ ಶೆಡ್ ಸೇರಿ) ನೀಡುವ ದರದಲ್ಲಿ 75% ರಷ್ಟು ಅಥವಾ ಗರಿಷ್ಠ ರೂ. 2.00 ಕೋಟಿ ಸಹಾಯಧನ ಮಿತಿಯೊಳಗೆ ಯಾವುದು ಕಡಿಮೆಯೋ ಅದನ್ನು ನೀಡುವುದು. ಸಹಾಯಧನ ಹೊರತುಪಡಿಸಿ ಉಳಿದ ವೆಚ್ಚವನ್ನು ಫಲಾನುಭವಿಗಳು ಭರಿಸುವುದು. ಸದರಿ ಸೌಲಭ್ಯವನ್ನು ಎಸ್.ಸಿ/ಎಸ್.ಟಿ ಉದ್ಯಮಿದಾರರಿಗೆ ಮೀಸಲಿರಿಸಿರುವ ಮಳಿಗೆಗಳಿಗೂ ವಿಸ್ತರಿಸುವುದು.

6. ಒಂದು ಉದ್ಯಮಿಗೆ ಗರಿಷ್ಠ 2 ಎಕರೆ ಕೈಗಾರಿಕಾ ನಿವೇಶನಕ್ಕೆ ಶೇ.75 ರಂತೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವುದು. ಒಬ್ಬರೇ ಉದ್ಯಮಿಯು ಹಲವು ಕಂಪನಿಗಳಿಗೆ ಪ್ರವರ್ತಕರಾಗಿದ್ದಲ್ಲಿ, ಒಂದು ಬಾರಿ ಮಾತ್ರ ಈ ಸೌಲಭ್ಯ ನೀಡುವುದು ಮತ್ತು ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಈ ಸೌಲಭ್ಯ ನೀಡುವುದು.

7. ಶೇ. 75% ರಷ್ಟು ಸಹಾಯಧನದ ಯೋಜನೆಯು ಹೊಸದಾಗಿ ಕೈಗಾರಿಕಾ ನಿವೇಶನ ಹಂಚಿಕೆ ಮಾಡುವ ಪ್ರಕರಣಗಳಿಗೆ ಅನ್ವಯಿಸುತ್ತದೆ. ಆದರೆ, 2019-20ನೇ ಸಾಲಿನಲ್ಲಿ 50% ಸಹಾಯಧನ ಯೋಜನೆಯಡಿ ಈಗಾಗಲೇ ಕೈಗಾರಿಕಾ ನಿವೇಶನಗಳನ್ನು ಪಡೆದು ನಿಯಮಾನುಸಾರ ಒಡಂಬಡಿಕೆ ಮತ್ತು ಪಾವತಿ ಇತ್ಯಾದಿ ಮಾಡಿರುವ ಪ್ರಕರಣಗಳನ್ನು ಅದೇ ಮಿತಿಯಲ್ಲಿ ಮುಂದುವರಿಸುವುದು

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೂ ಜಾರಿಯಲ್ಲಿರುತ್ತದೆ ಮತ್ತು ಮೇಲೆ ಸೂಚಿಸಿರುವ ಎಲ್ಲಾ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಮಹೇಶ್ ಬಿ ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

ಗೆ,

1] ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ)/(ವ&ಕಾಲೆ)/(ವಾಲೆ)/(ಸಿಬ್ಬಂದಿ)/(ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ

2] ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಪೀಣ್ಯಾ/ದಾವಣಗೆರೆ/ಮಂಗಳೂರು/ಬಳ್ಳಾರಿ

ಪ್ರತಿ:

1] ಪ್ರಧಾನ ವ್ಯವಸ್ಥಾಪಕರು(ಕೈವ)/(ಆ&ಭೂ)/(ವಾಣಿಜ್ಯ)/(ಸಾ.ಸಂ)(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು

2] ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು

3] ಉಪ ಪ್ರಧಾನ ವ್ಯವಸ್ಥಾಪಕರು ವಲಯ-1 / ವಲಯ-2/(ಹಣಕಾಸು)/(ವಾಣಿಜ್ಯ)/(ಆ.ಲ.ಪ), ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ

4] ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.

5] ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್ ಸೈಟಿನಲ್ಲಿ ಪ್ರಕಟಿಸಲು ಸೂಚಿಸಿದೆ.

6] ಅಧ್ಯಕ್ಷರ ಅಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು

7] ವ್ಯ.ನಿ.ರವರ ಅಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು

ಉದ್ದೇಶ	347ನೇ ಮಂಡಳ ಸಭೆ
ದಿನಾಂಕ	27-09-2017
ಕಡತದ ಸಂಖ್ಯೆ	ಸಮನ್ವಯ:ಕೈವ:ಭೂದರ:ನಿಗದಿ:2016-18/2016
ಪ್ರಸ್ತಾವನೆ ಸಿದ್ಧಪಡಿಸಿದವರು	ಸ.ಪ್ರ.ವ್ಯ(ಸಮನ್ವಯ)-ಪ್ರ / ಪ್ರಧಾನ ವ್ಯವಸ್ಥಾಪಕರು(ಸಮನ್ವಯ)
ಮಂಡನೆಗೆ ಅನುಮೋದಿಸಿದವರು	ವ್ಯವಸ್ಥಾಪಕ ನಿರ್ದೇಶಕರು

ಠಿ. ಕಾರ್ಯಸೂಚಿ ಸಂಖ್ಯೆ 347/ 08

ವಿಷಯ: ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನಿನ ಭೂದರ ಪರಿಷ್ಕರಣೆ ಬಗ್ಗೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಮಂಡಳಯು ಕಾಲ ಕಾಲಕ್ಕೆ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನಿನ ಭೂದರಗಳನ್ನು ನಿಗದಿಪಡಿಸುತ್ತಿದೆ. ಅದರಂತೆ, ದಿನಾಂಕ 01.03.2005 ಹಾಗೂ 25.05.2005ರಂದು ಜರುಗಿದ ನಿಗಮ 293 ಮತ್ತು 294ನೇ ಮಂಡಳ ಸಭೆಯಲ್ಲಿ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನಿನ ಭೂದರಗಳನ್ನು ನಿಗದಿಪಡಿಸುವ ಬಗ್ಗೆ ಕಾರ್ಯನೀತಿ ನಿರ್ಣಯವನ್ನು ಕೈಗೊಂಡು ಅದರಂತೆ, 2005 ರಿಂದ ನಂತರ ಹಾಗೂ ಈವರೆವಿಗೂ ಸದರಿ ಕಾರ್ಯನೀತಿ ನಿರ್ಣಯದಂತೆ ನಿವೇಶನ/ಜಮೀನಿನ ಭೂದರಗಳನ್ನು ನಿಗದಿಪಡಿಸುತ್ತಿದೆ. ಅದರಂತೆ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ನಿವೇಶನ/ಜಮೀನಿನ ಭೂದರವನ್ನು ನಿಗಮದ ಮಂಡಳಯ ಮಾರ್ಗಸೂಚಿಗಳನ್ವಯ/ನಿರ್ದೇಶಗಳನ್ವಯ ಹಾಗೂ ಇತ್ತೀಚಿನ ಮಾರ್ಗಸೂಚಿಗಳ ಆಧಾರದ ಮೇಲೆ 2016-18ರ ಸಾಲಿಗೆ ನಿಗದಿಪಡಿಸಿ ಸೂಕ್ತ ಪ್ರಸ್ತಾವನೆಯನ್ನು ದಿನಾಂಕ 03.12.2016 ರಂದು ಜರುಗಿದ ಅಡಳಿತ ಮಂಡಳ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಸದರಿ 342ನೇ ಮಂಡಳ ಸಭೆಯಲ್ಲಿ ಮಂಡಳಯು ಸದರಿ ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ, ಕೆಲವೊಂದು ಪ್ರಚಲಿತ ವಿದ್ಯಮಾನಗಳನ್ನು ಘಣನೆಗೆ ತೆಗೆದುಕೊಂಡು ಪ್ರಸ್ತುತ 2014-16ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ನಿವೇಶನ/ಜಮೀನಿನ ಭೂದರವನ್ನೇ ದಿನಾಂಕ 01.10.2016 ರಿಂದ 30.09.2018 ಮುಂದುವರೆಸುವಂತೆ ನಿರ್ಣಯಿಸಿತು.

3) ಸರ್ಕಾರಿ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ಬೆಂಗಳೂರು ದಿನಾಂಕ 22-07-2015
4) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 08-10-2015.
5) ದಿನಾಂಕ 14-01-2016ರ ನಿಗಮದ 337ನೇ ಮಂಡಳ ಸಭೆಯ ನಡವಳಿಗಳು.
6) ಈ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಕೈಪ:ವರ್ಗೀಕರಣ:ಹೊಕೈನೀತಿ: 2014-19/2016/4304 ದಿನಾಂಕ 15.02.2016.

ಪ್ರಸ್ತಾವನೆ:

ಉಲ್ಲೇಖ (2)ರಲ್ಲಿ ಓದಲಾದ ನಿಗಮದ ಕಛೇರಿ ಆದೇಶದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರುಗಳಿಗೆ ನಿಗಮದ ವತಿಯಿಂದ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಎಲ್ಲಾ ಮಳಿಗೆ / ನಿವೇಶನಗಳ ಮೂಲ ಬೆಲೆಯ ಶೇಕಡ 40ರಷ್ಟು ಗರಿಷ್ಠ ರೂ.5.00 ಲಕ್ಷಗಳಿಗೆ ಮಿತಿಗೊಳಪಟ್ಟು ನಿಗಮದ ನಿಧಿಯಿಂದಲೇ ಸಹಾಯಧನವನ್ನು ನೀಡಲಾಗುತ್ತಿದೆ ಹಾಗೂ ಈ ದಿಸೆಯಲ್ಲಿ ನಿಗಮದಿಂದ ವ್ಯಯಿಸಲ್ಪಟ್ಟಿರುವ ಸಹಾಯಧನ ಮೊಬಲಗನ್ನು ತದನಂತರದಲ್ಲಿ ಸರ್ಕಾರದ ವತಿಯಿಂದ ನಿಗಮಕ್ಕೆ ಮರು-ಪಾವತಿ ಪಡೆದುಕೊಳ್ಳಲಾಗುತ್ತಿದೆ.

2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾದಂತೆ ಹಾಗೂ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ಅವಕಾಶ ಕಲ್ಪಿಸಿರುವಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹೆಚ್ಚುವರಿ ಸಹಾಯಧನ ನೀಡುವ ಕುರಿತು ಸರ್ಕಾರವು ಅನುಕ್ರಮವಾಗಿ ಉಲ್ಲೇಖ (3) ಹಾಗೂ (4)ರಲ್ಲಿ ಹೊರಡಿಸಿರುವ ಸರ್ಕಾರಿ ಆದೇಶಗಳಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಹಂಚಿಕೆ ಮಾಡಲ್ಪಡುವ ಮಳಿಗೆ / ನಿವೇಶನಗಳ ಮೇಲೆ ರಿಯಾಯಿತಿಗಳನ್ನು ನೀಡಲು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ವಿಷಯದ ಬಗ್ಗೆ ಪ್ರಸ್ತಾವನೆಗಳನ್ನು ದಿನಾಂಕ 14-01-2016 ರಂದು ಜರುಗಿದ ನಿಗಮದ 337ನೇ ಮಂಡಳ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

..2..

ಮಂಡಳಿಯು, ಕಾರ್ಯಸೂಚಿಯಲ್ಲಿ ಮಂಡಿಸಲಾಗಿದ್ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಮಳಿಗೆ / ನಿವೇಶನಗಳಿಗೆ ಹೆಚ್ಚುವರಿ ಸಹಾಯಧನ ನೀಡುವ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿದೆ ಹಾಗೂ ಸಹಾಯಧನದ ಮೊಬಲಗನ್ನು ಸರ್ಕಾರದಿಂದ ಮರು-ಪಾವತಿ ಪಡೆಯುವ ನಿಟ್ಟಿನಲ್ಲಿ ಕಾರ್ಯಸೂಚಿಯಲ್ಲಿರುವಂತೆ ನಿಗಮದ ವತಿಯಿಂದ ಸಹಾಯಧನ ವಿಸ್ತರಿಸಲು ಸಹ ನಿರ್ಣಯಿಸಿತು. ಅದರಂತೆ, ಈ ಕೆಳಗಿನ ಆದೇಶವನ್ನು ಹೊರಡಿಸಲಾಗಿದೆ.

ಆ ದೇ ಶ

1] ಉಲ್ಲೇಖ (3) ಹಾಗೂ (4)ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಹಾಗೂ ಉಲ್ಲೇಖ (1) ಮತ್ತು (2)ರಲ್ಲಿ ಓದಲಾದ ಕಛೇರಿ-ಆದೇಶದಲ್ಲಿ ವಿಧಿಸಲ್ಪಟ್ಟಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಇನ್ನು ಮುಂದೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲಾಗುವ ಎಲ್ಲಾ ಮಳಿಗೆ / ನಿವೇಶನಗಳ ಮೇಲೆ ಈ ಕೆಳಕಂಡಂತೆ ಸಹಾಯಧನದ ರಿಯಾಯಿತಿಗಳನ್ನು ವಿಸ್ತರಿಸಲು ಆದೇಶಿಸಲಾಗಿದೆ.

ಅ) ಹೈದ್ರಾಬಾದ್-ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿ ಇನ್ನುಳಿದ ಪ್ರದೇಶ:	
ವಲಯ 1 ಮತ್ತು 2	ಶೇ. 40 – ಗರಿಷ್ಠ ಮಿತಿ ರೂ.15 ಲಕ್ಷಗಳು
ವಲಯ 3	ಶೇ. 30 – ಗರಿಷ್ಠ ಮಿತಿ ರೂ.25 ಲಕ್ಷಗಳು
ವಲಯ 4	ಶೇ. 25 – ಗರಿಷ್ಠ ಮಿತಿ ರೂ.35 ಲಕ್ಷಗಳು
ಆ) ಹೈದ್ರಾಬಾದ್ – ಕರ್ನಾಟಕ ಪ್ರದೇಶ:	
ವಲಯ 1	ಶೇ. 40 – ಗರಿಷ್ಠ ಮಿತಿ ರೂ.25 ಲಕ್ಷಗಳು
ವಲಯ 2	ಶೇ. 40 – ಗರಿಷ್ಠ ಮಿತಿ ರೂ.20 ಲಕ್ಷಗಳು

ಈ ರಿಯಾಯಿತಿಯ ಮರು-ಪಾವತಿ ಮತ್ತು ರಿಯಾಯಿತಿ ದರ ನಿಗದಿಪಡಿಸಲು ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು. ಈ ರಿಯಾಯಿತಿಗಳು ದಿನಾಂಕ 01-10-2014 ರಿಂದ ಅನ್ವಯವಾಗುತ್ತವೆ.

2] ಇನ್ನು ಮುಂದೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ / ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಅರ್ಹ ಹೆಚ್ಚುವರಿ ಸಹಾಯಧನವನ್ನು ಮೊದಲಿಗೆ ನಿಗಮದ ನಿಧಿಯಿಂದಲೇ ವಿಸ್ತರಿಸಿ, ತದನಂತರದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವಂತೆಯೇ ನಿಗಮವು ವ್ಯಯಿಸಿರುವ ಸಹಾಯಧನದ ಬಾಬ್ತು ಮೊಬಲಗನ್ನು ಗಿರಿಜನ ಉಪ-ಯೋಜನೆ (T.S.P) ಹಾಗೂ ವಿಶೇಷ ಘಟಕ ಯೋಜನೆಯಡಿಯಲ್ಲಿ (S.C.P) ಸರ್ಕಾರದಿಂದ ಮರು-ಪಾವತಿ ಪಡೆದುಕೊಳ್ಳತಕ್ಕದ್ದು.

3] ಸದರಿ ಹಂಚಿಕೆಗಳು ನಿಗಮದ ಹಂಚಿಕೆ ನಿಯಮಗಳು ಹಾಗೂ ಸರ್ಕಾರದ ಆದೇಶಗಳಲ್ಲಿನ ಮಾರ್ಗಸೂಚಿಗಳಿಗೆ ಅನುಗುಣವಾಗಿರತಕ್ಕದ್ದು.

ಕರಾಸಕೈಅನಿನಿ

4) ನಿಗಮದ ವತಿಯಿಂದ ಒಂದೇ ಕೈಗಾರಿಕಾ ಘಟಕಕ್ಕೆ / ಉದ್ಯಮದಾರರಿಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಮಳಿಗೆ/ನಿವೇಶನಗಳನ್ನು ಹಂಚಿಕೆ ಮಾಡಿದ್ದಲ್ಲಿ. ನಿಗಮವು ನಿಗಧಿಪಡಿಸಿರುವ ಆ ಎಲ್ಲಾ ಮಳಿಗೆಗಳ / ನಿವೇಶನಗಳ ಒಟ್ಟು ಮೌಲ್ಯದ ಮೇಲೆ ಆದೇಶದ ಕಂಡಿಕೆ (1)ರಲ್ಲಿ ತಿಳಿಸಿರುವ ವಲಯವಾರು ವಿವರಗಳ ಪಟ್ಟಿಯಂತೆ ಸಹಾಯಧನವನ್ನು ಗರಿಷ್ಠ ಮಿತಿಗೆ ಒಳಪಟ್ಟು ಮಾತ್ರ ಮಂಜೂರು ಮಾಡತಕ್ಕದ್ದು. ಯಾವುದೇ ಕಾರಣದಿಂದಾಗಲೀ ಒಂದು ಬಾರಿಗಿಂತ ಮೇಲ್ಪಟ್ಟು ಸದರಿ ರಿಯಾಯಿತಿಗಳನ್ನು ಮಂಜೂರು ಮಾಡುವಂತಿಲ್ಲ.

5) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಂಚಿಕೆದಾರರುಗಳು ನಿಗಮದಿಂದ ಈಗಾಗಲೇ ಪಡೆದಿರುವ ಸಹಾಯಧನವನ್ನು ತಪ್ಪದೇ ಪರಿಗಣನೆಗೆ ತಗೆದುಕೊಂಡು ಹೊಸ ಕೈಗಾರಿಕಾ ನೀತಿ 2014-19ರಲ್ಲಿ ಸೂಚಿಸಿರುವಂತೆ ಸಹಾಯಧನದ ಗರಿಷ್ಠ ಮಿತಿಯನ್ನು ನಿರ್ಧರಿಸತಕ್ಕದ್ದು.

6) ನಿಗಮದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಂಚಿಕೆದಾರರಿಗೆ ಪರಿಷ್ಕೃತ ಸಹಾಯಧನವನ್ನು ವಿಸ್ತರಿಸುವ ಸಂದರ್ಭದಲ್ಲಿ ಉಲ್ಲೇಖ (5) ರ ಕಛೇರಿ ಆದೇಶದಲ್ಲಿ ಸಮೂದಿಸಿರುವಂತೆ ಸಂಬಂಧಪಟ್ಟ ಕೈಗಾರಿಕಾ ವಸಾಹತುಗಳನ್ನು ತಪ್ಪದೇ ಆಯಾ ವಲಯಗಳಲ್ಲಿಯೇ ಗುರುತಿಸಿಕೊಳ್ಳತಕ್ಕದ್ದು.

ಈ ಆದೇಶವು ತಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಹಾಗೂ ಮೇಲೆ ತಿಳಿಸಿರುವ 'ಮಾರ್ಗಸೂಚಿ'ಗಳನ್ನು ತಪ್ಪದೇ ಕಟ್ಟುನಿಟ್ಟಾಗಿ [scrupulously] ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಭೂಸ್ವಾಧೀನ)/(ಕೈವ ಮತ್ತು ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು, ಹುಬ್ಬಳ್ಳಿ.
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಟಿವ, ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ರಾಜಾಜಿನಗರ (ನ)/ (ಗ್ರಾ)/ ವಾ.ಲಿ(ಪ್ರ) / ವ&ಕಾಲಿ(ಪ್ರ)/ ಸಿಬ್ಬಂದಿ/ಸೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು/ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿ), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು.(ಭೂಸ್ವಾಧೀನ/ಸಾ.ಸಂ) / (ಸಮನ್ವಯ) / (ಕಾನೂನು), / ಬೆಂ-ನಗರ / ಸಮನ್ವಯ, ಕರಾಸಕೈಅನಿನಿ, ಬೆಂಗಳೂರು/ ವೀರಸಂಪ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

ಪ್ರತಿಗಳು :

1. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ:ಪ.ಜಾ:ಪ.ಪಂ:ಹಂಚಿಕೆ:2016/1293 ದಿನಾಂಕ 14.07.2016

22 JUL 2016

ಕಛೇರಿ ಆದೇಶ

ವಿಷಯ: ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನ / ಶೆಡ್‌ಗಳನ್ನು ಹಂಚಿಕೆ ಮಾಡುವ ಕುರಿತು.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 22.07.2015
2) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 08.10.2015
3) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾತಿ:ಪ.ಪಂ.ಮ.ನಿ.ಹಂ:ಸಧನ: 2016/4450 ದಿನಾಂಕ 26.02.2016
4) ಅಧಿಕ ನಿರ್ದೇಶಕರು(ಜಿಕೈಕೇ), ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ ಕೈವಾಇ:ಜಿಕೈಕೇ: ಸಿ-2:ವಿಘಯೋ1:ಗಿಉಯೋ: 2016-17 ದಿನಾಂಕ 11.04.2016
5) ದಿನಾಂಕ 22.06.2016ರ ನಿಗಮದ 339ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
6) ಸರ್ಕಾರಿ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2015 ಬೆಂಗಳೂರು, ದಿನಾಂಕ 27.06.2016

ಪ್ರಸ್ತಾವನೆ:

ಕರ್ನಾಟಕ ಸರ್ಕಾರದ 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾದಂತೆ ಹಾಗೂ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರಲ್ಲಿ ಅವಕಾಶ ಕಲ್ಪಿಸಿರುವಂತೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹೆಚ್ಚುವರಿ ಸಹಾಯಧನ ನೀಡುವ ಕುರಿತು ಸರ್ಕಾರವು ಅನುಕ್ರಮವಾಗಿ ಹೊರಡಿಸಿರುವ ದಿನಾಂಕ 22.07.2015ರ ಸರ್ಕಾರದ ಆದೇಶ ಸಂಖ್ಯೆ ಸಿಐ:147:ಸಿಎಸ್‌ಸಿ:2015 ಬೆಂಗಳೂರು ಹಾಗೂ ದಿನಾಂಕ 08.10.2015ರ ಸೇರ್ಪಡೆ ಆದೇಶ ಸಂಖ್ಯೆ ಸಿಐ:147:ಸಿಎಸ್‌ಸಿ:2015ರಲ್ಲಿ ನಮೂದಿಸಿರುವಂತೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆ.ಎಸ್.ಎಸ್.ಐ.ಡಿ.ಸಿ.) ಹಂಚಿಕೆ ಮಾಡಲ್ಪಡುವ ಮಳಿಗೆಗಳ / ನಿವೇಶನಗಳ ಮೇಲೆ ರಿಯಾಯಿತಿಗಳನ್ನು ನೀಡಲು ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ, ಸದರಿ ವಿಷಯದ ಬಗ್ಗೆ ಸೂಕ್ತ ಪ್ರಸ್ತಾವನೆಗಳನ್ನು ದಿನಾಂಕ 14.01.2016ರಂದು ಜರುಗಿದ ನಿಗಮದ 337ನೇ ಆಡಳಿತ ಮಂಡಳಿ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ, ಹೆಚ್ಚುವರಿ ಸಹಾಯಧನ ನೀಡಿಕೆ ಬಗ್ಗೆ ದಿನಾಂಕ 26.02.2016ರಂದು ಕಛೇರಿ ಆದೇಶವನ್ನು ಹೊರಡಿಸಲಾಗಿದೆ.

ಏತನ್ಮಧ್ಯೆ ಕರ್ನಾಟಕ ಸರ್ಕಾರದ 2016-17ರ ಆಯವ್ಯಯ ಭಾಷಣ ಕಂಡಿಕೆ 378(1)ರಲ್ಲಿ ಈ ಕೆಳಕಂಡಂತೆ ಘೋಷಣೆಯಾಗಿರುತ್ತದೆ.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ಯಮಿಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಹಾಗೂ ಕೈಗಾರಿಕಾ ಸಾಮರ್ಥ್ಯ ತುಂಬಲು ಕೆಳಕಂಡ ಕ್ರಮಗಳನ್ನು ಪ್ರಸ್ತಾವಿಸಿದೆ.

"ಶೇ.50 ದರದಲ್ಲಿ ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಶೆಡ್ ಮತ್ತು ಭೂಮಿಯನ್ನು ಹಂಚಿಕೆ ಮಾಡಲಾಗುವುದು. ಭೂಮಿ ಮತ್ತು ಶೆಡ್‌ಗಳ ಮೌಲ್ಯದ ಪಾವತಿಯನ್ನು ಕಂತುಗಳಲ್ಲಿ ಪರಿಗಣಿಸಲಾಗುವುದು. ಇದರಲ್ಲಿ ಶೇ.50 ರಷ್ಟನ್ನು ಮೊದಲಿಗೆ ಪಾವತಿಸಬೇಕಾಗಿದ್ದು, ಬಾಕಿ ಶೇ.50 ರಷ್ಟನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ."

..2..

ಅದರಂತೆ ಸದರಿ ವಿಷಯದ ಪ್ರಸ್ತಾವನೆ ಸಲ್ಲಿಕೆ ಸಂಬಂಧದ ಸಾಧಕ-ಬಾಧಕಗಳ ಬಗ್ಗೆ ನಿಗಮದ ನಿಯಮಾವಳಿಗಳನ್ವಯ ಕೂಲಂಕಷ ರೀತಿಯಲ್ಲಿ ಪರಿಶೀಲಿಸಿದ ತದನಂತರದಲ್ಲಿ ಸೂಕ್ತ ಪ್ರಸ್ತಾವನೆಗಳನ್ನು ದಿನಾಂಕ 22.06.2016 ರಂದು ಜರುಗಿದ ನಿಗಮದ 339ನೇ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಳಿಯ ಸಹಮತ ಹಾಗೂ ಒಪ್ಪಿಗೆ / ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಮಂಡಳಿಯು ಪ್ರಸ್ತಾವನೆಯನ್ನು ಒಪ್ಪಿತು ಹಾಗೂ ಉಳಿದ ಶೇ. 50ರ ಮೊತ್ತವನ್ನು ಸರ್ಕಾರದಿಂದ ಮರುಪಾವತಿ ಪಡೆಯಬೇಕು ಎಂದು ನಿರ್ಣಯಿಸಿತು ಹಾಗೂ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲು ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿತು.

ಮಂಡಳಿಯ ನಿರ್ಣಯದನ್ವಯ ಸರ್ಕಾರಕ್ಕೆ ಪತ್ರವನ್ನು ಬರೆಯಲು ಉದ್ದೇಶಿಸಲಾಗಿತ್ತು. ಏತನ್ಮಧ್ಯೆ, ಸರ್ಕಾರವು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (6)ರಂತೆ ಸರ್ಕಾರಿ ಆದೇಶವನ್ನು ಹೊರಡಿಸಿ, 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿರುವಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಡಿಸಿ ಹಂಚಿಕೆ ಮಾಡಲು ಅನುಮೋದನೆ ನೀಡಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಯ ಶೇ. 50ರ ರಿಯಾಯಿತಿ ಮೌಲ್ಯವನ್ನು ಸರ್ಕಾರದಿಂದ ಸಂಬಂಧಿಸಿದ ಸಂಸ್ಥೆಗಳಿಗೆ (ಕೆ.ಎಸ್.ಎಸ್.ಐ.ಡಿ.ಸಿ.) ಪಾವತಿ ಮಾಡುವುದು.
- ಈ ಶೇ.50ರ ರಿಯಾಯಿತಿ ಮೌಲ್ಯವನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ (SCSP/TSP) ಅಡಿಯಲ್ಲಿ ಹಂಚಿಕೆಯಾಗುವ ಆಯವ್ಯಯದಿಂದ ಭರಿಸತಕ್ಕದ್ದು ಮತ್ತು SCSP/TSP ಯೋಜನೆಯಡಿಯಲ್ಲಿ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.
- ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ / ಮಳಿಗೆಯ ಶೇ. 25ರಷ್ಟು ಮೌಲ್ಯವನ್ನು ಮೊದಲು (Upfront) ಸಂಬಂಧಿಸಿದ ಸಂಸ್ಥೆಗಳು ಪಡೆದುಕೊಳ್ಳತಕ್ಕದ್ದು. ನಂತರ, ಉಳಿದ ಶೇ. 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಸೂಕ್ತ ಬಡ್ಡಿ ದರದೊಂದಿಗೆ ವಸೂಲಾತಿ ಮಾಡಿಕೊಳ್ಳತಕ್ಕದ್ದು.

ನಿಗಮವು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಹಾಗೂ ಮಂಡಳಿಯ ನಿರ್ದೇಶನಗಳನ್ನು ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ವಿಷಯದ ಬಗ್ಗೆ ಈಗಾಗಲೇ ಮಂಡಳಿಯು ಸೂಕ್ತ ನಿರ್ಣಯವನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆ.ಎಸ್.ಎಸ್.ಐ.ಡಿ.ಸಿ.) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆಗಳಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಹಂಚಿಕೆ ಮಾಡಲು ಆದೇಶಿಸಲಾಗಿದೆ.

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಯಾಗುವ ಕೈಗಾರಿಕಾ ನಿವೇಶನ / ಮಳಿಗೆಯ ಶೇ 50ರ ರಿಯಾಯಿತಿ ಮೌಲ್ಯವನ್ನು ಸರ್ಕಾರದಿಂದ ನಿಗಮಕ್ಕೆ (ಕೆ.ಎಸ್.ಎಸ್.ಐ.ಡಿ.ಸಿ) ಪಾವತಿ ಮಾಡತಕ್ಕದ್ದು.

..3..

- ನಿಗಮದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಅರ್ಹ ಶೇಕಡ 50ರಷ್ಟು ರಿಯಾಯಿತಿಯನ್ನು ಮೊದಲಿಗೆ ನಿಗಮದ ನಿಧಿಯಿಂದಲೇ ಎಸ್ತರಿಸಿ, ತದನಂತರ ಪ್ರಸ್ತುತ ಚಾಲ್ತಿಯಲ್ಲಿರುವಂತೆಯೇ ನಿಗಮವು ಈ ಸಂಬಂಧ ವ್ಯಯಿಸಿರುವ ಶೇ.50 ರಿಯಾಯಿತಿ ಬಾಬ್ತು ಮೊಬಲಗನ್ನು ಗಿರಿಜನ ಉಪಯೋಜನೆ (T.S.P), ವಿಶೇಷ ಘಟಕ ಯೋಜನೆ (S.C.P) ಅಥವಾ ಸರ್ಕಾರದ ಮತ್ತ್ಯಾವುದೇ ಯೋಜನೆಯಡಿ ಹಿಂಭರ್ಥಿ ನೀಡುವ ನಿಬಂಧನೆಗೊಳಪಟ್ಟಿರುತ್ತದೆ ಹಾಗೂ ಈ ಕಾರ್ಯಕ್ರಮಕ್ಕೆ ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಹಂಚಿಕೆ ಪಡೆದ ಉದ್ದಿಮೆದಾರರಿಂದ ನಿವೇಶನ / ಮಳಿಗೆಯ ಶೇಕಡಾ 25ರಷ್ಟು ಮೌಲ್ಯವನ್ನು ಮೊದಲು (Upfront) ನಿಗಮವು ಪಡೆದುಕೊಳ್ಳತಕ್ಕದ್ದು ನಂತರ, ಉಳಿದ ಶೇಕಡಾ 25ರಷ್ಟು ನಿವೇಶನ / ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ <u>ವಾರ್ಷಿಕ ಶೇಕಡ 12.5ರ ಬಡ್ಡಿ ದರದೊಂದಿಗೆ</u> ವಸೂಲಾತಿ ಮಾಡಿಕೊಳ್ಳತಕ್ಕದ್ದು.

ಸದರಿ ಆದೇಶವು ದಿನಾಂಕ <u>01.04.2016</u> ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ಈ ಹಿಂದೆ ನಿಗಮದಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ಮಳಿಗೆ/ನಿವೇಶನಗಳಿಗೆ ಹೆಚ್ಚುವರಿ ಸಹಾಯಧನ ನೀಡುವ ಬಗ್ಗೆ ಹೊರಡಿಸಲಾಗಿರುವ ಉಲ್ಲೇಖ (3)ರಲ್ಲಿನ ನಿಗಮದ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾತಿ:ಪ.ಪಂ.ಮ.ನಿ.ಹಂ:ಸಧನ:2016/ 4450 ದಿನಾಂಕ 26.02.2016 ಅನ್ನು ಹಿಂಪಡೆಯಲಾಗಿದೆ.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಭೂಸ್ವಾಧೀನ)/(ಕೃಷಿ ಮತ್ತು ಹಣಕಾಸು)/(ವಾಣಿಜ್ಯ), ಕರಾಸಕ್ಕೆಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕ್ಕೆಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕ್ಕೆಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು, ಹುಬ್ಬಳ್ಳಿ
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಲೆಪ, ಕರಾಸಕ್ಕೆಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕ್ಕೆಅನಿನಿ, ರಾಜಾಜನಗರ (ನ)/ (ಗ್ರಾ)/ ವಾ.ಲ(ಪ್ರ) / ವ&ಕಾಲ(ಪ್ರ)/(ಭೂಸ್ವಾಧೀನ/ಸಾ.ಸಂ)ಸಿಬ್ಬಂದಿ/ಪೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು/ ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿ), ಕರಾಸಕ್ಕೆಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು (ಸಮನ್ವಯ) / (ಕಾನೂನು), / ಬೆಂ-ನಗರ / ಕರಾಸಕ್ಕೆಅನಿನಿ, ಬೆಂಗಳೂರು/ ವೀರಸಂದ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು[ಗಣಕಯಂತ್ರ], ಕರಾಸಕ್ಕೆಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಬಿಯಂತರು(ಸಿವಿಲ್)/(ವಿದ್ಯುತ್), ಕರಾಸಕ್ಕೆಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕ್ಕೆಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

ಪ್ರತಿಗಳು :

1. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕ್ಕೆಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕ್ಕೆಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
3. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕ್ಕೆಅನಿನಿ, ಬೆಂಗಳೂರು ಮಾಹಿತಿಗಾಗಿ.

ಕರಾಸಕೈಆನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಚೇರಿ: ಆಡಳಿತ ಕಚೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

311

1115

ಸಮನ್ವಯ:ಅ.ಜಾ:ಅ.ಪಂ:ಹಂಚಿಕೆ:ಕಾಲಾವಧಿ:ಮೀಸಲಾತಿ:2016 1929 ದಿನಾಂಕ 06-09-2016

ಕಚೇರಿ ಆದೇಶ

ವಿಷಯ: ಕೆ.ಎಸ್.ಎಸ್.ಐ.ಡಿ.ಸಿ.ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ನಿವೇಶನ/ಮಳಿಗೆಗಳನ್ನು 03 ವರ್ಷಗಳ ಕಾಲಾವಧಿಯವರೆಗೆ ಮೀಸಲಿಡುವ ಬಗ್ಗೆ.

ಉಲ್ಲೇಖ:
1) ಕೆ.ಎಸ್.ಎಸ್.ಐ.ಡಿ.ಸಿ. ಹಂಚಿಕೆ ನಿಯಮಗಳು 2014.
2) ಕಚೇರಿ ಆದೇಶ ಸಂಖ್ಯೆ:ಸಮನ್ವಯ:ಪ.ಜಾತಿ:ಪ.ಪಂ:ಹಂಚಿಕೆ ಕಾಲಾವಧಿ ಮೀಸಲಾತಿ:2012:3464 ದಿನಾಂಕ 19.12.2012
3) ಸರ್ಕಾರದ ಪತ್ರ ಸಂಖ್ಯೆ CI:155:CSC:2015 ದಿನಾಂಕ 25-04-2016
4) ದಿನಾಂಕ 17.08.2016ರ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ನಿರ್ಣಯಗಳು.

ಪ್ರಸ್ತಾವನೆ:-

ಸರ್ಕಾರದಿಂದ ಹಾಗೂ ನಿಗಮದ ಮಂಡಳಿಯಿಂದ ಕಾಲಕಾಲಕ್ಕೆ ನೀಡಲ್ಪಡುವ ಮಾರ್ಗದರ್ಶನ ಹಾಗೂ ನಿರ್ದೇಶನಗಳ ಅನ್ವಯ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ಖಾಲಿ ನಿವೇಶನಗಳು/ ಮಳಿಗೆಗಳು/ಗೋದಾಮುಗಳು/ಅಂಗಡಿಗಳು ಮತ್ತು ಫ್ಲ್ಯಾಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಹಂಚಿಕೆ ಮೀಸಲಾತಿ ಕಾಲಾವಧಿಯನ್ನು ನಿಗದಿಪಡಿಸಿ ಉಲ್ಲೇಖ (2)ರಲ್ಲಿನ ಕಚೇರಿ ಆದೇಶದಲ್ಲಿ ಸ್ಪಷ್ಟ ರೂಪದ ನಿರ್ದೇಶನಗಳನ್ನು ನೀಡಲಾಗಿದೆ.

ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿನ ನಿರ್ದೇಶನಗಳನ್ವಯ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 14ನೇ ವಿಧಾನಸಭೆಯ ಮೊದಲನೇ ಅಧಿವೇಶನದ ವರದಿಯಲ್ಲಿ ಕಲ್ಯಾಣ ಸಮಿತಿಯ ಸದರಿ ಪ್ರವರ್ಗದವರಿಗೆ ನಿವೇಶನಗಳು/ಮಳಿಗೆಗಳ ಹಂಚಿಕೆ ಮೀಸಲಾತಿಗೆ ಸಂಬಂಧಪಟ್ಟಂತೆ ಮಾಡಿದ ಶಿಫಾರಸ್ಸುಗಳು ಹಾಗೂ ದಿನಾಂಕ 08.06.2015ರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ನಿರ್ದೇಶನಗಳ ಬಗ್ಗೆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಹಂಚಿಕೆ ಕಾಲಾವಧಿ ಮೀಸಲಾತಿ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ದಿನಾಂಕ 17.08.2016ರಂದು ಜರುಗಿದ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯು ಕಾರ್ಯಸೂಚಿಯಲ್ಲಿನ ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ, ಇನ್ನು ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ/ಮಳಿಗೆಗಳನ್ನು '03 ವರ್ಷಗಳ ಅವಧಿ'ಯವರೆಗೆ ಮೀಸಲಿಡಲು ನಿರ್ಣಯಿಸಿತು.

..2..

(310)

ಅದರಂತೆ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

000014

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹಾಲಿ ಜಾರಿಯಲ್ಲಿರುವ ಮಳಿಗೆ / ನಿವೇಶನಗಳ ಹಂಚಿಕೆ ನಿಯಮಾವಳಿಗಳ ಅನ್ವಯ, ಇನ್ನು ಮುಂದೆ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ದಿಮೆದಾರರುಗಳಿಗೆ ಮೀಸಲಾತಿಯಂತೆ ಮೀಸಲಿಟ್ಟಿರುವ ಖಾಲಿ ಮಳಿಗೆ / ನಿವೇಶನಗಳ ಹಂಚಿಕೆ ಅವಧಿಯನ್ನು 03 ವರ್ಷಗಳ ಅವಧಿಗೆ ಮೀಸಲಿಡುವಂತೆ ಆದೇಶಿಸಲಾಗಿದೆ.

ಸದರಿ ಆದೇಶವು ತಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರವಿಗೂ ಜಾರಿಯಲ್ಲಿರುತ್ತದೆ.

ಅಂತೆಯೇ, ಈ ಹಿಂದೆ ನಿಗಮದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ನಿವೇಶನಗಳ ಹಂಚಿಕೆ ಮೀಸಲಾತಿಯ ಕಾಲಾವಧಿ ಬಗ್ಗೆ ಹೊರಡಿಸಲ್ಪಟ್ಟಿರುವ ಉಲ್ಲೇಖ (2)ರಲ್ಲಿನ ದಿನಾಂಕ 19-12-2012ರ ನಿಗಮದ ಕಚೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾ:ಪ.ಪಂ:ಹಂಚಿಕೆ ಕಾಲಾವಧಿ: ಮೀಸಲಾತಿ:2012/3464 ಅನ್ನು ಹಿಂಪಡೆಯಲಾಗಿದೆ.

ಮೇಲೆ ಸೂಚಿಸಿರುವ ಆದೇಶವನ್ನು 'ಕಟ್ಟುನಿಟ್ಟಾಗಿ' ಹಾಗೂ 'ಕಡ್ಡಾಯ'ವಾಗಿ ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೃಅನಿನಿ, ಬೆಂಗಳೂರು ನಗರ/ಗ್ರಾಮಾಂತರ/ ಪೀಣ್ಯಾ/ತುಮಕೂರು/ಹರಿಹರ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1/ವ-2 / (ಆ.ಲ.ಪ), ಕರಾಸಕೃಅನಿನಿ, ಬೆಂಗಳೂರು/ ಹುಬ್ಬಳ್ಳಿ.
3) ವ್ಯವಸ್ಥಾಪಕರು, ಕರಾಸಕೃಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು/ವೀರಸಂದ್ರ/ ಹುಬ್ಬಳ್ಳಿ/ಕಲಬುರಗಿ.
4) ಸಹಾಯಕ ವ್ಯವಸ್ಥಾಪಕರು, ಕರಾಸಕೃಅನಿನಿ, ಕೈಗಾರಿಕಾ ವಸಾಹತು, ಕುಂಬಳಗೂಡು/ಪೀಣ್ಯಾ/ದಾವಣಗರ/ ಹಾಸನ/ರಾಯಚೂರು/ಬೀದರ್/ಗದಗ್/ಬಾಗಲಕೋಟೆ/ವಿಜಾಪುರ.
5) ವ್ಯವಸ್ಥಾಪಕರು(ಗಣಕಯಂತ್ರ),ಕರಾಸಕೃಅನಿನಿ, ಬೆಂಗಳೂರು, ನಿಗಮದ ವೃಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು(ಕೈವ&ಹ)/(ಆಡಳಿತ&ಭೂಸ್ವಾಧೀನ)/(ವಾಣಿಜ್ಯ),ಕರಾಸಕೃಅನಿನಿ, ಬೆಂಗಳೂರು
2) ಮುಖ್ಯ ಅಭಿಯಂತರರು, ಕರಾಸಕೃಅನಿನಿ, ಬೆಂಗಳೂರು,
3) ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೃಅನಿನಿ, ಬೆಂಗಳೂರು.
4) ವ್ಯ.ನಿ.ರವರ ಆಪ್ತ ಕಾರ್ಯದರ್ಶಿಗಳು, ಕರಾಸಕೃಅನಿನಿ, ಬೆಂಗಳೂರು.

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ:ಪ.ಜಾ:ಪ.ಪಂ:ಹಂಚಿಕೆ:2016 /2091 ದಿನಾಂಕ 21-09-2016

ಸೇರ್ಪಡೆ ಆದೇಶ

ವಿಷಯ: ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನ / ಶೆಡ್‌ಗಳನ್ನು ಹಂಚಿಕೆ ಮಾಡುವ ಬಗ್ಗೆ – ಸೇರ್ಪಡೆ ಕುರಿತು.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 22.07.2015
2) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 08.10.2015
3) ದಿನಾಂಕ 22.06.2016ರ ನಿಗಮದ 339ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
4) ಸರ್ಕಾರಿ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2015 ಬೆಂಗಳೂರು, ದಿನಾಂಕ 27.06.2016
5) ಕಛೇರಿ ಆದೇಶ ಸಂಖ್ಯೆ ಸಮನ್ವಯ:ಯೋಜನೆ ಅನುಷ್ಠಾನ:ಪ.ಜಾ:ಪ.ಪಂಗಡ:ಹಂಚಿಕೆ: 2016 ದಿನಾಂಕ 22.07.2016
6) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ ಸಿಐ 81 ಸಿಎಸ್‌ಸಿ 2016 ದಿನಾಂಕ 01.09.2016

ಪ್ರಸ್ತಾವನೆ:

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ (5)ರ ನಿಗಮದ ಕಛೇರಿ ಆದೇಶದಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸರ್ಕಾರದ ಆದೇಶದನ್ವಯ ಕೆಲವೊಂದು ನಿಬಂಧನೆಗೊಳಪಟ್ಟು ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇಕಡಾ 50ರ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದ್ದು, ಸದರಿ ಆದೇಶವು ದಿನಾಂಕ 01.04.2016 ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಎಂದು ತಿಳಿಸಲಾಗಿದೆ.

ಉಲ್ಲೇಖ (6)ರಲ್ಲಿನ ಸರ್ಕಾರದ ಸೇರ್ಪಡೆ ಆದೇಶದಲ್ಲಿ, ಸರ್ಕಾರದ ದಿನಾಂಕ 27.06.2016ರ ಸರ್ಕಾರಿ ಆದೇಶವನ್ನು ದಿನಾಂಕ 01.04.2016 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದ ನಂತರ, "ದಿನಾಂಕ 01.04.2016ರ ನಂತರ ನಿವೇಶನ / ಶೆಡ್‌ಗಳನ್ನು ಕೆ.ಎಸ್.ಎಸ್.ಐ.ಡಿ.ಸಿ. / ಕೆ.ಐ.ಎ.ಡಿ.ಬಿ ಸಂಸ್ಥೆಗಳಿಂದ ಹಂಚಿಕೆ ಪತ್ರ (Allotment letter) ಪಡೆದ ಫಲಾನುಭವಿಗಳು ಈ ಆದೇಶದ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ" ಎಂದು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು ಎಂಬುದಾಗಿ ನಮೂದಿಸಲ್ಪಟ್ಟಿದೆ. ಸದರಿ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶ.

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಯೋಜನೆ ಅನುಷ್ಠಾನ:ಪ.ಜಾತಿ:ಪ.ಪಂ:ಹಂಚಿಕೆ:2016/1293 ದಿನಾಂಕ 27.07.2016ರ ಆದೇಶದಲ್ಲಿ, ಕೆಲವೊಂದು ನಿಬಂಧನೆಗೊಳಪಟ್ಟು

..2..

ನಿಗಮದ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಹಂಚಿಕೆ ಮಾಡುವ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇಕಡಾ 50ರ ರಿಯಾಯತಿ ದರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದ್ದು, ಸದರಿ ಆದೇಶದ ಎರಡನೇ ಕಂಡಿಕೆಯಲ್ಲಿ ಈ ಆದೇಶವು ದಿನಾಂಕ 01-04-2016 ರಿಂದ ಅನ್ವಯವಾಗುವಂತೆ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ ಎಂದು ನಮೂದಿಸಲಾಗಿದ್ದು, ಈ ಸಾಲಿನ ನಂತರ "ದಿನಾಂಕ 01-04-2016ರ ನಂತರ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ಹಂಚಿಕೆ ಪತ್ರ (Allotment Letter) ಪಡೆದ ಫಲಾನುಭವಿಗಳು ಈ ಆದೇಶದ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ" ಎಂಬುದಾಗಿ ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು ಎಂದು ಆದೇಶಿಸಲಾಗಿದೆ.

ಉಳಿದಂತೆ, ಸದರಿ ಕಛೇರಿ ಆದೇಶದಲ್ಲಿನ ಅಂಶಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳು ಇರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು 21.9.16

ಇವರಿಗೆ,

1. ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಭೂಸ್ವಾಧೀನ)/(ಕೈವ ಮತ್ತು ಹಣಕಾಸು)/(ವಾಣಿಜ್ಯ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು
3. ಉಪ ಪ್ರಧಾನ ವ್ಯವಸ್ಥಾಪಕರು, ವಲಯ-1/2, (ವಾಣಿಜ್ಯ), ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು, ಹುಬ್ಬಳ್ಳಿ
4. ಉಪ ಪ್ರಧಾನ ವ್ಯವಸ್ಥಾಪಕರು, ಹಣಕಾಸು/ಆಂಲೆಪ, ಕರಾಸಕೈಅನಿನಿ, ಬೆಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ರಾಜಾಜಿನಗರ(ನ)/(ಗ್ರಾ)/ವಾ.ಲೆ(ಪ್ರ)/ವ&ಕಾಲೆ(ಪ್ರ)/ (ಭೂಸ್ವಾಧೀನ/ಸಾ.ಸಂ) ಸಿಬ್ಬಂದಿ/ಪೀಣ್ಯ/ತುಮಕೂರು/ದಾವಣಗೆರೆ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು/ಶಿವಮೊಗ್ಗ/ ಮಂಗಳೂರು.
6. ಕಾರ್ಯಪಾಲಕ ಅಭಿಯಂತರರು(ಸಿವಿಲ್)/(ವಿ), ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ
7. ವ್ಯವಸ್ಥಾಪಕರು (ಸಮನ್ವಯ) / (ಕಾನೂನು), / ಬೆಂ-ನಗರ / ಕರಾಸಕೈಅನಿನಿ, ಬೆಂಗಳೂರು/ ವೀರಸಂದ್ರ/ಹುಬ್ಬಳ್ಳಿ
8. ವ್ಯವಸ್ಥಾಪಕರು[ಗಣಕಯಂತ್ರ], ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ನಿಗಮದ ವೆಬ್‌ಸೈಟ್‌ನ ಕಛೇರಿ ಆದೇಶಗಳ ಕಡತದಲ್ಲಿ ಪ್ರಕಟಿಸಲು ಸೂಚಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರು(ಸಿವಿಲ್)/(ವಿದ್ಯುತ್), ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ/ ಮೈಸೂರು/ ತುಮಕೂರು/ಬೆಳಗಾವಿ/ಗುಲ್ಬರ್ಗಾ/ಶಿವಮೊಗ್ಗ/ಮಂಗಳೂರು.
10. ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬಳ್ಳಾರಿ.

ಪ್ರತಿಗಳು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರ ದಯಾಪೂರ್ಣ ಮಾಹಿತಿಗಾಗಿ.
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ದಯಾಪೂರ್ಣ ಮಾಹಿತಿಗಾಗಿ.
3. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
4. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು ಮಾಹಿತಿಗಾಗಿ.

23 SEP 2016

ದಿನಾಂಕ : .....ರಂದು ರವಾನಿಸಲಾಗಿದೆ

ರವಾನೆ ಗುಮಾಸ್ತ.....

d:\bss crd\office order circular ack..docx

21/9/16

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೂಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

311

1115

ಸಮನ್ವಯ:ಅ.ಜಾ:ಅ.ಪಂ:ಹಂಚಿಕೆ:ಕಾಲಾವಧಿ:ಮೀಸಲಾತಿ:2016 1929

ದಿನಾಂಕ 06-09-2016

ಕಚೇರಿ ಆದೇಶ

ವಿಷಯ: ಕೆ.ಎಸ್.ಎಸ್.ಐ.ಡಿ.ಸಿ.ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ನಿವೇಶನ/ಮಳಿಗೆಗಳನ್ನು 03 ವರ್ಷಗಳ ಕಾಲಾವಧಿಯವರೆಗೆ ಮೀಸಲಿಡುವ ಬಗ್ಗೆ.

ಉಲ್ಲೇಖ:
1) ಕೆ.ಎಸ್.ಎಸ್.ಐ.ಡಿ.ಸಿ. ಹಂಚಿಕೆ ನಿಯಮಗಳು 2014.
2) ಕಚೇರಿ ಆದೇಶ ಸಂಖ್ಯೆ:ಸಮನ್ವಯ:ಪ.ಜಾತಿ:ಪ.ಪಂ:ಹಂಚಿಕೆ ಕಾಲಾವಧಿ ಮೀಸಲಾತಿ:2012:3464 ದಿನಾಂಕ 19.12.2012
3) ಸರ್ಕಾರದ ಪತ್ರ ಸಂಖ್ಯೆ CI:155:CSC:2015 ದಿನಾಂಕ 25-04-2016
4) ದಿನಾಂಕ 17.08.2016ರ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ನಿರ್ಣಯಗಳು.

ಪ್ರಸ್ತಾವನೆ:-

ಸರ್ಕಾರದಿಂದ ಹಾಗೂ ನಿಗಮದ ಮಂಡಳಿಯಿಂದ ಕಾಲಕಾಲಕ್ಕೆ ನೀಡಲ್ಪಡುವ ಮಾರ್ಗದರ್ಶನ ಹಾಗೂ ನಿರ್ದೇಶನಗಳ ಅನ್ವಯ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ಖಾಲಿ ನಿವೇಶನಗಳು/ ಮಳಿಗೆಗಳು/ಗೋದಾಮುಗಳು/ಅಂಗಡಿಗಳು ಮತ್ತು ಫ್ಲ್ಯಾಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮದಾರರುಗಳಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಹಂಚಿಕೆ ಮೀಸಲಾತಿ ಕಾಲಾವಧಿಯನ್ನು ನಿಗದಿಪಡಿಸಿ ಉಲ್ಲೇಖ (2)ರಲ್ಲಿನ ಕಚೇರಿ ಆದೇಶದಲ್ಲಿ ಸ್ಪಷ್ಟ ರೂಪದ ನಿರ್ದೇಶನಗಳನ್ನು ನೀಡಲಾಗಿದೆ.

ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿನ ನಿರ್ದೇಶನಗಳನ್ವಯ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 14ನೇ ವಿಧಾನಸಭೆಯ ಮೊದಲನೇ ಅಧಿವೇಶನದ ವರದಿಯಲ್ಲಿ ಕಲ್ಯಾಣ ಸಮಿತಿಯ ಸದರಿ ಪ್ರವರ್ಗದವರಿಗೆ ನಿವೇಶನಗಳು/ಮಳಿಗೆಗಳ ಹಂಚಿಕೆ ಮೀಸಲಾತಿಗೆ ಸಂಬಂಧಪಟ್ಟಂತೆ ಮಾಡಿದ ಶಿಫಾರಸ್ಸುಗಳು ಹಾಗೂ ದಿನಾಂಕ 08.06.2015ರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ನಿರ್ದೇಶನಗಳ ಬಗ್ಗೆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಹಂಚಿಕೆ ಕಾಲಾವಧಿ ಮೀಸಲಾತಿ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ದಿನಾಂಕ 17.08.2016ರಂದು ಜರುಗಿದ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯು ಕಾರ್ಯಸೂಚಿಯಲ್ಲಿನ ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ, ಇನ್ನು ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮದಾರರಿಗೆ ನಿವೇಶನ/ಮಳಿಗೆಗಳನ್ನು '03 ವರ್ಷಗಳ ಅವಧಿ'ಯವರೆಗೆ ಮೀಸಲಿಡಲು ನಿರ್ಣಯಿಸಿತು.

(310)

1114

ಅದರಂತೆ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

000010

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹಾಲಿ ಜಾರಿಯಲ್ಲಿರುವ ಮಳಿಗೆ / ನಿವೇಶನಗಳ ಹಂಚಿಕೆ ನಿಯಮಾವಳಿಗಳ ಅನ್ವಯ, ಇನ್ನು ಮುಂದ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮದಾರರುಗಳಿಗೆ ಮೀಸಲಾತಿಯಂತೆ ಮೀಸಲಿಟ್ಟಿರುವ ಖಾಲಿ ಮಳಿಗೆ / ನಿವೇಶನಗಳ ಹಂಚಿಕೆ ಅವಧಿಯನ್ನು 03 ವರ್ಷಗಳ ಅವಧಿಗೆ ಮೀಸಲಿಡುವಂತೆ ಆದೇಶಿಸಲಾಗಿದೆ.

ಸದರಿ ಆದೇಶವು ತಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರವಿಗೂ ಜಾರಿಯಲ್ಲಿರುತ್ತದೆ.

ಅಂತೆಯೇ, ಈ ಹಿಂದೆ ನಿಗಮದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮದಾರರುಗಳಿಗೆ ಹಂಚಿಕೆ ಮಾಡಲ್ಪಡುವ ನಿವೇಶನಗಳ ಹಂಚಿಕೆ ಮೀಸಲಾತಿಯ ಕಾಲಾವಧಿ ಬಗ್ಗೆ ಹೊರಡಿಸಲ್ಪಟ್ಟಿರುವ ಉಲ್ಲೇಖ (2)ರಲ್ಲಿನ ದಿನಾಂಕ 19-12-2012ರ ನಿಗಮದ ಕಚೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾ:ಪ.ಪಂ:ಹಂಚಿಕೆ ಕಾಲಾವಧಿ: ಮೀಸಲಾತಿ:2012/3464 ಅನ್ನು ಹಿಂಪಡೆಯಲಾಗಿದೆ.

ಮೇಲೆ ಸೂಚಿಸಿರುವ ಆದೇಶವನ್ನು 'ಕಟ್ಟುನಿಟ್ಟಾಗಿ' ಹಾಗೂ 'ಕಡ್ಡಾಯ'ವಾಗಿ ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೃಅನಿನಿ, ಬೆಂಗಳೂರು ನಗರ/ಗ್ರಾಮಾಂತರ/ ಪೀಣ್ಯಾ/ತುಮಕೂರು/ಹರಿಹರ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1/ವ-2 / (ಆ.ಲ.ಪ), ಕರಾಸಕೃಅನಿನಿ, ಬೆಂಗಳೂರು/ ಹುಬ್ಬಳ್ಳಿ.
3) ವ್ಯವಸ್ಥಾಪಕರು, ಕರಾಸಕೃಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು/ವೀರಸಂದ್ರ/ ಹುಬ್ಬಳ್ಳಿ/ಕಲಬುರಗಿ.
4) ಸಹಾಯಕ ವ್ಯವಸ್ಥಾಪಕರು, ಕರಾಸಕೃಅನಿನಿ, ಕೈಗಾರಿಕಾ ವಸಾಹತು, ಕುಂಬಳಗೂಡು/ಪೀಣ್ಯಾ/ದಾವಣಗರ/ ಹಾಸನ/ರಾಯಚೂರು/ಬೀದರ್/ಗದಗ್/ಬಾಗಲಕೋಟೆ/ವಿಜಾಪುರ.
5) ವ್ಯವಸ್ಥಾಪಕರು(ಗಣಕಯಂತ್ರ),ಕರಾಸಕೃಅನಿನಿ, ಬೆಂಗಳೂರು, ನಿಗಮದ ವೃಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು(ಕೈವ&ಹ)/(ಆಡಳಿತ&ಭೂಸ್ವಾಧೀನ)/(ವಾಣಿಜ್ಯ),ಕರಾಸಕೃಅನಿನಿ, ಬೆಂಗಳೂರು
2) ಮುಖ್ಯ ಅಭಿಯಂತರರು, ಕರಾಸಕೃಅನಿನಿ, ಬೆಂಗಳೂರು,
3) ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೃಅನಿನಿ, ಬೆಂಗಳೂರು.
4) ವ್ಯ.ನಿ.ರವರ ಆಪ್ತ ಕಾರ್ಯದರ್ಶಿಗಳು, ಕರಾಸಕೃಅನಿನಿ, ಬೆಂಗಳೂರು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಸ್ಥಾಯಿತ ಕಛೇರಿ : ಅಶೋಕ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010
ಫೋನ್ : 23407011 ರಿಂದ 23 ಫ್ಯಾಕ್ಸ್ : 91-080-23140500 /23389070 ತಂತಿ : ಮೈಸ್ಕಾಲ್ ಕಾರ್ಪ
ಇ-ಮೇಲ್ : kssidcho@vsnl.com ವೆಬ್‌ಸೈಟ್ : www.kssidc.co.in

ಸಂಖ್ಯೆ: ಸಮನ್ವಯ:ಕೈವ:ಮಳಿಗೆ:ನಿವೇಶನ:ಕರಾರು ಅವಧಿ:ಹಂಚಿಕೆ:2017 ದಿನಾಂಕ: 06-09-2017

ಕಛೇರಿ ಆದೇಶ

ವಿಷಯ : ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿಯ ನಿವೇಶನ/ಮಳಿಗೆಗಳ ಹಂಚಿಕೆ ಕಾರ್ಯನೀತಿಗೆ ತಿದ್ದುಪಡಿಗಳಿಗೆ ಅನುಮೋದನೆ ಬಗ್ಗೆ. – ನಿಗಮದಿಂದ ಹಂಚಿಕೆ ಮಾಡಲಾಗುವ ಮಳಿಗೆ/ಫ್ಲಾಟ್/ಗೋದಾಮು/ಅಂಗಡಿ ಹಾಗೂ ನಿವೇಶನಗಳನ್ನು 10 ವರ್ಷಗಳ ಗುತ್ತಿಗೆ ಕ್ರಯ ಮಾರಾಟ ಆಧಾರದ ಮೇಲೆ (Lease cum Sale basis) ಹಂಚಿಕೆ ಮಾಡುವ ಕುರಿತು.

ಉಲ್ಲೇಖ :
1) ಸರ್ಕಾರಿ ಆದೇಶ ಸಂಖ್ಯೆ/ಸಿವಿ/511/ಎಸ್‌ಬಿಕ್ಯೂ/2013 ದಿನಾಂಕ: 07.08.2014.
2) ಸರ್ಕಾರಿ ಆದೇಶ ಸಂಖ್ಯೆ/ಸಿವಿ/58/ಎಸ್‌ಬಿವಿ/2013 ದಿನಾಂಕ 01.10.2014.
3) ದಿನಾಂಕ 26.12.2014 ರ ನಿಗಮದ 332ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
4) ಕಛೇರಿ ಆದೇಶ ಸಂಖ್ಯೆ/ಸಮನ್ವಯ/ಮನಿ ದೀರ್ಘಾವಧಿ/ಹಂಚಿಕೆ ವರದಿ/2015/5478 ದಿನಾಂಕ 10.02.2015.
5) ದಿನಾಂಕ 14.01.2016 ರ ನಿಗಮದ 337ನೇ ಆಡಳಿತ ಮಂಡಳಿ ಸಭೆ ನಡವಳಿಗಳು.
6) ಸರ್ಕಾರಿ ಆದೇಶ ಸಂಖ್ಯೆ/ಸಿವಿ:105:ಎಸ್‌ಬಿವಿ:2017 ದಿನಾಂಕ 11.07.2017

* * * * *

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಮಂಡಳಿಯು ಕಾಲಕಾಲಕ್ಕೆ ಹಂಚಿಕೆಯ ಷರತ್ತು ಮತ್ತು ನಿಬಂಧನೆಗಳ ಕಾರ್ಯನೀತಿಗಳು, ಗುತ್ತಿಗೆ ಕಾಲಾವಧಿ, ಮೂಲಸೌಕರ್ಯಗಳ ದರ, ಕೈಗಾರಿಕಾ ವಸಾಹತುಗಳ ವರ್ಗೀಕರಣ, ನಿರ್ಗಮನ ನೀತಿ, ಕ್ರಯಪತ್ರಗಳ ನಿರ್ವಹಣೆ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಪಟ್ಟಂತೆ ನಿಗಮದಿಂದ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಮಳಿಗೆ, ನಿವೇಶನ, ಗೋದಾಮು ಮತ್ತು ಫ್ಲಾಟ್ಸ್ ಹಂಚಿಕೆ ಸಂಬಂಧ ಕಾರ್ಯನೀತಿಗಳನ್ನು ರೂಪಿಸುತ್ತಿತ್ತು. ಮಂಡಳಿಯಿಂದ ಅನುಮೋದಿಸಲ್ಪಡುತಿದ್ದಂತೆ ಮತ್ತು ರೂಪಿಸಲ್ಪಟ್ಟ ಮಾರ್ಗಸೂಚಿಗಳನ್ವಯ ಹಂಚಿಕೆಯ ಕಾಲಾವಧಿಯ ಬಗ್ಗೆ ಮಂಡಳಿ ನಿರ್ಧಾರದಂತೆ ಸಣ್ಣ ಪ್ರಮಾಣ ಕೈಗಾರಿಕಾ ಘಟಕಗಳಿಗೆ ಕಂತು-ಖರೀದಿ ಆಧಾರದ ಮೇಲೆ ಹಂಚಿಕೆಗಳನ್ನು ಮಾಡಲಾಗುತ್ತಿತ್ತು ಮತ್ತು ಕ್ರಯಪತ್ರಗಳನ್ನು ನಿರ್ವಹಿಸಿಕೊಡಲಾಗುತ್ತಿತ್ತು.

ಕೈಗಾರಿಕಾ ವಸಾಹತು ನಿರ್ವಹಣೆಗಳಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಕಾರ್ಯನೀತಿಗಳು, ಮಾರ್ಗಸೂಚಿಗಳು, ಸುತ್ತೋಲೆಗಳು ಇತ್ಯಾದಿಗಳು ನಿಗಮದ ಆಡಳಿತ ಮಂಡಳಿಯ ಸಭೆಯ ಮುಂದೆ ಮಂಡಿಸಲ್ಪಡುತ್ತಿದ್ದವು. ಮಂಡಳಿಯು ಹಂಚಿಕೆ ಪ್ರಕ್ರಿಯೆಯಿಂದ ಕ್ರಯಪತ್ರದವರೆಗಿನ ಕಾರ್ಯವಿಧಾನವನ್ನು ಸರ್ಕಾರದ ನಿರ್ದೇಶನಗಳ ಸೇರ್ಪಡೆಗಳೊಂದಿಗೆ, ಸೇರ್ಪಡೆಗಳಿಲ್ಲದೆ ಹಾಗೂ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಅಳವಡಿಸಿಕೊಳ್ಳುತ್ತಿತ್ತು.

ದಿನಾಂಕ 01.10.2014ರ ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19ರ ನಿರ್ಣಯವು ಪ್ರಪ್ರಥಮ ಬಾರಿಗೆ ಕೆ.ಎಸ್.ಎಸ್.ಐ.ಡಿ.ಸಿ.ಯು, ನಿಗಮದಿಂದ ಅಭಿವೃದ್ಧಿಪಡಿಸುವ ಎಲ್ಲಾ ಮಳಿಗೆ/ನಿವೇಶನ/ಗೋದಾಮು/ಫ್ಲಾಟ್/ಅಂಗಡಿ ಹಾಗೂ ಇತರ ಹಂಚಿಕೆಗಳನ್ನು ಕಡ್ಡಾಯವಾಗಿ 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವಂತೆ ಷರತ್ತು ವಿಧಿಸಿದೆ. ಸರ್ಕಾರದ ಹೊಸ ಕೈಗಾರಿಕಾ ನೀತಿ 2014-19 ರಲ್ಲಿ 99 ವರ್ಷಗಳ ಗುತ್ತಿಗೆ ಸಂಬಂಧ ನೀಡಿರುವ ಮಾರ್ಗಸೂಚಿಗಳನ್ನು, ಅವುಗಳನ್ನೇ ಉಚಿತ ವ್ಯತ್ಯಾಸಗಳೊಂದಿಗೆ (mutatis-mutandis) ಅಳವಡಿಸಿಕೊಳ್ಳುವ ಬಗ್ಗೆ ಮಂಡಳಿಯ ಮುಂದೆ ತರಲು ನಿರ್ಧರಿಸಲಾಯಿತು ಹಾಗೂ ಅದರನ್ವಯ ಅಳವಡಿಸಿಕೊಳ್ಳಲಾಯಿತು ಮತ್ತು ಹಂಚಿಕೆಗಳನ್ನು ಮಾಡಲಾಯಿತು.

ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ನಿವೇಶಗಳು/ಫ್ಲ್ಯಾಟ್ಸ್‌ಗಳು/ಗೋದಾಮುಗಳು/ಅಂಗಡಿಗಳು ಇವುಗಳ ಹಂಚಿಕೆಯನ್ನು 99 ವರ್ಷಗಳ ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡುವ ಬಗ್ಗೆ ಒಂದು ಕಾರ್ಯಸೂಚಿಯನ್ನು ದಿನಾಂಕ 26.12.2014 ರಂದು ಜರುಗಿದ ನಿಗಮದ 332ನೇ ಆಡಳಿತ ಮಂಡಳಿ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು.

ಮಂಡಳಿಯ ಅನುಮೋದನೆಯನ್ವಯ, ದಿನಾಂಕ 10.02.2015 ರಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶದವರೆವಿಗೂ ಜಾರಿಯಲ್ಲಿರುವಂತೆ, ಇನ್ನು ಮುಂದೆ ಕೆ.ಎಸ್.ಎಸ್.ಐ.ಡಿ.ಸಿ ನಿಗಮದಿಂದ ಹಂಚಿಕೆ ಮಾಡಲ್ಪಡುವ ಕೈಗಾರಿಕಾ ಮಳಿಗೆಗಳು/ಫ್ಲ್ಯಾಟ್ಸ್‌ಗಳು/ಅಂಗಡಿಗಳು/ಗೋದಾಮುಗಳು ಮತ್ತು ನಿವೇಶನಗಳನ್ನು 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಿ, ದಿನಾಂಕ 10.02.2015 ರಂದು ಕಛೇರಿ ಆದೇಶವನ್ನು ಹೊರಡಿಸಲಾಯಿತು.

99 ವರ್ಷಗಳ ಗುತ್ತಿಗೆ ಮೇಲಿನ ಹಂಚಿಕೆಗಳು, ನಿರ್ಗಮನ ನೀತಿ, ಘಟಕದ ಕಾರ್ಯಚರಣೆ ಹಾಗೂ ಕಾರ್ಯವಿಧಾನಗಳು ಮತ್ತು ಗುತ್ತಿಗೆ ನೀತಿ ಇತ್ಯಾದಿಗಳನ್ನು ರೂಪಿಸಿಕೊಳ್ಳುವ ಬಗ್ಗೆ ಸವಿವರವಾದ ಕಾರ್ಯನೀತಿ ದಾಖಲೆಯನ್ನು ರೂಪಿಸಿ ದಿನಾಂಕ 14.01.2016ರಂದು ಜರುಗಿದ ನಿಗಮದ 337ನೇ ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಲಾಗಿತ್ತು ಮತ್ತು ಮಂಡಳಿಯ ಅನುಮೋದನೆ ತದನಂತರದಲ್ಲಿ, ಅದನ್ನು ಸಮಗ್ರ ರೂಪದಲ್ಲಿ ತದನಂತರದ ಹಂಚಿಕೆಗಳಿಗೆ ಅನುಷ್ಠಾನಗೊಳಿಸಲಾಯಿತು.

ಕರ್ನಾಟಕ ಸರ್ಕಾರವು ಅನುಕ್ರಮವಾಗಿ, ದಿನಾಂಕ 07.08.2014ರ ಸರ್ಕಾರಿ ಆದೇಶಗಳ ಸಂಖ್ಯೆ: CI:511:SPQ:2013 ಹಾಗೂ 07.07.2015 ಮತ್ತು CI:15:SPQ:2017 ದಿನಾಂಕ 09.03.2017 ಕ್ಕೆ ಈ ಕೆಳಕಂಡಂತೆ ಸೇರ್ಪಡೆ ಮಾಡುವುದರೊಂದಿಗೆ ಉಲ್ಲೇಖ(1) ರಂತೆ "ತಿದ್ದೋಲೆ ಅದೇಶ"ವನ್ನು ಹೊರಡಿಸಿದ್ದು ದಿನಾಂಕ 09.03.2017 ರ ಸರ್ಕಾರಿ ಆದೇಶದ ಕ್ರಮಾಂಕ 9ರ ಸೇರ್ಪಡೆ ವಿವರಗಳು ಕೆಳಕಂಡಂತಿವೆ.

<u>ವಿವರಗಳು:</u>

1) ದಿನಾಂಕ 09.03.2017 ರ ಸರ್ಕಾರಿ ಆದೇಶ ಸಂಖ್ಯೆ: CI:511:SPQ:2017 ಕ್ಕೆ ಕೆಳಕಂಡಂತೆ ಸೇರ್ಪಡೆ ಮಾಡುವುದು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ/ಮಳಿಗೆಗಳನ್ನು ಗುತ್ತಿಗೆ-ಕ್ರಯ ಆಧಾರದ ಮೇಲಿನ ಹಂಚಿಕೆಗೆ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸುವುದು ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ಹಂಚಿಕೆಯಾದ ಜಾಗದ ಶೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸಬೇಕು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸುವಂತಿಲ್ಲ.
- ನಿಚ್ಚಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರಲೇಬೇಕು. ಕ್ರಯಪತ್ರ ನೀಡಿದ ನಂತರದಲ್ಲಿ ನಿವೇಶನ/ಮಳಿಗೆಯನ್ನು ಕೈಗಾರಿಕಾ ಉದ್ದೇಶಗಳಿಗೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಉದ್ಯಮಗಳು	ಉತ್ಪಾದನಾ ಉದ್ಯಮಗಳು	ಸೇವಾ ಉದ್ಯಮಗಳು
	ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ	ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ
ಸೂಕ್ಷ್ಮ	ರೂ. 25 ಲಕ್ಷಗಳವರೆಗೆ	ರೂ. 10 ಲಕ್ಷಗಳವರೆಗೆ
ಸಣ್ಣ	ರೂ. 25-500 ಲಕ್ಷಗಳವರೆಗೆ	ರೂ. 10-200 ಲಕ್ಷಗಳವರೆಗೆ
ಮಧ್ಯಮ	ರೂ. 500-1000 ಲಕ್ಷಗಳವರೆಗೆ	ರೂ. 200-500 ಲಕ್ಷಗಳವರೆಗೆ

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೇ ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಕರಾರು ಡೀಡ್‌ನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.
- ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಅಡ್ಡಿಗಳು/ಸಮಸ್ಯೆಗಳು ಸಂಭವಿಸಿದಲ್ಲಿ ಕೆ.ವಿ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ.ಯಿಂದ ಈ ಯೋಜನೆ ಅನುಷ್ಠಾನಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನುಮೋದನೆ ಪಡೆಯುವುದು.

ಮೇಲಿನ ಅಂಶಗಳ ಹಿನ್ನೆಯಲ್ಲಿ ಉಲ್ಲೇಖ(6) ರಲ್ಲಿನ ಸರ್ಕಾರಿ ಆದೇಶದಲ್ಲಿ ನೀಡಿರುವ ಆದೇಶಗಳು/ವಿಧಿಸಿರುವ ಮಾರ್ಗಸೂಚಿಗಳನ್ನು ನಿಗಮದಲ್ಲಿಯು ಸಹ ಉಚಿತ ವ್ಯತ್ಯಾಸಗಳೊಂದಿಗೆ (mutatis mutandis) ಅಳವಡಿಸಿಕೊಳ್ಳಲು ತೀರ್ಮಾನಿಸಲಾಗಿದ್ದು, ಅದರನ್ವಯ ಈ ಕೆಳಕಂಡಂತೆ ಆದೇಶಗಳನ್ನು ಹೊರಡಿಸಲಾಗಿದೆ.

ಆ ದೇ ಶ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಅದರ ಕೈಗಾರಿಕಾ ವಸಾಹತುಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ನಿವೇಶನ / ಮಳಿಗೆ / ಗೋದಾಮು / ಅಂಗಡಿ / ಫ್ಲಾಟ್ಸ್‌ಗಳನ್ನು ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ಆದೇಶಿಸಲಾಗಿದೆ.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ 2 ಎಕರೆವರೆಗಿನ ಹಂಚಿಕೆ ಪ್ರಕರಣಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು

- ಗುತ್ತಿಗೆ-ಕ್ರಯ ಆಧಾರ ಅವಧಿಯನ್ನು 10 ವರ್ಷಗಳ ಅವಧಿಗೆ ನಿಗದಿಪಡಿಸಲಾಗಿದೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಿದ್ದರೂ ಹಾಗೂ ನಿಗಮದಿಂದ ಹಂಚಿಕೆಯಾದ ಜಾಗದ ಶೇಕಡಾ 50 ರಷ್ಟು ಕಟ್ಟಡಗಳಿಗೆ ಉಪಯೋಗಿಸತಕ್ಕದ್ದು ಮತ್ತು ಅದಕ್ಕಿಂತ ಹೆಚ್ಚಿನ ಜಾಗವನ್ನು ಉಪಯೋಗಿಸಿದ್ದರೂ ಸಹ, ಗುತ್ತಿಗೆ ಕ್ರಯ ಕರಾರುಪತ್ರವನ್ನು ನಿರ್ವಹಿಸಿದ ದಿನಾಂಕದಿಂದ 10 ವರ್ಷಗಳು ಮುಕ್ತಾಯಗೊಳ್ಳುವ ಮುನ್ನ ಕ್ರಯ ಪತ್ರವನ್ನು ನಿರ್ವಹಿಸಲಾಗುವುದಿಲ್ಲ ಮತ್ತು ಕೈಗಾರಿಕಾ ವಸಾಹತು ನಿರ್ವಹಣೆಗೆ ಸಂಬಂಧಿಸಿದಂತೆ ನಿಗಮದಿಂದ ಮಂಡಳಿಯಿಂದ ಈಗಾಗಲೇ ಅನುಮೋದನೆಗೊಂಡಿರುವ ಕಾರ್ಯನೀತಿಗಳನ್ನು ಅಳವಡಿಸಿಕೊಳ್ಳತಕ್ಕದ್ದು ಮತ್ತು ಜಾರಿಯಲ್ಲಿರತಕ್ಕದ್ದು.
- ನಿಗಮದಿಂದ ನಿಚ್ಚಳ ಕ್ರಯಪತ್ರ (Absolute Sale Deed) ನೀಡುವ ಮುನ್ನ ಉದ್ಯಮಗಳು ಎಲ್ಲಾ ವಿವಿಧ ಬಾಕಿ ಮೊಬಲಗುಗಳನ್ನು ಚುಕ್ತಾ ಮಾಡಿರತಕ್ಕದ್ದು ಹಾಗೂ ಕ್ರಯಪತ್ರ ನೀಡಿದ ತದನಂತರದಲ್ಲಿ ನಿವೇಶನ/ಮಳಿಗೆ/ಗೋದಾಮು/ಅಂಗಡಿ/ಫ್ಲ್ಯಾಟ್ಸ್ ಗಳನ್ನು ಕೈಗಾರಿಕಾ ಉದ್ದೇಶಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು.
- ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನ್ವಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ಉದ್ಯಮಗಳು	ಉತ್ಪಾದನಾ ಉದ್ಯಮಗಳು	ಸೇವಾ ಉದ್ಯಮಗಳು
	ಸ್ಥಾವರ ಮತ್ತು ಯಂತ್ರಗಳ ಮೇಲಿನ ಬಂಡವಾಳ ಹೂಡಿಕೆ	ಸಾಧನ ಸಾಮಾಗ್ರಿಗಳ ಮೇಲಿನ ಬಂಡವಾಳ ಹೂಡಿಕೆ
ಸೂಕ್ಷ್ಮ	ರೂ. 25 ಲಕ್ಷಗಳವರೆಗೆ	ರೂ. 10 ಲಕ್ಷಗಳವರೆಗೆ
ಸಣ್ಣ	ರೂ. 25-500 ಲಕ್ಷಗಳವರೆಗೆ	ರೂ. 10-200 ಲಕ್ಷಗಳವರೆಗೆ
ಮಧ್ಯಮ	ರೂ. 500-1000 ಲಕ್ಷಗಳವರೆಗೆ	ರೂ. 200-500 ಲಕ್ಷಗಳವರೆಗೆ

000006

ಮೇಲೆ ತಿಳಿಸಿರುವ ವ್ಯಾಖ್ಯಾನಗಳಿಗೆ ಭಾರತ ಸರ್ಕಾರವು ಯಾವಾಗಲಾದರೂ ಬದಲಾವಣೆಗಳನ್ನು ಮಾಡಿದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲಿನ ವ್ಯಾಖ್ಯಾನವು ತಂತಾನೇ ಪರಿಷ್ಕೃತಗೊಳ್ಳುತ್ತದೆ.

- ಈ ಕಾರ್ಯನೀತಿಯು ಕೇವಲ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅಡಿಯಲ್ಲಿ ನೊಂದಣಿಯಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಇತರೆ ಘಟಕಗಳಿಗೆ ಗುತ್ತಿಗೆ ಅವಧಿಯು 99 ವರ್ಷಗಳಾಗಿರುತ್ತದೆ.
- ಈ ಉದ್ದೇಶಿತ ಕಾರ್ಯನೀತಿಯು, ಯಾವ ಯಾವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು 99 ವರ್ಷಗಳ ಗುತ್ತಿಗೆ ಅವಧಿಗೆ ನಿಗಮದಿಂದ ಹಂಚಿಕೆ ಪತ್ರಗಳನ್ನು ಪಡೆದಿರುವುವೋ ಹಾಗೂ 99 ವರ್ಷಗಳ ಅವಧಿಗೆ ಗುತ್ತಿಗೆಪತ್ರ (Lease Deed) ಅನ್ನು ನಿರ್ವಹಿಸಿರುವುವೋ ಅವುಗಳಿಗೂ ಸಹ ಅನ್ವಯವಾಗುತ್ತದೆ.

ಈ ಹಿಂದೆ 10 ವರ್ಷಗಳ ಗುತ್ತಿಗೆ ಅವಧಿಗೆ ಸಂಬಂಧಿಸಿದಂತೆ ಹೊರಡಿಸಲ್ಪಟ್ಟಿದ್ದ ನಿಗಮದ ಆದೇಶದಲ್ಲಿ ನಿಗದಿಪಡಿಸಲಾಗಿದ್ದ ಅದೇ ಸೌಲಭ್ಯಗಳನ್ನು ವಿಸ್ತರಿಸುವುದರೊಂದಿಗೆ, ಪ್ರಸ್ತುತ 10 ವರ್ಷಗಳ ಗುತ್ತಿಗೆ ಅವಧಿಯನ್ನು ಈಗಾಗಲೇ ದಿನಾಂಕ 01.10.2014 ರಿಂದ ಈವರೆವಿಗೂ ನಿಗಮದಿಂದ 99 ವರ್ಷಗಳ ದೀರ್ಘಕಾಲದ ಗುತ್ತಿಗೆ ಕರಾರು ಅವಧಿ ಮೇಲೆ ಹಂಚಿಕೆ ಮಾಡಿರುವ ಎಲ್ಲಾ ಹಂಚಿಕೆದಾರರುಗಳಿಗೂ ಸಹ <u>ಪೂರ್ವಾನ್ವಯವಾಗುವಂತೆ</u> ಅನ್ವಯಿಸತಕ್ಕದ್ದು ಹಾಗೂ ತದನುಸಾರವಾಗಿ ಕ್ರಯ ಪತ್ರಗಳನ್ನು ನಿರ್ವಹಿಸಿಕೊಡಲು ಆದೇಶಿಸಿದೆ.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಆದೇಶವು ತತ್‌ಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ಮಸಾಹತು, ಪೀಣ್ಯಾ/ ಹರಿಹರ/ ಮಂಗಳೂರು/ ವಿಜಯಪುರ/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ)./(ಸಮನ್ವಯ.ಸಾ.ಸಂ). ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆ.ಲೆ.ಪ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ವ್ಯವಸ್ಥಾಪಕರು(ಇಡಿಪಿ), ಕರಾಸಕೈಅನಿನಿ, ಬೆಂಗಳೂರು ಮಾಹಿತಿಗೆ ಮತ್ತು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಕೈಗಾರಿಕೆ ಕರ್ನಾಟಕ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಸೂಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -560 010

ಫೋನ್ : 23407011 ರಿಂದ 25 ಫ್ಯಾಕ್ಸ್ : 91-080-23143566 /23389070 ತಂತಿ : ಮೈನ್ಸ್ಮಾಲ್ ಕಾರ್ಪ

ಇ-ಮೇಲ್ : kssidcho@vsnl.com ವೆಬ್‌ಸೈಟ್ : www.kssidc.co.in

ಸಮನ್ವಯ:ಆಯವ್ಯಯ:2017-18:ಯೋಜನೆ:ಅನುಷ್ಠಾನ:ಹಂಚಿಕೆ:2017-18 | 4-518 ದಿನಾಂಕ: 26-03-2018

ಕಛೇರಿ ಆದೇಶ

ವಿಷಯ: 100 ಸಿ ಮತ್ತು 100 ಡಿ ಮಾದರಿ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವಂಗಡಗಳ ಉದ್ದಿಮೆದಾರರಿಗೆ ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಸ್ಥಾಪಿಸುವ ಬಗ್ಗೆ - ನಿರ್ಮಾಣ ವೆಚ್ಚ, ರಿಯಾಯಿತಿ, ಹಂಚಿಕೆ ವಿಧಾನಗಳ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಕುರಿತು.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ ಸಿಐ 48 ಸಿಎಸ್‌ಸಿ 2017 ದಿನಾಂಕ 21.06.2017
2) ಸರ್ಕಾರದ ಪರಿಷ್ಕೃತ ತಿದ್ದುಪಡಿ ಸರ್ಕಾರಿ ಆದೇಶ ಸಂಖ್ಯೆ ಸಿಐ 48 ಸಿಎಸ್‌ಸಿ 2017 ದಿನಾಂಕ 22.06.2017.
3) ಸರ್ಕಾರದ ಪರಿಷ್ಕೃತ ತಿದ್ದುಪಡಿ ಆದೇಶ ಸಂಖ್ಯೆ ಸಿಐ 48 ಸಿಎಸ್‌ಸಿ 2017 ದಿನಾಂಕ 09.11.2017
4) ದಿನಾಂಕ 22.01.2018ರಂದು ಜರುಗಿದ ನಿಗಮದ 349ನೇ ಆಡಳಿತ ಮಂಡಳ ಸಭೆಯ ನಡವಳಿಗಳು.

ಪ್ರಸ್ತಾವನೆ:

ಕರ್ನಾಟಕ ಸರ್ಕಾರದ 2017-18ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 403 (ಸಿ) ರಲ್ಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು 100 'ಸಿ' ಮತ್ತು 100 'ಡಿ' ಮಾದರಿಯ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವಂಗಡದ ಉದ್ದಿಮೆದಾರರಿಗೆ ಕೆ.ಎಸ್.ಎಸ್.ಐ.ಡಿ.ಸಿ. ನಿಗಮದ ವತಿಯಿಂದ ಸ್ಥಾಪಿಸುವ ಬಗ್ಗೆ ಸರ್ಕಾರವು ಕೆಲವೊಂದು ಪ್ರಮುಖ ಮಾರ್ಗಸೂಚಿಗಳಿಗೆ ಒಳಪಟ್ಟು ಅನುಮೋದನೆ ನೀಡಿ ಉಲ್ಲೇಖ (1)ರಲ್ಲಿ ಓದಲಾಗಿರುವಂತೆ ಸರ್ಕಾರಿ ಆದೇಶ ಹೊರಡಿಸಿರುತ್ತದೆ.

ತದನಂತರ, ಉಲ್ಲೇಖ (2)ರಲ್ಲಿ ಓದಲಾಗಿರುವಂತೆ, ಸರ್ಕಾರವು ದಿನಾಂಕ 22.06.2017ರಂದು ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ ಸಿಐ 48 ಸಿಎಸ್‌ಸಿ 2017 ದಿನಾಂಕ 22.06.2017ಯನ್ನು ಹೊರಡಿಸಿರುತ್ತದೆ.

ಸರ್ಕಾರಿ ಆದೇಶದಲ್ಲಿನ ಆದೇಶಗಳನ್ವಯ ನಿಗಮವು ಶೆಡ್‌ಗಳಿಗೆ ಹೆಚ್ಚಿಗೆ ಬೇಡಿಕೆ ಇರುವ ಸ್ಥಳಗಳನ್ನು ಗುರುತಿಸಿ ಮೊದಲನೇ ಹಂತದಲ್ಲಿ 50 'ಸಿ' ಮತ್ತು 50 'ಡಿ' ಮಾದರಿ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿರ್ಮಿಸಲು ಉದ್ದೇಶಿಸಿದ್ದು, ಟೆಂಡರ್ ಪ್ರಕ್ರಿಯೆಗಳು ಈಗಾಗಲೇ ಮುಗಿದಿದ್ದು, ಸದರಿ ಕಾಮಗಾರಿಗಳಿಗಾಗಿ, ಗುತ್ತಿಗೆದಾರರಿಗೆ ಕೆಲಸದ ಆದೇಶಗಳನ್ನು ವಿತರಿಸಿರುತ್ತದೆ.

ಮುಂದುವರೆದಂತೆ, ದಿನಾಂಕ 09.11.2017ರ ಸರ್ಕಾರದ ಪರಿಷ್ಕೃತ ತಿದ್ದುಪಡಿ ಆದೇಶ ಸಂಖ್ಯೆ ಸಿಐ 48 ಸಿಎಸ್‌ಸಿ 2017ರಲ್ಲಿ ದಿನಾಂಕ 21.06.2017ರ ಸರ್ಕಾರಿ ಆದೇಶ / ಅನುಬಂಧದ ಮಾರ್ಗಸೂಚಿಗಳಿಗೆ ಕೆಲವೊಂದು ಅವಶ್ಯ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಸದರಿ ಸರ್ಕಾರದ ಪರಿಷ್ಕೃತ ತಿದ್ದುಪಡಿ ಆದೇಶದ ಅನುಬಂದಲ್ಲಿನ ಮಾರ್ಗಸೂಚಿಗಳಲ್ಲಿ ಮಳಿಗೆಗಳ ನಿರ್ಮಾಣ ವೆಚ್ಚ, ರಿಯಾಯಿತಿ, ಹಂಚಿಕೆ ವಿಧಾನ ಇತ್ಯಾದಿಗಳಿಗೆ ಕೆಲವೊಂದು ಅವಶ್ಯ ಪ್ರಮುಖ ಅಂಶಗಳನ್ನು ಸೇರ್ಪಡೆ / ಮಾರ್ಪಾಡುಗಳನ್ನು ಮಾಡಲಾಗಿದೆ.

ಅದರಂತೆ, ಕೆ.ಎಸ್.ಎಸ್.ಐ.ಡಿ.ಸಿ. ನಿಗಮವೂ ಸಹ ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲ್ಪಡುವ ಸರ್ಕಾರಿ ಆದೇಶಗಳನ್ನು ನಿಗಮದಲ್ಲಿಯೂ ಯಥಾವತ್ತಾಗಿ (Mutatis-Mutandis) ಅಳವಡಿಸಿ, ಪಾಲಿಸಿಕೊಂಡು ಬರುತ್ತಿರುವ ಹಿನ್ನೆಲೆಯಲ್ಲಿ 2017-18ನೇ ಸಾಲಿನ ಸರ್ಕಾರದ ಆಯವ್ಯಯ ಘೋಷಣೆ ಕಂಡಿಕೆ 403ರ ಉಪ ಕಂಡಿಕೆ (ಸಿ)ಗೆ ಸಂಬಂಧಿಸಿದಂತೆ, ಮೇಲೆ ನಮೂದಿಸಲಾಗಿರುವ ಸರ್ಕಾರದ ವಿವಿಧ ಸರ್ಕಾರಿ ಆದೇಶಗಳಲ್ಲಿನ ಅಂಶಗಳು ಪರಿಷ್ಕೃತ ಮಾರ್ಗಸೂಚಿಗಳನ್ನು ನಿಗಮದಲ್ಲಿಯೂ ಯಥಾವತ್ತಾಗಿ (Mutatis-Mutandis) ಅಳವಡಿಸಿಕೊಳ್ಳುವ ಪ್ರಸ್ತಾವನೆಯನ್ನು ದಿನಾಂಕ 22.01.2018ರಂದು ಜರುಗಿದ ನಿಗಮದ 349ನೇ ಆಡಳಿತ ಮಂಡಳ ಸಭೆಯ ಮುಂದೆ ಅವಲೋಕನ ಹಾಗೂ ಅನುಮೋದನೆಗೆ ಮಂಡಿಸಲಾಗಿತ್ತು.

"ಅಂತೆಯೇ, ಮಂಡಳಿಯು ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯಲ್ಲಿ ಕೋರಿರುವಂತೆ ಸರ್ಕಾರದ ಮಾರ್ಗಸೂಚಿಗಳನ್ನು ನಿಯಮಾನುಸಾರ ಅಳವಡಿಸಿಕೊಳ್ಳುವಂತೆ ತೀರ್ಮಾನಿಸಿತು".

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮಂಡಳಿಯ ತೀರ್ಮಾನದನ್ವಯ ಈ ಕೆಳಕಂಡಂತೆ ಆದೇಶಿಸಿದೆ.

ಆ ದೇ ಶ

100 ಸಿ ಮತ್ತು 100 ಡಿ ಮಾದರಿಯ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸ್ಥಾಪಿಸತಕ್ಕದ್ದು.

ಸಣ್ಣ / ಅತೀ ಸಣ್ಣ ಕೈಗಾರಿಕೆಗಳಿಗೆ 'ಸಿ' ಮತ್ತು 'ಡಿ' ಮಾದರಿಯ ಮಳಿಗೆ ವೆಚ್ಚ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಪರಿಷ್ಕೃತ ಮಾರ್ಗಸೂಚಿಗಳನ್ನು ಈ ಕಛೇರಿ ಆದೇಶಕ್ಕೆ ಅನುಬಂಧಿಸಲಾಗಿದ್ದು, ಸದರಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

ಅನುಬಂಧದಲ್ಲಿ ನಮೂದಿಸಲ್ಪಟ್ಟಿರುವ ಅಂಶಗಳು / ಮಾರ್ಗಸೂಚಿಗಳಲ್ಲಿ ಯಾವುದೇ ರೀತಿಯ ಸ್ಪಷ್ಟೀಕರಣಗಳ ಅಗತ್ಯವಿದ್ದಲ್ಲಿ, ಅವುಗಳ ಬಗ್ಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರವರಿಗೆ ಸಲ್ಲಿಸತಕ್ಕದ್ದು.

ಈ ಆದೇಶವು ತತ್‌ಕ್ಷಣದಿಂದ ಹಾಗೂ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು

ಅಡಕ: ಮೇಲಿನಂತೆ

ಇವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ಹರಿಹರ/ ಮಂಗಳೂರು/ವಿಜಯಪುರ/ ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ),/(ಸಮನ್ವಯ&ಸಾ.ಸಂ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಆ.ಲೆ.ಪ)/(ಸಿಬ್ಬಂದಿ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲೆ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
6. ಕಾನೂನು ಅಧಿಕಾರಿಗಳು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು(ಇಟಿಪಿ), ಕರಾಸಕೈಅನಿನಿ, ಬೆಂಗಳೂರು, ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
9. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.

ನಿಗಮದ ಕಛೇರಿ ಆದೇಶ ಸಂಖ್ಯೆ ಸಮನ್ವಯ:ಆಯವ್ಯಯ:2017-18:ಯೋಜನೆ:ಅನುಷ್ಠಾನ:ಹಂಚಿಕೆ:2017-18/4518 ದಿನಾಂಕ 26.3.2018ರ ಅನುಬಂಧ.

ಸಣ್ಣ / ಅತೀ ಸಣ್ಣ ಕೈಗಾರಿಕೆಗಳಿಗೆ 'ಸಿ' ಮತ್ತು 'ಡಿ' ಮಾದರಿ ಮಳಿಗೆ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ನಿಗಮದಿಂದ ಹಂಚಿಕೆ ಮಾಡುವ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಪರಿಷ್ಕೃತ ಮಾರ್ಗಸೂಚಿಗಳು:

2017-18ನೇ ಸಾಲಿನ ಆಯವ್ಯಯದ ಭಾಷಣದಲ್ಲಿ 100 "ಸಿ' ಮತ್ತು "ಡಿ" ಮಾದರಿಯ ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕೆ.ಎಸ್.ಎಸ್.ಐ.ಡಿ.ಸಿ.ವತಿಯಿಂದ ಸ್ಥಾಪಿಸಲಾಗುವುದು.

ಯೋಜನೆಯ ರೂಪರೇಷೆ:

1) (ಎ) "ಸಿ" ಮಾದರಿ ಮಳಿಗೆಯ ವಿವರ: ನಿವೇಶನ ವಿಸ್ತೀರ್ಣ ಕನಿಷ್ಟ 326.00 ಚ.ಮೀ (3508.00 ಚ.ಅ) ಮಳಿಗೆಯ ವಿಸ್ತೀರ್ಣ: 170 ಚ.ಮೀ.

(ಬಿ) "ಡಿ' ಮಾದರಿ ಮಳಿಗೆಯ ವಿವರ: ನಿವೇಶನ ವಿಸ್ತೀರ್ಣ ಕನಿಷ್ಟ :150.00 ಚ.ಮೀ (1614.00 ಚ.ಅ) ಮಳಿಗೆ ವಿಸ್ತೀರ್ಣ: 92 ಚ.ಮೀ.

2) ಮಳಿಗೆ ನಿರ್ಮಾಣ ವೆಚ್ಚದ ಶೇಕಡ 90ರಷ್ಟು ರಿಯಾಯಿತಿಯನ್ನು ಸರ್ಕಾರದ ವತಿಯಿಂದ ಹಾಗೂ ಉಳಿದ ಶೇಕಡ 10 ರಷ್ಟು ನಿರ್ಮಾಣದ ವೆಚ್ಚವನ್ನು ಕೆ.ಎಸ್.ಎಸ್.ಐ.ಡಿ.ಸಿ.ಸಂಸ್ಥೆಯು ಭರಿಸಿ ಮಳಿಗೆ ನಿರ್ಮಾಣದ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

3) ಕೆ.ಎಸ್.ಎಸ್.ಐ.ಡಿ.ಸಿ. ನಿಗಮವು ಸದರಿ ಮಳಿಗೆಗಳ ಸ್ವಾಧೀನವನ್ನು ಹಂಚಿಕೆದಾರರಿಗೆ(ಫಲಾನುಭವಿಗಳಿಗೆ) ನೀಡಿದ ನಂತರ ಮಳಿಗೆಯಲ್ಲಿ ಅವಶ್ಯವಿರುವ ಇತರೆ ಸೌಕರ್ಯಗಳಿಗೆ ತಗಲುವ ವೆಚ್ಚವನ್ನು ಫಲಾನುಭವಿಗಳೇ ಭರಿಸತಕ್ಕದ್ದು.

4) ಹೆಚ್ಚಿನ ಬೇಡಿಕೆ ಇರುವ ಜಾಗಗಳನ್ನು ಗುರುತಿಸಿ ಅಂತಹ ಸ್ಥಳದಲ್ಲಿ ಮಾತ್ರ ಮಳಿಗೆಗಳನ್ನು ನಿರ್ಮಿಸತಕ್ಕದ್ದು.

ಮಳಿಗೆಗಳ ಹಂಚಿಕೆ ವಿಧಾನ:

1. ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
2. ಫಲಾನುಭವಿಯು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆಯನ್ನು ಸ್ಥಾಪಿಸುವುದು.
3. ಕೆ.ಎಸ್.ಎಸ್.ಐ.ಡಿ.ಸಿ. ನಿಗಮವು ಮಳಿಗೆ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸುವುದು. ನಂತರ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇವರ ಅಧ್ಯಕ್ಷತೆಯಲ್ಲಿ ಈಗಾಗಲೇ ಇರುವ ಏಕಗವಾಕ್ಷಿ ಉಪ ಸಮಿತಿ ಸಭೆಯಲ್ಲಿ ಅರ್ಜಿಗಳನ್ನು ಮಂಡಿಸಿ, ಸಂದರ್ಶನದ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
4. ಆಯ್ಕೆಗೊಂಡ ಫಲಾನುಭವಿಗಳ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ ಹಂಚಿಕೆಗಾಗಿ ಅನುಮೋದನೆ ಪಡೆಯುವುದು.
5. ಮಳಿಗೆ ಹಂಚಿಕೆಯಾದ 2 ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದಲ್ಲಿ, ಹಂಚಿಕೆಯನ್ನು ರದ್ದುಗೊಳಿಸಿ, ಇತರೇ ಅರ್ಹ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗೆ ಮಾತ್ರ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಮೂಲಕ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.

6. ನಿರ್ಧರಿಸಲಾದ ಮಳಿಗೆಯ ನಿರ್ಮಾಣ ವೆಚ್ಚದಲ್ಲಿ ಶೇಕಡ 10 ರಷ್ಟನ್ನು ಹಾಗೂ ನಿವೇಶನದ ಮೌಲ್ಯದ ಶೇಕಡ 50 ರಷ್ಟನ್ನು ಮಾತ್ರ (ನಿಗಮದ ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ: ಪ.ಜಾ:ಪ.ಪಂ:ಹಂಚಿಕೆ:2016/1293 ದಿನಾಂಕ 22-07-2016ರಂತೆ) ನಿಗಮಕ್ಕೆ ಪಾವತಿಸಿ, ಫಲಾನುಭವಿಯು ಮಳಿಗೆಯ ಸ್ವಾಧೀನವನ್ನು ಪಡೆಯುವುದು.

7. ಕೆ.ಎಸ್.ಎಸ್.ಐ.ಡಿ.ಸಿ. ನಿಗಮವು, ನಿಗಮದಿಂದ ನೀಡುವ ರಿಯಾಯಿತಿ ಜೊತೆಗೆ ಉದ್ದಿಮೆದಾರರ ಪಾಲಿನ ವಂತಿಗೆಯನ್ನು ಪಡೆದು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಮಳಿಗೆ ಹಂಚಿಕೆ ವಿಷಯವನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.

8. ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಯು ಮಳಿಗೆ ಹಂಚಿಕೆಯಾದ ಉದ್ದಿಮೆದಾರರಿಗೆ ಸದರಿ ಮಳಿಗೆಗಳನ್ನು 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಡೀಡ್ ಮಾಡಿ ಫಲಾನುಭವಿಗೆ ಮಳಿಗೆಯನ್ನು ಹಸ್ತಾಂತರಿಸುವುದು. ಸದರಿ ಅವಧಿ ಮುಗಿದ ನಂತರ ಕೈಗಾರಿಕೆಯು ಸದರಿ ಹಂಚಿಕೆಯಾದ ಮಳಿಗೆಯಲ್ಲಿ ಚಾಲನೆಯಲ್ಲಿದ್ದಲ್ಲಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಒಪ್ಪಿಗೆ ಪಡೆದು ಶುದ್ಧ ಪತ್ರವನ್ನು (Absolute Sale Deed) ಕೆ.ಎಸ್.ಎಸ್.ಐ.ಡಿ.ಸಿ.ಯು. ನೀಡಲು ಕ್ರಮ ಕೈಗೊಳ್ಳುವುದು.

ವ್ಯವಸ್ಥಾಪಕ ನಿರ್ದೇಶಕರು.

000001

6. ನಿರ್ಧರಿಸಲಾದ ಮಳಗೆಯ ನಿರ್ಮಾಣ ವೆಚ್ಚದಲ್ಲಿ ಶೇಕಡ 10 ರಷ್ಟನ್ನು ಹಾಗೂ ನಿವೇಶನದ ಮೌಲ್ಯದ ಶೇಕಡ 50 ರಷ್ಟನ್ನು ಮಾತ್ರ (ನಿಗಮದ ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಯೋಜನೆ:ಅನುಷ್ಠಾನ: ಪ.ಜಾ:ಪ.ಪಂ:ಹಂಚಿಕೆ:2016/1293 ದಿನಾಂಕ 22-07-2016ರಂತೆ) ನಿಗಮಕ್ಕೆ ಪಾವತಿಸಿ, ಫಲಾನುಭವಿಯು ಮಳಗೆಯ ಸ್ವಾಧೀನವನ್ನು ಪಡೆಯುವುದು.

7. ಕೆ.ಎಸ್.ಎಸ್.ಐ.ಡಿ.ಸಿ. ನಿಗಮವು, ನಿಗಮದಿಂದ ನೀಡುವ ರಿಯಾಯಿತಿ ಜೊತೆಗೆ ಉದ್ದಿಮೆದಾರರ ಪಾಲಿನ ವಂತಿಗೆಯನ್ನು ಪಡೆದು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಮಳಗೆ ಹಂಚಿಕೆ ವಿಷಯವನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.

8. ಕೆ.ಎಸ್.ಎಸ್.ಐ.ಡಿ.ಸಿ ಸಂಸ್ಥೆಯು ಮಳಗೆ ಹಂಚಿಕೆಯಾದ ಉದ್ದಿಮೆದಾರರಿಗೆ ಸದರಿ ಮಳಗೆಗಳನ್ನು 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಡೀಡ್ ಮಾಡಿ ಫಲಾನುಭವಿಗೆ ಮಳಗೆಯನ್ನು ಹಸ್ತಾಂತರಿಸುವುದು. ಸದರಿ ಅವಧಿ ಮುಗಿದ ನಂತರ ಕೈಗಾರಿಕೆಯು ಸದರಿ ಹಂಚಿಕೆಯಾದ ಮಳಗೆಯಲ್ಲಿ ಚಾಲನೆಯಲ್ಲಿದ್ದಲ್ಲಿ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಒಪ್ಪಿಗೆ ಪಡೆದು ಶುದ್ಧ ಪತ್ರವನ್ನು (Absolute Sale Deed) ಕೆ.ಎಸ್.ಎಸ್.ಐ.ಡಿ.ಸಿ.ಯು. ನೀಡಲು ಕ್ರಮ ಕೈಗೊಳ್ಳುವುದು

ವ್ಯವಸ್ಥಾಪಕ ನಿರ್ದೇಶಕರು.